ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಅಕ್ಟೋಬರ್ 24, 2012 ಪುಟ 20 ರೂ. 14/-

ಆಶಾ ಬೋಸ್ಲೆ ಬಗ್ಗೆ ಮಗಳ ಲೇಖನ



ರಾಬರ್ಟ್ ವಾದ್ರಾ



ಹರಾಮಿ ಅಳಿಯ!

ಹೇಮಾಶ್ರೀಯ ದುರಂತ



ಗಂಡನೇ ಯಮ ತಾಯಿಯೇ ಕರ್ಮ

ಪಂಚಮಸಾಲಿಗಳ ಮೇಲೆ ಯಡ್ಡಿಯ ವಕ್ರದೃಷ್ಟಿ

ದಾವಣಗೆರೆ
ಸಮಾಧಿ ಆಗಲಿದೆ ಬಿಜೆಪಿ

ಮೈಸೂರು ಟೆಲಿಕಾಮ್ ಸೊಸೈಟಿ ಹಗರಣ
ಲಂಚದ ಕಾಸಿಗಾಗಿ ಬೀದಿ ಕಾಳಗ!

ಧಾರವಾಡ
ರಂಗಾಯಣದಲ್ಲಿ ಚೆಡ್ಡಿಭೂಪ ಸುಬಾಸ್ ನರೇಂದ್ರ


ಅಂಚಿನಿಂದ

ಡಾ.ವಾಸು ಎಚ್.ವಿ.



ಪರ್ಯಾಯ ರಾಜಕಾರಣ-ಲಗಾನ್ ಕಾ ಗೇಮ್ ನಹಿ

ಅಮೀರ್ ಖಾನ್‌ನ ಲಗಾನ್ ಸಿನೆಮಾ ಹಲವು ರೀತಿಯಲ್ಲಿ ನೋಡುಗರ ಮೆಚ್ಚುಗೆ ಗಳಿಸಿದ ಸಿನೆಮಾ. ಆದರೆ ಇದರ ಬಗ್ಗೆ ಒಂದು 'ಭಿನ್ನ ದನಿ'ಯೂ ಇತ್ತು. ಸಿನೆಮಾ ಬಂದಿದ್ದು 2001ರಲ್ಲಿ, ವಾಜಪೇಯಿಯವರ ಅಧಿಕಾರಾವಧಿಯಲ್ಲಿ, 'ಭಾರತ ಪ್ರಕಾಶಿಸುತ್ತಿದ್ದ' ಕಾಲವದು. ದೇಶೀ, ವಿದೇಶೀ ರೊಕ್ಕಸ್ಥರಿಗೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಭಾರತದ ಮಾರುಕಟ್ಟೆಯ ದಿಡ್ಡಿ ಬಾಗಿಲನ್ನು ತೆಗೆದು ಶೇ.7ಕ್ಕೂ ಹೆಚ್ಚು ಅಭಿವೃದ್ಧಿ ದರವನ್ನು ಸಾಧಿಸಲಾಗಿತ್ತು. ಮಹಾರಾಷ್ಟ್ರದ ವಿದರ್ಭವೂ ಸೇರಿದಂತೆ, ದೇಶದ ಅಭಿವೃದ್ಧಿ ಹೊಂದಿದ ರಾಜ್ಯಗಳಲ್ಲಿ ರೈತರು ಸಾವಿರಗಟ್ಟಲೆ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಆದರೂ ಇದು ಕೇವಲ ತಾತ್ಕಾಲಿಕವೆಂತಲೂ, ಭಾರತದಂತಹ ಸಂಪದ್ಭರಿತ ರಾಷ್ಟ್ರವು ಜಾಗತೀಕರಣದ ಆಟದಲ್ಲಿ ಮೇಲುಗೈ ಸಾಧಿಸಿ ಸೂಪರ್ ಪವರ್ ಆಗಿಯೇ ತೀರುತ್ತದೆಂತಲೂ ಘೋಷಿಸಲಾಗುತ್ತಿತ್ತು. ಆರಂಕಿಯ ಸಂಬಳವನ್ನು ಅನಾಯಾಸವಾಗಿ ಜೇಬಿಗೇರಿಸಿಕೊಳ್ಳುತ್ತಿದ್ದ ಮೇಲ್‌ಮಧ್ಯಮ ವರ್ಗಕ್ಕೆ ದೇಶಭಕ್ತಿ ಒಂದೇ ಸಮನೆ ಹೆಚ್ಚಾಗುತ್ತಿತ್ತು. ಈ ವರ್ಗದ ಸಾಧನೆಯತ್ತ ಜೊಲ್ಲು ಸುರಿಸುತ್ತಾ ಕನಸು ಕಾಣುವ ಮಧ್ಯಮ ವರ್ಗದ ಇತರ ವಿಭಾಗಗಳು ಈ ದೇಶಭಕ್ತಿಯನ್ನು ತಾನೂ ಆವಾಹನೆ ಮಾಡಿಕೊಳ್ಳುತ್ತಿತ್ತು. ಆಗ ಲಗಾನ್ ಆಟ ನಡೆಯಿತು.




'ಒಂದಾನೊಂದು ಕಾಲದಲ್ಲಿ ಭಾರತದಲ್ಲಿ' ಎಂಬ ಉಪಶೀರ್ಷಿಕೆಯನ್ನು ಹೊಂದಿದ್ದ ಚಿತ್ರವು ಬಹಳ ಹಿಂದಿನ ಕಾಲದ ಕಥೆಯನ್ನೇನೂ ಹೇಳುತ್ತಿರಲಿಲ್ಲ. ನೂರಾರು ಈಸ್ಟ್ ಇಂಡಿಯಾ ಕಂಪೆನಿಗಳು ಜಾಗತೀಕರಣದ ಮೂಲಕ ಮತ್ತೆ ಭಾರತದ ಮೇಲೆ ದಾಳಿ ಮಾಡುತ್ತಿವೆ, ಭಾರತವನ್ನು ರಕ್ಷಿಸಿಕೊಳ್ಳಬೇಕು ಎಂದು ಹೇಳಲಾಗುತ್ತಿದ್ದ ಸಂದರ್ಭವದು. ಆಗ ಒಂದು ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಯೊಬ್ಬನ ಪ್ರತಿಷ್ಠೆಗೆ ಮಣ್ಣು ಮುಕ್ಕಿಸಿದ ಹಳ್ಳಿಯ ತಂಡವೊಂದರ ವಿಶಿಷ್ಟ ಪ್ರತಿಭೆಯನ್ನು ಈ ಸಿನೆಮಾ ಕಥಿಸಿತ್ತು. ಕ್ರಿಕೆಟ್ ಆಟವೇ ಗೊತ್ತಿರದ ಆ ಹಳ್ಳಿಯ ಜನ, ಬರಗಾಲದ ಸಂದರ್ಭದಲ್ಲಿ ತೆರಿಗೆಯನ್ನು ತಪ್ಪಿಸಿಕೊಳ್ಳಲು ಬ್ರಿಟಿಷ್ ತಂಡದೊಂದಿಗೆ ಆಟದ ಬಾಜಿಗೆ ಒಪ್ಪಿಕೊಳ್ಳುತ್ತಾರೆ. ಬ್ರಿಟಿಷ್ ಅಧಿಕಾರಿಯ ಪತ್ನಿಯ ನೆರವಿನೊಂದಿಗೆ ಕ್ರಿಕೆಟ್‌ನ ನಿಯಮಗಳನ್ನು ಕಲಿತು ಆಟಕ್ಕಿಳಿಯುತ್ತಾರೆ. ಕಡೆಯ ಬಾಲ್‌ನಲ್ಲಿ ಸಿಕ್ಸರ್ ಹೊಡೆಯುವ ಮೂಲಕ ಗೆದ್ದೂ ಬಿಡುತ್ತಾರೆ. (ಭಾರತ ತಂಡದ ವಿರುದ್ಧದ ಪಂದ್ಯವೊಂದರಲ್ಲಿ ಚೇತನ್ ಶರ್ಮಾನ ಕಡೆಯ ಎಸೆತವನ್ನು ಮಿಯಾಂದಾದ್ ಸಿಕ್ಸ್ ಎತ್ತಿದ ಹಾಗೆ).

ಆಟ ಅವರದ್ದು, ಅಖಾಡ ಅವರದ್ದು, ನಿಯಮಗಳೂ ಅವರೇ ರೂಪಿಸಿದ್ದು, ಪಂದ್ಯದ ಬಾಜಿ ಅವರದ್ದು. ಆದರೆ ನಮ್ಮ ದೇಶದ ಸ್ಥಳೀಯ ಪ್ರತಿಭೆ ಹಾಗೂ ಸಂಪನ್ಮೂಲಗಳ ಕಾರಣಕ್ಕೆ, ನಾವದನ್ನು ಗೆಲ್ಲಬಹುದು. ಹಾಗೆಯೇ ಜಾಗತೀಕರಣದ ಆಟದಲ್ಲೂ ನಾವು ಗೆಲ್ಲಬಹುದು. ಈ ರೀತಿಯೂ ಲಗಾನ್‌ನ ಸಂದೇಶವನ್ನು ನಿರ್ವಚಿಸಬಹುದು. ಆದರೆ ಮರೆಯಬಾರದ ಸಂಗತಿಯೊಂದಿದೆ. ಅದೇನೆಂದರೆ ಈ ಸಿನೆಮಾದ ಕಥೆ ಬರೆದು ನಿರ್ದೇಶಿಸಿದವರು ಅಶುತೋಷ್ ಗೋವಾರಿಕರ್. ದುಡ್ಡು ಹಾಕಿದ್ದು ಅಮೀರ್ ಖಾನ್. ಅವರು ನಮ್ಮ ತಂಡದ ಪರವಾಗಿದ್ದರು. ಈ ನಿರ್ದೇಶಕರು ಚೇತನ್ ಶರ್ಮಾನ ನೆರವಿಗೂ ಬಂದಿರಲಿಲ್ಲ, ನಂತರವೂ ಯಾವ ಪಂದ್ಯದಲ್ಲೂ ಸಹಾಯ ಮಾಡಲಿಲ್ಲ, ಅಲ್ಲಿ ಅವರು ನಿರ್ದೇಶಕರಾಗಿರಲಿಲ್ಲ.


ಜಾಗತೀಕರಣದ ಮೇಲಾಟದಲ್ಲೂ ನಿರ್ಮಾಪಕರು ಮತ್ತು ನಿರ್ದೇಶಕರಿಬ್ಬರೂ ನಮ್ಮವರಲ್ಲ, ನಮ್ಮ ದೇಶದ ಅತೀ ದೊಡ್ಡ ಬಂಡವಾಳಿಗರು ಹಾಗೂ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳ ಜಂಟಿ ಪಾಲುದಾರಿಕೆಯಲ್ಲಿ ನಿರ್ದೇಶನ ನಡೆಯುತ್ತದೆ. ಇದೀ ಚೌಕಟ್ಟನ್ನು ಅವರೇ ರೂಪಿಸಿದ್ದಾರೆ. ಹಾಗಾಗಿ ಇಲ್ಲಿ ಸೋಲು ಖಚಿತವೆಂಬುದರಲ್ಲಿ ಯಾವುದೇ ಸಂಶಯವಿಲ್ಲ, ಸೋಲುವವರು ಭಾರತದ ಜನತೆ. 2002ರಲ್ಲಿ ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಮೇಧಾ ಪಾಟ್ಕರ್ ಮಂಡಿಸಿದ ಈ ಚಿತ್ರ ವಿಮರ್ಶೆಯನ್ನು ಇಂದು ನೆನೆಸಿಕೊಳ್ಳಲು ಕಾರಣವಿದೆ. ಕರ್ನಾಟಕದಲ್ಲಿ ಮತ್ತೊಮ್ಮೆ ಪರ್ಯಾಯ ರಾಜಕಾರಣದ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಇದು ಪ್ರಸ್ತುತವೆನಿಸುತ್ತಿದೆ.

ಪಿ.ಲಂಕೇಶರು ಕರ್ನಾಟಕದ ಪ್ರಜ್ಞಾವಂತರ ಮೇಲೆ ಇದ್ದ 'ಪತ್ರಿಕೆ'ಯ ಗಾಢ ಪ್ರಭಾವವನ್ನು ಆಧರಿಸಿ ಕಟ್ಟಿದ ಪ್ರಗತಿರಂಗ ಹಾಗೂ ರೈತ ಚಳವಳಿಯ ಶಕ್ತಿಯ ಮೇಲೆ ವಿಶ್ವಾಸವಿಟ್ಟು ಪ್ರೊ.ಎಂ.ಡಿ.ಎನ್ ಮತ್ತು ಇನ್ನಿತರ ರೈತ ನಾಯಕರು ಕಟ್ಟಿದ ಕನ್ನಡ ದೇಶಗಳು 'ಪರ್ಯಾಯ ರಾಜಕಾರಣ'ದ ಹಳೆಯ ಪ್ರಯೋಗಗಳು. ಆದರೆ ಈಚೆಗೆ ಇಂತಹ ಹತ್ತಾರು ಪ್ರಯೋಗಗಳು ನಡೆಯುತ್ತಿವೆ. ಕಳೆದ ಚುನಾವಣೆಗೂ ಹಿಂದೆ ಹುಟ್ಟಿಕೊಂಡ ಸರ್ವೋದಯ ಕರ್ನಾಟಕ ಪಕ್ಷ, ಕಳೆದ ಚುನಾವಣೆಯ ಸಂದರ್ಭದಲ್ಲಿ ಮೇಧಾ ಪಾಟ್ಕರ್, ಕುಲದೀಪ್ ನಯ್ಯರ್ ಮತ್ತಿತರರು ಆರಂಭಿಸಿದ ಪೀಪಲ್ಸ್ ಪೊಲಿಟಿಕಲ್ ಪಾರ್ಟಿ, ಕಳೆದ 5 ವರ್ಷಗಳಲ್ಲಿ ಶುರುವಾಗಿರುವ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ, ಇದೀಗ ಅರವಿಂದ್ ಕೇಜ್ರಿವಾಲ್-ಪ್ರಶಾಂತ್ ಭೂಷಣ್ ಬಳಗ ಆರಂಭಿಸಿರುವ ಇನ್ನೂ ಹೆಸರಿಡದ ಪ್ರೊಡಕ್ಷನ್ ನಂ.1 ಪಕ್ಷ ಹೀಗೆ ಹಲವಾರು ಪಕ್ಷಗಳು ಹುಟ್ಟಿಕೊಳ್ಳುತ್ತಿವೆ. ಕರ್ನಾಟಕದಲ್ಲಿ ಇಂತಹ ಹಲವು ಪ್ರಗತಿಪರರು ಸೇರಿ 'ಪ್ರಜಾ ಪ್ರಗತಿರಂಗ'ವೆಂಬ ವೇದಿಕೆಯನ್ನೂ ರಚಿಸಿದ್ದಾರೆ. ಇಂತಹ ಪ್ರಯತ್ನಗಳು ನಡೆಯಬೇಕಾದುದಕ್ಕೆ ಒಂದು ಸೈದ್ಧಾಂತಿಕ ತಳಹದಿಯನ್ನೂ ಮತ್ತು ಇಂದು ಭ್ರಷ್ಟಾಚಾರ ವಿರೋಧಿ ಹೋರಾಟದ ಅಲೆಯನ್ನು ಆಧರಿಸಿ ಅಂತಹದೊಂದು ಪ್ರಯತ್ನ ಹೇಗೆ ಕಾರ್ಯಸಾಧುವೆಂಬುದನ್ನೂ, ಸಾಮಾಜಿಕ ಚಿಂತಕ ಯೋಗೇಂದ್ರ ಯಾದವ್ ಇತ್ತೀಚೆಗೆ ಬೆಂಗಳೂರಿನ ವಿಚಾರ ಸಂಕಿರಣವೊಂದರಲ್ಲಿ ಚರ್ಚಿಸಿದ್ದಾರೆ. ಯೋಗೇಂದ್ರ ಯಾದವ್‌ರಿಂದ ಮೊದಲುಗೊಂಡು ಮೇಲೆ ಹೆಸರಿಸಲಾದ ಹಲವು ಪ್ರಯೋಗಗಳ ರೂವಾರಿಗಳೆಲ್ಲರ ಕಾಳಜಿಗಳನ್ನು, ಕಳೆದ ಕೆಲವು ದಶಕಗಳಲ್ಲಿ ಈ ನಾಡಿನ ಹತ್ತು ಹಲವು ಚಳವಳಿಗಳಲ್ಲಿ ಅವರು ವಹಿಸಿದ ಸಕಾರಾತ್ಮಕ ಪಾತ್ರಗಳನ್ನು ನಾವು ಸಾರಾಸಗಟಾಗಿ ಅಲ್ಲಗಳೆಯುವಂತಿಲ್ಲ. ಅದರ ಬಗ್ಗೆ ಗೌರವವನ್ನಿಟ್ಟುಕೊಂಡೇ 'ಚುನಾವಣಾ ಪ್ರಯೋಗ'ಗಳ ಕುರಿತು ಚಿಂತಿಸಿದಾಗ ಲಗಾನ್‌ನ ಕಥೆ ನೆನಪಿಗೆ ಬಂದಿತು.

ಎರಡಕ್ಕೂ ಒಂದು ಹೋಲಿಕೆ ಇದೆ. ಭಾರತದ ಚುನಾವಣಾ ವ್ಯವಸ್ಥೆಯು ಇನ್ನೂ ಎಳೆ ವಯಸಲ್ಲೇನೂ ಇಲ್ಲ. ಭಾರತದ ಸ್ವಾತಂತ್ರ್ಯೋತ್ತರ ಚುನಾವಣಾ ರಾಜಕಾರಣಕ್ಕೆ ಸರಿಯಾಗಿ 60ರ ಹರೆಯ (1952ರ ಮೊದಲ ಚುನಾವಣೆಯಿಂದ ಹಿಡಿದು). ಆಗಿಂದಾಗ್ಗೆ ಆಳುವ ಪಕ್ಷಗಳು ಬದಲಾಗುತ್ತಲೇ ಇವೆ; ಆದರೆ 'ಪ್ರತೀ ಚುನಾವಣೆಯಲ್ಲಿ ಬಿರ್ಲಾ ಗೆಲ್ಲುತ್ತಾನೆ, ಪ್ರತೀ ಚುನಾವಣೆಯಲ್ಲಿ ಬೋರೇಗೌಡ ಸೋಲುತ್ತಾನೆ' ಎಂಬ ಮಾತು ಮಾತ್ರ ಸುಳ್ಳಾಗುತ್ತಿಲ್ಲ. ಆದರೆ ಇದಕ್ಕೆ ಕಾರಣವೇನು ಎಂಬ ಬಗ್ಗೆ ಒಂದು ಸರಿಯಾದ ವಿಶ್ಲೇಷಣೆಯಿಲ್ಲದೇ ಮತ್ತೆ ಮತ್ತೆ ಚುನಾವಣೆಗಳಲ್ಲಿ ಸ್ಪರ್ಧಿಸಬೇಕು; ಹೇಗಾದರೂ ಮಾಡಿ ಕೆಲವು ಸ್ಥಾನಗಳನ್ನಾದರೂ ಗೆದ್ದು ವಿಧಾನಸಭೆ ಅಥವಾ ಪಾರ್ಲಿಮೆಂಟ್ ಪ್ರವೇಶಿಸಲೇಬೇಕು; ಅದರ ಮೂಲಕ ಜನಪರ ರಾಜಕಾರಣದ ದೊಡ್ಡ ಸಾಧ್ಯತೆ ತೆರೆದುಕೊಳ್ಳುತ್ತದೆ ಎಂಬ ಅಭಿಪ್ರಾಯ ಮತ್ತೆ ಮತ್ತೆ ಮಂಡನೆಯಾಗುತ್ತಲೇ ಇದೆ.



ಭಾರತದ ಆಳುವ ವ್ಯವಸ್ಥೆಯ ಕುರಿತು ಜನರಿಗಿರುವ ಆಕ್ರೋಶವು ಪರ್ಯಾಯ ಪಕ್ಷಕ್ಕೆ ಬೆಂಬಲವನ್ನೂ ಮತ್ತು ಅಧಿಕಾರವನ್ನೂ ತಂದುಕೊಟ್ಟೇ ಕೊಡುತ್ತದೆ ಎಂಬ ಆಶಾಭಾವನೆಯು ಇದರ ಹಿಂದಿದೆ. ಪ್ರಗತಿಪರ ಸಂಘಟನೆಗಳು ಮತ್ತು ಚಿಂತಕರು ಇಂತಹದೊಂದು ಪ್ರಯತ್ನಕ್ಕೆ ತಾವು ಕೈಹಾಕಲೇಬೇಕಾದ ಅನಿವಾರ್ಯತೆ ಒದಗಿಬಂದುದಕ್ಕೆ ತಮ್ಮದೇ ಕಾರಣಗಳನ್ನೂ ಮುಂದಿಡುತ್ತಾರೆ. ಅದರಲ್ಲಿ ಪ್ರಮುಖವಾದದ್ದೆಂದರೆ 'ಇಂದು ಸರಿಯಾದ ಆಳುವ ಪಕ್ಷವೂ ಇಲ್ಲ, ವಿರೋಧ ಪಕ್ಷವೂ ಇಲ್ಲ' ಎಂಬುದು. ಇಂದು ವಿರೋಧ ಪಕ್ಷವೆಂಬುದಿಲ್ಲ ಎನ್ನುವುದನ್ನು ಇನ್ನೂ ಆಳವಾಗಿ ನೋಡಬೇಕು. ಇತ್ತೀಚಿನ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ಬಂಡವಾಳ (ಎಫ್‌ಡಿಐ) ಪ್ರಕರಣ ಅದಕ್ಕೆ ದೊಡ್ಡ ಉದಾಹರಣೆ. ಒಂದು ವೇಳೆ ಯುಪಿಎ ಬದಲಿಗೆ ಎನ್‌ಡಿಎ ಅಧಿಕಾರದಲ್ಲಿ ಇದ್ದಿದ್ದರೆ, ಅದು ಕಾಂಗ್ರೆಸ್‌ಗಿಂತ ಪ್ರಬಲವಾಗಿ ಎಫ್‌ಡಿಐ ಅನ್ನು ಸಮರ್ಥಿಸಿಕೊಳ್ಳುತ್ತಿತ್ತು. ಇದೇ ಕಾರಣಕ್ಕೆ ಕೇಂದ್ರ ಸರ್ಕಾರಕ್ಕೆ ನೀಡಿದ್ದ ಬೆಂಬಲ ಹಿಂತೆಗೆದುಕೊಂಡ ಮಮತಾ ಬ್ಯಾನರ್ಜಿ ಹಳೆಯ ಎನ್‌ಡಿಎ ಸರ್ಕಾರದಲ್ಲಿ ಇದ್ದುದು ಮಾತ್ರವಲ್ಲ, ತನ್ನದೇ ತೃಣಮೂಲ ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯ ಕರಡಿನಲ್ಲೂ ಎಫ್‌ಡಿಐಅನ್ನು ಬೆಂಬಲಿಸಿದ್ದರು. ಇನ್ನು 'ತಮ್ಮದು ಸೈದ್ಧಾಂತಿಕ ವಿರೋಧ'ವೆಂದು ಹೇಳುವ ಎಡಪಕ್ಷಗಳು ಭಾರತದ ಮೊದಲ ವಾಲ್‌ಮಾರ್ಟ್-ಭಾರ್ತಿ ಮಳಿಗೆಯನ್ನು ಕೊಲ್ಕೊತ್ತಾದಲ್ಲಿ ತೆರೆಯಲು ಅವಕಾಶ ನೀಡಿದ್ದವು.




ಬಿಜೆಪಿಗೂ ಕಾಂಗ್ರೆಸ್‌ಗೂ ವ್ಯತ್ಯಾಸವಿದೆ; ಕಾಂಗ್ರೆಸ್‌ಗೂ ಇತರ ಪ್ರಾದೇಶಿಕ ಪಕ್ಷಗಳಿಗೂ ವ್ಯತ್ಯಾಸವಿದೆ; ಮಿಕ್ಕ ಪಕ್ಷಗಳಿಗೂ ಎಡಪಕ್ಷಗಳಿಗೂ ವ್ಯತ್ಯಾಸವಿದೆ. ಏನೂ ವ್ಯತ್ಯಾಸವಿಲ್ಲ ಎಂಬ ಬೀಸು ಅಭಿಪ್ರಾಯವನ್ನು ಹೇಳುವುದು ಸರಿಯಲ್ಲ. ಆದರೆ ಚುನಾವಣೆಗಳ ಮೂಲಕ ಯಾರಾದರೂ ನಿರ್ಣಾಯಕ ಜನಪರ ರಾಜಕಾರಣ ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ 'ಈ ಪಕ್ಷಗಳಲ್ಲಿ ವ್ಯತ್ಯಾಸವಿಲ್ಲ' ಎಂಬ ಅಭಿಪ್ರಾಯಕ್ಕೆ ಬರಲು ವಿವಿಧ ಪಕ್ಷಗಳ ಆಳ್ವಿಕೆ ಮತ್ತು ಸಾಧನೆಗಳು ಸಾಕಷ್ಟು ಸಾಕ್ಷ್ಯಗಳನ್ನು ಒದಗಿಸುತ್ತವೆ. ಇವರ್‍ಯಾರಿಗೂ ಸಾಧ್ಯವಾಗದ್ದು ತಮಗೆ ಸಾಧ್ಯ ಎಂದು ಪ್ರಗತಿಪರ ಶಕ್ತಿಗಳು ಪದೇ ಪದೇ ಮಾತಾಡುತ್ತವೆ ಮತ್ತು ಮಿಕ್ಕವರೂ ನಂಬಬೇಕೆಂದು ಒತ್ತಾಯಿಸುತ್ತವೆ. 'ಬೇರೆಯವರಿಗೆ ಸಾಧ್ಯವಾಗದ್ದು ತಮಗೇಕೆ ಸಾಧ್ಯವಾಗುತ್ತದೆ ಎಂದರೆ ತಮಗೆ ಇರುವ ಜನರ ಬಗೆಗಿನ ಬದ್ಧತೆ ಎಂದು ಈ ಶಕ್ತಿಗಳು ಭಾವಿಸಿರಬಹುದು. ಅದನ್ನು ಹೊರತುಪಡಿಸಿದರೆ, ಚುನಾವಣಾ ರಾಜಕಾರಣದ ಚೌಕಟ್ಟಿನಲ್ಲೇ ಈ ಸಮಸ್ಯೆ ಇದೆ ಎಂದು ಅವರೆಂದೂ ಕೆದಕಲು ಹೋಗಿಲ್ಲ ಎಂಬುದು ಸ್ಪಷ್ಟವಾಗಿದೆ.

ಚುನಾವಣಾ ರಾಜಕಾರಣವು ಈ ದೇಶದ ಬಲಾಢ್ಯ ಧನವಂತ, ದೊಡ್ಡ ಬಂಡವಾಳಿಗರಿಗೆ ಸೇವೆ ಸಲ್ಲಿಸುವ ಪಕ್ಷಗಳು ನಿರ್ಮಿಸಿಕೊಂಡಿರುವ ಮತ್ತು ದಿನೇ ದಿನೇ ಅದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮತ್ತಷ್ಟು ಗಟ್ಟಿಗೊಳಿಸಿಕೊಂಡಿರುವ ಚೌಕಟ್ಟಾಗಿದೆ. ಅದು 1952ರಂದು ಎಷ್ಟು ಮಾತ್ರಕ್ಕೆ ನಿಜವಿತ್ತೋ, ಅದಕ್ಕಿಂತ ಹೆಚ್ಚು ಕಳೆದೆರಡು ದಶಕಗಳ ಸಂಸದೀಯ ಪ್ರಜಾತಂತ್ರ ಸ್ಪಷ್ಟಗೊಳಿಸಿದೆ. ಹಣ, ಜಾತಿ, ಅವಕಾಶವಾದ, ಕೋಮುವಾದಗಳು ಅತ್ಯಂತ ಬೃಹತ್ ಪ್ರಮಾಣದಲ್ಲಿ ಚುನಾವಣಾ ರಾಜಕಾರಣವನ್ನು ಆವರಿಸಿಕೊಂಡಿವೆ. ದೇಶದ ಯಾವುದೇ ಭಾಗದಲ್ಲಿ ಒಂದು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಲು 10 ಕೋಟಿ ಬೇಕಿದ್ದರೆ, ಸೋಲಲು ಕನಿಷ್ಠ 5 ಕೋಟಿ ಬೇಕು. ಕರ್ನಾಟಕದಂತಹ ಕೆಲವು ರಾಜ್ಯಗಳಲ್ಲಿ ಇದೇ ಮೊತ್ತದ ಹಣ ವಿಧಾನಸಭಾ ಚುನಾವಣೆಗೇ ಬೇಕು. ಇದು ಬಿಪಿಎಲ್ ರೀತಿಯಲ್ಲಿ ಇಪಿಎಲ್ (ಎಲೆಕ್ಟೋರಲ್ ಪಾವರ್ಟಿ ಲೈನ್-ಚುನಾವಣಾ ಬಡತನದ ರೇಖೆ)ಯನ್ನು ನಿಗದಿಪಡಿಸಿಬಿಟ್ಟಿದೆ. ಜನಸಾಮಾನ್ಯರಿರಲಿ, ಯೋಗೇಂದ್ರ ಯಾದವ್ ರಂತೆ, ರವಿಕೃಷ್ಣಾ ರೆಡ್ಡಿಯವರಂತೆ ಲಕ್ಷ ರೂ.ಗಳಲ್ಲಿ ಸಂಬಳ ಪಡೆಯುವವರೂ ದಾಟಲಾಗದ ರೇಖೆ ಇದು. ಅದರ ಪರಿಣಾಮವಾಗಿ ಗೌರವಯುತವಾದ ಸೋಲೂ ಅಲ್ಲದ, ಹೀನಾಯ ಸೋಲು ಕಟ್ಟಿಟ್ಟ ಬುತ್ತಿ. ನಿಸ್ಸಂದೇಹವಾಗಿ ಇಂದು ಚುನಾವಣೆಗಳಲ್ಲಿ ಆಟ ಅವರದ್ದು, ಅಖಾಡ ಅವರದ್ದು, ನಿಯಮಗಳೂ ಅವರ ಪರವಾಗಿಯೇ ಇರುತ್ತವೆ, ಪಂದ್ಯದ ಬಾಜಿಯೂ ಅವರದ್ದೇ. ನಿರ್ದೇಶಕರು, ನಿರ್ಮಾಪಕರೂ ಅವರುಗಳೇ. ಇದು ಯಾರಿಗೂ ಗೊತ್ತಿರದ ಸಂಗತಿಯೇನಲ್ಲ. ಹಾಗಾಗಿಯೇ ನಾವೇ ಗೆದ್ದು ಸಂಪೂರ್ಣ ಅಧಿಕಾರವನ್ನು ಹಿಡಿದುಬಿಡೋಣ ಎಂದು ಹೆಚ್ಚಿನವರು ಮಾತಿನಲ್ಲೂ ಹೇಳುವುದಿಲ್ಲ, ಅವರ ಗುರಿ 'ಕೆಲವು ಕ್ಷೇತ್ರಗಳಲ್ಲಾದರೂ ಇದು ಸಾಧ್ಯವಲ್ಲವೇ?' ಚಳವಳಿಯ ಬಲದಿಂದ ಸಾಧ್ಯವಿದ್ದ ಕೆಲವು ಕ್ಷೇತ್ರಗಳೂ ಇಂದು ಕಡಿಮೆಯಾಗುತ್ತಾ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಗೆಲ್ಲಬೇಕು ಎಂಬ ತಹತಹಕ್ಕೆ ಬಿದ್ದು ಚುನಾವಣಾ ರಾಜಕಾರಣದ ಎಲ್ಲಾ ಕೊಳಕುಗಳನ್ನು ಒಂದಲ್ಲ ಒಂದು ಮಟ್ಟಕ್ಕೆ ತಾವೂ ಮಾಡಲೇಬೇಕಾದ ಅನಿವಾರ್ಯಕ್ಕೆ ಬೀಳುವುದು, ಅವಕಾಶವಾದದ ಒಂದೊಂದೇ ಮೆಟ್ಟಿಲೇರುತ್ತಾ ಹೋಗುವುದನ್ನೂ ಕಾಣಬಹುದು.

ಈ ಚಿಡ್ಡಾದಲ್ಲಿ ಬಿದ್ದ ಕೆಲವರು ನಿಧಾನಕ್ಕೆ ತಲುಪಿರುವುದು ಎಲ್ಲಿಗೆಂದರೆ 'ಹೇಗಾದರೂ ಮಾಡಿ ನಾವು ವಿಧಾನಸಭೆಯೊಳಗೆ ಪ್ರವೇಶಿಸಬೇಕು'. ಅದಕ್ಕಾಗಿ 'ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಜಾತಿಗಳ ಸಬಲೀಕರಣ'ಕ್ಕಾಗಿ ಜನಾರ್ದನ ರೆಡ್ಡಿ, ಶ್ರೀರಾಮುಲುವಿನ ಬಿಎಸ್‌ಆರ್ ಪಕ್ಷವ[...] ಸಮರ್ಥಿಸಿಕೊಳ್ಳುವ ಮಟ್ಟಕ್ಕೆ.

ಇದು ರಾಜಕಾರಣವೇನೋ ಆದರೆ ಪರ್ಯಾಯ ರಾಜಕಾ[...] ಹೇಗಾಗುತ್ತದೆ? ಪಂದ್ಯದ ಚೌಕಟ[...] ಪ್ರಶ್ನಿಸದೇ ಹೋದರೆ, ಆ ಚೌಕ[...] ನಿಯಮಾವಳಿಗಳೇ ನಮ್ಮ ವಿರುದ್ಧವಾ[...] ಅದು ಹೇಗೆ ನಾವು ಆ ಪಂದ್[...] ಗೆಲ್ಲಲು ಸಾಧ್ಯ? ಅಂತಹ ಸಂದರ್ಭ[...] ನಾವು ನಿಧಾನಕ್ಕೆ ಎದುರಾಳಿಯ ಚೌಕ[...] ಭಾಗವೇ ಆಗಿಬಿಡುತ್ತೇವೆ ಎಂಬುದಕ್ಕೆ ಬಿಎಸ್‌ಆರ್ ಒ[...] ಉದಾಹರಣೆಯಲ್ಲ. ಅದಕ್ಕೆ ಭಾರತದ ಸಂಸದೀ[...] ರಾಜಕಾರಣದ ಉದ್ದಕ್ಕೂ ಸಾಕಷ್ಟು ಸಾಕ್ಷ್ಯಗಳು ಸಿಗು[...] ಆದರೂ ಇಂತಹ ಪ್ರಯತ್ನಕ್ಕೆ ಪ್ರಗತಿಪರರು ಕೈ ಹಾಕು[...] ಬೇರೆ ಇನ್ಯಾವ ಕಾರಣಕ್ಕೂ ಅಲ್ಲ; ತಳಮಟ್ಟದ[...] ಜನತೆಯಲ್ಲಿ ಜಾಗೃತಿ ಹಾಗೂ ಚಳವಳಿಯ ರಾಜಕಾ[...] ಸಾಧ್ಯವಾಗದ ಹತಾಶೆಯಿಂದಲೇ ಆಗಿದೆ. ಈ ಹತ[...]



ಅಸಹಾಯಕತೆಗಳೇ ಕೊಳಕು ರಾಜಕಾರಣ ನಿರ್ಮಿ[...] ಚೌಕಟ್ಟಿನಲ್ಲೂ ಗೆಲ್ಲಬಹುದೆನ್ನುವ ಭ್ರಾಂತಿಗೂ ನ[...] ಅವಕಾಶವಾದಕ್ಕೂ ದಾರಿ ಮಾಡಿಕೊಟ್ಟಿದೆ. ಈ ಭ್ರಾಂ[...] 'ಪ್ರಭುತ್ವ'ದ ಕುರಿತು ಅತ್ಯಂತ ವೈಜ್ಞಾನಿಕವಾದ ವ್ಯಾ[...] ಮಂಡಿಸಿರುವ ಕಾರ್ಲ್‌ಮಾರ್ಕ್ಸ್‌ರ ತತ್ವವನ್ನು ಒಪ್ಪಿ[...] ಎಡಪಕ್ಷಗಳೂ ಹೊರತಲ್ಲ. ಅದೇ ಸಂದರ್ಭದಲ್ಲಿ ಸಂಸದಿ[...] ರಾಜಕಾರಣವನ್ನು ಸಂಪೂರ್ಣ ನಿರಾಕರಿಸಿ, ಕೇ[...] ಬಂದೂಕಿನಿಂದ ಕ್ರಾಂತಿಯನ್ನು ಸಾಧಿಸಬಲ್ಲೆವೆಂಬ ಭ್ರಾಂ[...] ಒಳಗಾಗಿರುವ ಮಾವೋವಾದಿಗಳೂ ಸಹ ಎಷ್ಟರಮ[...] ಪರ್ಯಾಯ ರಾಜಕಾರಣವನ್ನು ಸಾಧಿಸಿದ್ದೇವೆ ಎಂಬು[...] ನೋಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಪರ್ಯಾ[...] ರಾಜಕಾರಣವೆಂಬುದು, ಜನತೆಯ ರಾಜಕಾರಣ[...] ಆಗಿರುವುದಾದರೆ ನಾವು ಕೆಲವು ಮೂಲಭೂತ ಪ್ರಶ್ನೆಗ[...] ಎದುರುಗೊಳ್ಳಲು ಸಿದ್ಧರಾಗಬೇಕಲ್ಲವೇ?

ಇರುವ ವ್ಯವಸ್ಥೆಗಳಲ್ಲಿ ಸಂಸದೀಯ ರಾಜಕಾರಣ[...] ನಾನು ಮೆಚ್ಚಿಕೊಳ್ಳುವ ವ್ಯವಸ್ಥೆಯಾಗಿದೆ ಎಂದು ಹೇ[...] ಡಾ.ಬಿ.ಆರ್.ಅಂಬೇಡ್ಕರರೇ ಇದರ ಮಿತಿ ಹಾಗೂ ಸಮ[...] ಬಗ್ಗೆಯೂ ಹೇಳಿದ್ದರು. 'ಸಾಮಾಜಿಕ ಮತ್ತು ಆರ್[...] ಅಸಮಾನತೆ ಇರುವ ಕಡೆ - ಒಂದು ವ್ಯಕ್ತಿ, ಒ[...] ಓಟು ಇರುವ - ರಾಜಕೀಯ ವಿಧಾನ ಕೆ[...] ಮಾಡುವುದಿಲ್ಲ' ಎಂಬುದು ಅಂಬೇಡ್ಕರರ ಪ್ರಸಿದ್ಧ ಹೇ[...] 60 ವರ್ಷಗಳ ರಾಜಕಾರಣವು, ಅದರಲ್ಲೂ ಕಳೆದ [...] ವರ್ಷಗಳ ಜಾಗತೀಕರಣ ನೀತಿಗಳು ಅಸಮಾನತೆಯ[...] ಅಪಾರ ಪ್ರಮಾಣಕ್ಕೆ ಹೆಚ್ಚಿಸಿವೆ. ಅಮೆರಿಕದ ರೇಡಿಯೆ[...] ನೀಡಿದ ಸಂದರ್ಶನದಲ್ಲಿ, ಸಂವಿಧಾನ ರಚನಾ ಸಭ[...] ಚರ್ಚೆಗಳಲ್ಲಿ, ಶೋಷಿತ ವರ್ಗಗಳ ಸಮಾವೇಶದಲ್ಲಿ ವ[...] ಸಂವಿಧಾನವನ್ನು ರಾಷ್ಟ್ರಕ್ಕರ್ಪಿಸುವ ಸಂದರ್ಭದಲ್ಲಿ ಹಾ[...] ಇನ್ನೂ ಹಲವು ಸಂದರ್ಭಗಳಲ್ಲಿ ಅಂಬೇಡ್ಕರ್‌ರವರು [...] ಮಾತನ್ನು ಪದೇ ಪದೇ ಒತ್ತಿ ಹೇಳಿದ್ದಾರೆ. ಅ[...] ಅಭಿಪ್ರಾಯದಲ್ಲಿ ಪ್ರಜಾಪ್ರಭುತ್ವದ ಎರಡು ಸ್ತಂಭ[...] ಎಂದರೆ ಜೀವಂತ ವಿರೋಧ ಪಕ್ಷ ಮತ್ತು ಮುಕ್ತ ಹಾ[...] ನ್ಯಾಯಸಮ್ಮತ ಚುನಾವಣೆಗಳು. ಅದರ ಜೊತೆಗೆ ಜಾತಿ[...] ಉಂಟುಮಾಡುವ ಪ್ರತ್ಯೇಕತೆ, ಅನುವಂಶಿಕ ಆಡ[...] ಸಾಂವಿಧಾನಿಕ ನೈತಿಕತೆಯ ಕೊರತೆ ಮತ್ತು ವ್ಯಕ್ತಿ ಕೇಂ[...] ರಾಜಕಾರಣಗಳು ಪ್ರಜಾತಂತ್ರವನ್ನು ಸಂಪೂರ್ಣ[...] ವಿಫಲಗೊಳಿಸುತ್ತವೆ. ಅಂಬೇಡ್ಕರರು ಹೇಳಿದ ಸಂದರ್ಭ[...] ಇಂದಿಗೂ ಈ ಎಲ್ಲಾ ಅಂಶಗಳಲ್ಲಿ ಬಂದಿ[...] ಬದಲಾವಣೆಗಳು ಪ್ರಜಾತಂತ್ರವನ್ನು ಯಾವ ಮಟ್ಟಕ್ಕೆ ಒ[...] ಎಂಬುದನ್ನು ನಾವೆಲ್ಲರೂ ನೋಡಿದ್ದೇವೆ. ಹೀ[...] ಪರ್ಯಾಯ ರಾಜಕಾರಣವು, ಇಡೀ ಸಮಾಜ[...] ಪ್ರಜಾತಂತ್ರವನ್ನು ಬಲಪಡಿಸುವ ಚಳವಳಿಯ ರಾಜಕಾರ[...] ಪ್ರಧಾನವಾಗಿರುವ ಕಷ್ಟಕರವಾದ ಪ್ರಕ್ರಿಯೆಯ[...] ಮೂಡಿಬರಬೇಕಿರುವ ಮೌಲ್ಯವಾಗಿದೆ. ಅದು ಮಾ[...] ಭಾರತವನ್ನು ಉಳಿಸುವ ರಾಜಕಾರಣವಾಗಿರುತ್ತದೆ. [...] ಅದು ಕಷ್ಟಕರವಾದ ಮತ್ತು ಅಡ್ಡಹಾದಿಗಳಿಲ್ಲದ ದೀ[...] ಪಯಣವಂತೂ ಆಗಿರುತ್ತದೆ.

ಮಲಾಲ ಎಂಬ ಯುವತಿಯ ಮೇಲೆ ದಾಳಿ...

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಮಲಾಲ ಯೂಶಫ್‌ಜಯ್ ಎಂಬ ಹೆಸರಿನ ...ಗೆ 14 ವರ್ಷ ವಯಸ್ಸು. ಶಾಲೆಗೆ ...ತ್ತಿದ್ದ ಹುಡುಗಿ. ಮೊನ್ನೆ ಅಕ್ಟೋಬರ್ 9 ಆಕೆ ಎಂದಿನಂತೆ ಶಾಲೆ ಮುಗಿಸಿ ಮನೆಗೆ ...ಗಲು ಬಸ್ ಹತ್ತಿದ್ದಳು. ಆಗ ಆ ಬಸ್‌ಅನ್ನು ಬಂದೂಕುಧಾರಿಯೊಬ್ಬ ಬೇಕಂತಲೇ ...ಟ್ಟು ಆಕೆಯ ಮೇಲೆ ಗುಂಡುಗಳನ್ನು ಹಾರಿಸಿದ. ಗುಂಡು ಆಕೆಯ ಕುತ್ತಿಗೆಯಲ್ಲಿ ಅಡಗಿ ...ು. ಈಗ ಆ ಹುಡುಗಿ ಆಸ್ಪತ್ರೆಯಲ್ಲಿ ಬದುಕು ಸಾವಿನ ನಡುವೆ ತೊಯ್ದಾಡುತ್ತಿದ್ದಾಳೆ. ಇಡೀ ...ಆಕೆಯ ಪ್ರಾಣ ಉಳಿಯಲಿ ಎಂದು ...ಸುತ್ತಿದೆ. ಸರ್ಕಾರ ಆಕೆಯ ಮೇಲೆ ದಾಳಿ ...ದವರನ್ನು ಹುಡುಕಿಕೊಟ್ಟರೆ ಒಂದು ಮಿಲಿಯನ್ ...ಯಿಗಳನ್ನು ಕೊಡುವುದಾಗಿ ಘೋಷಿಸಿದೆ. ಇದೇ ...ನಲ್ಲಿ ಆಕೆಯನ್ನು ಕೊಲ್ಲುವ ಯತ್ನದಲ್ಲಿ ...ವಾಗಿರುವ ಗುಂಪು ಆಕೆಯನ್ನು ಸುಮ್ಮನೆ ...ಪ್ರದಿಲ್ಲವೆಂದೂ, ಮುಂದೊಮ್ಮೆ ಆಕೆಯ ಪ್ರಾಣ ತೆಗೆಯುತ್ತೇವೆಂದೂ ಘೋಷಿಸಿದೆ.


...ಯಾರು ಈ ಹುಡುಗಿ? ಯಾಕೆ ಈ ...ಯಸ್ಸಿನ ಬಾಲೆಯ ಮೇಲೆ ಆ ಗಡ್ಡಧಾರಿ ...ು ಹಾರಿಸಿದ? ಈಕೆ ಮಾಡಿದ ತಪ್ಪಾದರೂ ... ಯಾಕೆ ಆಕೆಯ ದೇಶದ ಜನರೆಲ್ಲ ಅವಳ ಪರ ...ವಾರೆ? ಯಾಕೆ ಆಕೆಯನ್ನು ಕೊಲ್ಲುವ ಹಪಾಹಪಿ ...ಬಲಿಗಡುಕರಿಗೆ?

ಈ ಮಲಾಲ ಯೂಶಫ್‌ಜಯ್ ಸಾಮಾನ್ಯ ...ಗಿಯಲ್ಲ. ಆಕೆ ಬದುಕುತ್ತಿರುವ ಪಾಕಿಸ್ತಾನದ ... ಕಣಿವೆಯೂ ಸಾಮಾನ್ಯ ಪ್ರದೇಶವಲ್ಲ. ಎತ್ತರದ ...ಳು, ಹಸಿರು ಹುಲ್ಲುಗಾವಲುಗಳು ಮತ್ತು ಸ್ವಚ್ಛ ...ನ್ನು ಹೊಂದಿರುವ ಸ್ವಾಟ್ ಕಣಿವೆ ಅದೆಷ್ಟು ...ರವಾಗಿದೆ ಎಂದರೆ ಆ ಪ್ರದೇಶವನ್ನು ಈ ಹಿಂದೆ ...ಸ್ತಾನದ ಸ್ವಿಡ್ಜರ್‌ಲ್ಯಾಂಡ್ ಎಂದೇ ...ಲಾಗುತ್ತಿತ್ತು. ಪ್ರವಾಸಿಗರ ಜನಪ್ರಿಯ ...ವಾಗಿದ್ದ ಸ್ವಾಟ್ ಕಣಿವೆಗೆ ಹನಿಮೂನಿಗೆಂದು ...ಪತಿಗಳು ಭೇಟಿ ನೀಡುತ್ತಿದ್ದರು. ಅಭಿವೃದ್ಧಿ ವಿದ್ಯಾಸಂಸ್ಥೆಗಳಿಗೆ ಹೆಸರುವಾಸಿ ಆಗಿದ್ದ ಸ್ವಾಟ್ ...ಯಲ್ಲಿ ಸಾಕ್ಷರತೆ ಶೇ. 46ಗಿಂತ ಹೆಚ್ಚಿತ್ತು. ಇದು ...ಸ್ತಾನದ ಇತರೆ ಪ್ರದೇಶಗಳಿಗಿಂತ ಹೆಚ್ಚಿನದ್ದು.

...ಪ್ರಕೃತಿ ಸೌಂದರ್ಯದಿಂದ ಕೂಡಿದ್ದ ಈ ಕಣಿವೆಗೆ ...ಗಾಲ ಕಾದಿತ್ತು, 2003ರಲ್ಲಿ ಅಫಘಾನಿಸ್ತಾನದ ...ಬಾನ್ ಉಗ್ರರು ಈ ಪ್ರದೇಶದ ಮೇಲೆ ...ಮುಟ್ಟಿ ಅದನ್ನು ತಮ್ಮ ಮುಖ್ಯ ...ರ್ಯಕ್ಷೇತ್ರವಾಗಿ ಪರಿವರ್ತಿಸಿದರು. ಅಷ್ಟೇ ಅಲ್ಲ ... ಮೂಲಭೂತವಾದವನ್ನು ಒಪ್ಪದವರನ್ನು ...ವಿಧ ನಗರಗಳ ಮುಖ್ಯ ಪ್ರದೇಶಗಳಲ್ಲಿ ಕೊಚ್ಚಿ ...ಮುಹಾಕಲಾರಂಭಿಸಿದರು. ಸಂಗೀತ ಕೇಳುವುದನ್ನು ...ಧಿಸಿದರು. ಜನರ ಮನೆಯಲ್ಲಿದ್ದ ಟಿವಿ ಸೆಟ್‌ಗಳನ್ನು ...ಡಿಸಿಕೊಂಡರು. ಮಹಿಳೆಯರೆಲ್ಲ ತಾವು ನಿಗದಿ ...ಪಡಿರುವಂತಹ ಬುರ್ಖಾಗಳನ್ನೇ ತೊಡಬೇಕೆಂದು ...ಶಿಸಿದರು.

...ಲ್ಲಕ್ಕಿಂತ ಮುಖ್ಯವಾಗಿ ವಿದ್ಯಾಸಂಸ್ಥೆಗಳನ್ನು ನಾಶ ...ಸಿದರು. ಅದರಲ್ಲೂ ತಾವು ನಂಬಿರುವ ಇಸ್ಲಾಂ ...ದಲ್ಲಿ ಹುಡುಗಿಯರಿಗೆ ವಿದ್ಯಾಭ್ಯಾಸ ನಿಷೇಧ ...ಿ ಬಾಲಕಿಯರ ಶಾಲೆಗಳನ್ನು ಧ್ವಂಸ ಮಾಡಿದರು. ... [illegible], ಸಾವಿರಾರು ಅಮಾಯಕ ...ಯರು ಓದುತ್ತಿದ್ದ 400ಕ್ಕೂ ಹೆಚ್ಚು ಶಾಲೆಗಳು ಧೂಳೀಪಟವಾದವು.

ಅಂತಹ ಒಂದು ಶಾಲೆಯಲ್ಲಿ ಈ ಮಲಾಲ ಓದುತ್ತಿದ್ದಳು. ತಾಲಿಬಾನಿಗಳ ಆರ್ಭಟಕ್ಕೆ ಮಲಾಲಳ ಶಾಲೆಯೂ 2009ರಲ್ಲಿ ಬಲಿಯಾಗಿದ್ದರಿಂದ ಆಕೆಯ ವಿದ್ಯಾಭ್ಯಾಸ ಕಡಿತಗೊಂಡಿತು. ತಾನು ಶಾಲೆಗೆ ಹೋಗಬೇಕು, ಕಲಿಯಬೇಕು ಎಂದು ಆಶಿಸಿದ್ದ ಮಲಾಲಳಿಗೆ ತುಂಬಾ ನಿರಾಶೆ ಆಯಿತು. ಆಗ ಮಲಾಲಳಿಗೆ ಕೇವಲ ಹನ್ನೊಂದು ವರ್ಷ ವಯಸ್ಸು.





ಏಳನೇ ತರಗತಿಯಲ್ಲಿ ಓದುತ್ತಿದ್ದಳು. ಯಾರೊ ಸೂಚಿಸಿದಂತೆ ಮಲಾಲ ಬಿಬಿಸಿ ವಾರ್ತಾ ಸಂಸ್ಥೆಯ ಉರ್ದು ವಿಭಾಗಕ್ಕೆ ತನ್ನ ದಿನಚರಿಯನ್ನು ಗುಲ್ ಮಕೈ ಎಂಬ ಕಲ್ಪಿತ ನಾಮದಡಿ ಬರೆಯಲಾರಂಭಿಸಿದಳು.

ಅಮಾಯಕ ಹುಡುಗಿಯೊಬ್ಬಳು ಯುದ್ಧ ಭೂಮಿಯಂತಿದ್ದ, ಉಗ್ರರ ಹಿಡಿತದಲ್ಲಿದ್ದ, ಸ್ವಾತಂತ್ರ್ಯ ಎಂಬುದೇ ಇಲ್ಲದಿದ್ದ ತನ್ನ ಸುತ್ತಲಿನ ಪರಿಸರವನ್ನು ವಿವರಿಸುತ್ತಿದ್ದ, ತನ್ನ ಆಶೆ, ಕನಸುಗಳನ್ನು ಬಿಂಬಿಸುತ್ತಿದ್ದ ಹೆಣ್ಣುಮಕ್ಕಳಿಗೆ ಯಾಕೆ ವಿದ್ಯೆಯನ್ನು ನಿರಾಕರಿಸಲಾಗುತ್ತಿದೆ ಎಂದು ಪ್ರಶ್ನಿಸುತ್ತಿದ್ದ ಮಲಾಲಳ ದಿನಚರಿ ಬಹಳ ಬೇಗನೆ ಜನಪ್ರಿಯವಾಯಿತು. ಆದರೆ ಅದನ್ನು ಬರೆಯುತ್ತಿರುವುದು ತಾನೇ ಎಂದು ಹೇಳಿಕೊಳ್ಳಲಾಗದಂತಹ ಪರಿಸ್ಥಿತಿಯಲ್ಲಿ ಮಲಾಲ ಇದ್ದಳು.

ಮಲಾಲಳ ತಂದೆ ಜಿಯಾಉದ್ದೀನ್ ಯೂಸಫ್‌ಜಯ್ ಸ್ವತಃ ಓರ್ವ ಕವಿ ಮತ್ತು ಶಿಕ್ಷಣ ತಜ್ಞ. ಅವರು ತಮ್ಮ ಏಕೈಕ ಮಗಳಿಗೆ ಮಲಾಲ ಎಂದು ಹೆಸರಿಟ್ಟದ್ದರ ಹಿಂದೆ ಒಂದು ಉದ್ದೇಶವೂ ಇತ್ತು. ಅಫಘಾನಿಸ್ತಾನದಲ್ಲಿ ಮೈವಾಂಡದ ಮಲಾಲ ಎಂಬಾಕೆ ಒಂದು ದಂತಕತೆಯಾಗಿದ್ದಾಳೆ. ಕವಿಯತ್ರಿಯಾಗಿದ್ದ ಮಲಾಲ ಬದುಕಿದ್ದು 19ನೇ ಶತಮಾನದಲ್ಲಿ. ಆಕೆ 1880ರಲ್ಲಿ ಬ್ರಿಟಿಷರ ವಿರುದ್ಧ ಮೈವಾಂಡದಲ್ಲಿ ಅಫಘಾನಿಸ್ತಾನದ ಪಶ್ತೂನ್ ಯೋಧರು ಸಾರಿದ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದಳು. ಯುದ್ಧ ಭೂಮಿಯಲ್ಲಿ ಸೈನಿಕರು ದಣಿದಾಗ ಮಲಾಲ ಅಫಘಾನಿಸ್ತಾನದ ಧ್ವಜವನ್ನು ಎತ್ತಿಹಿಡಿದು "ನನ್ನ ಪ್ರೀತಿಯ ಯುವಕರೇ, ನೀವು ಈ ಮೈವಾಂಡದ ಯುದ್ಧ ಭೂಮಿಯಲ್ಲಿ ಮಡಿಯದಿದ್ದರೆ ದೇವರು ನಿಮ್ಮನ್ನು ಅವಮಾನಿಸಲೆಂದೇ ಜೀವಂತವಾಗಿಟ್ಟಿದ್ದಾನೆಂದು ಅರಿಯಿರಿ" ಎಂದು ಹಾಡುವ ಮೂಲಕ ಅವರಲ್ಲಿ ಸ್ಫೂರ್ತಿ ತುಂಬುತ್ತಿದ್ದಳು. 1880ರ ಜುಲೈ 27ರಂದು ಕೊನೆಗೂ ಬ್ರಿಟಿಷರ ವಿರುದ್ಧ ಪಶ್ತೂನ್ ಯೋಧರು ವಿಜಯಿಯಾಗಿದ್ದರು. ಇವತ್ತಿಗೂ ಮೈವಾಂಡದ ಮಲಾಲಳ ಕತೆ ಅಫಘಾನಿಸ್ತಾನದ ಶಾಲಾ ಪಠ್ಯಪುಸ್ತಕಗಳಲ್ಲಿ ಇದ್ದೇ ಇರುತ್ತದೆ. ಧೀರ ಮಹಿಳೆ ಮಲಾಲಳ ಹೆಸರನ್ನೇ ಪಡೆದಿದ್ದ ಸ್ವಾಟ್ ಕಣಿವೆಯ ಮಲಾಲ ಕೂಡ ಧೈರ್ಯಶಾಲಿ.

ಎರಡು ವರ್ಷಗಳ ಹಿಂದೆ ಕೊನೆಗೂ ಸ್ವಾಟ್ ಕಣಿವೆಯಿಂದ ತಾಲಿಬಾನಿಗಳನ್ನು ಪಾಕಿಸ್ತಾನದ ಸೈನ್ಯ ಒದ್ದೋಡಿಸಿತು ಮತ್ತು ಆ ಪ್ರದೇಶವನ್ನು ಪಾಕ್ ಸರ್ಕಾರ ತನ್ನ ಅಧೀನಕ್ಕೆ ತೆಗೆದುಕೊಂಡಿತು. ಇದಾದ ಕೆಲವು ದಿನಗಳಲ್ಲೇ ಹೆಣ್ಣುಮಕ್ಕಳ ಶಾಲೆಗಳನ್ನು ತೆರೆಯಲಾಯಿತು. ಮಲಾಲ ಸಂತೋಷದಿಂದ ಮತ್ತೆ ಶಾಲೆಗೆ ಹೋಗಲಾರಂಭಿಸಿದಳು. ಕೊಲೆ, ಸಾವು, ಬಾಂಬ್ ದಾಳಿ ಇತ್ಯಾದಿಗಳಿಂದ ಕೂಡಿದ್ದ ಆಕೆಯ ಬದುಕಿನಲ್ಲಿ ಮತ್ತೊಮ್ಮೆ ನೆಮ್ಮದಿ ಮತ್ತು ಭದ್ರತೆ ಬಂದಂತಾಯಿತು. ಆಗ ಮಲಾಲಳೇ ಬಿಬಿಸಿ ಉರ್ದು ಚಾನೆಲ್‌ನಲ್ಲಿ ಗುಲ್ ಮಕೈ ಎಂಬ ಹೆಸರಿನಡಿ ದಿನಚರಿಯನ್ನು ಬರೆಯುತ್ತಿದ್ದದ್ದು ಎಂಬುದು ಬಹಿರಂಗಗೊಂಡಿತು. ಆಕೆ ಮಕ್ಕಳ ಹಕ್ಕುಗಳಿಗಾಗಿ ದಿಟ್ಟವಾಗಿ ಹೋರಾಡಿದ ಹುಡುಗಿ ಎಂದು ಖ್ಯಾತಿ ಪಡೆದಳು. ಕಳೆದ ವರ್ಷ ಪಾಕಿಸ್ತಾನದ ಸರ್ಕಾರ ತನ್ನ ಉನ್ನತ ಪ್ರಶಸ್ತಿಯನ್ನು ನೀಡಿ ಆಕೆಯನ್ನು ಗೌರವಿಸಿತ್ತು. ಹಾಗೆಯೇ ಹಾಲೆಂಡಿನ ಸಂಸ್ಥೆಯೊಂದು ಆಕೆಗೆ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿತ್ತು. ಮಲಾಲ ಸದಾ ಒತ್ತು ಕೊಟ್ಟು ಹೇಳುತ್ತಿದ್ದದ್ದು ಒಂದು ಮಾತನ್ನು. ಅದೇನೆಂದರೆ "ಹೊಸ ಪೀಳಿಗೆಯ ಮಕ್ಕಳ ಕೈಗಳಿಗೆ ನೀವು ಲೇಖನಿಗಳನ್ನು ಕೊಡದಿದ್ದರೆ ಮೂಲಭೂತವಾದಿಗಳು ಅವರ ಕೈಗಳಿಗೆ ಬಂದೂಕುಗಳನ್ನು ಕೊಡುತ್ತಾರೆ" ಎಂಬುದು.





ಸ್ವಾಟ್ ಕಣಿವೆಯಲ್ಲಿ ತಾಲಿಬಾನಿಗಳ ಹಾರಾಟ ಕಡಿಮೆ ಆಗಿದ್ದರೂ ಅವರು ಸಂಪೂರ್ಣವಾಗಿ ನಿರ್ನಾಮವಾಗಿರಲಿಲ್ಲ. ಅವರಲ್ಲಿ ಹಲವರು ಇನ್ನೂ ಅಲ್ಲೇ ಉಳಿದುಕೊಂಡಿದ್ದರಲ್ಲದೆ ಹಲವರಿಗೆ ಪ್ರಾಣ ಬೆದರಿಕೆಯನ್ನು ಹಾಕುತ್ತಿದ್ದರು. ಮಲಾಲಳಿಗೇ ಅಂತಹ ಬೆದರಿಕೆಗಳು ಬಂದಿದ್ದವು. ಆದರೆ ಆಕೆಯ ತಂದೆ ಅಂತಹ ಬೆದರಿಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಏನೇ ಆದರೂ ಇನ್ನೂ 14 ವರ್ಷ ವಯಸ್ಸಿನ ತನ್ನ ಮಗಳನ್ನು ಕೊಲ್ಲುವಷ್ಟು ಕಟುಕರಲ್ಲ ತಾಲಿಬಾನಿಗಳು ಎಂದೇ ಅವರು ನಂಬಿದ್ದರು.

ಆದರೆ ಮೊನ್ನೆ ಅವರ ನಂಬಿಕೆ ತಲೆಕೆಳಗಾಯಿತು. ತಾಲಿಬಾನಿ ಹಂತಕನೊಬ್ಬ ಮಲಾಲಳ ಮೇಲೆ ಗುಂಡುಗಳ ಸುರಿಮಳೆಯನ್ನೇ ಹಾರಿಸಿದ. ಈಗ ಆಕೆ ಸಾವಿನ ಅಂಚಿನಲ್ಲಿದ್ದಾಳೆ.


ಮಲಾಲಳ ಮೇಲಾದ ದಾಳಿಯ ಸುದ್ದಿ ಪಾಕಿಸ್ತಾನದುದ್ದಕ್ಕೂ ಮಿಂಚಿನಂತೆ ಹಬ್ಬಿತು. ಎಲ್ಲರೂ ಆ ದಾಳಿಯನ್ನು ಖಂಡಿಸಿದರು. ವಿವಿಧ ನಗರಗಳಲ್ಲಿ ಪ್ರತಿಭಟನೆಗಳೂ ನಡೆದವು. ಸ್ವಾಟ್ ಕಣಿವೆಯಲ್ಲಿರುವ ಶಾಲೆಗಳು ಬಂದ್ ಆದವು. ಶಾಲಾಮಕ್ಕಳು ಮಲಾಲ ಬೇಗನೆ ಚೇತರಿಸಿಕೊಳ್ಳಲಿ ಎಂದು ಸಾಮೂಹಿಕವಾಗಿ ಪ್ರಾರ್ಥಿಸಿದರು.

ಆದರೆ ಆಕೆಯನ್ನು ಸಾವಿನ ಬಾಗಿಲಿಗೆ ದೂಡಿದ ಕಟುಕರಿಗೆ ಬುದ್ಧಿ ಬರಲಿಲ್ಲ. ಬದಲಾಗಿ ತೆಹರೀಕ್ ಎ ತಾಲಿಬಾನ್ ಪಾಕಿಸ್ತಾನ್ ಎಂಬ ಸಂಘಟನೆಯ ಪ್ರತಿನಿಧಿ ಇನ್ಸಾನುಲ್ಲಾ ಇನ್ಸಾನ್ ಎಂಬಾತ ಮಾಧ್ಯಮಗಳಿಗೆ ಫೋನ್ ಮಾಡಿ "ನಾವು ಬೇಕಂತಲೇ ಮಲಾಲ ಯೂಸಫ್‌ಜಯ್ ಮೇಲೆ ದಾಳಿ ಮಾಡಿದ್ದೇವೆ. ಆಕೆ ಇನ್ನೂ ಚಿಕ್ಕ ವಯಸ್ಸಿನ ಹುಡುಗಿ ಎಂಬುದು ನಮಗೆ ಗೊತ್ತು. ನಮ್ಮ ಸಂಘಟನೆ ಮಹಿಳೆಯರ ಮೇಲಿನ ದಾಳಿಯನ್ನು ಸಮರ್ಥಿಸುವುದಿಲ್ಲ. ಅದರೆ ನಮ್ಮ ಶಾರಿಯಾ ಇಸ್ಲಾಂ ವಿರುದ್ಧ ಪ್ರಚಾರ ಮಾಡುವವರನ್ನು ಕೊಲ್ಲಬೇಕೆಂದು ಹೇಳಿದೆ. ಆಕೆ ನಮ್ಮ ಧರ್ಮದ ವಿರುದ್ಧ ಪ್ರಚಾರ ಮಾಡುತ್ತಿದ್ದಳು. ಜಾತ್ಯತೀತತೆಗೆ ಹೆಚ್ಚು ಒತ್ತು ಕೊಡುತ್ತಿದ್ದಳು. ಆಕೆ ಈಗಿನ ದಾಳಿಯಲ್ಲಿ ಸಾವನ್ನಪ್ಪದಿರಬಹುದು. ಆದರೆ ನಾವು ಸುಮ್ಮನಿರುವುದಿಲ್ಲ. ಮತ್ತೆ ಆಕೆಯ ಮೇಲೆ ದಾಳಿ ಮಾಡಿ ಆಕೆ ಪ್ರಾಣವನ್ನು ತೆಗೆದುಕೊಳ್ಳುತ್ತೇವೆ" ಎಂದು ಘೋಷಿಸಿದ.

ಸ್ವತಃ ಪೈಗಂಬರರು ಹೆಣ್ಣುಮಕ್ಕಳ ವಿರುದ್ಧ ಪಕ್ಷಪಾತ ಮಾಡಬಾರದೆಂದು ಹೇಳಿದ್ದರಲ್ಲದೆ ಹಾಗೆ ಮಾಡಿದರೆ ತಮ್ಮ ಮಗಳಾದ ಫಾತಿಮಾ ವಿರುದ್ಧವೇ ಮುಸಲ್ಮಾನರು ನಡೆದುಕೊಂಡಂತೆ ಎಂದು ಎಚ್ಚರಿಸಿದ್ದರು. ಮಾತ್ರವಲ್ಲ, ಯಾರು ತಮ್ಮ ಹೆಣ್ಣುಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೋ ಅವರು ಸ್ವರ್ಗಕ್ಕೆ ಹೋಗುತ್ತಾರೆ ಎಂದಿದ್ದರು.

ಪೈಗಂಬರರ ಮಗಳಾದ ಫಾತಿಮಾ ಕೂಡ ಕಡಿಮೆ ಸಾಧಕಿಯಾಗಿರಲಿಲ್ಲ. ಮೆಕ್ಕಾ ಮೇಲೆ ಪೈಗಂಬರರು ಸಾರಿದ ಯುದ್ಧದಲ್ಲಿ ಫಾತಿಮಾ ಪ್ರಮುಖ ಪಾತ್ರ ವಹಿಸಿದ್ದರು. ತನ್ನ ತಂದೆ ದಿವಂಗತರಾದ ಬಳಿಕ ಚುನಾವಣೆಯಲ್ಲಿ ಅಬುಬಕ್ಕರ್ ಸ್ಪರ್ಧಿಸಕೂಡದೆಂದು ಪ್ರತಿಭಟಿಸಿದ್ದರು. ತನ್ನ ತಂದೆಯ ಸ್ವತ್ತಿನಲ್ಲಿ ತನಗೂ ಪಾಲು ಬರಬೇಕೆಂದು ಹಟಹಿಡಿದು ಗೆದ್ದಿದ್ದರು.

ಇಂತಹ ಧರ್ಮದ ಅನುಯಾಯಿಗಳೆಂದು ಹೇಳಿಕೊಳ್ಳುವ ಮೂಲಭೂತವಾದಿ ತಾಲಿಬಾನಿಗಳು ಮಲಾಲ ತರಹದ ಬಾಲಕಿಯರು ಶಾಲೆಗೆ ಹೋಗಬಾರದೆಂದು ಆದೇಶಿಸುತ್ತಾರಲ್ಲದೆ, ಅಂತಹ ಹೆಣ್ಣುಮಕ್ಕಳ ಪರವಾಗಿ ದನಿ ಎತ್ತಿದ ಹದಿನಾಲ್ಕು ವರ್ಷದ ಮಲಾಲಳನ್ನು ಕೊಂದುಹಾಕಲು ಯತ್ನಿಸುತ್ತಾರೆಂದರೆ ಅವರು ಖಂಡಿತವಾಗಿಯೂ ಇಸ್ಲಾಂ ಧರ್ಮದ ಅನುಯಾಯಿಗಳಲ್ಲ ಎಂದೇ ಅವರನ್ನು ಖಂಡಿಸಬೇಕಲ್ಲವೇ? •



ಇತ್ತೀಚೆಗೆ ಖ್ಯಾತ ಸಂಗೀತಗಾರ್ತಿ ಆಶಾ ಭೋಸ್ಲೆ ಅವರ ಪುತ್ರಿ ವರ್ಷಾ ಭೋಸ್ಲೆ ಆತ್ಮಹತ್ಯೆ ಮಾಡಿಕೊಂಡರು. ವರ್ಷಾ ಅವರು ತಮ್ಮ ತಾಯಿ ಆಶಾ ಅವರನ್ನು ಕುರಿತು ಮನಮುಟ್ಟುವಂತೆ ಬರೆದಿದ್ದ ಲೇಖನದ ಸಂಗ್ರಹಾನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.

ನನ್ನ ಅಮ್ಮ ಆಶಾ ಭೋಸ್ಲೆ

ನಾನು ಎಲ್ಫಿನ್‌ಸ್ಟೋನ್ ಕಾಲೇಜಿನಲ್ಲಿದ್ದಾಗ ರಾಜ್ಯಶಾಸ್ತ್ರ ಹೇಳಿಕೊಡುತ್ತಿದ್ದ ಮಿಸ್ಸೆಸ್ ದೊಸಾಲ್ ಎಂಬುವವರು ನನ್ನ ವಿರುದ್ಧ ಸದಾ ಕಿಡಿಕಾರುತ್ತಿದ್ದರು. ಆಕೆ ನನಗೆ ಪದೇಪದೇ ಹೇಳುತ್ತಿದ್ದ ಮಾತುಗಳನ್ನು ನೆನಪಿಸಿಕೊಂಡರೆ ಈಗಲೂ ನನಗೆ ಕೋಪ ಬರುತ್ತದೆ. "ನಿನಗೆ ಒಳ್ಳೆ ಮಾರ್ಕ್ಸ್ ಹೇಗೆ ಬಂದವು ಎಂದು ನಾನು ಊಹಿಸಬಲ್ಲೆ, ಯಾವುದನ್ನು ಕೊಂಡುಕೊಳ್ಳಲಾಗುತ್ತಿದೆ, ಮಾರಲಾಗುತ್ತಿದೆ ಎಂಬುದು ಗುಟ್ಟಾಗಿ ಉಳಿಸಿದಿಲ್ಲ, ನೀನು ಎಂತಹ ಕುಟುಂಬದವಳು ಎಂಬುದು ನನಗೆ ಗೊತ್ತು" ಎಂದು ಆಕೆ ನನ್ನನ್ನು ಝಾಡಿಸುತ್ತಿದ್ದಳು.

ಆಗ ಆಕೆಯ ಕೋಪಕ್ಕೆ ಕಾರಣ ಅಸೂಯೆ, ಸಣ್ಣತನ ಅಥವಾ ಪೂರ್ವಾಗ್ರಹ ಎಂಬುದು ನನಗೆ ಅರ್ಥವಾಗಿರಲಿಲ್ಲ, ಯಾರ ಮತ್ತು ಯಾವುದರ ಬಗ್ಗೆ ಆಕೆಗೆ ಕೋಪ ಎಂದು ಗೊತ್ತಿರಲಿಲ್ಲ, ಆದರೆ ಇಂತಹದ್ದೇ ಹಲವಾರು ಅನುಭವಗಳಾದ ನಂತರ ನನ್ನ 'ಕುಟುಂಬ'ವೇ ಆಕೆಯ ಆಕ್ರೋಶಕ್ಕೆ ಕಾರಣ ಎಂದು ಅರ್ಥವಾಯಿತು. ನನ್ನ ಕುಟುಂಬವಾದರೂ ಎಂತಹದ್ದು? ಮೂರು ತಲೆಮಾರುಗಳಿಂದ ಸಂಗೀತವನ್ನೇ ನೈಸರ್ಗಿಕ ಕೊಡುಗೆಯಾಗಿ ಪಡೆದಿದ್ದ ವಿಶೇಷ ಕುಟುಂಬದವಳು ನಾನು.

ಹಲವಾರು ವರ್ಷಗಳ ಕಾಲ ವಿಶ್ವವಿದ್ಯಾಲಯಗಳಲ್ಲಿ ಓದಿ, ಉತ್ತಮ ತರಬೇತಿಯನ್ನು ಪಡೆದು, ಉನ್ನತ ಹುದ್ದೆಗಳಿಗೆ ಏರಿರುವ ಕೆಲವರಿಗೆ ಚಿತ್ರೋದ್ಯಮದ ಅವಿದ್ಯಾವಂತರು, ಸುಸಂಸ್ಕಾರಹೀನರು, ಅನೈತಿಕ ಜೀವನ ನಡೆಸುವವರು ನವ ಶ್ರೀಮಂತರಾಗಿ ತಮಗಿಂತ ಉನ್ನತ ಜೀವನಶೈಲಿಯನ್ನು ನಡೆಸುವುದನ್ನು ಕಂಡರಾಗುವುದಿಲ್ಲ, ಅದರಲ್ಲೂ ಮಹಿಳಾ ಗಾಯಕಿಯರ ಬಗ್ಗೆ ಅವರಿಗೆ ಒಂದಿಷ್ಟೂ ಮರ್ಯಾದೆ ಇರುವುದಿಲ್ಲ, ಆದ್ದರಿಂದ ಅಂತಹವರು ಮಹಿಳಾ ಗಾಯಕಿಯರನ್ನು ಗಾಯಕಿ, ಗಾನೇವಾಲಿ, ಕೋಥೆವಾಲಿ, ದೇವದಾಸಿ ಎಂದೆಲ್ಲ ಬ್ರಾಂಡ್ ಮಾಡಿಬಿಡುತ್ತಾರೆ. ಇಂತಹ ಪೂರ್ವಾಗ್ರಹಗಳ ನಡುವೆ ಬದುಕುವುದನ್ನು ನಾವು ಕಲಿಯಬೇಕಾಯಿತು.

ನಾನು ಚಿಕ್ಕವಳಾಗಿದ್ದಾಗ ನನ್ನ ಅಮ್ಮ ಆಶಾ ಭೋಸ್ಲೆ ಅವರನ್ನು ಕುರಿತಂತೆ ನನಗೆ ಇರುವ ನೆನಪುಗಳು ಹಲವಾರು ದೃಶ್ಯಗಳ ಜೋಡಣೆಯಂತಿದೆ. ಅಹೋ ರಾತ್ರಿ ಬಾರಿಸುತ್ತಿದ್ದ ಬಾಗಿಲು ಗಂಟೆ, ಕಣ್ಣೀರಿಡುತ್ತಾ ನನ್ನನ್ನು ಅಪ್ಪಿಕೊಂಡು ನಿದ್ದೆ ಮಾಡಿಸುತ್ತಿದ್ದ ತಾಯಿ, ಮುಚ್ಚಿದ್ದ ಬಾಗಿಲಿನ ಹಿಂದಿನಿಂದ ಪುನರಾವರ್ತನೆಗೊಂಡು ಕೇಳಿಬರುತ್ತಿದ್ದ ಸಂಗೀತದ ಅಭ್ಯಾಸ... ನಾನು ಆ ರೂಮಿನ ಒಳಗೆ ಹೋಗಬೇಕೆಂದು ಬಾಗಿಲನ್ನು ಬಡಿದಾಗ ನನ್ನನ್ನು ಅಲ್ಲಿಂದ ಹೊತ್ತೊಯ್ಯುತ್ತಿದ್ದ ಪುರುಷ... ಬಹಳ ದಿನಗಳ ನಂತರ ನನಗೆ ಗೊತ್ತಾಯಿತು: ಅಮ್ಮನನ್ನು ಎಲ್ಲಾ ತರಹದ ಅಡಚಣೆಗಳಿಂದ ರಕ್ಷಿಸುವ ಮೂಲಕ ಆಕೆಯನ್ನು ಅಪ್ಪ ದುಡಿಸಿಕೊಳ್ಳುತ್ತಿದ್ದ ನಾನು ನನ್ನ ನೆನಪಿನಿಂದ ಅಪ್ಪನನ್ನು ಕುರಿತ ಎಲ್ಲವನ್ನೂ ಅಳಿಸಿಹಾಕಿದ್ದೇನೆ. ಆ ನೆನಪುಗಳೊಂದಿಗೆ ನನ್ನ ಬಾಲ್ಯದ ಬಹಳಷ್ಟು ನೆನಪುಗಳೂ ಮಾಸಿಹೋಗಿವೆ. ಹಲವರ ಪ್ರಕಾರ ಇದು ರಕ್ಷಣಾತಂತ್ರ. ನಮ್ಮ ಮನೆಯಲ್ಲಿ ಅಡುಗೆ ಮಾಡುತ್ತಿದ್ದವಳಿಂದ ನಾನು ಅಪ್ಪನ ಬಗ್ಗೆ ಕತೆಗಳನ್ನು ಕೇಳಿಯೇ ನಾನು ಆತನನ್ನು ಕುರಿತ ನೆನಪುಗಳನ್ನೆಲ್ಲ ಅಳಿಸಿಹಾಕಿದೆ ಎನಿಸುತ್ತದೆ.

ನನ್ನ ಅಮ್ಮ ಇದ್ದಕ್ಕಿದ್ದಂತೆ ಒಂದು ದಿನ ತನ್ನತನವನ್ನು ಕಂಡುಕೊಂಡಳು. ಆಕೆ ತನ್ನ ಮೂರನೆ ಮಗುವನ್ನು ಇನ್ನೂ ಗರ್ಭದಲ್ಲಿ ಹೊತ್ತಿದ್ದಾಗ ತನ್ನ ಜೀವನಕ್ರಮವೇ ಆಗಿಹೋಗಿದ್ದ ದೈಹಿಕ ಹಲ್ಲೆಯನ್ನು ಇನ್ನು ಮುಂದೆ ತಡೆಯಲಾರೆ ಎಂದು ನಿರ್ಧರಿಸಿದಳು. ಮರುದಿನವೇ ಆಕೆ ತಾನು ಅಷ್ಟು ದಿನ ಕಷ್ಟಪಟ್ಟು ದುಡಿದಿದ್ದ ಎಲ್ಲವನ್ನೂ – ಹಣ, ಮನೆ, ಕಾರು, ಬಟ್ಟೆ ಇತ್ಯಾದಿಗಳನ್ನೆಲ್ಲ – ತೊರೆದು ತನ್ನ ಮಕ್ಕಳೊಂದಿಗೆ ನಮ್ಮ ಅಜ್ಜಿಯ ಮನೆಯನ್ನು ಸೇರಿದಳು. ನನ್ನ ತಮ್ಮ ಆನಂದ ಹುಟ್ಟುವ ಮುನ್ನ ಆಕೆ ಈ ನಿರ್ಧಾರ ತೆಗೆದುಕೊಂಡಳು ಎಂಬುದರ ಬಗ್ಗೆ ನನಗೆ ಆಗ ಬೇಜಾರಿತ್ತು, ಏಕೆಂದರೆ ಆಕೆಯನ್ನು ಕೆಟ್ಟದಾಗಿ ನೋಡುವವರಿಗೆ, ಗಂಡನನ್ನು ತೊರೆದ ಮಹಿಳೆ ಎಂದು ಭಾವಿಸುವವರಿಗೆ ಆಗ ಕೊರತೆ ಇರಲಿಲ್ಲ, ಅದೃಷ್ಟವಶಾತ್ ನನ್ನ ತಮ್ಮ ದೈಹಿಕವಾಗಿ ನಮ್ಮ ಅಪ್ಪನ ಪಡಿಯಚ್ಚಿನಂತಿದ್ದ.

ಹೀಗೆ ನಾವು ನಮ್ಮ ಅಜ್ಜಿಯ ಮನೆ ಸೇರಿದ ನಂತರದಲ್ಲಿ ನಡೆದದ್ದೆಲ್ಲ ನನಗೆ ಈಗಲೂ ಸ್ಪಷ್ಟವಾಗಿ ನೆನಪಿದೆ. ಆದರೂ ಅಮ್ಮನನ್ನು ಕುರಿತ ನೆನಪುಗಳು ಅಷ್ಟು ಉಜ್ವಲವಾಗಿಲ್ಲ, ಆರಂಭದಲ್ಲಿ ಮತ್ತೆ ಎಲ್ಲವನ್ನೂ ಪಡೆಯಬೇಕಿದ್ದರಿಂದ ಮತ್ತು ಇನ್ನೊಂದು ಮಗುವೂ ಆಗಮಿಸಿದ್ದರಿಂದ ಅಮ್ಮ ಎರಡು ಪಟ್ಟು ಹೆಚ್ಚು ಶ್ರಮವಹಿಸಿ ದುಡಿಯಬೇಕಿತ್ತು, ಆಕೆ ನಮ್ಮನ್ನು ನೋಡಿಕೊಳ್ಳುತ್ತಿದ್ದರು, ಶಾಲೆಗೆ ಕಳುಹಿಸುತ್ತಿದ್ದರು, ನಮಗೆ ಬೇಕಾದ್ದನ್ನೆಲ್ಲ ಕೊಡಿಸುತ್ತಿದ್ದರು... ಆದರೂ ಆಕೆ ನಮ್ಮೊಂದಿಗೆ ಹೆಚ್ಚು ಸಮಯ ಕಳೆಯುತ್ತಿರಲಿಲ್ಲ, ಬಹಳ ವರ್ಷಗಳ ನಂತರ ನಾನೊಮ್ಮೆ ಅಮ್ಮನನ್ನು ಕೇಳಿದೆ: "ಅಮ್ಮ, ನಿನ್ನ ತಲೆಯ ಮೇಲೊಂದು ಸೂರಿತ್ತು, ನಿನ್ನ ಅಮ್ಮ ಮತ್ತು ಸಹೋದರಿಯರ ನೆರವಿತ್ತು, ಆದರೂ ಅದಷ್ಟು ಬೇಗನೆ ನಿನ್ನದೇ ಮನೆ ಇರಬೇಕೆಂದು ಯಾಕಷ್ಟು ಕಷ್ಟಪಟ್ಟೆ? ಅದರ ಬದಲಿಗೆ ನೀನು ನಮ್ಮೊಂದಿಗೆ ಇನ್ನೂ ಹೆಚ್ಚು ಸಮಯವನ್ನು ಕಳೆಯಬಹುದಿತ್ತಲ್ಲ?" ನನ್ನ ಪ್ರಶ್ನೆಗೆ ಅಮ್ಮ ಕೊಟ್ಟ ಉತ್ತರ ಹೀಗಿತ್ತು: "ನಾನು ಮುಂದೆಂದೂ ಇನ್ನೊಬ್ಬರ ಮರ್ಜಿಯಲ್ಲಿ ಬದುಕುವುದು ನನಗೆ ಬೇಕಿರಲಿಲ್ಲ, ಅದರಿಂದ ನಿಮಗೂ ಹಾನಿ ಆಗುತ್ತಿತ್ತು, ನೀವು ನಿಮ್ಮ ಮನೆಯಲ್ಲಿ ಸ್ವತಂತ್ರವಾಗಿ ಬೆಳೆಯಬೇಕೆಂಬುದು ನನ್ನ ಆಸೆ ಆಗಿತ್ತು."

ಹೀಗೆ ಸ್ವತಂತ್ರವಾಗಿ ಬದುಕಲಾರಂಭಿಸಿದ ನನ್ನ ಅಮ್ಮ ಬಂಡಾಯ ಸಾರಿದರು. ನಮ್ಮ ಸಮಾಜದಂತೆ ನಮ್ಮ ಚಿತ್ರೋದ್ಯಮವೂ ಪೂರ್ವಾಗ್ರಹ, ಬೂಟಾಟಿಕೆ ಮತ್ತು ಗುಂಪುಗಾರಿಕೆಯಿಂದ ಕೂಡಿದೆ. ಆಗ 'ಆಶಾ ಭೋಸ್ಲೆ ಜಾರಿ ಬಿದ್ದ ನಾರಿ' ಎಂದು ಅಮ್ಮನನ್ನು ಪರಿಗಣಿಸುತ್ತಿದ್ದರು. ಆಕೆಯ ಹತ್ತಿರದ ಪ್ರತಿಸ್ಪರ್ಧಿ ಆಕೆಯ ಹಿರಿಯ ಅಕ್ಕ ಲತಾ ಮಂಗೇಷ್ಕರ್ ಎಂಬುದೂ ಆಕೆಯ ವಿರುದ್ಧ ಕೆಲಸ ಮಾಡಿತು. ಇದ್ದಕ್ಕಿದ್ದಂತೆ ಆಕೆಗೆ ಸಿಕ್ಕಿದ್ದ ಅವಕಾಶಗಳನ್ನೆಲ್ಲ ಹಿಂದೆಪಡೆಯಲಾಯಿತು. ನಿಧಾನವಾಗಿ ಆಕೆಯ ವೃತ್ತಿಜೀವನದ ಸುತ್ತ ಒಂದು ರೀತಿಯ ಮೌನ ಸಂಚುಗಾರಿಕೆ ಆವರಿಸಿತು. ಆದರೆ ಒಂದು ದಶಕ ಕಾಲ ತನ್ನ ಸಾಂಸಾರಿಕ ತಾಪತ್ರಯಗಳನ್ನು ತನ್ನ ಕುಟುಂಬದವರಿಂದ, ತನ್ನ ಸಹೋದ್ಯೋಗಿಗಳಿಂದ ಬಚ್ಚಿಟ್ಟಿದ್ದ ಅಮ್ಮ ಇಂತಹ ಪಿತೂರಿಗಳಿಂದ ಧೃತಿಗೆಡಲಿಲ್ಲ, ಬದಲಾಗಿ ತನಗೆ ಸಿಕ್ಕಿದ್ದ ಸ್ವಾತಂತ್ರವನ್ನು ಆಸ್ವಾಧಿಸಲಾರಂಭಿಸಿದರು. ಧೈರ್ಯವಾಗಿ, ಒಂದಿಷ್ಟೂ ಹಿಂಜರಿಕೆ ಇಲ್ಲದೆ 'ನನ್ನ ಬದುಕು ಒಂದು ತೆರೆದ ಪುಸ್ತಕದಂತೆ, ನೀವು ಏನು ಬೇಕಾದರೂ ಅಂದುಕೊಳ್ಳಿ' ಎಂಬಂತೆ ಅಮ್ಮ ಬದುಕಲಾರಂಭಿಸಿದರು.


ಸಂಗೀತ ನಿರ್ದೇಶಕರು 'ಆಶಾ ಭೋಸ್ಲೆ ಎಂದರೆ ಕ್ಯಾಬರೆ, ಮುಜ್ರಾ, ಕವ್ವಾಲಿ ತರಹದ ಹಾಡುಗಳಿಗೆ ಮಾತ್ರ ಸೂಕ್ತ' ಎಂಬಂತೆ ವರ್ತಿಸಿದ್ದಕ್ಕೆ ಕಾರಣ ಆಕೆಯ ವೈಯಕ್ತಿಕ ಜೀವನ ಎಂದು ನಾನು ನಂಬಿದ್ದೇನೆ. ಸಂಗೀತದ ಬಗ್ಗೆ ಮಾತನಾಡುವಷ್ಟು ಪರಿಣತಿ ನನಗಿಲ್ಲದಿದ್ದರೂ ಆಶಾ ಭೋಸ್ಲೆ ಅವರು ಸಂಗೀತದ ವಿವಿಧ ಪ್ರಕಾರಗಳಲ್ಲಿ ಎತ್ತಿದ ಕೈ ಎಂಬುದು ಸ್ಪಷ್ಟ. ಆದರೂ ಹಿಂದಿ ಚಿತ್ರರಂಗದವರಿಗೆ ಭಾರತೀಯ ನಾರಿಯರನ್ನು ಹೋಲುವ ಪಾತ್ರಗಳಿಗೆ ಈ 'ಜಾರಿಣಿ'ಯ ದನಿಯನ್ನು ಕೊಡಿಸುವುದು ಸೂಕ್ತ ಅನಿಸುತ್ತಿರಲಿಲ್ಲ, ಅಕಸ್ಮಾತ್ ಆ ಪಾತ್ರ ಪಾಶ್ಚಿಮಾತ್ಯ ಪಾತ್ರವಾಗಿದ್ದರೆ ಮಾತ್ರ ಆಶಾ ಅವರಿಂದ ಆ ಪಾತ್ರಕ್ಕೆ ಹಾಡಿಸುತ್ತಿದ್ದರು.

ವಿಚಿತ್ರವೆಂದರೆ, ಆಶಾ ಭೋಸ್ಲೆ ಅವರ ಬಗ್ಗೆ ಮರಾಠಿ, ಬೆಂಗಾಲಿ ಮತ್ತು ಗುಜರಾತಿ ಚಿತ್ರೋದ್ಯಮಗಳಲ್ಲಿ ಇಂತಹ ಪೂರ್ವಗ್ರಹಗಳಿರಲಿಲ್ಲ, ಆದ್ದರಿಂದ ಆ ಕಾಲದಲ್ಲಿ ಆಶಾ ಭೋಸ್ಲೆ ಅವರು ಆ ಭಾಷೆಯ ಸಿನಿಮಾಗಳಲ್ಲಿ ಹಲವಾರು ಉತ್ತಮ ಹಾಡುಗಳನ್ನು ಹಾಡಿದ್ದಾರೆ. ಪ್ರಾದೇಶಿಕ ಜನರ ಮತ್ತು ಹಿಂದಿ ಚಿತ್ರೋದ್ಯಮದಲ್ಲಿದ್ದ ಜನರ ನಡುವಿನ ವ್ಯತ್ಯಾಸ ಇದು ಸೂಚಿಸುತ್ತದೆ ಅಲ್ಲವೆ? ಆರ್.ಡಿ.ಬರ್ಮನ್ ಅವರನ್ನು ಆಶಾ ಭೋಸ್ಲೆ ಅವರು ಮದುವೆ ಆದಾಗ ಅಲ್ಲಿಯತನಕ ಆಕೆಗೆ ನೀಡಿದ್ದ 'ಕ್ಯಾಬರೆ ಹಾಡುಗಾರ್ತಿ' ಎಂಬ ಬಿರುದು 'ಬಹುಮುಖಿ ಪ್ರತಿಭೆ'ಯಾಗಿ ಪರಿವರ್ತನೆಗೊಂಡಿತು. 'ಬಹುಮುಖಿ ಪ್ರತಿಭೆ' ಎಂಬ ಪದವನ್ನು ಕೇಳಿದರೆ ನನಗೆ ಕೋಪ ಬರುತ್ತದೆ. ಯಾಕೆಂದರೆ ಅದೂ ಇನ್ನೊಂದು ರೀತಿಯಲ್ಲಿ ಒಂದು ಬಿರುದಷ್ಟೇ.

ನನ್ನ ಅಮ್ಮನನ್ನು ಒಂದು ಪದದಲ್ಲಿ ಬಣ್ಣಿಸಬೇಕೆಂದರೆ ನಾನು ಆಯ್ಕೆ ಮಾಡುವುದು 'ಜಿದ್ದಿ'. ಇಂಗ್ಲಿಷ್‌ನಲ್ಲಿರುವ ಯಾವ ಪದಗಳೂ 'ಜಿದ್ದಿ' ಪದಕ್ಕೆ ಹತ್ತಿರ ಬರುವುದಿಲ್ಲ; ಅಮ್ಮನಲ್ಲಿರುವ ದೃಢತೆ ಮತ್ತು ಕಷ್ಟಪಡುವ ನಿಯತ್ತನ್ನು ತೋರುವುದಿಲ್ಲ, ತನ್ನ ಮುಂದಿರುವ ಸವಾಲು ಹೆಚ್ಚು ಕಷ್ಟದಾಯಕವಾದಷ್ಟೂ ಅಮ್ಮ ಅದನ್ನು ಮೀರಿ ನಿಲ್ಲಲು ಪ್ರಯತ್ನಿಸುತ್ತಾಳೆ. ಒಮ್ಮೆ ವೆಸ್ಟ್ ಇಂಡಿಯಾ ಕಂಪನಿ ಎಂಬ ಪಾಶ್ಚಿಮಾತ್ಯ ತಂಡದೊಂದಿಗೆ ಆಕೆ ಹಾಡುವುದಾಗಿ ನನ್ನ ತಮ್ಮ ಆನಂದ ಒಪ್ಪಂದ ಮಾಡಿಕೊಂಡ. ಅಷ್ಟೇ ಅಲ್ಲ, ಅಮ್ಮ ಇಂಗ್ಲೆಂಡಿನಲ್ಲಿ ಅಲ್ಲಿನ ಮಾಧ್ಯಮಗಳೊಂದಿಗೆ; ಟಿವಿ ಚಾನೆಲ್‌ಗಳೊಂದಿಗೆ ಇಂಗ್ಲಿಷ್‌ನಲ್ಲಿ ಮಾತನಾಡಬೇಕೆಂದೂ, ಇಂಗ್ಲಿಷ್‌ನಲ್ಲಿ ಹಾಡನ್ನು ಹಾಡಬೇಕೆಂದೂ ಹೇಳಿದ. ಅದನ್ನು ಕೇಳಿ ನಾನು ದಿಗ್ಭ್ರಾಂತಳಾದೆ. ಶಾಲೆಗೇ ಹೋಗಿರದಿದ್ದ ಈ ಮಧ್ಯ ವಯಸ್ಸಿನ ಮಹಿಳೆ ಅದು ಹೇಗೆ ಕೆಲವೇ ದಿನಗಳಲ್ಲಿ ಇಂಗ್ಲಿಷ್ ಕಲಿತು ಆ ಭಾಷೆಯಲ್ಲಿ ಹಾಡುವುದು, ಸುಲಲಿತವಾಗಿ ಮಾತನಾಡುವುದು ಸಾಧ್ಯ ಎಂದು ನಾನಂದುಕೊಂಡೆ. ಆದರೆ ಆಗಿದ್ದೇ ಬೇರೆ. ಬೆಳಗ್ಗೆ ನಾಲ್ಕು ಗಂಟೆಗೆ ಏಳುತ್ತಿದ್ದ ಅಮ್ಮ ವಾಕ್‌ಮನ್‌ನಲ್ಲಿ ಇಂಗ್ಲಿಷ್ ಪಾಠಗಳನ್ನು ಶ್ರದ್ಧೆಯಿಂದ ಗಂಟೆಗಟ್ಟಲೆ ಕೇಳಿ ಕಲಿಯಲಾರಂಭಿಸಿದರು. ಪರಿಣಾಮವಾಗಿ ಆಕೆ ಹಾಡಿದ 'ಅವ್ವೆ ಮರಿಯಾ' ಎಂಬ ಇಂಗ್ಲಿಷ್ ಹಾಡು ಜನಪ್ರಿಯ 20 ಹಾಡುಗಳ ಪಟ್ಟಿಯಲ್ಲಿ ಸ್ಥಾನ ಪಡೆಯಿತಲ್ಲದೆ, ಆಕೆ ಇಂಗ್ಲೆಂಡಿನ ಟಿವಿ ಮತ್ತು ರೇಡಿಯೋ ಚಾನೆಲ್‌ಗಳಲ್ಲಿ ಮತ್ತು ಪತ್ರಿಕಾಗೋಷ್ಠಿಗಳಲ್ಲಿ ತನ್ನ ಎಂದಿನ ಠೀವಿಯಲ್ಲಿ ಇಂಗ್ಲೀಷ್‌ನಲ್ಲಿ ಮಾತನಾಡಿದರು.

1989ರಲ್ಲಿ ನಾವು ಅಮೆರಿಕದಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಲು ಹೋದೆವು. 20 ದಿನಗಳಲ್ಲಿ 13 ವಿವಿಧ ನಗರಗಳಲ್ಲಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದ ಆ ಕಾರ್ಯಕ್ರಮ ತುಂಬಾ ಕಠಿಣವಾಗಿತ್ತು, ತಂಡದಲ್ಲಿದ್ದ ಎಲ್ಲರಿಗೂ ಸುಸ್ತೋಸುಸ್ತು, ಅದು ಮುಗಿದ ನೇರವಾಗಿ ಭಾರತಕ್ಕೆ ವಾಪಸ್ ಬರುವ ಬದಲು ಸ್ವೀಡನ್‌ನ ಸ್ಟಾಕ್‌ಹೋಮ್ ನಗರದಲ್ಲಿ ಇನ್ನೊಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಅಮೆರಿಕದ ಪ್ರಯಾಣದಿಂದ ಸುಸ್ತಾಗಿದ್ದ ಅಮ್ಮನಿಗೆ ಕಲೈಟಿಸ್ ಕಾಯಿಲೆ ಅಂಟುಕೊಂಡಿತು. ಜೊತೆಗೆ ಜ್ವರ ಮತ್ತು ಕೆಮ್ಮು ಬೇರೆ. ಇದೆಲ್ಲದರಿಂದಾಗಿ ಆಕೆಯ ದನಿಯೇ ಕುಸಿದು ಹೋಗಿತ್ತು.

ಇಂತಹ ಪರಿಸ್ಥಿತಿಯಲ್ಲಿ ನಾವೇನನ್ನು ಮಾಡಲು ಸಾಧ್ಯ? ಕಾರ್ಯಕ್ರಮವನ್ನು ರದ್ದು ಮಾಡುವ ಬದಲಾಗಿ ಅಮ್ಮನೊಂದಿಗೆ ಹೋಗಿದ್ದ ಹಾಡುಗಾರರಾದ ಸುರೇಶ್



ವಾಡ್ಕರ್ ಮತ್ತು ನಾನು ಹಲವು ಹಾಡುಗ... ಹಾಡುವುದೆಂದೂ, ಕೊನೆಯಲ್ಲಿ ಅಮ್ಮ ಜನರ ಮ... ಪ್ರತ್ಯಕ್ಷ ಆಗುವುದೆಂದೂ ನಿರ್ಧರಿಸಿದೆವು. ಆದರೆ ... ಇಂತಹ 'ಹುಚ್ಚು' ನಿರ್ಧಾರಗಳಿಗೆ ಒಪ್ಪಲಿಲ್ಲ, ಜನ ... ಹಾಡುವುದನ್ನು ಕೇಳಲು ಬರುತ್ತಾರಾದ್ದರಿಂದ ತಾನು ಹಾ... ಎಂದು ಹೇಳಿದರು. ಅಂದಹಾಗೆ ಅಮ್ಮ ಹಾಡಿ... ಜನಪ್ರಿಯ ಹಾಡುಗಳಾದ 'ದಂ ಮಾರೋ ದಂ', ... ಮೆರೆ ಸೋನಾರೆ', 'ದುನಿಯಾ ಮೇ ಲೋಗೋ ... ಇತ್ಯಾದಿ ಹಾಡುಗಳು ಕೇಳುಗರಿಗೆ ಹುರುಳಿಲ್ಲ... ಲಘುವಾಗಿಯೂ ಕೇಳಿಸಬಹುದು. ಆದರೆ ಅವುಗ... ಹಾಡುವುದು ಸುಲಭವಲ್ಲ, ಅವುಗಳನ್ನು ಹಾಡಲು ... ಶ್ವಾಸಶಕ್ತಿ ಮತ್ತು ಸ್ಥಾಯಿ ಶಕ್ತಿಯೂ ಬೇಕು. ಆದರೆ ... ಭೋಸ್ಲೆ ಅವರ ಪ್ರತಿಭೆ ಎಂತಹದ್ದೆಂದರೆ ಅವರು ಇ... ಹಾಡುಗಳನ್ನು ಹಾಡುವುದು ಸುಲಭ ಎಂಬಂತೆ ಹಾಡು...

ಸ್ಟಾಕ್‌ಹೋಮ್ ಕಾರ್ಯಕ್ರಮದ ಟಿಕೆಟು... ಸಂಪೂರ್ಣವಾಗಿ ಮಾರಾಟ ಆಗಿದ್ದವು. ಹಾಲ್ ತ... ಭಾರತ ಮತ್ತು ಪಾಕಿಸ್ತಾನದಿಂದ ವಲಸೆ ಬಂದಿದ್ದ... ತುಂಬಿತುಳುಕುತ್ತಿದ್ದರು. ಅಮ್ಮ ಕಷ್ಟಪಟ್ಟು ... ಹಾಡುಗಳನ್ನು ಹಾಡಿದರು. ಅವುಗಳಿಗೆ ಪ್ರೇಕ್ಷಕರಿಂದ ... ಪ್ರತಿಕ್ರಿಯೆ ವ್ಯಕ್ತವಾಯಿತು. ಆಗ ಪ್ರೇಕ್ಷಕರ ಮಧ್ಯ... ಯಾರೋ ಒಬ್ಬರು "ಆಶಾಜೀ, ದಯವಿಟ್ಟು ಒ... ಮರಾಠಿ ಹಾಡನ್ನು ಹೇಳಿ. ನಾವು ಬಹಳ ದೂರ... ನಿಮ್ಮ ಹಾಡನ್ನು ಕೇಳಲು ಬಂದಿದ್ದೇವೆ" ಎಂದರು... ಅಮ್ಮ 'ನಾಚ್-ನಾಚುನಿ ಅತಿ ಮಿ ದಮಾಲೆ' ... ಹಾಡನ್ನು ಗುನುಗಲಾರಂಭಿಸಿದರು. ಆ ಹಾಡಿನ ... "ಓ ದೇವರೇ ಈ ನಿರಂತರ ಕುಣಿತದಿಂದ ... ಬಸವಳಿದಿದ್ದೇನೆ...' ಅಮ್ಮ ಇದ್ದ ದೈಹಿಕ ಸ್ಥಿತಿಯನ್... ಹಾಡು ಪ್ರತಿಬಿಂಬಿಸುವಂತಿತ್ತು, ಆಗ ಒಂದು ಪವಾ... ನಡೆದುಹೋಯಿತು. ಪ್ರಾಯಶಃ ಅಮ್ಮನ ಮಾನಸಿ... ಆಕೆಯ ದೈಹಿಕ ಶಕ್ತಿಯನ್ನೂ ಮೀರಿ ನಿಂತಿತ್ತು. ... ಕಣ್ಣುಗಳನ್ನು ಮುಚ್ಚಿ ಮೈಕ್ರೋಫೋನನ್ನು ತನ್ನ ಮುಷ್ಟಿ... ಬಿಗಿಯಾಗಿ ಹಿಡಿದು ಹಾಡುತ್ತಾ ಹೋದರು. ಆ ಹಾ... ಪದಗಳು ಮತ್ತು ಅಮ್ಮನ ಕಂಠ ಜೊತೆಗೂಡಿ ಅದ್ಭುತ... ಆ ಹಾಡು ಮೂಡಿತು. ಅದನ್ನು ಕೇಳಿ ನಾನು ... ಮುಚ್ಚುಮರೆ ಇಲ್ಲದೆ ಕಣ್ಣೀರಿಡಲಾರಂಭಿಸಿದೆ. ಸು... ವಾಡ್ಕರ್ ಅವರ ಕಣ್ಣುಗಳೂ ತೇವಗೊಂಡವು. ಅ... ನನ್ನ ಬಳಿ ಬಂದು "ಇದು ಇವರಿಂದ ಹೇಗೆ ಸಾಧ್ಯವಾ... ಇವರಂಥ ಹಾಡುಗಾರ್ತಿ ಮತ್ತೊಬ್ಬರು ಬರಲಾರ..." ಎಂದರು.

ಹಾಡು ಮುಗಿದಾಗ ಹಾಲ್‌ನಲ್ಲಿ ನಿಶ್ಶಬ್ಧ. ನಿಧಾನ... ಜನ ವಾಸ್ತವ ಸ್ಥಿತಿಗೆ ಎಚ್ಚರಗೊಂಡಂತೆ ಚ... ತಟ್ಟಲಾರಂಭಿಸಿದರು. ಒಂದೆರಡು ಕ್ಷಣಗಳಲ್ಲಿ ಇಡೀ ... ಜನರ ಉದ್ಗಾರದಿಂದ ಸ್ಫೋಟಗೊಂಡಿತು. ... ಹೊಡೆದವಳಂತೆ ನಾನು ನಿಂತಿದ್ದೆ, ಅಲ್ಲಿದ್ದ ಎಲ್ಲ... ಮರಾಠಿ ಭಾಷೆ ಗೊತ್ತಿರಲಿಲ್ಲ, ಆದರೂ ಅವರೆ... ಹಾಡನ್ನು ಅಷ್ಟು ಮೆಚ್ಚಿದ್ದರು. ಸಂಗೀತಕ್ಕೆ ಇರುವ... ಅಂತಹದ್ದು, ಅದು ಧರ್ಮ, ಜಾತಿ, ಭಾಷೆಗಳನ್ನು ... ಜನರನ್ನು ಒಂದುಗೂಡಿಸುತ್ತದೆ.

ನನ್ನ ಅಮ್ಮನೇ ನನ್ನ ಇಡೀ ಕುಟುಂಬ. ನಾನು ... ಕುಟುಂಬದ ಹೆಮ್ಮೆಯ ಸದಸ್ಯೆ ಎಂದು ನನಗೆ ... ಮಾಡುತ್ತಿದ್ದ ಮಿಸ್ಸೆಸ್ ದೋಸಾಲ್ ಅವರಿಗೆ ಹೆಮ್ಮೆ... ಹೇಳಲು ಇಷ್ಟಪಡುತ್ತೇನೆ...


● ಕನ್ನಡಕ್ಕೆ : ಸಾವ...

...ಉಂಟಾಗಲಿದೆ ರಾಜ್ಯ ಹಿಂದೆಂದೂ ಕಾಣದಂತಹ ಅಪವಿತ್ರ ಮೈತ್ರಿ

...ರಾಜ್ಯದಲ್ಲಿ ರಾಜಕೀಯದ ಧ್ರುವೀಕರಣದ ಹೊಸ ...ಆರಂಭವಾಗುತ್ತಿದೆ.

...ಜೆಪಿಯಿಂದ ಈಗಾಗಲೇ ಒಂದು ಕಾಲನ್ನು ...ಟ್ಟಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ...ಬರ್ 19ರ ನಂತರ ಹೊಸ ಪಕ್ಷ ಕಟ್ಟುವ ಬಗ್ಗೆ ...ಪಿಸಿದ್ದಾರೆ. ಯಡಿಯೂರಪ್ಪ ಬಿಜೆಪಿಗೆ ವಿದಾಯ ...ವ ಬಗ್ಗೆ ಕಳೆದ ಹಲವಾರು ತಿಂಗಳುಗಳಿಂದ ...ೀಯ ವಲಯದಲ್ಲಿ ಊಹಾ-ಪೋಹಗಳು ...ಬಿದ್ದರೂ ಸಹ ಈತನಕ ಅದರ ಬಗ್ಗೆ ಬಾಯಿಬಿಡದ ...ಯೂರಪ್ಪ ಇದೇ ಮೊದಲ ಬಾರಿಗೆ ಹೊಸ ಪಕ್ಷ ...ಬಗ್ಗೆ ಮಾತನಾಡಿದ್ದಾರೆ.

...ಯಡಿಯೂರಪ್ಪನ ತಂತ್ರಗಾರಿಕೆಯನ್ನು ಬಹಳ ...ಂದ ಗಮನಿಸುತ್ತಾ ಬಂದಿರುವ ಜೆಡಿಎಸ್ ನಾಯಕ ...ಗೌಡರು ಕಳೆದ ಕೆಲವು ತಿಂಗಳುಗಳಿಂದ ಒಂದೊಂದೇ ...ಹೆಜ್ಜೆಯನ್ನು ಇಡುತ್ತಿದ್ದಾರೆ. ಗೌಡರ ಈ ...ಗಾರಿಕೆಯನ್ನು ಅತ್ಯಂತ ಹತ್ತಿರದಿಂದ ನೋಡಿರುವವರು ...ಬಿಜೆಪಿ ಮತ್ತು ಜೆಡಿಎಸ್ ನಡುವೆ ಹೊಸ ...ಕೂಟದತ್ತ ಸಾಗಬಹುದು ಎಂದು ಭವಿಷ್ಯ ...ನುಡಿಯುತ್ತಿದ್ದಾರೆ. ಅಂದರೆ, ಕಳೆದ 40 ವರ್ಷಗಳಿಂದ ...ಪಕ್ಷಕ್ಕಾಗಿ ಯಡಿಯೂರಪ್ಪ ಅಹೋರಾತ್ರಿ ...ದರೋ, ಆ ಪಕ್ಷದಿಂದ ಯಡ್ಡಿ ಹೊರಬಂದು ಹೊಸ ...ಕಟ್ಟಿದ ಮರುದಿನವೇ ಜೆಡಿಎಸ್ ಮತ್ತು ಬಿಜೆಪಿ ...ಹನಿಮೂನ್ ನಡೆದರೂ ಆಶ್ಚರ್ಯಪಡಬೇಕಾಗಿಲ್ಲ. ..., ಯಡಿಯೂರಪ್ಪ ಇಲ್ಲದ ಬಿಜೆಪಿ ಪಕ್ಷವನ್ನು ಎರಡೂ



...ಂದ ಆಲಂಗಿಸಿ ಸ್ವಾಗತಿಸಲು ದೇವೇಗೌಡರು ...ಾಲಲ್ಲಿ ನಿಂತಿದ್ದಾರೆ ಎಂದೇ ಅವರ ಪರಮಾಪ್ತರು ...ತ್ತಿದ್ದಾರೆ.

...ರಾಜಕೀಯದಲ್ಲಿ ಯಾರೂ ಪರ್ಮನೆಂಟ್ ಶತ್ರುಗಳಲ್ಲ, ...ಯೂ ಪರ್ಮನೆಂಟ್ ವಿರೋಧಿಗಳಲ್ಲ ಎಂಬ ಹಳೆಯ ...ನುಡಿಗೆ ಈಗ ಹೊಸ ಆಯಾಮ ದೊರಕಿದೆ. ...ಯೂರಪ್ಪ ಬಿಜೆಪಿಯಿಂದ ಹೊರಬಂದು, ಹೊಸ ...ಕಟ್ಟಿ, ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಸರ್ಕಾರ ...ವಷ್ಟು ಸಂಖ್ಯೆಯಲ್ಲಿ ಅವರ ಹೊಸ ಪಕ್ಷದ ...ರ್ಥಿಗಳು ಗೆಲ್ಲುವುದಿಲ್ಲ ಎಂಬುದು ಶತಸಿದ್ಧ. ಅಂದರೆ, ...ಯೂರಪ್ಪ ಮುಖ್ಯಮಂತ್ರಿಯಾಗುವುದಿಲ್ಲ, ಆದರ ...ಗೆ ಅವರ ಸಹಕಾರದಿಂದ ಬೇರೆ ಪಕ್ಷದ ಅಭ್ಯರ್ಥಿ ...ಮುಖ್ಯಮಂತ್ರಿಯಾಗಬಹುದು ಎಂಬುದು ಸದ್ಯದ ತರ್ಕ.

...ತಾನೇ ಆಯ್ಕೆ ಮಾಡಿ, ಮುಖ್ಯಮಂತ್ರಿ ಗದ್ದುಗೆಯಲ್ಲಿ ...ಸಿದ ತಮ್ಮ ಪಕ್ಷದ ವ್ಯಕ್ತಿಗಳನ್ನು ಯಡಿಯೂರಪ್ಪ ...ಲಿಸಿಲ್ಲ, ಮೊದಲು ಸದಾನಂದ ಗೌಡರು ಆನಂತರ ...ೀಶ್ ಶೆಟ್ಟರು ಯಡ್ಡಿಯ ಆಶೆಯಂತೆ ಮುಖ್ಯಮಂತ್ರಿ ...ಸನದಲ್ಲಿ ಕುಳಿತರೂ ಅವರನ್ನು ಪದಚ್ಯುತಗೊಳಿಸಲು ..., ಏನೇನು ರಾಜಕೀಯ ಒತ್ತಡಗಳನ್ನು ಹೇರಿದರು ...ಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇಂತಹ ...ಯೂರಪ್ಪ ಬಿಜೆಪಿಯಿಂದ ಹೊರಬಂದ ಬಳಿಕ ...ವುದೇ ಕಾರಣಕ್ಕೂ ಮುಂದಿನ ಮುಖ್ಯಮಂತ್ರಿ ಆಯ್ಕೆಯ ...ರ್ಭದಲ್ಲಿ ಬಿಜೆಪಿ ಅಭ್ಯರ್ಥಿಗೆ ಬೆಂಬಲ ನೀಡುವುದಿಲ್ಲ ...ಎಂದು ಜೆಡಿಎಸ್‌ನ ದಂಡನಾಯಕರು ದೃಢವಾಗಿ ನಂಬಿದ್ದಾರೆ. ...ದಲ್ಲಿ ಅಂತಹ ಸಂದರ್ಭದಲ್ಲಿ ಯಡ್ಡಿ ಕಾಂಗ್ರೆಸ್ ...ಅಭ್ಯರ್ಥಿಯನ್ನು ಬೆಂಬಲಿಸುತ್ತಾರೆ ಎಂದೂ ಅವರು ...ಚಾರ ಮಾಡಿದ್ದಾರೆ.

...ಈ ಹಿನ್ನೆಲೆಯಲ್ಲೇ ದೇವೇಗೌಡರು ಕಳೆದ ನಾಲ್ಕು ...ತಿಂಗಳುಗಳಿಂದ ನಿಧಾನವಾಗಿ ತಮ್ಮ ಬಿಜೆಪಿ ವಿರೋಧಿ ...ವನ್ನು ಸಡಿಲಿಸುತ್ತಾ ಬಂದಿದ್ದಾರೆ. ಇಲ್ಲಿ ದೇವೇಗೌಡರ ...ಕೀಯ ಜಾಣತನ ಅಥವಾ ಮುತ್ಸದ್ದಿತನವನ್ನು ...ಗಮನಿಸಬಹುದು. ಯಡಿಯೂರಪ್ಪನವರನ್ನು ಓಲೈಸುವ ...ಕಾರಣದಿಂದಲೇ ಸದಾನಂದ ಗೌಡರು ಮುಖ್ಯಮಂತ್ರಿಯಾಗಿದ್ದಾಗ ಅವರ ಜೊತೆ ಸ್ನೇಹಹಸ್ತ ಚಾಚಿದ್ದರು ದೇವೇಗೌಡರು. ತಾನೇ ಆಯ್ಕೆ ಮಾಡಿದ ಸದಾನಂದ ಗೌಡ ತನ್ನ ವಿರೋಧಿ ದೇವೇಗೌಡರ ಜೊತೆ ಹಾಯ್-ಬಾಯ್ ಸಂಬಂಧ ಹೊಂದಿದ್ದನ್ನು ನೋಡಿ ಯಡಿಯೂರಪ್ಪನ ಮೈಯೆಲ್ಲ ಉರಿದುಹೋಯಿತು. ಅದಕ್ಕೆ ಸರಿಯಾಗಿ ದೆಹಲಿಯ ಬಿಜೆಪಿ ನಾಯಕರು ಕೂಡ ಯಡ್ಡಿಯ ಮೇಲೆ ತಮ್ಮ ಕೆಂಗಣ್ಣನ್ನು ಬೀರಿದ್ದು ದೇವೇಗೌಡರಿಗೆ ಖುಷಿ ನೀಡಿತು.

ಸದ್ಯಕ್ಕೆ ರಾಜ್ಯ ರಾಜಕೀಯದಲ್ಲಿ ದೇವೇಗೌಡರ ಮೊದಲ ಶತ್ರುವೆಂದರೆ ಯಡಿಯೂರಪ್ಪ ವಿನಃ ಬಿಜೆಪಿಯೂ ಅಲ್ಲ, ಕಾಂಗ್ರೆಯೂ ಅಲ್ಲ. ಈ ಕಾರಣದಿಂದಲೇ ಯಾವುದೇ ಪಕ್ಷವನ್ನು ದೂಷಿಸುವ ಗೋಜಿಗೆ ಹೋಗದ ದೇವೇಗೌಡರು ಯಡಿಯೂರಪ್ಪನವರನ್ನು ಎಲ್ಲೆಲ್ಲಿ, ಯಾವ್ಯಾವಾಗ ನಿಶ್ಯಕ್ತರನ್ನಾಗಿ ಮಾಡಲು ಸಾಧ್ಯವೋ ಅಂತಹ ಸಂದರ್ಭಗಳನ್ನೆಲ್ಲ ಉಪಯೋಗಿಸುತ್ತಾ ಬಂದಿದ್ದಾರೆ.

ಇತ್ತ ದೇವೇಗೌಡರು ಮತ್ತು ಕುಮಾರಸ್ವಾಮಿಯವರನ್ನು ತನ್ನ ನಂಬರ್ ಒನ್ ಶತ್ರುಗಳು ಎಂದು ಯಡ್ಡಿ ಪರಿಗಣಿಸಿರುವುದು ಗುಟ್ಟಾಗಿ ಉಳಿದಿಲ್ಲ. ಅಪ್ಪ-ಮಕ್ಕಳ ಕೈಗೆ ಈ ರಾಜ್ಯದ ಅಧಿಕಾರದ ಚುಕ್ಕಾಣಿ ಮತ್ತೊಮ್ಮೆ ಸಿಗದಂತೆ ನೋಡಿಕೊಳ್ಳುವುದೂ ಅವರ ಗುರಿ ಆಗಿದೆ. ಹೀಗಾಗಿ ಸದ್ಯಕ್ಕೆ ಕಿಂಗ್‌ಮೇಕರ್ ಸ್ಥಾನದಲ್ಲಿರುವ ಕುಮಾರಸ್ವಾಮಿಯವರನ್ನು ಹೇಗಾದರೂ ಮಾಡಿ ತಡೆಯಬೇಕೆಂಬುದೇ ಯಡ್ಡಿಯ ಹಿಡನ್ ಅಜೆಂಡಾ. ಆ ಕಾರಣಕ್ಕಾಗಿ ಅವರು ಮುಂದಿನ ಚುನಾವಣೆಯ ನಂತರ ತಮ್ಮ ಗುಂಪಿನ ಬೆಂಬಲವನ್ನು ಕಾಂಗ್ರೆ ಪಕ್ಷಕ್ಕೆ ನೀಡುವ ಸಾಧ್ಯತೆಯೇ ಹೆಚ್ಚು.


ಯಡಿಯೂರಪ್ಪ ಇಲ್ಲದ ಬಿಜೆಪಿ ಪಕ್ಷದಲ್ಲಿ ಅಂತಹ ಗಟ್ಟಿ ನಾಯಕರು ಯಾರೂ ಇರಲ್ಲ, ಅವರನ್ನೆಲ್ಲ ಹೇಗಾದರೂ ಸಂಭಾಳಿಸಬಹುದು, ಅವರು ಯಾವುದೇ ಕಾರಣಕ್ಕೂ ತಮ್ಮ ಮಗನ ರಾಜಕೀಯ ಮುನ್ನಡೆಗೆ ಅಡ್ಡ ಬರುವುದಿಲ್ಲ ಎಂಬುದು ದೇವೇಗೌಡರ ಲೆಕ್ಕಾಚಾರ. ಉದಾಹರಣೆಗೆ ಈಶ್ವರಪ್ಪನಾಗಲಿ, ಅಶೋಕ್‌ಆಗಲಿ, ಅಥವಾ ರಾಷ್ಟ್ರೀಯ ನಾಯಕ ಅನಂತ್‌ಕುಮಾರ್ ಆಗಲಿ ಯಾವತ್ತೂ ಎಂದೂ ಯಡಿಯೂರಪ್ಪರಂತೆ ಗೌಡರ ಕುಟುಂಬದ ವಿರುದ್ಧ ಹರಿಹಾಯ್ದವರೇ ಅಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅಂದಹಾಗೆ, ನೆನಪಿದೆಯಾ, ಸದಾನಂದ ಗೌಡರು ಮುಖ್ಯಮಂತ್ರಿ ಆಗಿದ್ದಾಗ ಜೆಡಿಎಸ್ ಯಾವತ್ತೂ ಕೋಮುವಾದಿ ಬಿಜೆಪಿ ಪಕ್ಷದ ವಿರುದ್ಧ ಉಗ್ರವಾದ ಹೋರಾಟವನ್ನು ಮಾಡಲಿಲ್ಲ.

ಅಷ್ಟೇ ಯಾಕೆ? ಮೊನ್ನೆ ನಡೆದ ಕಾವೇರಿ ಚಳವಳಿಯ ಗಲಾಟೆಯ ಸಂದರ್ಭದಲ್ಲೂ ದೇವೇಗೌಡ ಮತ್ತು ಕುಮಾರಸ್ವಾಮಿ ಅತ್ಯಂತ ಜಾಣತನದಿಂದ ತಮ್ಮ ರಾಜಕೀಯ ಚತುರತೆಯನ್ನು ಪ್ರದರ್ಶಿಸಿದರು.

ಉದಾಹರಣೆಗೆ, ಹಾಲಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಅನಂತ್‌ಕುಮಾರ್‌ರನ್ನು ಕಾವೇರಿ ವಿವಾದಕ್ಕೆ ಸಂಬಂಧಪಟ್ಟಂತೆ ಯಡಿಯೂರಪ್ಪ ಓತಪ್ರೋತವಾಗಿ ತರಾಟೆಗೆ ತೆಗೆದುಕೊಂಡರು. ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿದ್ದಾರೋ, ಆಡಳಿತ ಪಕ್ಷದಲ್ಲಿದ್ದಾರೋ ಎಂಬ ಸಂಶಯ ಬರುವಷ್ಟು ತಮ್ಮದೇ ಪಕ್ಷದ ಮುಖ್ಯಮಂತ್ರಿಯನ್ನು ಸಾರ್ವಜನಿಕವಾಗಿ ಹೀಯಾಳಿಸಿದರು.

ಇದರೊಂದಿಗೆ ಜೆಡಿಎಸ್ ನಾಯಕರ ವರ್ತನೆಯನ್ನು ಗಮನಿಸಿ. ಕಾವೇರಿ ಕಣಿವೆ ಪ್ರದೇಶಗಳಲ್ಲಿ ಜೆಡಿಎಸ್‌ನ ಪ್ರಾಬಲ್ಯವೇ ಅತ್ಯಂತ ಹೆಚ್ಚು ಮತ್ತು ಒಕ್ಕಲಿಗರದೇ ಇಲ್ಲಿ ಪಾರುಪತ್ಯ ಎಂಬುದು ಕೂಡ ಎಲ್ಲರಿಗೂ ಗೊತ್ತಿರುವ ವಿಷಯ. ಆದರೂ ಜೆಡಿಎಸ್ ನಾಯಕರು ಕಾವೇರಿ ಸಮಸ್ಯೆಗೆ ಸಂಬಂಧಿಸಿದಂತೆ ಅಧಿಕಾರದಲ್ಲಿರುವ ರಾಜ್ಯದ ಬಿಜೆಪಿ ಸರ್ಕಾರವನ್ನಾಗಲೀ, ಅದರ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನಾಗಲೀ ತರಾಟೆಗೆ ತೆಗೆದುಕೊಳ್ಳಲೇ ಇಲ್ಲ. ಬದಲಿಗೆ, ದೇವೇಗೌಡರು ರಾಜ್ಯ ಸರ್ಕಾರದ ಪರ ಮೃದು ಧೋರಣೆಯನ್ನು ಪ್ರದರ್ಶಿಸಿದರು. ಚಿಕ್ಕಪುಟ್ಟ ವಿಷಯಗಳಿಗೆಲ್ಲ ಮೈಮೇಲೆ ಭೂತ ಬಂದವರಂತೆ ಆವೇಶಭರಿತರಾಗಿ ಮಾತನಾಡುವ ದೇವೇಗೌಡರು ಈ ಹಿಂದೆಯೂ ಕಾವೇರಿ ನೀರಿನ ವಿವಾದ ಭುಗಿಲೆದ್ದಾಗ ಕೆಂಡಾಮಂಡಲವಾಗಿದ್ದರು. ಆದರೆ ಇದೇ ಮೊದಲ ಬಾರಿಗೆ ಅವರು ಇಂತಹ ಮೃದು ನಿಲುವನ್ನು ಪ್ರದರ್ಶಿಸಿದರು. ಅಷ್ಟೇ ಅಲ್ಲ, ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡಬೇಕೆಂದು ಒಂದು ಹಂತದಲ್ಲಿ ದೊಡ್ಡಣ್ಣನ ತರಹ ದೇವೇಗೌಡರು ಬುದ್ಧಿವಾದ ಹೇಳಿದರು.


ಅಷ್ಟೇ ಅಲ್ಲ, ಪ್ರತಿಭಟನೆಯಲ್ಲಿ ತೊಡಗಿದ್ದ ಹೋರಾಟಗಾರರಿಗೆ "ದಯವಿಟ್ಟು ಜಯಲಲಿತಾ ಅವರ ಪ್ರತಿಕೃತಿ ದಹನ ಮಾಡಬೇಡಿ. ಖಾಸಗಿ ಆಸ್ತಿಪಾಸ್ತಿಗಳಿಗೆ ನಷ್ಟವುಂಟುಮಾಡಬೇಡಿ. ರಾಷ್ಟ್ರಮಟ್ಟದಲ್ಲಿ ಈಗಾಗಲೇ ಕರ್ನಾಟಕ ಎಂದರೆ ತಂಟೆಕೋರರ ರಾಜ್ಯ ಎಂಬ ಕುಖ್ಯಾತಿಯನ್ನು ಗಳಿಸಿದೆ. ಅದನ್ನು ಹೋಗಲಾಡಿಸುವ ಜವಾಬ್ದಾರಿ ನಮ್ಮ ನಿಮ್ಮ ಮೇಲಿದೆ" ಎಂದು ಎಲ್ಲರಿಗೂ ಉಪದೇಶವನ್ನು ದೇವೇಗೌಡರು ನೀಡಿದರು. ವಾಸ್ತವವಾಗಿ ಈ ಎಲ್ಲ ಕೆಲಸವನ್ನು ಮಾಡಬೇಕಾದದ್ದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್.



ಉರಿಯುತ್ತಿರುವ ಬೆಂಕಿಯನ್ನು ನಂದಿಸುವ ಕೆಲಸ ಮಾಡಬೇಕಾಗಿದ್ದದ್ದು ರಾಜ್ಯದ ಮುಖ್ಯಮಂತ್ರಿ ವಿನಃ ವಿರೋಧ ಪಕ್ಷದ ನಾಯಕ ಅಲ್ಲ. ಆದರೆ ದೇವೇ ಗೌಡರು ಈ ಬಾರಿ ಅತ್ಯಂತ ಮುತ್ಸದ್ದಿ ರಾಜಕಾರಣಿಯಂತೆ ಒಂದೆಡೆ ಎಲ್ಲರಿಗೂ ಬುದ್ಧಿಮಾತು ಹೇಳುತ್ತ ಇನ್ನೊಂದೆಡೆ ಪ್ರಧಾನಿ ಜೊತೆ ನೇರ ಸಂಪರ್ಕವನ್ನು ಬೆಳೆಸಿ ವಿವಾದವನ್ನು ಬಗೆಹರಿಸುವ ಪ್ರಯತ್ನವನ್ನೂ ಮಾಡಿ ಕರ್ನಾಟಕದ ಜನರ ಮನಸ್ಸನ್ನು ಗೆದ್ದರು.

ದೇವೇಗೌಡರ ಈ ತಂತ್ರಗಾರಿಕೆಯನ್ನು ನಿಧಾನವಾಗಿ ಅರಿತ ಯಡಿಯೂರಪ್ಪ ತಾವು ಕೂಡ ಕಾವೇರಿಯ ಮಗ, ಮಣ್ಣಿನ ಮಗ ಎಂದು ತೋರಿಸುವ ಉದ್ದೇಶದಿಂದಲೋ ಏನೋ ನಗರದ ಮೌರ್ಯ ಹೊಟೆಲ್ ಬಳಿ ಅಹೋರಾತ್ರಿ ಧರಣಿ ಕುಳಿತುಕೊಂಡರು. ಅಷ್ಟಕ್ಕೆ ಸಮಾಧಾನಪಡದ ಯಡಿಯೂರಪ್ಪ 'ಕಾವೇರಿ ಜಲಪ್ರದೇಶದಲ್ಲಿ ಪಾದಯಾತ್ರೆ ನಡೆಸಿದರೆ ಹೇಗೆ?' ಎಂದು ಯೋಚಿಸಿ ಕಾವೇರಿ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಜಿ.ಮಾದೇಗೌಡರೊಂದಿಗೆ ಸಮಾಲೋಚಿಸಿದರು. ಇದು ಒಂದು ರೀತಿಯಲ್ಲಿ ದೇವೇಗೌಡರ ಒಕ್ಕಲಿಗರ ಕೋಟೆಯೊಳಗಡೆ ನುಗ್ಗುವ ರಾಜಕೀಯ ತಂತ್ರವಾಗಿತ್ತು. ಯಡಿಯೂರಪ್ಪನ ಪಾದಯಾತ್ರೆಗೆ ಮೊದಲು "ಎಸ್" ಅಂದಿದ್ದ ಮಾದೇಗೌಡರು ಕೊನೆಗೆ "ನೀವು ಮೊದಲು ನೀರು ನಿಲ್ಲಿಸಿ, ಆನಂತರ ಪಾದಯಾತ್ರೆ ಮಾಡಿ ಇಲ್ಲಿಗೆ ಬನ್ನಿ" ಎಂದು ಹೇಳಿ ಅವರ ಪಾದಯಾತ್ರೆಗೆ ತಡೆಯೊಡ್ಡಿದರು. ಅಲ್ಲಿಗೆ ಕಾವೇರಿ ವಿವಾದವನ್ನು ನೆಪವಾಗಿಟ್ಟುಕೊಂಡು ಪಾದಯಾತ್ರೆ ಮಾಡುವ ಯಡ್ಡಿಯ ಸಂಚು ಆರಂಭದಲ್ಲೇ ಚಿವುಟಿಹೋಯಿತು.

ಇವತ್ತು ಯಡಿಯೂರಪ್ಪ ಜಗದೀಶ್ ಶೆಟ್ಟರನ್ನು ಬಹಿರಂಗವಾಗಿ ಎಷ್ಟು ಟೀಕೆ ಮಾಡುತ್ತಿದ್ದಾರೋ ಅದಕ್ಕೆ ವಿರುದ್ಧವಾಗಿ ದೇವೇಗೌಡರು ಮತ್ತು ಕುಮಾರಸ್ವಾಮಿ ತೆರೆಮರೆಯಲ್ಲಿ ಜಗದೀಶ್ ಶೆಟ್ಟರ್ ಪರವಾಗಿ ಮೃದು ನಿಲುವನ್ನು ಪ್ರದರ್ಶಿಸಿ ಅವರನ್ನು ರಕ್ಷಿಸುತ್ತಿದ್ದಾರೆ. ಈ ಅಪ್ಪ-ಮಕ್ಕಳು ಮನಸ್ಸು ಮಾಡಿದ್ದರೆ ಕಾವೇರಿ ವಿವಾದದಲ್ಲೇ



ಶೆಟ್ಟರ್ ಅವರ ಸರ್ಕಾರವನ್ನು ಪೇಚಿಗೆ ಸಿಲುಕಿಸಬಹುದಿತ್ತು. ಅಥವಾ ಅದನ್ನು ಪದಚ್ಯುತಗೊಳಿಸಲೂ ಪ್ರಯತ್ನಿಸಬಹುದಿತ್ತು. ಆದರೆ ಒಂದು ವೇಳೆ ಗೌಡರು ಹಾಗೆ ಮಾಡಿದ್ದರೆ ಅದರಿಂದಾಗಿ ಯಡಿಯೂರಪ್ಪನವರಿಗೆ ರಾಜಕೀಯವಾಗಿ ಲಾಭವಾಗುತ್ತಿತ್ತು ಎಂಬ ಅರಿವು ಗೌಡರಿಗೆ ಇದ್ದುದ್ದರಿಂದಲೇ ಅವರು ಅಂತಹ ದುಸ್ಸಾಹಸಕ್ಕೆ ಕೈಹಾಕಲಿಲ್ಲ.

ದೇವೇಗೌಡರು ಮತ್ತು ಕುಮಾರಸ್ವಾಮಿ ಆರಂಭದಿಂದಲೂ ಕಾಂಗ್ರೆಸ್ ಪಕ್ಷದ ಬದ್ಧ ವೈರಿಗಳು. ಸಮಯ ಸಿಕ್ಕಾಗಲೆಲ್ಲ ಅವರೊಂದಿಗೆ ಮೈತ್ರಿ ಮಾಡಿಕೊಳ್ಳಲು ತೆರೆಮರೆಯಲ್ಲಿ ಗೌಡರು ಪ್ರಯತ್ನಿಸಿದ್ದರೂ ಅದು ಕೈಗೂಡದಿದ್ದಾಗ ಅವರು ರೆಬೆಲ್ ಸ್ಟಾರ್ ತರಹ ಬಂದದ್ದು ನಿಂತದ್ದೂ ಉಂಟು. ಉದಾಹರಣೆಗೆ ಯುಪಿಎ 2 ಸರಕಾರದ ರಚನೆ ಸಂದರ್ಭದಲ್ಲಿ ಕುಮಾರಸ್ವಾಮಿಯವರನ್ನು ಕೇಂದ್ರ ಸಂಪುಟದಲ್ಲಿ ಮಂತ್ರಿ ಮಾಡಬೇಕೆಂಬುದು ಗೌಡರ ಆಸೆಯಾಗಿತ್ತು. ಅದಕ್ಕಾಗಿ ದೇವೇ ಗೌಡರು ಪ್ರಯತ್ನಪಟ್ಟಿದ್ದರು. ಆದರೆ ಅದು ಈಡೇರದಿದ್ದಾಗ ಮತ್ತೆ ಕಾಂಗ್ರೆ ವಿರುದ್ಧ ದ್ವೇಷ ಸಾಧಿಸಲು ಆರಂಭಿಸಿದರು.

ರಾಜಕೀಯದಲ್ಲಿ ಇದೆಲ್ಲ ಮಾಮೂಲು. ಆದರೆ ನಿಜವಾಗಿಯೂ ದೇವೇ ಗೌಡರಿಗೆ ಕಾಂಗ್ರೆ ಬಗ್ಗೆ ಎಲ್ಲಿಲ್ಲದ ಸಿಟ್ಟು ಬಂದದ್ದು ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ ನೆರವು ನೀಡದಿದ್ದಾಗ. ಎರಡು ಬಾರಿ ಬಿಜೆಪಿ ಸರ್ಕಾರವನ್ನು ಪದಚ್ಯುತಗೊಳಿಸುವ ಬಗ್ಗೆ ದೆಹಲಿಯಲ್ಲಿ ಕಾಂಗ್ರೆ ನಾಯಕರು ಮತ್ತು ಜೆಡಿಎಸ್ ನಾಯಕರ ನಡುವೆ ಮಾತುಕತೆಯಾಗಿತ್ತು, ಆ ಮಾತುಕತೆಯ ಪ್ರಕಾರ ಯಡಿಯೂರಪ್ಪನ ಸರ್ಕಾರದ ವಿರುದ್ಧ ಕುಮಾರಸ್ವಾಮಿ ಬಂಡಾಯ ಘೋಷಿಸಿ ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕಿತ್ತು, ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಮಧ್ಯೆ ಪ್ರವೇಶಿಸಿ ಜೆಡಿಎಸ್‌ಅನ್ನು ಬೆಂಬಲಿಸುವುದು ಎಂದು ನಿಕ್ಕಿ ಆಗಿತ್ತು.


ಯಡ್ಡಿಯನ್ನು ಪದಚ್ಯುತಗೊಳಿಸಲು ಎರಡು ಬಾರಿ ಕುಮಾರಸ್ವಾಮಿ ರೆಸಾರ್ಟ್ ರಾಜಕೀಯ ಮಾಡಿದರಾದರೂ ಎರಡೂ ಬಾರಿ ಕೊನೆಕ್ಷಣದಲ್ಲಿ ಕಾಂಗ್ರೆ ಜೆಡಿಎಸ್‌ಗೆ ಕೈಕೊಟ್ಟಿತ್ತು. ಇದರಿಂದಾಗಿ ರಾಜ್ಯದಲ್ಲಿ ಕುಮಾರಸ್ವಾಮಿಯ ಇಮೇಜ್‌ಗೆ ಧಕ್ಕೆ ಉಂಟಾಗಿತ್ತು. ಹೀಗೆ ಕೊನೆಯಕ್ಷಣದಲ್ಲಿ ಕೈಕೊಟ್ಟು ತಮ್ಮನ್ನು ಅಪಮಾನ ಮಾಡಿದ ಕಾಂಗ್ರೆಗೆ ಸರಿಯಾದ ಸಂದರ್ಭದಲ್ಲಿ ಬುದ್ಧಿ ಕಲಿಸಲೇಬೇಕು ಎಂದು ಗೌಡರು ಕಾಯುತ್ತಿದ್ದಾರೆ.

ಅಂದರೆ, ಮುಂದಿನ ಚುನಾವಣೆ ಸಂದರ್ಭದಲ್ಲಿ ಒಂದೆಡೆ ಕಾಂಗ್ರೆಗೆ ಬುದ್ಧಿ ಕಲಿಸುವುದು, ಇನ್ನೊಂದೆಡೆ ಯಡಿಯೂರಪ್ಪನವರನ್ನು ರಾಜಕೀಯವಾಗಿ ನಿಶ್ಯಕ್ತಗೊಳಿಸುವುದು ಗೌಡರ ತಂತ್ರಗಾರಿಕೆ. ಇದರರ್ಥ ದೇವೇ ಗೌಡರು ಬಿಜೆಪಿ ಬಗೆಗಿನ ಹಳೆಯ ವೈಮನಸ್ಸನ್ನು ಮರೆತು ಮತ್ತೆ ಸ್ನೇಹವನ್ನು ಸಂಪಾದಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ಈಗ ಸೃಷ್ಟಿಯಾಗಿದೆ. ರಾಜಕೀಯವಾಗಿ ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದು. ಅದೇನೆಂದರೆ, ಒಕ್ಕಲಿಗರು ಮತ್ತು ಲಿಂಗಾಯತರು ಒಟ್ಟುಸೇರಿ ಕಾಂಗ್ರೆ ಮತ್ತು ಯಡಿಯೂರಪ್ಪನವರ ಹೊಸ ಪಕ್ಷದ ನಡುವಿನ ಅಪವಿತ್ರ ಮೈತ್ರಿಯನ್ನು ಮಟ್ಟಹಾಕಬಹುದು ಎಂಬುದು ಅವರ ಲೆಕ್ಕಾಚಾರ.

ಡಿಸೆಂಬರ್ ನಂತರ ರಾಜ್ಯದಲ್ಲಿ ಚುನಾವಣೆಯ ಕಾವು ದಿನದಿಂದ ದಿನಕ್ಕೆ ಏರುವ ಸಾಧ್ಯತೆ ಈಗಲೇ ಕಾಣಿಸುತ್ತಿದೆ. ಯಡಿಯೂರಪ್ಪ ಹೊಸ ಪಕ್ಷ ಕಟ್ಟಿದ ನಂತರ ಖಂಡಿತವಾಗಿಯೂ ಆಯಾರಾಂ-ಗಯಾರಾಂ ಕಾರ್ಯ ಆರಂಭವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ಕಾರಣಕ್ಕಾಗಿಯೇ ಡಿಸೆಂಬರ್ ತಿಂಗಳಲ್ಲಿ ರಾಜ್ಯ ರಾಜಕೀಯ ಧ್ರುವೀಕರಣದ ಹೊಸ ಶಕೆ ಆರಂಭವಾಗುತ್ತದೆ ಎಂದು ಹೇಳಿರುವುದು. ಒಂದಂತೂ ಸ್ಪಷ್ಟ. ಮುಂದಿನ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳು ನೇರವಾಗಿ ಸೆಣಸಾಟ ನಡೆಸಿದರೂ ನಿಜವಾದ ಸ್ಪರ್ಧೆ ನಡೆಯುವುದು ರಾಜ್ಯ ನಾಯಕರಾದ ಯಡಿಯೂರಪ್ಪ ಮತ್ತು ಕುಮಾರಸ್ವಾಮಿಯ ನಡುವೆ.

ಹೀಗಾಗಿ ಕರ್ನಾಟಕ ರಾಜ್ಯ ಹಿಂದೆಂದೂ ಕಾಣದಂತಹ ಎರಡು ಅಪವಿತ್ರ ಮೈತ್ರಿಗಳು ಕಾಣಸಿಗಬಹುದು. ಒಂದು ಕಡೆ ಕಾಂಗ್ರೆ ಪಕ್ಷ ಮತ್ತು ಯಡ್ಡಿ ಪಕ್ಷ ಇದ್ದರೆ, ಇನ್ನೊಂದು ಕಡೆ ಮೊನ್ನೆ ಮೊನ್ನೆತನಕ ವೈರಿಗಳಂತೆ ಕಾದಾಡುತ್ತಿದ್ದ ಬಿಜೆಪಿ ಮತ್ತು ದಳದವರು ಇದ್ದರೂ ಆಶ್ಚರ್ಯಪಡಬೇಕಿಲ್ಲ.

● ಶೆಣೈ



ಉತ್ತರ ಕನ್ನಡ:

ದೇಶಪಾಂಡೆಯ ದಿವಾಳಿಕೋರ ರಾಜಕಾರಣ!

ಉತ್ತರ ಕನ್ನಡ ಗ್ರಾಮೀಣ ಪ್ರದೇಶದಲ್ಲಿ ಭರ್ಜರಿ ಕುತೂಹಲ ಕೆರಳಿಸಿದ್ದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆ ಕಸರತ್ತು ಕಾಂಗ್ರೆಸ್ ಬಿಗ್ ಬಾಸ್ ರಘನಾಥ ವಿಶ್ವನಾಥರಾವ್ ದೇಶಪಾಂಡೆಯ ಪಾಳೆಗಾರಿ ಪಾಲಿಟಿಕ್ಸ್ ಜಗಜ್ಜಾಹೀರುಗೊಳಿಸಿಬಿಟ್ಟದೆ! ಜಿಲ್ಲಾ ಪರಿಷತ್ ವ್ಯವಸ್ಥೆ ಜಾರಿಗೆ ಬಂದಲಾಗಾಯ್ತಿನಿಂದ ಜಿಲ್ಲಾಮಟ್ಟದ ಲೋ ಲೆವೆಲ್ ರಾಜಕಾರಣದಲ್ಲಿ ಹೈಲೆವೆಲ್ ಪುಢಾರಿ ದೇಶಪಾಂಡೆಯ ಚಿಲ್ಲರೆ ಬುದ್ಧಿ ಪ್ರಯೋಗ ಆಗುತ್ತಲೇ ಇದೆ. ದೇಶಪಾಂಡೆ ಜನತಾ ಪರಿವಾರದಲ್ಲಿ ಇದ್ದಾಗ ಆತನ ಸ್ವಚ್ಛೆಗೆ ತಕ್ಕಂತೆ ಜಿಪಂ ಆಡಳಿತಗಾರರ ನೇಮಕಾತಿ ನಡೆಯುತ್ತಿತ್ತು. ಈ ದಾದಾಗಿರಿ ಪ್ರಕ್ರಿಯೆ ಆತ ಕಾಂಗ್ರೆಸ್ಸಿಗೆ ಸೇರಿದನಂತರವೂ ಅನೂಚಾನವಾಗಿ ನಡೆದುಹೋಗುತ್ತಿದೆ.


ಮಾರ್ಗರೆಟ್ ಆಳ್ವ

ಈ ಎರಡೂವರೆ ದಶಕದ ಜಿಲ್ಲಾ ಪಂಚಾಯತ್‌ನ ಅಧಿಕಾರದ ಆಟದಲ್ಲಿ ದೇಶಪಾಂಡೆ ಪಾರ್ಟಿಯ ನಿಷ್ಠಾವಂತರಿಗೆ ಅಥವಾ ನಿಯತ್ತಿನ ಜನಪರ ಕೆಲಸಗಾರರಿಗೆ ಅವಕಾಶ ಕೊಟ್ಟದ್ದೇ ಇಲ್ಲ. ಆತನ ಜಾತಿಬಂಧುಗಳಿಗೆ, ಬೂಟು ಪಾಲಿಶು ಮಾಡುವ ಗುಲಾಮರಿಗೆ ಅಥವಾ ತನ್ನ ಹಳಿಯಾಳದ ಒಳಸುಳಿಯ ರಾಜಕಾರಣಕ್ಕೆ ನೆರವಾಗುವ ಜಾತಿ ಬ್ರ್ಯಾಂಡ್ ಇರುವವರಿಗೆ ಮಾತ್ರ ದೇಶಪಾಂಡೆ ಜಿಪಂನ ಪೀಠದಲ್ಲಿ ಪ್ರತಿಷ್ಠಾಪಿಸುತ್ತ ಬಂದಿದ್ದಾರೆ. ತಾನು ಮಾಡಿದ ಅನ್ಯಾಯದ ಆಯ್ಕೆ ಬಗ್ಗೆ ಅದೆಂಥ ಅಸಮಾಧಾನ-ಆಕ್ರೋಶ ಭುಗಿಲೆದ್ದರೂ ಎಂಟೇ ಎಂಟು ದಿನದಲ್ಲಿ ಸಾಮ-ಭೇದ-ದಂಡ ಪ್ರಯೋಗಿಸಿ ಹೊಸಗಿಹಾಕಿ ಅಟ್ಟಹಾಸದಿಂದ ಹಾರಾಡುವುದು ಆತನಿರುವ ಪಕ್ಷದ "ಕರ್ಮ"ದಂತಾಗಿ ಹೋಗಿದೆ!


ಕಳೆದ ಜಿಪಂನ ಐದು ವರ್ಷದ ಅವಧಿಯಲ್ಲಿನ ಕೊನೆಯ ರೊಟೇಷನ್‌ನಲ್ಲಿ ಅಚ್ಚುಮೆಚ್ಚಿನ ಸ್ವಜಾತಿ ಬಂಟ ಎಲ್.ವಿ. ಶಾನಭಾಗ್ ಎಂಬ ಲೊಳಲೊಟ್ಟೆಯನ್ನು ದೊಡ್ಡ ವಿರೋಧದ ನಡುವೆಯೂ ದೇಶಪಾಂಡೆ ಅಧ್ಯಕ್ಷನನ್ನಾಗಿ ಮಾಡಿದ್ದರು. ಆಗ ಕಾಂಗ್ರೆಸ್ ಒಳಗಿನವರಷ್ಟೇ ಅಲ್ಲ, ಇಡೀ ಜಿಲ್ಲೆಯ ಜನರು ದೇಶಪಾಂಡೆಯ ಕೀಳುಜಾತಿ ಪ್ರೀತಿಯ ಪುಂಡಾಟಕ್ಕೆ ಅಸಹ್ಯ ಪಟ್ಟಿದ್ದರು. ಆಗ ಜಿಲ್ಲೆಯ ಬಹುಸಂಖ್ಯಾತ ದೀವರು, ಹೈಗರು, ಅಲ್ಪಸಂಖ್ಯಾತರು, ಇತರ ಹಿಂದುಳಿದವರೆಲ್ಲ ದೇಶಪಾಂಡೆಗೆ ಶಾಪ ಹಾಕಿದ್ದೇ ಹಾಕಿದ್ದು. ಆದರೆ ಆತನ ರಕ್ಕಸ ರಾಜಕಾರಣಕ್ಕೆ ಹೆದರಿದ ಕಾಂಗ್ರೆಸಿಗರು ಬಾಲ ಮುದುರಿಕೊಂಡು ಕೂತರು. ಟೊಣಪನಂಥ ಎಲ್.ವಿ. ಶಾನಭಾಗ ಲೂಟಿ ಮಾಡಿ ಇನ್ನಷ್ಟು ದುಂಡಗಾಗಿ ಹೋದ. ಅಷ್ಟೇ ಅಲ್ಲ ಸ್ವ-ಕ್ಷೇತ್ರ ಕುಮಟಾದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಜನಾನುರಾಗಿ ಮೋಹನ ಶೆಟ್ಟಿಯ ವಿರುದ್ಧವೇ ಕೆಲಸ ಮಾಡಿ "ಗುರು"ಗಳ ಋಣ ತೀರಿಸಿ ಕೃತಾರ್ಥನಾಗಿದ್ದ.


ದೇಶಪಾಂಡೆಯ ಈ ದಗಾಕೋರ ಧೋರಣೆಯ ನೇರ ಪರಿಣಾಮ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಆಗಿತ್ತು. ಆಗ ಕಾಂಗ್ರೆಸ್ ಜಿಲ್ಲೆಯಲ್ಲಿ ಹೇಳಹೆಸರಿಲ್ಲದಂತೆ ನೆಲಕಚ್ಚಿ ಹೋಗಿತ್ತು! ಇಂಥ ಧಡತ್‌ಶಾಹಿ ನಡೆ-ನುಡಿಯಿಂದಾಗಿಯೇ ಅಂದು ಸ್ವತಃ ದೇಶಪಾಂಡೆಯೂ ತಾನೇ ಸಾಕಿಸಲುಹಿದ್ದ ಜಾತಿ ಹುಡುಗ ಸುನಿಲ್ ಹೆಗಡೆ ಎದುರು ಹೀನಾಯಸೋಲು ಕಾಣಬೇಕಾಗಿ ಬಂದಿತ್ತು. ತೋಳ್ಬಲ-ಧನಬಲದಿಂದ ಯದ್ವಾತದ್ವಾ ರಾಜಕಾರಣ ಮಾಡುತ್ತ ಬಂದ ದೇಶಪಾಂಡೆಗೆ ತನ್ನ ಕಂತ್ರಿ ಕರಾಮತ್ತುಗಳಿಂದಾಗಿಯೇ ಕಾಂಗ್ರೆಸ್ ನಿರ್ನಾಮವಾದರೂ ಬುದ್ಧಿ ಮಾತ್ರ ಬಂದಿಲ್ಲ. ದುರಂತವೆಂದರೆ ದಿಲ್ಲಿ-ಬೆಂಗಳೂರಲ್ಲಿರುವ ಕಾಂಗ್ರೆಸ್‌ನ ಪವರ್ ಬ್ರೋಕರ್‌ಗಳು ಈತನ ಪಕ್ಷದ್ರೋಹ ಕಂಡೂ ಕಾಣದಂತಿದ್ದಾರೆ.

ಮೊನ್ನೆ ನಡೆದ ಜಿಪಂ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಹೊತ್ತಲ್ಲಿ ಮತ್ತದೇ ಹೆಡ್‌ಮಾಸ್ತರಿಕೆ ನಡೆಸಿ ಕಾಂಗ್ರೆಸ್‌ಗೆ ಬಲವಾದ ಹೊಡೆತ ಹಾಕಿದ್ದಾರೆ ದೇಶಪಾಂಡೆ ಸಾಹೇಬರು! ಈ ಸಲ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಹುದ್ದೆಗೆ ಹಿಂದುಳಿದ "ಬ" ವರ್ಗಕ್ಕೆ ಮೀಸಲಾತಿ ನಿಗದಿಸಲಾಗಿತ್ತು. ಈ ಮೀಸಲಾತಿಗೆ ಸೇರಿದ್ದ ಅಲ್ಪಸಂಖ್ಯಾತ ಕ್ರಿಶ್ಚಿಯನ್ ಸಮುದಾಯದ ಆಲ್ಬರ್ಟ್ ಡಿಕೋಸ್ತಾನೇ ಅಧ್ಯಕ್ಷಗಿರಿಗೆ ಸೂಕ್ತ ಆಯ್ಕೆ ಎಂಬುದು ಜಿಪಂನ ಎಲ್ಲ ಸದಸ್ಯರ ಅಭಿಪ್ರಾಯವಾಗಿತ್ತು. ಸಾಮಾಜಿಕ ನ್ಯಾಯದ ದೃಷ್ಟಿಯಿಂದಲೂ ಆಲ್ಬರ್ಟ್‌ಗೆ ಛಾನ್ಸ್ ಕೊಡುವುದು ಕಾಂಗ್ರೆಸ್‌ಗೆ ಅನಿವಾರ್ಯವೂ ಆಗಿತ್ತು. ಕ್ರಿಶ್ಚಿಯನ್ ಸಮುದಾಯದವರು ಇದೇ ಮೊದಲ ಬಾರಿಗೆ ತಮ್ಮವರಿಗೆ ಅಧ್ಯಕ್ಷರಾಗಿಸಿ ಎಂದು ಹಕ್ಕೊತ್ತಾಯವೂ ಮಾಡಿಸಿದ್ದರು; ಬಿಷಪ್‌ರಂಥವರೂ ಮನವಿ ಮಾಡಿದ್ದರು. ಇಂಥದೊಂದು ಅವಕಾಶ ನಮಗೆ ಹಿಂದೆಯೂ ಸಿಕ್ಕಿಲ್ಲ; ಮುಂದೆಯೂ ಸಿಗುವುದು ಅನುಮಾನ ಎಂಬುದು ಕ್ರಿಶ್ಚಿಯನ್ನರ ಅಳಲಾಗಿತ್ತು. ಹಾಗಂತ ರಾಜಕೀಯವಾಗಿ ಧ್ವನಿ ಇಲ್ಲದ ಕ್ರಿಶ್ಚಿಯನ್ನರು ಹಿಂದೆಂದೂ ತಮಗಾಗಿ ರಚ್ಚೆ ಹಿಡಿದವರೂ ಅಲ್ಲ.


ಸುನೀಲ್ ಹೆಗ್ಡೆ

ಉತ್ತರ ಕನ್ನಡದ ಉದ್ದಗಲಕ್ಕೆ ಬಿಎಸ್ಸಿ ಪದವೀಧರನಾದ-ತಣ್ಣನೆಯ ಸ್ವಭಾವದ ಆಲ್ಬರ್ಟ್ ಪರವಾಗಿ ಅಭಿಪ್ರಾಯ ರೂಪಿತವಾಗಿತ್ತು. ಕಾಂಗ್ರೆಸ್‌ನ ಎಲ್ಲಾ ಜಿಪಂ ಸದಸ್ಯರ ಆತ್ಮಸಾಕ್ಷಿ ಆತನತ್ತನೇ ಇತ್ತು. ದೇಶಪಾಂಡೆಯ ವೈರಿಣಿ ರಾಜಸ್ಥಾನದ ರಾಜ್ಯಪಾಲೆ ಮಾರ್ಗರೆಟ್ ಆಳ್ವರೂ ರಂಗಪ್ರವೇಶ ಮಾಡಿದ್ದರು. ಆಕೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ನೋಡಿಕೊಳ್ಳುತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಧುಸೂದನ ಮಿಸ್ತ್ರಿಯಿಂದ ಕೆಪಿಸಿಸಿಗೂ ಹೇಳಿಸಿದ್ದರು. ಸಾಕ್ಷಾತ್ ಕೆಪಿಸಿಸಿ ಪ್ರೆಸಿಡೆಂಟ್ ಪರಮೇಶ್ವರ್ ದೇಶಪಾಂಡೆಗೆ ಈ ಬಾರಿ ಕ್ರಿಶ್ಚಿಯನ್ನರಿಗೆ ಅವಕಾಶ ಕೊ... ಎಂದು ತಾಕೀತೂ ಮಾಡಿದ್ದರು. ಜಿಲ್ಲೆಯ ... ಸಂಘಟನೆಗಳಂತೂ ಪರಿಪರಿಯಾಗಿ ದೇಶಪಾಂಡೆ ಮ... ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಜೆ.ಡಿ. ನಾಯ್ಕ... ಬೇಡಿಕೊಂಡಿದ್ದವು.


ಕೃಷ್ಣನಾರಾಯಣ್ ಗೌಡ


ಆಲ್ಬರ್ಟ್


ಎಲ್.ವಿ.ಶಾನ್‌ಭಾಗ್

ಆದರೆ ಈ ಬೇಡಿಕೆ-ಮನವಿ-ಅಳಲು-ಪಾರ್ಟಿ... ಆದೇಶ ಯಾವುದನ್ನೂ ಕೇರ್ ಮಾಡುವ ಸ್ಥಿತಿಯ... ದೇಶಪಾಂಡೆ ಇರಲೇ ಇಲ್ಲ. ಧನಬಲದಿಂದ ಪಾರ್ಟಿ... ದೊಡ್ಡವರನ್ನೇ ಹಿಡಿತದಲ್ಲಿ ಇಟ್ಟುಕೊಂಡಿರು... ದೇಶಪಾಂಡೆಯದು ಯಾವಾಗಲೂ ರೌಡಿ ರಾಜಕಾರ... ಆತನಿಗೆ ಪಕ್ಷ ಬರಡಾದರೂ ಬೇಸರವಿಲ್ಲ, ತನ್ನ ಸ್ವಾ... ಸಾಧಿಸುವುದೇ ಮುಖ್ಯ. ಈ ಬಾರಿಯ ಜಿ... ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆಯಲ್ಲಿ ದೇಶಪಾಂಡೆ ಮಾಡಿ... ಅದೇ ಪಕ್ಷದ್ರೋಹದ ಕಿತಾಪತಿ; ಹಳಿಯಾಳದ... ಕಳೆದುಕೊಂಡ ಶಾಸಕಗಿರಿ ಮರಳಿ ಪಡೆಯು... ದೂ(ದು)ರಾಲೋಚನೆಯಿಂದ ಜಿಪಂ ಆಡಳಿತಗಾ... ನೇಮಿಸುವಾಗ ತರಹೇವಾರಿ ಮಸಲತ್ತು ಮಾಡಿದ್ದಾರೆ.


ದೇಶಪಾಂಡೆ ಅರ್ಹ ಆಲ್ಬರ್ಟ್ ಡಿಕೋಸ್ತಾಗೆ ವಂ... ಮಾಡಿ ಜಿಪಂ ಗದ್ದುಗೆಯಲ್ಲಿ ಪ್ರತಿಷ್ಠಾಪಿಸಿರುವುದು ಸ್ವ-ಕ್ಷೇ... (ಹಳಿಯಾಳ)ದ ಕೃಷ್ಣಗೌಡ ಎಂಬ ಅಬ್ಬೇಪಾರಿಯನ... ಮುಲ್ಕಿವರೆಗೆ ಕಲಿತಿರುವ ಗೌಡ ಹಳಿಯಾಳದ... ಬಹುಸಂಖ್ಯಾತರಾಗಿರುವ "ಮರಾಠ" ಜಾತಿಗೆ ಸೇರಿದಾ... ಈ ಮರಾಠರಿಗೆ ದೇಶಪಾಂಡೆ ಮೇಲೆ ಒಂಚೂರೂ ನಂ... ಇಲ್ಲ. ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಈ ಜಾತಿ ಓಟುಗ... ಬರದಿರುವುದರಿಂದಲೇ ಆತ ಸೋ... ಮೂಲೆ ಸೇರುವಂತಾಗಿತ್ತು. ಹೀಗಾ... ದೇಶಪಾಂಡೆ ಮರಾಠರ ಮನವೊಲಿಸ... ತರತರದ ತಿಪ್ಪರಲಾಗ ಹಾಕುತ್ತಿದ್ದಾ... ಹಳಿಯಾಳದಲ್ಲಿ ಶಾಸಕ-ಮಂತ್ರಿಯಾ... ತಾನು ಮಾಡಿದ ಫ್ಯೂಡಲ್ ಪಾತಕ... ಪಾಲುದಾರನಾದ ಎಸ್.ಎಲ್. ಘೋ... ನೇಕರ್ ಎಂಬ ಹೊಲಸು ನಾಲಿ... ಆದ್ಮಿಯನ್ನು ಸ್ಥಳೀಯ ಸಂಸ್ಥೆಗಳಿಂ... ಎಮ್ಮೆಲ್ಸಿ ಮಾಡಿದ್ದರು ದೇಶಪಾಂ... ಈ ಘೋಟನೇಕರ್‌ನೂ ಮರಾ... ಜನಾಂಗದವನು. ಆದರೆ ... ಘೋಟನೇಕರ್ ಎಂಬ ಪುಂಡನ ಕಂ... ಮರಾಠರಿಗೇ ಆಗದು.

ಈ ಘೋಟನೇಕರ್ ಎಮ್ಮೆ... ಯಾಗಿ ಜಿಲ್ಲೆಗಿರಲಿ, ಹಳಿಯಾಳಕ್ಕೇ ಬಿಲ್ಲಿ ಪ್ರಯೋಜ... ಆಗಲಿಲ್ಲ. ದೇಶಪಾಂಡೆ ವಿರುದ್ಧ ಎಲ್ಲಿಂದಾದರೂ ಹೇ... ಬಂದರೆ ಕೌಂಟರ್ ಸ್ಟೇಟ್‌ಮೆಂಟ್ ಕೊಡುವುದ... ಹಳಿಯಾಳದ ಜೆಡಿಎಸ್ ಶಾಸಕ ಸುನಿಲ್ ಹೆಗಡೆ... ಜನಪರ ಕೆಲಸ-ಕಾಮಗಾರಿಗೆ ಅಡ್ಡಗಾ... ಹಾಕೋದು, ತುಂಬ ಅಸಹ್ಯವಾ... ಅರಚಾಡೋದು ಮಾತ್ರ ವಿಧಾನ ಪರಿಷ... ಸದಸ್ಯತ್ವದ ಆದ್ಯಕರ್ತವ್ಯವೆಂದು ಭಾವಿಸಿರು... ದಂಡಪಿಂಡ ಈ ಘೋಟನೇಕರ್. ಎಂಎಲ... ಆಗಿ ಹಳಿಯಾಳದ ಮರಾಠರ ವಿಶ್ವಾಸ-ಪ್ರೀ... ಗಳಿಸಲಾಗದ ಜಗಳಗಂಟ ಘೋಟನೇಕರ್‌ನಿಂ... ತನಗೆ ಬರುವ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಲಾಭಕ್ಕಿ... ಹಾನಿಯೇ ಜಾಸ್ತಿ ಎಂಬುದೀಗ ದೇಶಪಾಂಡೆ... ಖಾತ್ರಿಯಾಗಿಹೋಗಿದೆ. ಹಾಗಾಗಿಯೇ ಆ... ಕೃಷ್ಣಗೌಡರನ್ನು ಜಿಪಂ ಗೂಟದ ಕಾರ... ಮೆರವಣಿಗೆ ಮಾಡಿಸಿ ತಾನು ಮರಾ... ಉದ್ಧಾರಕನೆಂದು ಬಿಂಬಿಸಿಕೊಂಡು ಓಟು ಪಡೆಯು... ಟ್ಯಾಕ್ಟೀಸ್ ನಡೆಸಬೇಕಾಗಿ ಬಂದಿದೆ, ಪಾಪ!

ಆದರೆ ಗಣಪತಿಯನ್ನು ಮಾಡಲು ಹೋಗಿ ಅವನ... ಮಾಡಿದಂತಾಗಿದೆ ದೇಶಪಾಂಡೆಯ ಪರಿಸ್ಥಿತಿ. ಇಡೀ ಜಿಲ್ಲೆ... ಕ್ರೈಸ್ತರು ಬುದ್ಧಿಪೂರ್ವಕವಾಗಿ ತಮಗೆ ದೇಶಪಾಂಡೆ ಅನ್ಯಾ... ಮಾಡುತ್ತಿದ್ದಾರೆಂದು ತಿರುಗಿಬಿದ್ದಿದ್ದಾರೆ. ಹಿಂದೆ ಮ್ಯಾಗಿಯ... ಸೋಲಿಸಿದ್ದ ದೇಶಪಾಂಡೆ ಈಗ ಆಲ್ಬರ್ಟ್‌ನ ಕೈಗೆ ಬಂ... ಜಿಪಂ ತುತ್ತನ್ನು ಕಸಿದು ತನ್ನ ಹಳಿಯಾಳದ ಚೇಲ... ಪಾಲಾಗಿಸಿದ್ದಾರೆಂದು ಕ್ರೈಸ್ತರು ಬೊಬ್ಬೆ ಹೊಡೆಯುತ್ತಿದ್ದಾ... ಯಾವಾಗಲೂ ನಿಯತ್ತಿನಿಂದ ಕಾಂಗ್ರೆಸ್ಸಿಗೆ ಮತ ಹಾಕು... ಬಂದಿರುವ ಕ್ರಿಶ್ಚಿಯನ್ನರು ದೇಶಪಾಂಡೆ ಮೇಲಿನ ಸಿಟ್ಟಿನಿಂ... ಕಾಂಗ್ರೆಸ್‌ಗೆ ಮುಂಬರುವ ವಿಧಾನಸಭಾ ಇಲೆಕ್ಷನ್‌ನ... ಕೈಕೊಡಲು ಕಾತರಿಸುತ್ತಿದ್ದಾರೆ. ಕಾಂಗ್ರೆಸ್ ಅಧಿನಾಯ... ಸೋನಿಯಾ ಗಾಂಧಿ ಇದೇ 18 ರಂದು ಮಂಗಳೂರಿ... ಬಂದಾಗ ದೇಶಪಾಂಡೆಯ ದಗಲುಬಾಜಿತನ ಅರಹು... ನಿರ್ಧಾರಕ್ಕೆ ಕ್ರಿಶ್ಚಿಯನ್ ನಾಯಕರು ಬಂದಿದ್ದಾ... ದೇಶಪಾಂಡೆಯ ಏಕಪಕ್ಷೀಯ ದೌರ್ಜನ್ಯದ ವಿರು... ಎದ್ದಿರುವ ಅಸಮಾಧಾನ ಎಲ್ಲಿಗೆ ಹೋಗಿದೆ ಎಂದ... ಆತ ಕ್ರಿಶ್ಚಿಯನ್ ವೈರಿ ಎಂದು ಪ್ರಾಜೆಕ್ಟ್ ಆಗುತ್ತಿದ್ದಾ... ಹೀಗಾಗಿ ಆತನಿಗೆ ಹಳಿಯಾಳದಲ್ಲಿರುವ ಸುಮಾರು ... ಸಾವಿರ ಕ್ರಿಶ್ಚಿಯನ್ನರ ಓಟು ಈ ಬಾರಿ ಖೋತಾ ಆಗೋ... ಖಂಡಿತ.

ಸ್ಯಾಡಿಸ್ಟ್ ಜೆಡಿ!!

ಭಟ್ಕಳ ಶಾಸಕ ಜೆ.ಡಿ. ನಾಯ್ಕ ಎಂಬ "ಸಿಡಿಮಿಡಿ ಜಟ್ಟಪ್ಪ" ಜಿಲ್ಲಾ ಕಾಂಗ್ರೆಸ್‌ನ ಲಾಸ್ಟ್ ವಿಕೆಟ್ ಆಗುವ ಸೂಚನೆ ಗೋಚರಿಸುತ್ತಿದೆ. ದೇಶಪಾಂಡೆ ಒಬ್ಬರ ಬಿಟ್ಟರೆ ಈತನಿಗೆ ಇನ್ಯಾರೂ ಬೇಡ. ಗುರುಜೀ ದೇಶಪಾಂಡೆ ಕಾಲಲ್ಲಿ ತೋರಿಸಿದ್ದು ತಲೆ ಮೇಲೆ ಹೊತ್ತು ಮೆರೆಸುವ ಅನುಯಾಯಿ ಈ ಜಟ್ಟಪ್ಪ ನಾಯ್ಕ! ಪಾರ್ಟಿ ಕಾರ್ಯಕರ್ತರು, ನೆರವು ಬಯಸಿ ಬರುವ ಜನಸಾಮಾನ್ಯರು ಅಧಿಕಾರಿಗಳು ಯಾರು ಬೇಕಿದ್ದರೂ ಇರಲಿ, ಜೆಡಿಗೆ ಪಿತ್ಥ ಕೆರಳಿತೆಂದರೆ ಬೈಗುಳ ಗ್ಯಾರಂಟಿ; ತೋಳೇರಿಸಿ ಗುದುಮುರಿಗೆಗೆ ಈ ಎಮ್ಮೆಲ್ಲೆ ಸಾಹೇಬರು ಇಳಿದದ್ದೂ ಇದೆ. ಇಂಥವನ ಮೇಲೆ ಭಟ್ಕಳ ಭಾಗದಲ್ಲಿ ಅಸಮಾಧಾನ ಮಡುಗಟ್ಟಿದೆ. ಹೊನ್ನಾವರದ ಹೋಳೆ ಸಾಲಲ್ಲಿ ಕಾಂಗ್ರೆಸ್ ಪರ ಒಲವಿದ್ದರೂ ಜೆಡಿ ಎಂದರೆ ಸಿಟ್ಟು ಇದೆ. ಹೀಗಾಗಿ ಈತ ಈ ಬಾರಿ ಮತ್ತೆ ಶಾಸಕನಾಗುವುದು ಸಾಧ್ಯವೇ ಇಲ್ಲ.


ಜೆ.ಡಿ.ನಾಯ್ಕ

ಹೀಗಿರುವಾಗ ಜೆಡಿ ಮೊನ್ನೆ ನಡೆದ ಜಿಪಂ ಅಧ್ಯಕ್ಷರ ಆಯ್ಕೆ ಹೊತ್ತಲ್ಲಿ ತನ್ನ ಭಟ್ಕಳದ ಮಾವಳ್ಳಿ ಕ್ಷೇತ್ರದ ಆಲ್ಬರ್ಟ್ ಡಿಕೋಸ್ತಾನ ವಿರುದ್ಧ ಕಾರಸ್ಥಾನ ಮಾಡಿದ್ದಾನೆ. ಆತನಿಗೆ ಭಟ್ಕಳ ಭಾಗದವರ್‍ಯಾರೂ ಜಿಪಂನ ದೊಡ್ಡ ಪೀಠ, ಸಣ್ಣ ಕುರ್ಚಿಗೆ ಹೋದರೆ ಸಹಿಸಲು ಆಗುವುದಿಲ್ಲ. ತನ್ನದೇ ಪಕ್ಷದ ರಾಮಮೋಗೇರ್, ಮಾಂಕಾಳು ವೈದ್ಯ ಜಿಪಂ ಉಪಾಧ್ಯಕ್ಷರಾದಾಗ, ದಾಮೋದರ್ ಗರ್ಡೀಕರ್ ಅಧ್ಯಕ್ಷನಾದಾಗ ಈ ಜೆಡಿ ಕಾಡಿದ್ದು ಒಂದೆರಡು ಥರವಲ್ಲ. ಸ್ಯಾಡಿಸ್ಟ್ ಜೆಡಿ ಆಲ್ಬರ್ಟ್‌ನಿಗೆ ಜಿಪಂ ಅಧ್ಯಕ್ಷ ಸ್ಥಾನ ಸಿಗದಂತೆ ಮಾಡಲು ದೇಶಪಾಂಡೆಗೆ ಶಕ್ತಿಮೀರಿ ನೆರವಾಗಿದ್ದಾನೆ. ಹೀಗಾಗಿ ಈತನ ಮೇಲೆ ಕ್ರಿಶ್ಚಿಯನ್ನರು ಮುನಿಸಿಕೊಂಡಿದ್ದಾರೆ. ಅಕಸ್ಮಾತ್ ಜೆಡಿಗೆ ಮತ್ತೆ ಅಸೆಂಬ್ಲಿಗೆ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಸಿಕ್ಕರೆ ಆತನಿಗೆ ಈ ಕ್ಷೇತ್ರದಲ್ಲಿರುವ 15 ಸಾವಿರ ಕ್ರಿಶ್ಚಿಯನ್ನರ ಮತ ಖೋತಾ ಖಂಡಿತ!

ದೇಶಪಾಂಡೆ-ಜೆಡಿ-ಎಲ್‌ವಿ ಈ ತ್ರಿಮೂರ್ತಿಗಳೇ ಮೊನ್ನೆ ನಡೆದ ಜಿಪಂ ಆಡಳಿತಗಾರ ಆಯ್ಕೆಯ ಕಿಂಗ್‌ಮೇಕರ್‌ಗಳು. ದೇಶಪಾಂಡೆ ತನ್ನ ಸ್ವಾರ್ಥಕ್ಕೆ ಕೃಷ್ಣ ಗೌಡನನ್ನು ಜಿಪಂ ಅಧ್ಯಕ್ಷನಾಗಿ ಮಾಡಿದರೆ, ತನ್ನ ಜಾತಿಬಂಧು ಎಲ್.ವಿ. ಶಾನಭಾಗನ ದೋನಂಬರ್ ರಾಜಕಾರಣದ ದಾನ್‌ಗಿರಿ ಕುಮಟೆಯಲ್ಲಿ ಅಬಾಧಿತವಾಗಿ ಉಳಿಸುವ ಏಕೈಕ ಉದ್ದೇಶದಿಂದ ಆತನ ನಿಷ್ಠಾವಂತಳಾದ ಲಲಿತಾ ಪಟಗಾರ್‌ಳನ್ನು ಉಪಾಧ್ಯಕ್ಷೆ ಮಾಡಿದ್ದಾರೆ. ಈ ಅಮಾಯಕ ಹೆಂಗಸಿನ ಅಧಿಕಾರ ಎಲ್.ವಿ. ದುರುಪಯೋಗಿಸಿಕೊಂಡು ಹಾವಳಿ ಎಬ್ಬಿಸುವ ಪ್ರಳಯಾಂತಕ ಸಂಕೇತಗಳು ಈಗಲೇ ಬಿತ್ತರವಾಗುತ್ತಿವೆ. ಕುಮಟೆಯಲ್ಲಿ ಕಾಂಗ್ರೆಸ್ ಸೋಲಿಸಲು ಈ ಲಫಡಾ ಲಕ್ಷ್ಮಣ ಶಾನಭಾಗ್ ಒಬ್ಬನೇ ಸಾಕು.

ದೇಶಪಾಂಡೆಯದು ಅದ್ಯಾಕೋ ಅತಿಯಾಯಿತೆಂದು ಈಗ ಎಲ್ಲರೂ ಹೇಳುವವರೇ. ಇದೇ ಸರಿಯಾದ ಸಮಯವೆಂದು ಆತನ ಹಣಿಯಲು ಮ್ಯಾಗಿ ಬಳಗ ಈಗ ಕತ್ತಿಮಸೆಯುತ್ತಿದೆ. ಇಷ್ಟು ದಿನ ಮೂಲೆಗುಂಪಾಗಿದ್ದ ಮ್ಯಾಗಿ ಬಣವೀಗ ಬುಸುಗುಡಲಾರಂಭಿಸಿದೆ. ಜಿಲ್ಲಾ ಕಾಂಗ್ರೆಸ್‌ನಲ್ಲಿ ಗ್ಯಾಂಗ್‌ವಾರ್ ಮತ್ತೆ ಶುರುವಾಗಿದೆ. ದೇಶಪಾಂಡೆಯ ಶನಿ ಸಂತಾನದಿಂದ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಉಳಿಗಾಲವಿಲ್ಲದಂತಾಗಿದೆ!!

...ಜಿಪಂ ಅಧ್ಯಕ್ಷನಾಗಿರುವ ಕೃಷ್ಣ ಗೌಡರಿಂದ ದೇಶಪಾಂಡೆ ...ಗೆ ಅನುಕೂಲ ಏನಾದರೂ ಆದೀತಾ ಅಂದರೆ, ... ಊಹುಂ. ಇಲ್ಲಿ ಈ ಕೃಷ್ಣನಿಗೆ ಮರಾಠರ ನಡುವೆ ... ಇಮೇಜಿಲ್ಲ. ಆತ ಹಳಿಯಾಳದ ಮರಾಠರಿಗಾಗಿ ...ಗೆ ಮಾಡಿದ್ದೇನೂ ಇಲ್ಲ. ದೇಶಪಾಂಡೆಯ ಚಾಕರಿ ...ಷ್ಟು ಬಿಟ್ಟರೆ ಸ್ವಜಾತಿ ಮರಾಠರಿಗೆ ಆತನಿಂದ ಉಪಕಾರ ...ನೂ ಇಲ್ಲ. ಈತ ಎಮ್ಮೆಲ್ಸಿ ಘೋಟನೇಕರ್‌ನ ...ಯಷ್ಟೇ. ಕೃಷ್ಣಗೌಡನನ್ನು ಬಡ್ಡಿ-ಕಳ್ಳ ಕಟ್ಟಿಗೆ ...ಯಾದ ದೊರೆಯೆಂದೇ ಹಳಿಯಾಳದ ಮರಾಠರು ...ಸುತ್ತಾರೆ. ಈತನ ಇಟ್ಟಿಗೆ ಭಟ್ಟಿಗೆ ಕಟ್ಟಿಗೆ ಬರುವುದೇ ...ನಾಶದಿಂದ. ಹಾಗಾಗಿ ಕೃಷ್ಣಗೌಡನೆಂದರೆ ...ರಿಗಷ್ಟೇ ಅಲ್ಲ ಹಳಿಯಾಳದ ಜನರಿಗೆ ಒಂಥರಾ ... ಇಂತವನನ್ನು ಜಿಪಂ ಅಧ್ಯಕ್ಷ ಕುರ್ಚಿಗೆ ತಂದಿರುವ ...ಪಾಂಡೆ ಬಗ್ಗೆ ಜನರಿಗೆ ಅದೆಂಥ ಭಾವನೆ ...ರಬಹುದೆಂದು ಎಂಥ ಗಾಂಪನೂ ಊಹಿಸಬಲ್ಲ. ...ಲ್ಲಿ ಕಾಂಗ್ರೆಸ್ ಪಾರ್ಟಿ ಹಾಳಾದರೂ ಚಿಂತೆಯಿಲ್ಲ ... ಹಳಿಯಾಳದಲ್ಲಿ ಶಾಸಕನಾಗಲೇಬೇಕೆಂಬ ಹಠದಿಂದ ... ನಂಬರ್ ಒಬ್ಬನನ್ನು ಜಿಪಂ ಪೀಠಕ್ಕೆ ತಂದು ...ರುವ ದೇಶಪಾಂಡೆಗೆ ಆತನ ಕುತಂತ್ರಗಳೇ ಉಲ್ಟಾ ...ಹೊಡೆದಂತಾಗಿದೆ.


...ಒಂದಂತೂ ಖರೆ. ದೇಶಪಾಂಡೆ ಹೈಕಮಾಂಡ್ ...ದಲ್ಲಿ ತನಗಿರುವ ಬಲದಿಂದ ಕಾಂಗ್ರೆಸ್‌ನಲ್ಲಿ ...ದ್ದಿರುವ ಪ್ರತಿಭಟನೆ-ಪ್ರತಿರೋಧ ಮಟ್ಟಹಾಕ ...ದು. ಆದರೆ ಕ್ರಿಶ್ಚಿಯನ್ನರಿಗೆ ಆಗಿರುವ ಆಘಾತದಿಂದ ...ಗೆ ಹಾನಿ ಗ್ಯಾರಂಟಿ. ಅದೇರೀತಿ ಮರಾಠಾ ...ಜದಲ್ಲಿ ಒಳ್ಳೆಯ ಹೆಸರಿಲ್ಲದ ಬಡ್ಡಿ ದಂಧೆಕೋರ ...ಗೆ ದೇಶಪಾಂಡೆ ಕೊಟ್ಟಿರುವ ಜಿಪಂ ಇನಾಮು ...ಗೆ ಮುಳುವಾಗಲಿದೆ. ಈಗಾಗಲೇ ಹಳಿಯಾಳ-...ಯಿಡಾದಲ್ಲಿ ತನ್ನೆಲ್ಲ ಬೇರುಗಳನ್ನು ಒಣಗಿಸಿಕೊಂಡಿರುವ ...ಪಾಂಡೆಗೆ ಈ ಯಾವ ಗಿಮಿಕ್ಕುಗಳೂ ಪ್ರಯೋಜನಕ್ಕೆ ...ವ ಲಕ್ಷಣಗಳಿಲ್ಲ. ಆತನ ಎದುರಾಳಿ-ಶಾಸಕ ಸುನಿಲ್ ...ಗೆ ಹಳ್ಳಿ-ಹಳ್ಳಿಗಳಲ್ಲಿರುವ ಸಂಪರ್ಕದ ಎದುರು ...ಪಾಂಡೆಗೆ ಏಗಲಿಕ್ಕಾಗದು. ಹೊಸ ಪೀಳಿಗೆಯ ...ಹುಡುಗರಂತೂ ವಂದಿ ಹುಲಿಯ ...—ವರ್ತಮಾನದಿಂದ ರೋಸತ್ತು ಹೋಗಿದ್ದಾರೆ.

...ಶಾಸಕ ಸುನಿಲ್ ಹೆಗಡೆ ಈಗಾಗಲೇ ...ಯಾತ್ರೆ-ಗ್ರಾಮವಾಸ್ತವ್ಯ, ನೊಂದವರಿಗೆ ...ರುವಿಕೆಯಿಂದ ಜನಾನುರಾಗಿಯಾಗಿ ಬಿಟ್ಟಿದ್ದಾನೆ. ಈ ...ಬಿರಗಾಳಿಯಂಥ ಹುಡುಗನ ರಭಸಕ್ಕೆ ...ಪಾಂಡೆ-ಘೋಟನೇಕರ್ ತತ್ತರಿಸುತ್ತಿದ್ದಾರೆ. ಸುನಿಲ್ ...ವ ಹಮ್ಮು-ಬಿಮ್ಮು ಇಲ್ಲದೆ ಹಳಿಯಾಳ-...ಯಿಡಾದ ಜನರೊಂದಿಗೆ ಬೆರೆಯುತ್ತಿದ್ದಾನೆ; ಗುಡ್ಡಗಾಡು ...ಇದೆ ಕುಣುಬಿ, ಸಿದ್ದಿ, ಗೌಳಿಗಳ ಹಟ್ಟಿಗೆ ಹೋಗಿ ...ಆಗಬೇಕಾದ ಕೆಲಸ ಮಾಡಿಕೊಡುತ್ತ ಅವರು ಕೊಟ್ಟ ... ತಿನ್ನುತ್ತಿದ್ದಾನೆ. ಬಹುಸಂಖ್ಯಾತ ಮರಾಠಿಗರಿಗೆ ಬೇಕಾದ ...ವರಿ ಯೋಜನೆ, ಸಕ್ಕರೆ ಕಾರ್ಖಾನೆಗಾಗಿ ನಿಯತ್ತಿನಿಂದ ...ತ್ನ ನಡೆಸಿದ್ದಾನೆ. ಆದರೆ ರಾಜ-ಮಹಾರಾಜರ ...ಯೊಂದಿಗೆ ದೇಶಪಾಂಡೆ ಅದೆಷ್ಟೇ ಪ್ರಯತ್ನ ...ದರೂ ಜನಸಾಮಾನ್ಯರೊಂದಿಗೆ ಬೆರೆಯಲು ಆಗುತ್ತಿಲ್ಲ. ...ಮಂತ ರಾಜಕಾರಣಿ ಜನರ ಬಳಿಗೆ ಹೋದಾಗೆಲ್ಲ ...ಂದು ಬೋಗಸ್ ಪ್ರಹಸನದಂತೆ ಭಾಸವಾಗುತ್ತಿದೆಯೋ ...ತು "ಈತ ನಮ್ಮವ" ಎಂದು ಅನ್ನಿಸುತ್ತಲೇ ಇಲ್ಲಿ ...ಯಾಳ- ಜೋಯಿಡಾ ಜನಸಾಮಾನ್ಯರಿಗೆ.

...ಎಲ್ಲಕ್ಕಿಂತ ಹೆಚ್ಚಾಗಿ ದೇಶಪಾಂಡೆಯ ಸಕಲ ಪಟ್ಟುಗಳು ... ಸುನಿಲ್ ಹೆಗಡೆಗೆ ಗೊತ್ತಿದೆ. ಆತ ಎಷ್ಟೆಂದರೂ ...ಪಾಂಡೆಯ ಗರಡಿಯಲ್ಲಿ ಎರಡೆರಡು ದಶಕ ...ದವನು. ಆತನ ತಂದೆ ಮಾಜಿ ಎಮ್ಮೆಲ್ಸಿ ವಿ.ಡಿ. ...ಯೇ ದೇಶಪಾಂಡೆಯ ಸ್ಟ್ರೇಟಜಿಸ್ಟ್ ಆಗಿದ್ದಾತ. ...ರುವಾಗ ದೇಶಪಾಂಡೆ ಜಿಪಂ ಪೀಠಕ್ಕೆ ಮರಾಠರಿಗೇ ...ಚಿತನಾದ ಕೃಷ್ಣಗೌಡನಂಥ ಪೊದ್ಮಣಿಯನ್ನು ...ಚುನಾವಣೆ ಗೆದ್ದು ಮತ್ತೆ ಶಾಸಕನಾಗಲು ಸಾಧ್ಯವಾ? ಯಾವ ...ನಿಂದ ನೋಡಿದರೂ ದೇಶಪಾಂಡೆ ತನ್ನ ಕಾಲಿನ ... ತಾನೇ ಕಲ್ಲು ಹಾಕಿಕೊಂಡಂತಾಗಿದೆ ಜಿಪಂ ...ಯುದ ರಾಡಿಗೆ ಕೈಹಾಕಿ. ಬರೋಬ್ಬರಿ ಎರಡೂವರೆ ...ಶಾಸಕ-ಮಂತ್ರಿ-ವಿರೋಧ ಪಕ್ಷದ ನಾಯಕ, ಮತ್ತಿತರ ...ಮಟ್ಟದ ಅಧಿಕಾರ ಅನುಭವಿಸುತ್ತ ರಾಜ್ಯಮಟ್ಟದ ...ಕ ತಾನೆಂಬ ಭ್ರಮೆಯಲ್ಲಿದ್ದ ದೇಶಪಾಂಡೆ ತಾನೇ ...ಬೆಳೆಸಿದ್ದ ಹುಡುಗ ಸುನಿಲ್ ಹೆಗಡೆಯೆದುರು ಸೋತು ...ಮಟ್ಟಕ್ಕೆ ಕುಸಿದಿದ್ದ, ಈಗ ಜಿಪಂ ರಾಜಕಾರಣ ...ಹೋಗಿ ಕೃಷ್ಣ ಗೌಡನಿಗೆ ಅಧ್ಯಕ್ಷಗಿರಿ ದೀಕ್ಷೆ ...ಕೊಡುತ್ತಿದ್ದಂತೆಯೇ ತಾಲ್ಲೂಕ್ ಲೆವೆಲ್ ಪುಢಾರಿ ...ಯಾಗಿಹೋಗಿದ್ದಾರೆ. ದೇಶಪಾಂಡೆಯ ದಾದಾಗಿರಿಯ ...ಕಾರಣದ ದುರಂತ ನೋಡಿದರೆ ಆತ ಗ್ರಾಮ ...ಮಟ್ಟಕ್ಕೆ ಇಳಿಯುತ್ತಿರುವಂತಿದೆ! ಎಂಥ ...ಸನ?!

● ನಹುಷ

ಧಾರವಾಡ ರಂಗಾಯಣಕ್ಕೆ ವಕ್ಕರಿಸಿದ ಚೆಡ್ಡಿ ಭೂಪ ಸುಭಾಸ ನರೇಂದ್ರ



ಧಾರವಾಡದ ರಂಗಾಯಣಕ್ಕೆ ಸುಭಾಸ ನರೇಂದ್ರ ಎಂಬಾತನನ್ನು ಸರ್ಕಾರ ನೇಮಿಸಿರುವ ಬಗ್ಗೆ ನಾಡಿನ ಹಿರಿಯ ರಂಗಕರ್ಮಿ ಪ್ರಸನ್ನ ತಮ್ಮ ಅಸಮಾಧಾನವನ್ನು ಹೊರಹಾಕಿದ್ದರು; ಹಾಗೆಯೇ ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದ ಬಹಳಷ್ಟು ರಂಗಕಲಾವಿದರು ಈ ನೇಮಕದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ಏಣಗಿ ನಟರಾಜ್ ಅವರ ಆಕಾಲಿಕ ಸಾವಿನಿಂದ ತೆರವಾದ ಧಾರವಾಡ ರಂಗಾಯಣ ನಿರ್ದೇಶಕರ ಸ್ಥಾನಕ್ಕೆ ಸುಭಾಸ ನರೇಂದ್ರ ಎಂಬ ಕೇಸರಿ ಜುಬ್ಬಾನನ್ನು ನೇಮಿಸುವಾಗ ಸರ್ಕಾರ ಯಾವ ನೀತಿ-ನಿಯಮಗಳನ್ನು ಪಾಲಿಸಿಲ್ಲ, ಆದ್ದರಿಂದ ಆತನ ಆಯ್ಕೆಯೇ ಸಂಪೂರ್ಣ ದೋಷಪೂರ್ಣ ಹಾಗೂ ದುರುದ್ದೇಶಪೂರಿತವಾಗಿದ್ದು ಎಂದು ಈಗ ಕರ್ನಾಟಕದ ಮೂವರು ಅನುಭವಿ ರಂಗಕರ್ಮಿಗಳು ಒಟ್ಟಾಗಿ ಸೇರಿ ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ. ನಾಡಿನ ನೂರಾರು ಮಂದಿ ರಂಗಕಲಾವಿದರು, ಸಾಹಿತಿಗಳು ಅವರನ್ನು ಬೆಂಬಲಿಸುತ್ತಿದ್ದಾರೆ.

ದುರಂತ ಎಂತಹದ್ದು ನೋಡು: ಖ್ಯಾತ ರಂಗ ನಿರ್ದೇಶಕ ಬಿ.ವಿ.ಕಾರಂತರ ಕನಸಿನ ಕೂಸು ಎಂದು ರಂಗಾಯಣವನ್ನು ಹೋದಬಂದಲ್ಲೆಲ್ಲಾ ಹಾಡಿ ಗುನುಗುವ ಅಧಿಕಾರಸ್ಥರು ಸಾಮಾನ್ಯ ಜನರೂ ರಂಗಾಯಣವನ್ನು ಆಡಿಕೊಳ್ಳುವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ.

ಮೈಸೂರಿನ ರಂಗಾಯಣದ ನಿರ್ದೇಶಕರಾಗಿದ್ದ ಚಿದಂಬರರಾವ್ ಜಂಬೆಯವರ ನಿರ್ಗಮನದ ನಂತರ, ಅಲ್ಲಿಗೆ ನಿರ್ದೇಶಕರನ್ನು ನೇಮಿಸುವ ಪ್ರಕ್ರಿಯೆಯೇ ಒಂದು ದೊಡ್ಡ ಸುದ್ದಿಯಾಗಿತ್ತು. ಕೊನೆಗೆ ಬಿ.ಜಯಶ್ರೀ ನೇಮಕಗೊಂಡರು. ಆದರೆ ಅವರು ಆ ಸ್ಥಾನದಿಂದ ಅಷ್ಟೇ ಬೇಗ ನಿರ್ಗಮಿಸಿದರು. ಆನಂತರ ಭಾಷಾ ವಿದ್ವಾಂಸ ಲಿಂಗದೇವರು ಹಳೆಮನೆ ನೇಮಕಗೊಂಡರು. ಕೆಲವೇ ದಿನಗಳಲ್ಲಿ ಅವರು ಕಾಲವಾಗಿ ಹೋದರು. ನಂತರ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಬಿ.ವಿ.ರಾಜಾರಾಂ ಅವರನ್ನೇ ಮುಖ್ಯಮಂತ್ರಿ ಚಂದ್ರು ಸರ್ಕಸ್ಸು ಮಾಡಿ ರಂಗಾಯಣಕ್ಕೆ ನಿರ್ದೇಶಕರನ್ನಾಗಿ ಮಾಡಿದರು. ಈ ರಾಜಾರಾಂ ಸಂಪೂರ್ಣ ರಾಮಾಯಣ ನಾಟಕದಲ್ಲಿನ ಸೌಮ್ಯ ಸ್ವಭಾವದ ರಾಮಭಕ್ತ ಇದ್ದಂತೆ. ರಂಗಾಯಣದ ನಟ-ನಟಿಯರನ್ನು ಸ್ನೇಹಿತ-ಸ್ನೇಹಿತೆಯರೇ ಎಂದು ಕರೆದುಕೊಂಡು ಇತ್ತ ತಿವಿಯಲೂ ಆಗದೇ, ಅತ್ತ ಹಾಯಲೂ ಆಗದೇ ಕಾಲ ದೂಡುತ್ತಿದ್ದಾರೆ.



ಕಾರಜೋಳ

ಮೈಸೂರಿನ ರಂಗಾಯಣವನ್ನು ರಾಜ್ಯದ ಇತರೇ ಭಾಗಗಳಿಗೂ ವಿಸ್ತರಿಸುವ ಮಹತ್ವದ ಯೋಜನೆಯಿಂದಾಗಿ ಧಾರವಾಡ ಹಾಗೂ ಶಿವಮೊಗ್ಗಗಳಲ್ಲಿಯೂ ರಂಗಾಯಣದ ಪ್ರತ್ಯೇಕ ಕೇಂದ್ರಗಳನ್ನು ಸರ್ಕಾರ ತೆರೆಯಿತು. ರಾಷ್ಟ್ರೀಯ ನಾಟಕ ಶಾಲೆಯ ದಕ್ಷಿಣ ಕೇಂದ್ರವೊಂದನ್ನು ಬೆಂಗಳೂರಿನಲ್ಲಿ ಸ್ಥಾಪನೆ ಆಗುವಂತೆ ಪ್ರಯತ್ನಿಸಿ ಸಫಲರಾದ ಪ್ರಸನ್ನ ಅವರು ಈ ಮಹತ್ವಾಕಾಂಕ್ಷೆಯ ರಂಗಕಾಯಕದ ಹಿಂದೆಯೂ ಶ್ರಮಿಸಿದ್ದರು.

ಸರ್ಕಾರಿ ಧನಸಹಾಯ, ದೇಣಿಗೆಗಳಿಂದ ನಡೆಯುವ ರಂಗಾಯಣದ ಆಗುಹೋಗುಗಳಲ್ಲಿ ಬಿಜೆಪಿ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗುತ್ತಾ ಬಂದಿದೆ. ಶಿಕ್ಷಣದಲ್ಲಿ ಹೇಗೆ ಕೇಸರೀಕರಣದ ಪ್ರಯೋಗಗಳನ್ನು ನಡೆಯುತ್ತಿವೆಯೋ ಹಾಗೆಯೇ ಕೋಮುವಾದಿ ಬಿಜೆಪಿ ನಾಯಕರು ಇತ್ತೀಚೆಗೆ ರಂಗಾಯಣದಲ್ಲೂ ಕೇಸರಿ ಬ್ಯಾಕ್‌ಡ್ರಾಪಿನ ಡ್ರಾಮಾ ಸೀನರಿಗಳನ್ನು ತಯಾರಿಸುತ್ತಿದ್ದಾರೆ.

ಧಾರವಾಡದ ರಂಗಾಯಣಕ್ಕೆ ಏಣಗಿ ನಟರಾಜ್ ನಿರ್ದೇಶಕರಾಗಿದ್ದಾಗ ಅಲ್ಲಿ ಹಲವಾರು ಪ್ರಯೋಗಗಳು ನಡೆದಿದ್ದವು. ಏಣಗಿ ಬಾಳಪ್ಪನವರ ಪುತ್ರ ನಟರಾಜ್ ದಶಕಗಳ ಕಾಲ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಹಿರಿಯ ರಂಗಕರ್ಮಿ. ತಮ್ಮ ತಂದೆಯವರ ನಾಟಕ ಕಂಪನಿಯಲ್ಲಿ ಬಾಲ್ಯದಿಂದಲೂ ತೊಡಗಿಕೊಂಡಿದ್ದ ಏಣಗಿ ನಟರಾಜರು ನಿನಾಸಮ್ ರಂಗಶಿಕ್ಷಣ ಕೇಂದ್ರದಿಂದ ವೃತ್ತಿಪರ ಶಿಸ್ತಿನ ರಂಗಕಲೆ ಡಿಪ್ಲೊಮೋ ಪದವಿ ಪಡೆದು ನಿನಾಸಮ್ ತಿರುಗಾಟದ ನಾಟಕಗಳಿಗೆ ಚರಿಷ್ಮಾ ತಂದುಕೊಟ್ಟಿದ್ದ ನಟ. ಕನ್ನಡ ರಂಗಭೂಮಿಯ ನಟರನ್ನು ಪ್ರಭಾವಿಸಿದ್ದ ಬಹುಮುಖ್ಯ ನಟ ಏಣಗಿ ನಟರಾಜ. ಇವರು ಬಹಳಷ್ಟು ನಾಟಕಗಳನ್ನು ನಿರ್ದೇಶಿಸಿದ್ದರು. ರಾಜ್ಯದ ಹಲವು ಭಾಗಗಳಲ್ಲಿ ಶಿಬಿರ, ಕಾರ್ಯಾಗಾರಗಳನ್ನು ನಡೆಸಿ ನೂರಾರು ರಂಗ ಸಂಸ್ಥೆಗಳೊಂದಿಗೆ ಒಡನಾಟ ಹೊಂದಿದ್ದರು. ಕಲೆ ಸಾಹಿತ್ಯ ಸಂಗೀತದ ಅಧ್ಯಯನಾಸಕ್ತ ವ್ಯಕ್ತಿತ್ವದ ಏಣಗಿಯವರದ್ದಾಗಿತ್ತು. ಕನಸು ಮತ್ತು ಛಲ ಇವೆರಡನ್ನು ಮೈದಾಳಿದಂತಿದ್ದ ಛಲದಂಕಮಲ್ಲ ಏಣಗಿ ರಂಗಾಸಕ್ತರಲ್ಲಿ ಹಲವು ನಿರೀಕ್ಷೆಗಳನ್ನು ಹುಟ್ಟಿಸಿದ್ದರು. ಆದರೆ ಆಡಿಸಿದಾತ ಆಟ ಮುಗಿಸಿದ..... ಎಂಬಂತೆ ಆಡಾಡತ ಆಡಾಡತ ಆಯುಷ್ಯ ಸವೆಸಿ ಏಣಗಿ ನಟರಾಜ ಪರದೆ ಹಿಂದೆ ಕಣ್ಮರೆಯಾದರು.

ಅವರು ಇದ್ದಷ್ಟು ದಿನ ಬಿತ್ತಿ ಹೋಗಿದ್ದ ಕನಸುಗಳ ಬುತ್ತಿ ಹೊರುವಂತಹ ಸಮರ್ಥ ರಂಗಕರ್ಮಿ ಅವರಿಂದ ತೆರವಾದ ಸ್ಥಾನಕ್ಕೆ ಬಂದು ಕೂರುತ್ತಾನೆ ಎಂಬ ನಿರೀಕ್ಷೆಯಲ್ಲಿ ಧಾರವಾಡದ ರಂಗಾಸಕ್ತರಿದ್ದರು. ಸರ್ಕಾರ ಕೂಡ ರಂಗಸಮಾಜ ಎಂಬ ತಂಡವನ್ನು ನೇಮಿಸಿ ಧಾರವಾಡದ ರಂಗಾಯಣಕ್ಕೆ ಸೂಕ್ತ ನಿರ್ದೇಶಕರ ಸ್ಥಾನಕ್ಕೆ ಮೂವರು ಸಮರ್ಥ ರಂಗಕರ್ಮಿಗಳ ಹೆಸರುಗಳನ್ನು ಸೂಚಿಸಿ ಎಂದು ಕೇಳಿಕೊಂಡಿತ್ತು. ಮಾತ್ರವಲ್ಲ ಆ ಮೂವರಲ್ಲಿ ಒಬ್ಬರನ್ನು ಅಂತಿಮವಾಗಿ ಸರ್ಕಾರ ನೇಮಿಸುತ್ತದೆ ಎಂದಿತ್ತು.

ಅಂತೆಯೇ ರಂಗಸಮಾಜ ಹಾಗೂ ಅದರ ಸದಸ್ಯ ಪ್ರತಿನಿಧಿಗಳೆಲ್ಲ ಸಭೆ ಸೇರಿ ಕರ್ನಾಟಕದ ಹಿರಿಯ ಹಾಗೂ ಅನುಭವಿ ರಂಗಕರ್ಮಿಗಳ ಸಮಗ್ರ ವಿವರಗಳನ್ನು ಪರಿಶೀಲಿಸಿ ಅದರಲ್ಲಿ ಮೂವರು ರಂಗಕರ್ಮಿಗಳ ಹೆಸರುಗಳನ್ನು ಸರ್ಕಾರಕ್ಕೆ ಸೂಚಿಸಲು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಕಳೆದ ಜೂನ್ 13ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ವಿಕಾಸಸೌಧದಲ್ಲಿ ರಂಗಾಯಣ ರಂಗಸಮಾಜದ ಸಾರ್ವತ್ರಿಕ ಮಂಡಳಿ ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ಏಣಗಿ ನಟರಾಜರ ನಿಧನಕ್ಕೆ ಸಂತಾಪ ಸೂಚಿಸಿದ ನಂತರ ಏಣಗಿಯವರಿಂದ ತೆರವಾದ ನಿರ್ದೇಶಕ ಸ್ಥಾನಕ್ಕೆ ರಂಗತಜ್ಞರ ಹೆಸರುಗಳನ್ನು ಶಿಫಾರಸ್ಸು ಮಾಡಲಾಯಿತು.

ಸಭೆಯಲ್ಲಿ ರಂಗಸಮಾಜದ ವತಿಯಿಂದ ಶಿಫಾರಸ್ಸು ಮಾಡಲಾದ ಹೆಸರುಗಳಲ್ಲಿ ಕರಾವಳಿಯ ಗೋಪಾಲಕೃಷ್ಣ ನಾಯಿರಿ, ಧಾರವಾಡದ ಪ್ರಕಾಶ್ ಗರೂಡ ಹಾಗೂ ಗಂಗಾಧರಸ್ವಾಮಿಯವರ ಹೆಸರುಗಳಿದ್ದವು. ರಂಗಸಮಾಜ ಸಮಿತಿಯು ಈ ಮೂವರು ರಂಗತಜ್ಞರ ಹೆಸರುಗಳನ್ನು ಸರ್ವಾನುಮತದಿಂದ ಶಿಫಾರಸ್ಸು ಮಾಡಿತ್ತು. ಅವತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವ ಗೋವಿಂದ ಎಂ. ಕಾರಜೋಳರು ಈ ಆಯ್ಕೆಗಳಿಗೆ ತಲೆಯಾಡಿಸಿದ್ದರು.

ಸಮಿತಿ ಸೂಚಿಸಿದ್ದ ಮೂವರೂ ಹಲವು ವರ್ಷಗಳಿಂದ ರಂಗಭೂಮಿಯಲ್ಲೇ ತೊಡಗಿಕೊಂಡು, ರಂಗಕಾಯಕಕ್ಕೇ ಬದ್ಧರಾಗಿ ಬದುಕು ಕಟ್ಟಿಕೊಂಡಿರುವವರು. ಇವರುಗಳು ಈಗಾಗಲೇ ರಂಗಭೂಮಿಯ ವಿಭಿನ್ನ ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ನಟರಾಗಿ, ನಿರ್ದೇಶಕರಾಗಿ, ತಂತ್ರಜ್ಞರಾಗಿ ಎಲ್ಲಾ ಕೆಲಸಗಳನ್ನು ಮಾಡುತ್ತಾ ಸಂಘಟಕರಾಗಿಯೂ ದುಡಿದಿರುವವರು. ಹಲವು ಸಂಘಟನೆಗಳನ್ನು ಕಟ್ಟಿ ರಾಜ್ಯದೆಲ್ಲೆಡೆ ಸುತ್ತಾಡಿ ನಾಟಕ, ಆಡಿ-ಆಡಿಸಿ ಬೆಳೆಸುತ್ತಾ ಬಂದಿರುವವರು.

ಪ್ರಗತಿಪರ ಧೋರಣೆಗಳಿಂದ ಕೂಡಿದ, ಜಾತ್ಯತೀತ ತತ್ವ-ಸಿದ್ಧಾಂತಗಳನ್ನು ನಂಬಿ ಬದುಕುತ್ತಾ ಬಂದ ಈ ಮೂವರೂ ಯಾವುದೇ ಕೋಮುವಾದಿ ಶಕ್ತಿ/ಸಂಘ/ಸಂಸ್ಥೆ ಅಥವಾ ಪಕ್ಷಗಳಿಗೆ ಕೆಲಸ ಮಾಡಿರುವ ಉದಾಹರಣೆಗಳಿಲ್ಲ. ಸಾಂಸ್ಕೃತಿ ವಲಯದಲ್ಲಿ ಸಾಕಷ್ಟು ಒಡನಾಡಿರುವ ಈ ಮೂವರಲ್ಲೂ ಸಮಾಜ ಹಾಗೂ ಸಂಸ್ಕೃತಿಕ ವಾತಾವರಣವನ್ನು ಸ್ವಸ್ಥಗೊಳಿಸುವ ನಿಟ್ಟಿನಲ್ಲಿ ರಂಗಭೂಮಿಯ ಕೆಲಸಗಳನ್ನು ಮಾಡುವ ಇಚ್ಛಾಶಕ್ತಿ ಇದೆ ಎಂಬ ನಂಬಿಕೆ ಕರ್ನಾಟಕದ ರಂಗಕರ್ಮಿಗಳು, ರಂಗಾಭ್ಯಾಸಿಗಳು ಹಾಗೂ ರಂಗಾಸಕ್ತರಿಗಿದೆ.

ಈ ಮೂವರಲ್ಲಿ ಒಬ್ಬರನ್ನು ಆಯ್ಕೆ ಮಾಡಬೇಕಿದ್ದ ಸರ್ಕಾರ ಕೊನೆಗೆ ಇವರಲ್ಲಿ ಯಾರನ್ನೂ ಆಯ್ಕೆ ಮಾಡದೆ ಚೆಡ್ಡಿ ತೊಟ್ಟುಕೊಂಡು ಸ್ಕೂಲಿನಲ್ಲಿ ನಾಟಕವಾಡಿದ್ದಿರಬಹುದಾದ ಸುಭಾಸ ನರೇಂದ್ರ ಎಂಬ ಭೂಪನೊಬ್ಬನನ್ನು ರಾಷ್ಟ್ರೀಯ ಮಟ್ಟದ, ಸಾಂಸ್ಕೃತಿ ಶಿಸ್ತಿನ ರೆಪರ್ಟರಿಯೊಂದಕ್ಕೆ ನಿರ್ದೇಶಕನನ್ನಾಗಿ ನೇಮಿಸಿತು!

ಶಾಲಾ-ಕಾಲೇಜು ದಿನಗಳಲ್ಲಿ ಹವ್ಯಾಸಕ್ಕೋ ಖಯಾಲಿಗೋ ನಾಟಕದಲ್ಲಿ ಪಾತ್ರ ಮಾಡಿದ್ದ ಸುಭಾಸ ನರೇಂದ್ರನನ್ನು ನಿರ್ದೇಶಕ ಸ್ಥಾನಕ್ಕೆ ನೇಮಿಸುವುದೆಂದರೆ, ಸರ್ಕಾರ ಸಾಂಸತಿಕ ಕ್ಷೇತ್ರದಲ್ಲೂ ಕೇಸರಿ ಸಂಸ್ಕೃತಿಯನ್ನೇ ಬಿಂಬಿಸಲು ಹೊರಟಿದೆ ಎಂದೇ ಅರ್ಥ. ಆರೋಗ್ಯ ಇಲಾಖೆಯಲ್ಲಿ ನೌಕರನಾಗಿದ್ದು, ಪ್ರವೃತ್ತಿಗಾಗಿ ರಂಗಭೂಮಿ ಮಾಡಿಕೊಂಡು, ಅದನ್ನು ರಾಜಕೀಯಕ್ಕೆ ಬಳಸಿಕೊಂಡು ಓಡಾಡಿಕೊಂಡಿದ್ದಾತ ಈ ಸುಭಾಸ ನರೇಂದ್ರ.

ರಂಗಸಮಾಜದ ಸಾರ್ವತ್ರಿಕ ಮಂಡಳಿಯ ಶಿಫಾರಸ್ಸು ಹಾಗೂ ರಾಷ್ಟ್ರೀಯ ಮಟ್ಟದ ರೆಪರ್ಟರಿಯೊಂದಕ್ಕೆ ನಿರ್ದೇಶಕರನ್ನು ನೇಮಿಸುವಾಗ ಅನುಸರಿಸಬೇಕಾಗಿರುವ ಮಾರ್ಗಸೂಚಿಗಳನ್ನು ನಾಲೆಯ ನೀರಿಗೆ ಹರಿಬಿಟ್ಟಿರುವ ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಸಚಿವ ಕಾರಜೋಳರ ವಿರುದ್ಧ ಈಗ ರಂಗಕರ್ಮಿಗಳು ಸೆಟೆದು ನಿಂತಿದ್ದಾರೆ.


ಸುಭಾಸ ನರೇಂದ್ರನಿಗೆ ರಂಗ ಚಟುವಟಿಕೆಗಳ ಕನಿಷ್ಠ ಅರಿವೂ ಇಲ್ಲ, ಅವನ್ನು ಸಂಘಟಿಸಿ ಕ್ರಿಯಾತ್ಮಕ ಚಾಲನೆ ನೀಡುವಷ್ಟು ಸಂಘಟನಾತ್ಮಕ ಸಾಮರ್ಥ್ಯ ಮತ್ತು ಅನುಭವದ ಕೊರತೆ ಅವರನ್ನು ಕಾಡುತ್ತಿದೆ. ಹಾಗಾಗಿ ಧಾರವಾಡ ರಂಗಾಯಣದ ಎಲ್ಲಾ ಪ್ರಾಜೆಕ್ಟ್‌ಗಳನ್ನು ನುರಿತ ರಂಗಕರ್ಮಿಗಳಿಗೆ ಹೊರಗುತ್ತಿಗೆಯ ರೂಪದಲ್ಲಿ ನೀಡಲಾಗುತ್ತಿದೆ. ಸ್ವಾಯತ್ತ ಸಂಸ್ಥೆ ರಂಗಾಯಣಕ್ಕೊಂದು ದಿಕ್ಕು ತೋರುವ ಅನುಭವಸ್ಥ ರಂಗಕರ್ಮಿಯೊಬ್ಬರು ನಿರ್ದೇಶಕರಾಗಿ ಸಿಗದಿರುವುದು ಉತ್ತರ ಕರ್ನಾಟಕದ ದುರಂತ.

ಸರ್ಕಾರದ ಕಾನೂನುಬಾಹಿರ ಕ್ರಮ ಹಾಗೂ ಸುಭಾಸ ನರೇಂದ್ರನ ನೇಮಕಾತಿಯನ್ನು ಪ್ರಶ್ನಿಸಿ ಗೋಪಾಲಕೃಷ್ಣ ನಾಯಿರಿ, ಗರೂಡ ಹಾಗೂ ಗಂಗಾಧರಸ್ವಾಮಿ ಮೂವರು ಈಗ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಿದ್ದಾರೆ. ಕಾರಜೋಳರ ಕಚ್ಚೆ ಕಾಲಿಗೆ ಎಡರುತ್ತಿದೆಯಂತೆ.

– ವರದಿಗಾರ

ಮೈಸೂರಿನ ಟೆಲಿಕಾಮ್ ಸೊಸೈಟಿ ಭೂ ಲೂಟಿ

ಲಂಚದ ಕಾಸಿಗಾಗಿ ಮಾಹಿತಿಕೋರರ ಬೀದಿಕಾಳಗ


ರಾಮದಾಸ್

ಮಾಹಿತಿ ಹಕ್ಕು ಕಾಯ್ದೆ ಬಳಸಿ 500 ಕೋಟಿಯ ಹಗರಣವೊಂದಕ್ಕೆ ಬಾಣಬಿಟ್ಟರೆ ಲಂಚವಾಗಿ 50 ಲಕ್ಷ ಗಿಟ್ಟುತ್ತಾ?

ನಂಬಿದರೆ ನಂಬಿ ಬಿಟ್ಟರೆ ಬಿಡಿ, ಸದ್ಯ ಬೆಂಗಳೂರಿನ ಅರ್ಧ ಡಜನ್ ಪೊಲೀಸ್ ಠಾಣೆಗಳ ಪಾಲಿಗೆ ನುಂಗಲಾರದ, ಉಗುಳಲೂ ಬಾರದ ವಿಚಿತ್ರ ಕಿತಾಪತಿಯೊಂದರ ಹಿಂದಿರುವುದು ಅರ್ಧಕೋಟಿಯ ಲಂಚ ಮತ್ತು 15 ಸಾವಿರ ಎಕರೆಗಳ ಭೂಡಕಾಯಿತಿ. ಇದರ ಸುತ್ತ ಸೋಕಾಲ್ಡ್ ಆರ್‌ಟಿಐ ಆಕ್ಟಿವಿಸ್ಟ್‌ಗಳು ಅರ್ಥಾತ್ ಮಾಹಿತಿ ಹಕ್ಕು ಕಾರ್ಯಕರ್ತರೆಂಬ ಸತ್ಯಹರಿಶ್ಚಂದ್ರನ ತುಂಡುಗಳ ಅಸಹ್ಯ ಕಚ್ಚಾಟವೂ ಬೀದಿಗೆ ಬಿದ್ದಿದೆ.

ಇಲ್ಲಿ ಹಗರಣಕೋರನ ಸ್ಥಾನದಲ್ಲಿರುವುದು ಕರ್ನಾಟಕ ಟೆಲಿಕಾಮ್ ಡಿಪಾರ್ಟ್‌ಮೆಂಟ್ ಎಂಪ್ಲಾಯೀಸ್ ಕೋ-ಆಪರೇಟಿವ್ ಸೊಸೈಟಿ ಅರ್ಥಾತ್ ಕರ್ನಾಟಕ ದೂರಸಂಪರ್ಕ ಇಲಾಖೆ ನೌಕರರ ಸಹಕಾರ ಸಂಘ ಮತ್ತು ಅದರ ಅಧ್ಯಕ್ಷ ವಿಜೆಕೆ ಭಕ್ತವತ್ಸಲಮ್ ಎಂಬಾತನಾದರೆ ಆತನ ಪಾಪದ ಫಲಾನುಭವಿಯಂತಿರುವುದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರ ಮತ್ತದರ ಒಂದು ಡಜನ್ ದೇಶಭಕ್ತರ ಗ್ಯಾಂಗ್!

ಕಳೆದ ಕೆಲ ವರ್ಷಗಳಿಂದ ಬೆಂಗಳೂರಿನ ಪ್ರಮುಖ 27 ಇಲಾಖೆಗಳೂ ಸೇರಿದಂತೆ ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ, ಜಲಮಂಡಳಿ ಇತ್ಯಾದಿ ಆಯಕಟ್ಟಿನ ಫಲವತ್ತಾದ ಸರ್ಕಾರಿ ಸಂಸ್ಥೆಗಳ ಬುಡಕ್ಕೆ ಮಾಹಿತಿ ಹಕ್ಕುಕಾಯ್ದೆ ಬಳಸಿ ನೂರಾರು, ಸಾವಿರಾರು ಅರ್ಜಿಗಳನ್ನು ಗುಜರಾಯಿಸಿದ್ದು ಮಾಹಿತಿಹಕ್ಕು ಅಧ್ಯಯನ ಕೇಂದ್ರವೆಂಬ ಸ್ವಯಂಘೋಷಿತ ತನಿಖಾ ಸಂಸ್ಥೆ. ಆಗಾಗ ಮಾಹಿತಿಹಕ್ಕು ಕುರಿತಂತೆ ವಿಚಾರಮಂಥನ, ಚರ್ಚೆ, ಪುಸ್ತಕ ಬಿಡುಗಡೆ, ಚಹಾಕೂಟ, ತಿಂಡಿಗೋಷ್ಠಿ ಇತ್ಯಾದಿಗಳನ್ನು 'ನಗರದಲ್ಲಿ ಇಂದು' ಅಂಕಣದ ಮಟ್ಟಿಗಷ್ಟೇ ಸೀಮಿತವಾಗಿ ಹಮ್ಮಿಕೊಳ್ಳುವ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಸೋಕಾಲ್ಡ್ ಮಾಹಿತಿಕೋರರಲ್ಲೇ ಈಗ ಭೀಕರ ಕಚ್ಚಾಟ, ಜಿದ್ದಾಜಿದ್ದಿ ಮಾರಾಮಾರಿ, ಕೊಲೆಯತ್ನ, ರೌಡಿಗಳ ಹಸ್ತಕ್ಷೇಪ ಶುರುವಾಗಿದೆ!

ಮಾಹಿತಿ ಅಧ್ಯಯನ ಕೇಂದ್ರ?

ನಿನ್ನೆಮೊನ್ನೆಯ ತನಕ ಒಂದೇ ಗ್ಯಾಂಗಿನಂತಿದ್ದು, ಒಟ್ಟಾಗಿ ಅರ್ಜಿ ಹಾಕಿ, ಒಟ್ಟೊಟ್ಟಿಗೆ ಕೂತು ಉಣ್ಣುತ್ತಿದ್ದ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಅಂತಃಕ್ಷೋಭೆ ಬೀದಿಗೆ ಬೀಳಲು ಕಾರಣವಾಗಿದ್ದೇ ಟೆಲಿಕಾಮ್ ಇಲಾಖೆ ನೌಕರರ ಸಹಕಾರ ಸಂಘದ ಭೂಡಕಾಯಿತಿ ಮತ್ತು ಅದರ ಅಧ್ಯಕ್ಷ ಭಕ್ತವತ್ಸಲಂ ಕೊಟ್ಟ 50 ಲಕ್ಷ ರೂಪಾಯಿಗಳ ಲಂಚವೆಂಬುದು ಒಂದು ಗ್ಯಾಂಗಿನ ಆರೋಪವಾದರೆ ಮತ್ತೊಂದು ಗುಂಪು ಲಂಚ ತಿಂದ ಮೇಲೂ ಕ್ಯಾತೆ ತೆಗೆಯುವುದು ನ್ಯಾಯವಾ ಎಂದು ಪ್ರಶ್ನೆಯಿಡುತ್ತದೆ.

ಭ್ರಷ್ಟಾಚಾರದ ವಿರುದ್ಧ ಬ್ರಹ್ಮಾಸ್ತ್ರವೆಂದೇ ಚಾಲ್ತಿಗೆ ಬಂದ ಮಾಹಿತಿಹಕ್ಕು ಕಾಯ್ದೆಯೆಂಬುದು ಇವತ್ತು ಎಂತೆಂಥ ಖದೀಮರು, ಪಾಖಂಡಿಗಳ ಪಾಲಿಗೆ ಸುಲಿಗೆಯ ಅಸ್ತ್ರವಾಗಿದೆ ಎಂಬುದಕ್ಕೆ ಈ ಪ್ರಕರಣವೊಂದೇ ಸಾಕು.


ಪ್ರತಿನಿತ್ಯ ಕರ್ನಾಟಕದ ವಿವಿಧ ಇಲಾಖೆಗಳ ಕಾಮಗಾರಿ, ಖರೀದಿ, ಭೂಮಂಜೂರಾತಿ, ಬಿಲ್ಲು ಪಾವತಿ, ಕಟ್ಟಡ ನಕ್ಷೆ ಇತ್ಯಾದಿಗಳ ಕುರಿತಂತೆ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದಿಂದ ಹತ್ತಾರು ಅರ್ಜಿಗಳು ದಾಖಲಾಗುತ್ತವೆ. ಹೀಗೆ ಆರ್‌ಟಿಐ ಆಕ್ಟ್ ಬಳಸಿ ಪಡೆದ ಮಾಹಿತಿಯನ್ನು ಈ ಮಂದಿ ಯಾರಾದರೂ ನಿಷ್ಠಾವಂತ ಪತ್ರಕರ್ತರಿಗೋ, ಭ್ರಷ್ಟಾಚಾರ ವಿರೋಧಿ ಹೋರಾಟಗಾರರಿಗೋ ಒದಗಿಸುತ್ತಾರೆಂದೋ ಅಥವಾ ಇವರೇ ಈ ಬಗ್ಗೆ ಲೋಕಾಯುಕ್ತಕ್ಕೆ ದೂರು ಕೊಟ್ಟೋ, ಕೋರ್ಟಿನಲ್ಲಿ ದಾವೆ ಹಾಕಿಯೋ ಹೋರಾಡುತ್ತಾರೆಂದು ಯಾರಾದರೂ ಭಾವಿಸಿದರೆ ಅದವರ ಮೂರ್ಖತನವಷ್ಟೆ.

ಅಸಲಿಗೆ ಈ ಮಾಹಿತಿ ಹಕ್ಕು ಅಧ್ಯಯನ ಕೇಂದ್ರವೆಂಬುದೇ ಬರಗೆಟ್ಟ ಅರೆ ಆರೆಸ್ಸೆಸ್ ಸುಲಿಗೆಕೋರರ ದುಷ್ಟಕೂಟವೆಂಬುದು ಅದರಲ್ಲೇ ಇದ್ದು ತಿರುಗಿಬಿದ್ದವರ ಆರೋಪ. ಬಿ.ಎಚ್. ವೀರೇಶ್ ಅಲಿಯಾಸ್ ವೀರೇಶ್ ಬೆಳ್ಳೂರು ಎಂಬ ಡಿಸ್‌ಮಿಸ್ಸಾದ ಬ್ಯಾಂಕ್ ಕ್ಯಾಷಿಯರ್ ಇದರ ಪ್ರಮುಖ ಟ್ರಸ್ಟಿಯಾದರೆ, ಬಿಜೆಪಿ ಕಾರ್ಯಕರ್ತ ಅಮರೇಶ್, ಆರೆಸ್ಸೆಸ್ ಮೂಲದ ವಿಕ್ರಮ್ ಸಿಂಹ, ಮತ್ತೊಬ್ಬ ಬಿಜೆಪಿ ಪುಢಾರಿ ವಸಂತ್‌ಕುಮಾರ್, ನಕಲಿ ಪತ್ರಕರ್ತ ಕಂ ಬಿಜೆಪಿ ಪುಢಾರಿ ವೆಂಕಟೇಶ್ ಬಾಬು, ಕೆನರಾ ಬ್ಯಾಂಕಿನ ಮಾಜಿ ಟೈಪಿಸ್ಟ್ ವಿಶ್ವನಾಥ್, ಫುಲ್‌ಟೈಂ ರೋಲ್‌ಕಾಲ್ ಟಿ. ರಾಮು ಇತ್ಯಾದಿ ಹರಿಶ್ಚಂದ್ರನ ತುಂಡುಗಳೆಲ್ಲ ಸೇರಿ ತಮ್ಮ ಹೊಟ್ಟೆಪಾಡಿಗೆಂದು ಮಾಡಿಕೊಂಡಿದ್ದೇ ಈ ಮಾಹಿತಿ ಅಧ್ಯಯನ ಕೇಂದ್ರ!

ಹಾಗಂತ ಆರೋಪಿಸುತ್ತಿರುವುದು ಬೇರೆ ಯಾರೂ ಅಲ್ಲ, ನಿನ್ನೆಮೊನ್ನೆಯ ತನಕ ಇದೇ ಮಾಹಿತಿಹಕ್ಕು ಅಧ್ಯಯನ ಕೇಂದ್ರದಲ್ಲಿದ್ದು ಈಗ ತಿರುಗಿಬಿದ್ದಿರುವ ಕರ್ನಾಟಕ ಬೋವಿ ಸಂಘದ ಕಾರ್ಯದರ್ಶಿ ಮತ್ತು ಫ್ರಾಡ್ ಸ್ಕ್ವಾಡ್ ಪತ್ರಿಕೆಯ ಸಂಪಾದಕ ವೆಂಕಟೇಶ್ ಬೋವಿ!

ರೆಡ್ ಆ್ಯರೋ ಭಾಸ್ಕರ್

ಮಾಹಿತಿಹಕ್ಕು ಅಧ್ಯಯನ ಕೇಂದ್ರದ ಮತ್ತೊಬ್ಬ ಆಧಾರ ಸ್ತಂಭದಂತಿರುವ ರೆಡ್ ಆ್ಯರೋ ಭಾಸ್ಕರ್ ಅಲಿಯಾಸ್ ವಿ. ಭಾಸ್ಕರ್, ವೀರೇಶ್ ಬೆಳ್ಳೂರ್, ವಿಕ್ರಂ ಸಿಂಹ, ಅಮರೇಶ್ ಮುಂತಾದವರದ್ದು ಸದ್ಯ ಒಂದು ಗ್ಯಾಂಗಾದರೆ ಅದರ ವಿರುದ್ಧ ಪ್ರತಿನಿತ್ಯ ಪೊಲೀಸ್ ಠಾಣೆ, ಕೋರ್ಟು ಕಚೇರಿ



ಶ್ರೀಕಾಂತ್

ಸುತ್ತುತ್ತಿರುವವನು ವೆಂಕಟೇಶ್ ಬಾಬು.

ತನ್ನನ್ನು ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ರೆ... ಆ್ಯರೋ ಭಾಸ್ಕರ್ ಮತ್ತು ವೀರೇಶ್ ಬೆಳ್ಳೂರ್ ಸೇರಿಕೊಂ... ಕೊಲ್ಲಲು ಯತ್ನಿಸುತ್ತಿದ್ದಾರೆಂದೂ, ಇದಕ್ಕೊಂದು ಕುಖ್ಯಾ... ಸುಪಾರಿ ಕಿಲ್ಲರ್ ಸೈಕಲ್ ರವಿಗೆ ಸುಪಾರಿ ಕೊಟ್ಟಿದ್ದಾರೆಂದ... ವೆಂಕಟೇಶ್ ಬೋವಿ ಜೆ.ಪಿ. ನಗರ ಪೊಲೀಸ್ ಠಾ... ದೂರು ಕೊಟ್ಟಿದ್ದಾನೆ. ಜೊತೆಗೆ ಪೊಲೀಸ್ ರಕ್ಷಣೆ ಕೊ... ಬೆಂಗಳೂರು ಪೊಲೀಸ್ ಕಮೀಷನರ್‌ಗೂ ಮತ್ತೊಂ... ದೂರು ಸಲ್ಲಿಸಿದ್ದಾನೆ. ಇದಕ್ಕೆ ಪ್ರತಿಯಾಗಿ ವೀರೇಶ್, ಭಾಸ್... ಸೇರಿಕೊಂಡು ವೆಂಕಟೇಶ್ ಬೋವಿ ವಿರುದ್ಧ ವಿಜಯನ... ಹನುಮಂತನಗರ, ಜೆ.ಪಿ. ನಗರ ಪೊಲೀಸ್ ಠಾಣೆಗ... ಚಿತ್ರವಿಚಿತ್ರ ದೂರು ದಾಖಲಿಸಿದ್ದೂ ಅಲ್ಲದೆ ಬಿಎಂಟಿಎ... ಡಿಜಿಪಿ, ಪೊಲೀಸ್ ಕಮೀಷನರ್; ಇತ್ಯಾದಿ ಎಲ್ಲೆಂದ... ದೂರುಗಳ ಮೇಲೆ ದೂರು ದಾಖಲಿಸುತ್ತಲೇ ಇದ್ದಾ...

ನಿನ್ನೆ ಮೊನ್ನೆಯ ತನಕ ಒಟ್ಟೊಟ್ಟಿಗೆ ಕೂತು ನಡುರಾ... ತನಕ ಕುಡಿದು ತಟ್ಟಾಡುತ್ತಿದ್ದ ಈ ಮಂದಿ ಈಗ ವಿಕಾ... ಹಾವುಮುಂಗುಸಿಗಳಂತೆ ಕಚ್ಚಾಡುತ್ತಿರುವುದಕ್ಕೆ ಮೂಲ ಕಾ... ಅಂತಿದ್ದರೆ ಅದು ಮೈಸೂರಿನ ಟೆಲಿಕಾಮ್ ನೌಕರರ ಸಹ... ಸಂಘದ 500 ಕೋಟಿಯ ಭೂಹಗರಣ. 2009 ಮಾರ್ಚ್ 16 ರಂದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರ... ಪ್ರಮುಖ ಮತ್ತು ಸ್ಮಾಲ್ ಅಂಡ್ ಮೀಡಿಯಂ ಪೇಪ... ಫೆಡರೇಷನ್ ಎಂಬ ಲೆಟರ್‌ಹೆಡ್ ಸಂಘಟನೆಯ ಸ್ವಯಂ... ಘೋಷಿತ ರಾಷ್ಟ್ರಾಧ್ಯಕ್ಷ ರೆಡ್ ಆ್ಯರೋ ಭಾಸ್ಕರ ಬೆಂಗಳೂ... ಲೋಕಾಯುಕ್ತರಿಗೊಂದು ದೂರು ದಾಖಲಿಸುತ್ತಾನೆ.

ಅದು ಬೆಂಗಳೂರಿನ ಟೆಲಿಕಾಮ್ ಡಿಪಾರ್ಟ್‌ಮೆಂ...


ರೆಡ್ ಆ್ಯರೋ ಭಾಸ್ಕರ್, ಭಕ್ತವತ್ಸಲಂ, ವೆಂಕಟೇಶ್ ಬೋವಿ, ವೀರೇಶ್ ಬೆಳ್ಳೂರ್

ಮಾಹಿತಿಕೋರರ ಸುಲಿಗೆ ಸಾಮ್ರಾಜ್ಯದಲ್ಲಿ

ಚೆಡ್ಡಿ ಅಮರೇಶ, ಬಡ್ಡಿ ವೀರೇಶ, ಟೋಪಿ ಭಾಸ್ಕರ....!

ಮಾಹಿತಿ ಹಕ್ಕು ಕಾಯ್ದೆಯನ್ನೇ ತಮ್ಮ ಸುಲಿಗೆಯ ಅಸ್ತ್ರವಾಗಿಸಿಕೊಂಡ ಇಂಥ ವಸೂಲಿವೀರರ ವಿರುದ್ಧ ಪೊಲೀಸರೂ ತೆಪ್ಪಗಿದ್ದು ಬಿಡುತ್ತಾರೆ. ಇದು ಕೇವಲ ಮಾಹಿತಿ ಹಕ್ಕು ಅಧ್ಯಯನ ಕೇಂದ್ರವೊಂದರ ಕತೆಯಷ್ಟೇ ಅಲ್ಲ, ಒಂದಾನೊಂದು ಕಾಲಕ್ಕೆ ಪುಡಿ ಪತ್ರಿಕೆ ಮಾಡಿಕೊಂಡು ವರ್ಷಕ್ಕೊಂದು ಸಂಚಿಕೆ ತರುತ್ತಿದ್ದ ಅನಕ್ಷರಸ್ಥರು, ಹೆಬ್ಬೆಟ್ಟು ಗಿರಾಕಿಗಳು, ವಂಚಕರೆಲ್ಲ ಇವತ್ತು ಆರ್‌ಟಿಐ ಆ್ಯಕ್ಟಿವಿಸ್ಟ್‌ಗಳೆಂದು ವಸೂಲಿಗಿಳಿದಿದ್ದಾರೆ.

ಈ ಪೈಕಿ ಇಡೀ ಬಿಬಿಎಂಪಿಯನ್ನೇ ತನ್ನ ಸಾಮ್ರಾಜ್ಯವನ್ನಾಗಿ ಮಾಡಿಕೊಂಡು ವಸೂಲಿಗಿಳಿದ ಅಮರೇಶ್ ನಿನ್ನೆಮೊನ್ನೆಯ ತನಕ ಬಿಎಂಟಿಸಿ ಬಸ್ಸಲ್ಲಿ ಹಳೆಯದೊಂದು ಜುಬ್ಬಾ ತೊಟ್ಟು ಓಡಾಡಿಕೊಂಡಿದ್ದವನು ಈಗ 20 ಲಕ್ಷದ ಕಾರನ್ನೇರಿ ಬರುತ್ತಾನೆ. ಈತನ ಪತ್ನಿ ಭಾಗ್ಯವತಿ ಬೆಂಗಳೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ. ಅಮರೇಶ್ ಅನಾದಿಕಾಲದಿಂದಲೂ ಲೋಕಲ್ ಬಿಜೆಪಿ ನಾಯಕ. ಪಕ್ಷಿಗೆ ಪಕ್ಷದ ಚಾಕರಿ ಬಿಟ್ಟರೆ ಬೇರೆ ಕೆಲಸವಿಲ್ಲ, ಈತ ಜನ್ಮೇಪಿ ಎಲ್ಲೂ ದುಡಿದವನಲ್ಲ, ಸಾವಿರ ರೂಪಾಯಿಯ ಸಂಬಳವನ್ನೂ ಪಡೆಯದ, ಯಾವತ್ತೂ ಮೈಬಗ್ಗಿಸಿ ದುಡಿಯದ ಅಮರೇಶ್‌ಗೆ 20 ಲಕ್ಷದ ಕಾರು, ಐಷಾರಾಮಿ ಫ್ಲಾಟು, ಎಲ್ಲಿಂದ ಬಂತು?


ಈ ಪ್ರಶ್ನೆಗೆ ಉತ್ತರಬೇಕೆಂದರೆ ಈತನಕ ಈತ ಆರ್‌ಟಿಐ ಅಡಿಯಲ್ಲಿ ಹಾಕಿದ ಸಾವಿರಕ್ಕೂ ಅಧಿಕ ಅರ್ಜಿಗಳ ಮರ್ಮ ಕೆದಕಬೇಕಷ್ಟೇ. ಕಾಸು ಕೊಟ್ಟರೆ ತೆಗೆದ ಮಾಹಿತಿಯನ್ನು ಅದುಮಿಡುವುದು, ರೋಲ್‌ಕಾಲ್ ಹುಟ್ಟದೆ ಹೋದರೆ ಅದೇ ಮಾಹಿತಿ ಹಿಡಿದು ಟೀವಿ ಷೋಗಳಲ್ಲಿ ಪೌರುಷ ಮೆರೆಯುವುದು ಚೆಡ್ಡಿ ಅಮರೇಶನ ಚಾಳಿ.

ಈತನಿಗಿಂತಲೂ ಖತರ್‌ನಾಕ್ ಹಿನ್ನೆಲೆಯವನು ವೀರೇಶ್ ಬೆಳ್ಳೂರು ಉರ್ಫ್ ಬಿ.ಎಚ್. ವೀರೇಶ್. ಇಲ್ಲಿಗೆ ಏಳು ವರ್ಷದ ಹಿಂದೆ ಕೆನರಾ ಬ್ಯಾಂಕಿನಲ್ಲಿ ಯಃಕಶ್ಚಿತ್ ಟೈಪಿಸ್ಟ್ ಆಗಿದ್ದ. ವೀರೇಶ್ ತಾನೇ ಕೆಲಸಕ್ಕೆ ರಾಜೀನಾಮೆಯಿತ್ತನೋ ಅಥವಾ ಡಿಸ್‌ಮಿಸ್ಸಾದನೋ ಗೊತ್ತಿಲ್ಲ, ವಿಜಯನಗರದ ಬಸ್‌ಸ್ಟಾಪ್ ಹಿಂದಿರುವ ಪಂಚವಟಿ ಹೋಟೆಲ್ ಕೆಳಗೊಂದು ಫೈನಾನ್ಸ್ ಕಂ ಪಿಗ್ಮಿ ಕಲೆಕ್ಷನ್ ಅಡ್ಡೆ ತೆರೆದವನು ಕಾಲಕ್ರಮೇಣ ಅದನ್ನೇ ಮಾಹಿತಿ ಹಕ್ಕು ಅಧ್ಯಯನ ಕೇಂದ್ರವನ್ನಾಗಿ ಪರಿವರ್ತಿಸಿದ. ದಿನವೊಂದಕ್ಕೆ ಕಮ್ಮಿಯೆಂದರೂ 10 ಅರ್ಜಿ ಹಾಕದಿದ್ದರೆ ಈತನಿಗೆ ನಿದ್ದೆಯೇ ಬರಲ್ಲವಂತೆ. ಈ ರೀತಿ ಅರ್ಜಿ ಹಾಕಿದ ಫಲವಾಗಿ ವೀರೇಶ್ ಯಾವ ಹಗರಣವನ್ನು ಬಯಲಿಗೆಳೆಯದೇ ಹೋದರೂ ಆಸ್ತಿ ಮಾತ್ರ ದುಪ್ಪಟ್ಟು ಮುಪ್ಪಟ್ಟು ಏರುತ್ತಲೇ ಇದೆ.

ಜೇಡ್ ಎನ್‌ಕ್ಲೇವ್‌ನಲ್ಲಿ ಒಂದು 1 ಫ್ಲಾಟ್, ಎಂ.ಸಿ. ಲೇಔಟಿನಲ್ಲಿ ಮತ್ತೊಂದು ಫ್ಲಾಟ್, ಕೋರಮಂಗಲದಲ್ಲಿ ಇನ್ನೊಂದು ಫ್ಲಾಟ್, ಮಗನನ್ನು ಅಮೆರಿಕದಲ್ಲಿ ಇರಿಸಿ


ಆರ್‌ಪಿಸಿ ಲೇಔಟಿನ ಮೋಜು ಕೇಂದ್ರ


ವೀರೇಶನ ಐಷಾರಾಮಿ ಫ್ಲಾಟ್


ಅಮರೇಶ್

ವ್ಯಾಸಂಗ, ಐದು ಬ್ಯಾಂಕ್‌ಗಳಲ್ಲಿ ಲಕ್ಷಗಟ್ಟಲೇ ಠೇವಣಿ. ಹೀಗೆ ವೀರೇಶ್ ಆರ್‌ಟಿಐ ಕಾಯಕಕ್ಕೆ ನಿಂತ ಮೇಲೆ ಆತನ ಖಾಸಗಿ ಆಸ್ತಿಗಳ ಮೊತ್ತವೂ ಏರುಗತಿಯಲ್ಲಿದೆ. ಈತ ಈತನಕ ಹಾಕಿದ ಮಾಹಿತಿಹಕ್ಕು ಅರ್ಜಿಗಳ ಕುರಿತಾಗಿಯೇ ಯಾರಾದರೂ ತನಿಖೆ ಕೈಗೆತ್ತಿಕೊಂಡರೆಂದರೆ ಅದೇ ಒಂದು ಪುಸ್ತಕವಾಗುವಷ್ಟಿದೆ.

ವೀರೇಶ್ ಮತ್ತು ಅಮರೇಶ್‌ರ ಪ್ರತಿಷ್ಠಿತ ಆರ್‌ಟಿಐ ಶೈಲಿಗೆ ಹೋಲಿಸಿದರೆ ವಿ. ಭಾಸ್ಕರ್ ಅಲಿಯಾಸ್ ರೆಡ್ ಆ್ಯರೋ ಭಾಸ್ಕರ್‌ನದ್ದು ಕೊಂಚ ಕಟು ಶೈಲಿ. ಶುರುವಿನಲ್ಲಿ ಕ್ವಾಲಿಟಿ ಬಿಸ್ಕೆಟ್ ಫ್ಯಾಕ್ಟರಿಯಲ್ಲಿಯಲ್ಲಿದ್ದ, ಸಂಬಳ ಒಪ್ಪತ್ತು ಊಟಕ್ಕೂ ಸಾಲದೆಂದು ಉಪಕಸುಬಾಗಿ ರೆಡ್ ಆ್ಯರ... ಎಂಬ ಅನಿಯತಕಾಲಿಕ ಪತ್ರಿಕೆಯೊಂದನ್ನು ಆರಂಭಿಸಿದ. ಬೆಳ್ಳಂಬೆಳಗ್ಗೆ ಕುಡಿದು ಚಿತ್ತಾಗಿ ಫೋನೆತ್ತಿದನೆಂದರೆ ಸಂಜೆ ಹೊತ್ತಿಗೆ ಜೇ... ಭರ್ತಿಯಾಗಲೇಬೇಕು. ಸಾಲದ್ದಕ್ಕೆ ಆಗಾಗ ಪರಪ್ಪನ ಅಗ್ರಹಾರ ಜೈಲಿಗೆ ಹೋ... ಹಂತಕ ಸೈಕಲ್ ರವಿಗೆ ಬಿರಿಯಾನಿ ತಿನ್ನಿಸಿ ಬರುವ ಖಯಾಲಿ ಬೇರೆ!

2007ರ ಸುಮಾರಿಗೆ ವೀರೇಶನ ಜೊತೆ ಆರ್‌ಟಿಐ ಕಾಯಕ ಶುರುವಿಟ್ಟ... ರೆಡ್ ಆ್ಯರೋ ಭಾಸ್ಕರನ ಜಾಯಮಾನವೇ ಬದಲಾಯಿತು. ಅಲಮೇಲ... ಎಂಬ ಬಡ ವಿಧವೆಯ ಶ್ರೀನಗರದ ಮನೆಯನ್ನು ಲಪಟಾಯಿಸಿದ್ದು, ಇನ್ನಾರದ... ಸಂಸಾರಕ್ಕೆ ಕೊಳ್ಳಿಯಿಟ್ಟದ್ದು, ಒಂದು ವ್ಯಾನ್ ಮತ್ತೊಂದು ಕಾರು-ಜೊತೆಗೆ... ಸೈಟು, ಹೀಗೆ ಭಾಸ್ಕರನ ಬದುಕಿನ ರೆಡ್ ಆ್ಯರೋ ಎತ್ತರಕ್ಕೇರಿದ್ದಕ್ಕೂ ಹತ... ಮನೆಗಳ ದೀಪ ಆರಿದ್ದಕ್ಕೂ ಸಂಬಂಧವಿದೆ. ಸಾಲದ್ದಕ್ಕೆ ಸ್ಮಾಲ್ ಅಂ... ಮೀಡಿಯಂ ನ್ಯೂಸ್‌ಪೇಪರ್ ಫೆಡರೇಷನ್ ಎಂಬ ಲೆಟರ್‌ಹೆಡ್ ... ಹುಟ್ಟುಹಾಕಿ ಅದಕ್ಕೆ ತಾನೇ ರಾಷ್ಟ್ರೀಯ ಅಧ್ಯಕ್ಷನೆಂದು ಬೇರೆ ಹೇಳಿಕೊಳ್ಳುತ್ತ... ಈತನಿಗೆ ಬರೆಯುವುದಕ್ಕೇ ಬರುವುದಿಲ್ಲ.

ಈತನ ಕಾಟ ತಾಳಲಾರದೇ ಫಿನಿಕ್ಸ್ ಪತ್ರಿಕೆಯ ಸಂಪಾದಕ ಗುರು... ರಾವ್ ಫ್ರೀಲಾನ್ಸ್ ಪತ್ರಕರ್ತರಾದ ಮ.ರಾ. ಬಾಬು ಮತ್ತು ಸಾರಂಗಪ... ಕೊರಗಿ ಕೊರಗಿ ಸತ್ತರಂತೆ. ಪ್ರತಿ ಸಂಜೆಯಾದರೆ ಕುಡಿದು, ಇಸ್ಪೀಟ್ ... ಮೋಜು ಮಾಡುವುದಕ್ಕೆಂದೇ ಇವರೆಲ್ಲ ಸೇರಿ ಆರ್‌ಪಿಸಿ ಲೇಔಟಿನಲ್ಲೊಂ... ಬಾಡಿಗೆ ಮನೆ ಹಿಡಿದಿದ್ದರೆಂದರೆ ಇವರ ಮಾಹಿತಿ ಹಕ್ಕು ಕುರಿತ ಅಧ್ಯ... ಯಾವ ಮಟ್ಟಕ್ಕಿರಬೇಡ?

ಭ್ರಷ್ಟಾಚಾರದ ವಿರುದ್ಧ ಪರಿಣಾಮಕಾರಿ ಔಷಧವಾಗಬೇಕಿದ್ದ ಮಾ... ಹಕ್ಕು ಕಾಯ್ದೆ ಇಂಥ ಖದೀಮರ ಕೈಗೆ ಸಿಕ್ಕರೆ ಇನ್ನೇನಾಗಲು ಸಾಧ್ಯ?

ಯಿಸ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ವತ್ಸಲಮ್ ಮತ್ತದರ ಕಾರ್ಯದರ್ಶಿ ಬಿ.ಎಸ್. ಜುನಾಥ್ ವಿರುದ್ಧದ ದೂರಾಗಿತ್ತು, ಮೈಸೂರು ಧಿಕಾರಿ, ಮೂಡಾ ಕಮೀಷನರ್, ಮೈಸೂರು ತಾಲ್ಲೂಕು ಸೀಲ್ದಾರ್, ಸಹಕಾರ ಸಂಘಗಳ ರಾಜ್ಯ ರಿಜಿಸ್ಟ್ರಾರ್, ಾಭಿವೃದ್ಧಿ ಇಲಾಖೆಯ ಪ್ರಿನ್ಸಿಪಲ್ ಸೆಕ್ರಟರಿ ಇತ್ಯಾದಿ ಧ ಇಲಾಖೆಗಳ 16 ಕ್ಕೂ ಅಧಿಕ ಅಧಿಕಾರಿಗಳನ್ನು ಪಿಗಳಾಗಿಸಿ ಕೊಟ್ಟ ದೂರಿನ ಪ್ರಕಾರ ದೂರಸಂಪರ್ಕ ರರ ಸಹಕಾರ ಸಂಘ ಮೈಸೂರು ಸುತ್ತಮುತ್ತ 1300 ಗಳಷ್ಟು ಕೃಷಿ ಭೂಮಿ ಖರೀದಿಸಿದ್ದೇ ಅಕ್ರಮವಾಗಿತ್ತು.

ಭಕ್ತವತ್ಸಲಮ್

ಕರ್ನಾಟಕದ ಅಂಚೆ-ತಂತಿ ಮತ್ತು ದೂರವಾಣಿಯಂಥ ಉದ್ದಿಮೆಗೆ ಸಂಬಂಧಪಟ್ಟಂತೆ ಈಗಾಗಲೇ ಟೆಲಿಕಾಮ್ ಪ್ಲಾಯಿಸ್ ಕೋ-ಆಪ್ ಹೌಸಿಂಗ್ ಸೊಸೈಟಿಯಿದೆ. ಈಗಾಗಲೇ ಸೈಟು ವಿತರಣೆಯ ಕಸುಬು ಆರಂಭಿಸಿದೆ. ದ್ದೂ ದೂರಸಂಪರ್ಕ ಇಲಾಖೆ ನೌಕರರ ಸಹಕಾರ ದ ಹೆಸರಲ್ಲಿ ತಮಿಳುನಾಡು ಮೂಲದ ವಲಸೆ ರನ್ನೆಲ್ಲ ಸೇರಿಸಿ ಅಂಥವರಿಗೆ ಬೆಂಗಳೂರು- ೂರಿನಲ್ಲಿ ಸೈಟು ಕಲ್ಪಿಸಲು ನಿಂತವನು ಭಕ್ತವತ್ಸಲಮ್. ಬೆಂಗಳೂರಿನ ಚಿಕ್ಕ ತಿರುಪತಿ ರಸ್ತೆಯಲ್ಲಿ 500 ಎಕರೆಯ ಕ್ಷ ಲೇಔಟ್, ದೇವನಹಳ್ಳಿಯ ಚಿಕ್ಕಜಾಲ ಮತ್ತು ನಾಯಕನಹಳ್ಳಿಯಲ್ಲಿ ರತ್ನ ಸ್ವರೂಪ ಲೇಔಟ್ ಮತ್ತು ಮ ಬೃಂದಾವನ ಲೇಔಟ್, ಸರ್ಜಾಪುರ ರಸ್ತೆಯಲ್ಲಿ ಎಕರೆಗಳ ಸುಖೀಭವ ಮತ್ತು ಆಯುಷ್ಮಾನ್ ಎಂಬ ಇನ್ನೆರಡು ಲೇಔಟುಗಳನ್ನು ಈಗಾಗಲೇ ಹಚ್ಚಿಕೊಂಡಿರುವ ಭಕ್ತವತ್ಸಲಮ್ ಹೆಸರಿಗಷ್ಟೇ ರಸಂಪರ್ಕ ನೌಕರರ ಸೊಸೈಟಿಯ ಅಧ್ಯಕ್ಷನಾದರೂ ನಲ್ಲಿ ಫುಲ್‌ಟೈಮ್ ರಿಯಲ್ ಎಸ್ಟೇಟ್ ಖದೀಮ! ಬಿಸ್ಪ್ ಕ್ಲಬ್ ಅರುಣಾಚಲಮ್ ಎಂಬ ರಿಯಲ್ ಟ್ ಕಳುವಿನ ಗರಡಿಯಲ್ಲೇ ರಿಯಲ್ ಎಸ್ಟೇಟ್ ಹಿಡಿದ ಭಕ್ತವತ್ಸಲಮ್‌ನ ಐಷಾರಾಮಿ ಬಂಗಲೆ, ಟಿಕೋಟಿ ಬೆಲೆಬಾಳುವ ವಿದೇಶಿ ಕಾರುಗಳು, ದಿನದ ಗಂಟೆಯೂ ಬಂದೂಕುಧಾರಿ ಗನ್‌ಮನ್‌ಗಳ ಗಾವಲು, ಪ್ರತಿ ಸಂಜೆಯಾದರೆ ವಿದೇಶಿ ಸ್ಕಾಚ್‌ಗಳ , ಆತನನ್ನು ಹುಡುಕಿ ಬರುವ ತಮಿಳು ನಟಿಯರ ; ಹೀಗೆ ಚಿತ್ರವಿಚಿತ್ರ ಖಯಾಲಿಗಳ ಭಕ್ತವತ್ಸಲಮ್ ತ್ತು ಕಮ್ಮಿಯೆಂದರೂ ಸಾವಿರ ಕೋಟಿಯ ಭೂಪತಿ. ಂಥವನು 2009 ರ ಹೊತ್ತಿಗೆ ಇದ್ದಕ್ಕಿದ್ದಂತೆ ಸೂರಿಗೆ ದಾಳಿಯಿಡುತ್ತಾನೆ. ಇಲವಾಲ ಹೋಬಳಿಯ ವಾಡಿ ಸುತ್ತಮುತ್ತ 1300 ಎಕರೆಗಳಷ್ಟು ಕೃಷಿ ಮಿಯನ್ನು ಖರೀದಿಸಿದ್ದೇ ಅಲ್ಲಿ, ಒಂದರ ಪಕ್ಕ ದರಂತೆ ಆನಂದ ಸಾಗರ, ಆತ್ಮಾನಂದ ಸಾಗರ, ಾನಂದ ಸಾಗರ, ಕುಬೇರನಾನಂದ ಸಾಗರ, ನಿತ್ಯಾನಂದ ರ, ಪರಮಾನಂದ ಸಾಗರ, ಸುಖಾನಂದ ಸಾಗರ; ದಿ ಏಳು ಭರ್ಜರಿ ಲೇಔಟುಗಳನ್ನು ಆರಂಭಿಸಿದ. ಷವೆಂದರೆ ಮೈಸೂರು ತಾಲ್ಲೂಕು ಇಲವಾಲ ಬೆಳವಾಡಿ ದ ಈ 1300 ಎಕರೆಗಳ ಕೃಷಿ ಭೂಮಿಯನ್ನು ಕಾಮ್ ಸೊಸೈಟಿಗೆ ಬಡರೈತರನ್ನು ಬೆದರಿಸಿ ಸಿಕೊಟ್ಟಿದ್ದು ಹಾಲಿ ವೈದ್ಯಕೀಯ ಶಿಕ್ಷಣ ಸಚಿವ ಮದಾಸ್‌ರ ಖಾಸಾ ತಮ್ಮ ಶ್ರೀಕಾಂತ್!

ಮಂತ್ರಿ ರಾಮದಾಸ್ ತಮ್ಮ

ಮಂತ್ರಿ ರಾಮದಾಸ್ ತಮ್ಮ ಶ್ರೀಕಾಂತ್ ಮತ್ತು ರ್ಡಿ ಶ್ರೀವಾಸ್ತವ ಸೇರಿಕೊಂಡು ಎಸ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ. ಎಂಬ ಖಾಸಗಿ ಕಂಪೆನಿಯನ್ನು ಟ್ಟಿಹಾಕಿ ಅದರ ಮೂಲಕ ರೈತರಿಂದ ಭೂಮಿ ಖರೀದಿಸಿ ನ್ನು ಟೆಲಿಕಾಮ್ ಸೊಸೈಟಿಗೆ ಮಾರಿದ್ದರು. ಯಾರೇ ನಲ್ಲದ ಅನುಕೂಲಸ್ಥ ಆಸಾಮಿ ಕೃಷಿ ಭೂಮಿ ೀದಿಸಕೂಡದೆಂಬ ಭೂಸುಧಾರಣಾ ಕಾಯ್ದೆಯನ್ನು ಿಸಿ ಮಂತ್ರಿ ರಾಮದಾಸ್ ತಮ್ಮ ಜಮೀನು ಖರೀದಿಸಿ ಅಕ್ರಮವಾಗಿತ್ತು, ಟೆಲಿಕಾಮ್ ಸೊಸೈಟಿಯ ಒಟ್ಟು ಸ್ಯರ ಸಂಖ್ಯೆಯೇ 3500. ಆದರೆ ಭಕ್ತವತ್ಸಲಮ್ ಕಾಮ್ ನೌಕರರಲ್ಲದವರು, ಹೊರರಾಜ್ಯದ ಶ್ರೀಮಂತರು, ಕೊಟ್ಟವರನ್ನೆಲ್ಲ ಸೊಸೈಟಿಯ ಸಹಸದಸ್ಯರೆಂದು ಲೆ ಸೃಷ್ಟಿಸಿಕೊಂಡಿದ್ದ. ಈ ರೀತಿ ಸರಿಸುಮಾರು ತ್ತು ಸಾವಿರಕ್ಕೂ ಅಧಿಕ ಅಸೋಸಿಯೇಟ್ ಮೆಂಬರ್ ನ್ನು ಮಾಡಿಕೊಂಡು ಅವರಿಂದ 500 ಕೋಟಿ ಪಾಯಿಗಳಷ್ಟನ್ನು ಸಂಗ್ರಹಿಸಿದ್ದ.

ಟೆಲಿಕಾಮ್ ಸೊಸೈಟಿಯೆಂಬುದು ಹೆಸರಿನ ಸಂಘವೇ ರತು ಹೌಸಿಂಗ್ ಸೊಸೈಟಿಯಲ್ಲ, ಸೈಟು ಹಂಚಲು ವುದೇ ಅರ್ಹತೆಯಿಲ್ಲ, ಸಂಗ್ರಹಿಸಿದ 500 ಕೋಟಿಗೆ ಟ್ಟವಿಲ್ಲ; ಮಂತ್ರಿ ರಾಮದಾಸ್ ಅಧಿಕಾರ ಮತ್ತು ಾವದ ಮೂಲಕವೇ ಕೃಷಿ ಭೂಮಿ ಖರೀದಿಸಿ, ಅದನ್ನು ತ ಉದ್ದೇಶಕ್ಕೆ ಪರಿವರ್ತನೆ ಮಾಡಿ, ಒಂದಲ್ಲ ಎರಡಲ್ಲ ಾಸಗಿ ಲೇಔಟುಗಳಿಗೆ ಮೂಡಾದಿಂದ ಮಂಜೂರಾತಿ ಡಿಸಿ, ಇದಕ್ಕೆ ಪಾಲಿಕೆ ನಿಯಂತ್ರಣ ಮಂಡಳಿ ತಕರಾರಿತ್ತದ ಗ ಮಾಡಿ, ನಗರಾಭಿವೃದ್ಧಿ ಇಲಾಖೆಯ ಪ್ರಧಾನ ರ್ಯದರ್ಶಿಯ ಬಾಯಿಯನ್ನೂ ಮುಚ್ಚಿಸಿದ ಎಸ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಕಂಪೆನಿಯ ಧಣಿ ಶ್ರೀಕಾಂತ್ ಇದೊಂದೇ ಬಾಬತ್ತಿನಿಂದ ನೂರು ಕೋಟಿಗೂ ಅಧಿಕ ಮೊತ್ತದ ಲಾಭ ಮಾಡಿಕೊಂಡಿದ್ದ!

ಅಸಲಿಗೆ ತಮ್ಮ ಶ್ರೀಕಾಂತ್‌ನನ್ನು ಮುಂದೆ ಬಿಟ್ಟು ಇಡೀ ಟೆಲಿಕಾಮ್ ಸೊಸೈಟಿಯ ಹಗಲುದರೋಡೆಯ ಸೂತ್ರ ಹಿಡಿದದ್ದೇ ಮಂತ್ರಿ ರಾಮದಾಸ್!

ಇದೆಲ್ಲವನ್ನೂ ಆರ್‌ಟಿಐ ಮೂಲಕ ಕಲೆ ಹಾಕಿದ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ರೆಡ್ ಆ್ಯರೋ ಭಾಸ್ಕರ್ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದೇ ತಡ ಆನಂದೇ ಗೌಡ ಎಂಬ ನಿವೃತ್ತ ಅಧಿಕಾರಿಯನ್ನು ಈ ಬಗ್ಗೆ ತನಿಖೆಗೆ ನೇಮಿಸಲಾಯ್ತು. ಇನ್ನೇನು ಇಡೀ ಟೆಲಿಕಾಮ್ ಸೊಸೈಟಿಯ ಹಗರಣ ಬಯಲಾಗಿ ಸಂಬಂಧಪಟ್ಟ ಅಧಿಕಾರಿಗಳು, ಮಂತ್ರಿ ರಾಮದಾಸ್ ತಮ್ಮ ಮತ್ತು ಸೊಸೈಟಿಯ ಖದೀಮ ಭಕ್ತವತ್ಸಲಮ್ ಎಲ್ಲರೂ ಜೈಲು ಪಾಲಾಗುವುದು ಗ್ಯಾರಂಟಿ ಎಂದೇ ಮಾಹಿತಿ ಅಧ್ಯಯನ ಕೇಂದ್ರದ ಗ್ಯಾಂಗ್ ಮೆಂಬರ್‌ಗಳ ಲೆಕ್ಕಾಚಾರವಾಗಿತ್ತು.

ಉಲ್ಟಾ ಹೊಡೆದದ್ದು.....!

ದೂರು ಕೊಟ್ಟ ಮೂರು ತಿಂಗಳಲ್ಲೇ ಶಿವಾನಂದ ಸರ್ಕಲ್ ಬಳಿಯಿರುವ ಗೋಲ್ಡ್ ಫಿಂಚ್ ಹೋಟೆಲಿನಲ್ಲಿ ಸೊಸೈಟಿ ಅಧ್ಯಕ್ಷ ಭಕ್ತವತ್ಸಲಮ್, ಸೆಕ್ರೆಟರಿ ಮಂಜನಾಥ್, ರೆಡ್ ಆ್ಯರೋ ಭಾಸ್ಕರ ಮತ್ತು ವೀರೇಶ್ ಬೆಳ್ಳೂರು ಸೇರಿಕೊಂಡು ಡೀಲಿಗಿಳಿದಿದ್ದಾರೆಂಬ ಮಾಹಿತಿ ಅವರದೇ ಕೆಲ ಸಹಚರರಿಗೆ ಸಿಕ್ಕಿದೆ. ಇದಾದನಂತರ ಲೋಕಾಯುಕ್ತ ವಿಜಿಲೆನ್ಸ್‌ನ ಆನಂದೇ ಗೌಡನೇ ಈ ಮಾಹಿತಿ ವೀರರನ್ನು ಮೈಸೂರಿಗೆ ಕರೆದೊಯ್ದು ರಾಮದಾಸ್ ತಮ್ಮನನ್ನು ಭೇಟಿ ಮಾಡಿಸಿ ವ್ಯವಹಾರ ಕುದುರಿಸಿದ ಸುದ್ದಿಯೂ ಬಂದಿದೆ. ಕುತೂಹಲ ತಾಳದೆ ಕೆಲವರು ನೇರವಾಗಿ ಲೋಕಾಯುಕ್ತಕ್ಕೇ ಹೋಗಿ ರೆಡ್ ಆ್ಯರೋ ಭಾಸ್ಕರನ ದೂರಿನ ಕುರಿತಂತೆ ವಿಚಾರಿಸಿದ್ದಾರೆ. ಎಂಥಾ ಆಘಾತ ಕಾದಿತ್ತೆಂದರೆ ದೂರು ಕೊಟ್ಟ ಮೂರು ತಿಂಗಳಿಗೇ ಅಂದರೆ 2009 ರ ಅಕ್ಟೋಬರ್ 27 ರಂದು ಇದೇ ಭಾಸ್ಕರ್ ತಾನು 'ಸೊಸೈಟಿ ವಿರುದ್ಧ ನೀಡಿದ ದೂರನ್ನು ವಾಪಸ್ಸು ಪಡೆಯುತ್ತೇನೆಂದು' ಲೋಕಾಯುಕ್ತರಿಗೆ ವಿಶೇಷ ಮನವಿಯೊಂದನ್ನು ಸಲ್ಲಿಸಿದ್ದ!

ಅಲ್ಲಿಗೆ ಟೆಲಿಕಾಮ್ ಸೊಸೈಟಿ ಮತ್ತು ಮಾಹಿತಿ ಅಧ್ಯಯನ ಕೇಂದ್ರದ ದೇಶಭಕ್ತರ ಮಧ್ಯೆ 50 ಲಕ್ಷ ರೂಪಾಯಿಗಳ ಡೀಲು ಕುದುರಿದೆಯೆಂದೂ, ಹಾಗೇ ಟೆಲಿಕಾಮ್ ಖದೀಮ ಭಕ್ತವತ್ಸಲಮ್‌ನಿಂದ ಕಿತ್ತ 50 ಲಕ್ಷವನ್ನು ಭಾಸ್ಕರ್, ವೀರೇಶ್, ವಿಕ್ರಮ್ ಸಿಂಹ, ಅಮರೇಶ್ ಮತ್ತು ವಸಂತ್ ಇತ್ಯಾದಿಗಳೆಲ್ಲ ಯೋಗ್ಯತಾನುಸಾರ ಹಂಚಿಕೊಂಡಿದ್ದಾರೆಂದೂ, ಇದೇ ದುಡ್ಡಲ್ಲಿ ಭಾಸ್ಕರ್ ತನ್ನ ಶ್ರೀನಗರದ ಮನೆಯನ್ನು ಎರಡಂತಸ್ತಿಗೆ ಏರಿಸಿದ್ದಾನೆಂದೂ ವೆಂಕಟೇಶ್ ಬೋವಿಗೆ ಮಾಹಿತಿ ಸಿಕ್ಕಿದೆ. ಕೂಡಲೇ ತಾನೂ ಒಂದು ಅರ್ಜಿ ತಯಾರಿಸಿದ್ದೇ ಯಾವುದೇ ಕಾರಣಕ್ಕೂ ಟೆಲಿಕಾಮ್ ಸೊಸೈಟಿಯ ಅವ್ಯವಹಾರದ ವಿರುದ್ಧ ತನಿಖೆ ಕೈಬಿಡಕೂಡದೆಂದೂ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕೆಂದೂ ಪ್ರತ್ಯೇಕ ದೂರು ಸಲ್ಲಿಸಿಬಿಟ್ಟ.

ಯಾವತ್ತು ವೆಂಕಟೇಶ್ ಬೋವಿ ತಮ್ಮ ವಿರುದ್ಧ ತಿರುಗಿಬಿದ್ದು ಟೆಲಿಕಾಮ್ ಸೊಸೈಟಿಯ ಅಕ್ರಮವನ್ನು ಕೆದಕುತ್ತಿದ್ದಾನೆಂದು ನಿಕ್ಕಿಯಾಯಿತೋ ವೀರೇಶ್, ಭಾಸ್ಕರ್ ಗ್ಯಾಂಗ್ ಪ್ರತೀಕಾರಕ್ಕಿಳಿದಿದೆ. ತಮ್ಮ ವಿಜಯನಗರದ ಕಚೇರಿಗೆ ನುಗ್ಗಿದ್ದೇ ವೆಂಕಟೇಶ್ ಬೋವಿ ಕೊಲೆ ಬೆದರಿಕೆ ಹಾಕಿದ ನೆಂದೂ, ಇನ್ನೆಲ್ಲಿಂದಲೋ, ಬೆದರಿಕೆ ಕರೆ ಮಾಡಿದನೆಂದೂ ವಿವಿಧ ಪೊಲೀಸ್ ಠಾಣೆಗಳಿಗೆ ದೂರು ದಾಖಲಿಸಿದ್ದಾರೆ. ಇದಕ್ಕೆ ಪ್ರತಿಯಾಗಿ, ತನ್ನನ್ನು ಕೊಲ್ಲಲು ಕತ್ರಿಗುಪ್ಪೆ ಲಿಂಗನ ಹಂತಕ ಸೈಕಲ್ ರವಿಗೆ ರೆಡ್ ಆ್ಯರೋ ಭಾಸ್ಕರ್ ಸುಪಾರಿ ಕೊಟ್ಟಿದ್ದಾನೆಂದೂ ಸೈಕಲ್ ರವಿ ಸಹಚರರಿಂದ ತನಗೆ ಬೆದರಿಕೆ ಕರೆ ಬರುತ್ತಿದೆಯೆಂದು ತನಗೆ ಪ್ರಾಣ ರಕ್ಷಣೆ ಬೇಕೆಂದೂ ವೆಂಕಟೇಶ್ ಬೋವಿ ಜೆ.ಪಿ.ನಗರ ಪೊಲೀಸರಿಗೆ ದೂರಿತ್ತಿದ್ದಾನೆ. ಪೊಲೀಸರು ಭಾಸ್ಕರ್ ಮತ್ತು ವಿರೇಶ್‌ರನ್ನು ಕರೆಸಿ ವಾರ್ನ್ ಮಾಡಿದ್ದೂ ಆಗಿದೆ. ಆದರೆ ಇಲ್ಲಿಗೇ ಇದು ನಿಲ್ಲುತ್ತಾ?


ಟೆಲಿಕಾಮ್ ಸೊಸೈಟಿಯ 500 ಕೋಟಿಯ ಅಕ್ರಮಕ್ಕೆ ಕೈಯಿಟ್ಟು ಒಂದು ಗ್ಯಾಂಗ್ ದುಡ್ಡು ಹೊಡೆದರೆ ಮತ್ತೊಂದು ಗ್ಯಾಂಗ್ ಅದರ ವಿರುದ್ಧ ಕತ್ತಿ ಮಸೆಯುತ್ತಿದೆ. ಈ ಗುಂಪುಗಳ ನಡುವೆ ಜಗಳ ತಂದಿಟ್ಟು ತಮಾಷೆ ನೋಡುತ್ತಿದ್ದಾನೆ ಖದೀಮ ಭಕ್ತವತ್ಸಲಮ್. ಯಾರು ಯಾರನ್ನು ಮುಗಿಸುತ್ತಾರೋ ಯಾರ ಜೀವಕ್ಕೆ ಆಪತ್ತು ಕಾದಿದೆಯೋ ಗೊತ್ತಿಲ್ಲ. ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ದೇಶಭಕ್ತಿಯೆಂಬುದು ಸದ್ಯ ತಮ್ಮದೇ ತಂಡದ ಸಹಚರನನ್ನು ಮುಗಿಸುವ ಮಟ್ಟಕ್ಕೆ ಬಂದುನಿಂತಿದೆ. ಇದು ಒಂದು ಪ್ರಕರಣ ಮಾತ್ರ. ಇಂಥ ಅದೆಷ್ಟು ದೂರುಗಳಿಂದ ಇದೇ ಆರ್‌ಟಿಐ ವೀರರು ದೋಚಿದ ಮೊತ್ತವೆಷ್ಟು? ಮಾಹಿತಿ ಹಕ್ಕು ಕಾಯ್ದೆಯೆಂಬುದು ವಸೂಲಿಕೋರರು, ಬ್ಲ್ಯಾಕ್‌ಮೇಲರ್‌ಗಳು, ರೋಲ್‌ಕಾಲ್ ಖದೀಮರ ಪಾಲಿನ ಅಯುಧವಾದರೆ ಇದಕ್ಕಿಂತ ಇನ್ನೇನಾಗಲು ಸಾಧ್ಯ?

ಲೋಕಾಯುಕ್ತರ ತನಿಖೆ ಇನ್ನಷ್ಟು ಚುರುಕಾಗಲಿ. ವೆಂಕಟೇಶ್ ಬೋವಿಯಂಥವರಿಗೆ ಮಾಹಿತಿಕೋರರ ಗೂಂಡಾಗಿರಿ ವಿರುದ್ಧ ರಕ್ಷಣೆ ಸಿಗಲಿ.

● ಡಾ. ಸೋಮನಾಥ್

ತುಮಕೂರು: ಭೂಗಳ್ಳರ ಆಶ್ರಯದಲ್ಲಿ ಪತ್ರಕರ್ತರ ಸಮ್ಮೇಳನ

ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಪತ್ರಿಕಾರಂಗ ಆಗಿಂದಾಗ್ಗೆ ತನ್ನ ಮುಂದಿನ ಸವಾಲುಗಳ ಬಗ್ಗೆ ಚರ್ಚೆ ಮಾಡಿಕೊಳ್ಳಬೇಕಾದ್ದು ಅಪೇಕ್ಷಣೀಯವಾದ ಒಂದು ಕ್ರಿಯೆ. ಹಾಗಾಗಿ ರಾಷ್ಟ್ರೀಯಮಟ್ಟದಲ್ಲಿ ಪತ್ರಕರ್ತರ ಸಮ್ಮೇಳನಗಳು ನಡೆಯುತ್ತಾ ಬಂದಿವೆ. ಇಧೇ ತಿಂಗಳ 12 ಮತ್ತು 13ರಂದು ತುಮಕೂರಿನಲ್ಲಿ ಭಾರತೀಯ ಕಾರ್ಯನಿರತ ಪತ್ರಕರ್ತರ 65ನೇ ರಾಷ್ಟ್ರೀಯ ಅಧಿವೇಶನವನ್ನು ಆಯೋಜಿಸಲಾಗಿದೆ. ಹಾಗೆ ನೋಡಿದರೆ ಇದು ತುಮಕೂರಿನಲ್ಲಿ ನಡೆಯುತ್ತಿರುವ 2ನೇ ರಾಷ್ಟ್ರೀಯ ಮಹಾಮೇಳ.


ಸೊಗಡು ಶಿವಣ್ಣ


ಆದರೆ ಈ ಮೇಳವನ್ನು ಸಂಘಟಿಸಿರುವ ರೀತಿಯನ್ನು ನೋಡಿದರೆ ಇದು ಯಾವ ಪುರುಷಾರ್ಥಕ್ಕಾಗಿ ನಡೆಯುತ್ತಿದೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ನಾನಾ ಗುಂಪುಗಾರಿಕೆಗಳು, ರಾಜಕೀಯಗಳು ಹಾಗೂ ಎತ್ತುವಳಿ ವ್ಯವಹಾರಗಳಿಂದಾಗಿ ಹಲವಾರು ಪ್ರಜ್ಞಾವಂತ ಪತ್ರಕರ್ತರಿಗೆ ಇರಿಸುಮುರಿಸು ಉಂಟಾಗಿದೆ.

ಮೊದಲನೆಯದಾಗಿ ಸಮ್ಮೇಳನ ನಡೆಯುವ ಸ್ಥಳವೇ ಅತ್ಯಂತ ವಿವಾದಗ್ರಸ್ತವಾದುದು. ಜೆಡಿಎಸ್ ಪಕ್ಷದ ವಿಧಾನಪರಿಷತ್ ಸದಸ್ಯ ಡಾ.ಎಂ.ಆರ್.ಹುಲಿನಾಯ್ಕರ್‌ಗೆ ಸೇರಿದ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆವರಣವೇ ಸಮ್ಮೇಳನದ ಸಭಾಂಗಣ. ಸಭಾಂಗಣದ ಪೆಂಡಾಲ್ ಮುಂತಾದ ವ್ಯವಸ್ಥೆಯನ್ನು ಈ ಎಂಎಲ್‌ಸಿಯೇ ವಹಿಸಿಕೊಂಡಿದ್ದಾರೆ. ಈ ಹುಲಿನಾಯ್ಕರ್ ಸರ್ಕಾರಿ ಗೋಮಾಳದ ಜಾಗದಲ್ಲಿ ಇಂಜಿನಿಯರಿಂಗ್ ಕಾಲೇಜು ನಿರ್ಮಾಣ ಮಾಡಿದ್ದಾರೆಂದು ಲೋಕಾಯುಕ್ತ ಕೋರ್ಟಿನಲ್ಲಿ ಒಂದು ಕ್ರಿಮಿನಲ್ ದಾವೆ ಕೂಡ ದಾಖಲಾಗಿದೆ. ಇದೇ ಪ್ರಕರಣದಲ್ಲಿ ಸದರಿ ಜಮೀನು ಸರ್ಕಾರಿ ಜಮೀನು ಎಂದು ಈಗಾಗಲೇ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ನ್ಯಾಯಾಲಯದಿಂದ ಸದ್ಯ ತಡೆಯಾಜ್ಞೆ ಇರುವುದರಿಂದಾಗಿ ಡಿಸಿ ಆದೇಶ ಜಾರಿಗೆ ಬಂದಿರುವುದಿಲ್ಲ. ಇಂಥಾ ಗಂಭೀರ ಆಪಾದನೆಗಳನ್ನು ಹೊತ್ತಿರುವ ವ್ಯಕ್ತಿಯೊಬ್ಬನ ಆಶ್ರಯದಲ್ಲಿ ಸಮ್ಮೇಳನ ನಡೆಸುವುದು ಪತ್ರಕರ್ತರ ವೃತ್ತಿಗೆ ಶೋಭೆ ತರುತ್ತದೆಯೆ?

ಎರಡನೆಯದಾಗಿ ಈ ಸಮ್ಮೇಳನ ದಿನಾಂಕ 12, 13 ಮತ್ತು 14 ಮೂರು ದಿನಗಳು ಎಂದು ನಿಗದಿಯಾಗಿದ್ದರೂ ವಾಸ್ತವದಲ್ಲಿ 12 ಮತ್ತು 13 ಎರಡೇ ದಿನಕ್ಕೆ ಸೀಮಿತವಾಗಿದೆ. ಕೊನೆಯ ದಿನವನ್ನು ಅಧಿಕೃತವಾಗಿ ಪ್ರವಾಸಕ್ಕೆ ಮೀಸಲಿರಿಸಲಾಗಿದೆ. ಇರಲಿ, ಪತ್ರಕರ್ತರಿಗೂ ಸ್ವಲ್ಪ ರಿಲ್ಯಾಕ್ಸ್ ಅಂತ ಇರಬೇಕಲ್ಲಾ. ಸಮಸ್ಯೆ ಅದಲ್ಲ, ಇನ್ನುಳಿದ ಎರಡು ದಿನಗಳ ಸಮ್ಮೇಳನ ಹೇಗೆ ನಡೆಯುತ್ತದೆ ಎಂಬುದು ಮುಖ್ಯ.

ಮೊದಲನೇ ದಿನ 10.30ಕ್ಕೆ ಉದ್ಘಾಟನಾ ಗೋಷ್ಠಿ ಪ್ರಾರಂಭವಾದರೂ ಆ ಗೋಷ್ಠಿಗೂ ಪತ್ರಕರ್ತರ ಸಮ್ಮೇಳನದ ಅಜೆಂಡಾಗೂ ಯಾವ ಬಾದರಾಯಣ ಸಂಬಂಧವೂ ಇಲ್ಲ. ಯಾಕೆಂದರೆ ಆ ಗೋಷ್ಠಿ ಒಂದು ಸರ್ವಪಕ್ಷ ರಾಜಕೀಯ ವೇದಿಕೆಯಾಗಿ ಮಾರ್ಪಟ್ಟಿದೆ. ಶತಾಯುಷಿ ಶಿವಕುಮಾರ್ ಸ್ವಾಮಿಗಳ ಮಹಾಸಾನ್ನಿಧ್ಯದಲ್ಲಿ ಈ ಗೋಷ್ಠಿಯನ್ನು ಸಿಎಂ ಜಗದೀಶ್ ಶೆಟ್ಟರ್ ಉದ್ಘಾಟನೆ ಮಾಡುತ್ತಾರೆ. ರೈಲ್ವೆ ಮಂತ್ರಿ ಕೆಎಚ್‌ಮುನಿಯಪ್ಪ ಸ್ಮರಣಸಂಚಿಕೆ ಬಿಡುಗಡೆ ಮಾಡುತ್ತಾರೆ. ಜಿಲ್ಲಾ ಮಂತ್ರಿ ಸೊಗಡು ಶಿವಣ್ಣ ಇನ್ನೇನೋ ಬಿಡುಗಡೆ ಮಾಡುತ್ತಾರೆ. ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ತುಮಕೂರಿನ ಎಂಪಿ ಬಸವರಾಜು, ಎಂಎಲ್‌ಸಿ ಹುಲಿನಾಯ್ಕರ್ - ಹೀಗೆ ಸಕಲೆಂಟು ರಾಜಕಾರಣಿಗಳ ಭಾಷಣವನ್ನು ಒಟ್ಟಿಗೆ ಕೇಳುವಂಥಾ ಸುಯೋಗವನ್ನು ಮೇಳದ ಸಂಘಟಕರು ಕಲ್ಪಿಸಿದ್ದಾರೆ. ಈ ಮೇಲಿನ ಮಹಾನುಭಾವರ ಮಾತುಗಳನ್ನು ಕೇಳಲೆಂದು ದೇಶದ ನಾನಾ ಮೂಲೆಗಳಿಂದ ಸಾವಿರಾರು ಪತ್ರಕರ್ತರು ಧಾವಿಸಿ ಬರುತ್ತಿರುವುದನ್ನು ಪರಿಸ್ಥಿತಿಯ ಕ್ರೂರ ವ್ಯಂಗ್ಯವೆನ್ನದೇ ವಿಧಿಯಿಲ್ಲ.

ಡಾ. ಹುಲಿನಾಯ್ಕರ್



ಇನ್ನು ಮಧ್ಯಾಹ್ನ 3.30 ರಿಂದ ಸಂಜೆ 6 ರವರೆಗೆ ನಡೆಯುವ ಗೋಷ್ಠಿಯಲ್ಲಿ ಪತ್ರಿಕಾರಂಗಕ್ಕೆ ಸಂಬಂಧಿಸಿದ ಕೆಲವು ಉಪಯುಕ್ತ ವಿಷಯಗಳ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿದೆ. ದಿನೇಶ್ ಅಮಿನ್‌ಮಟ್ಟುರಂಥಾ ಸಂವೇದನಾಶೀಲ ಪತ್ರಕರ್ತರು ಆ ಗೋಷ್ಠಿಯಲ್ಲಿ ಮಾತನಾಡುವುದೇ ಬಹುಶಃ ಈ ಕಾರ್ಯಕ್ರಮದ ಸಾರ್ಥಕತೆ ಎನಿಸಿಕೊಳ್ಳಬಹುದೇನೋ.

ಇನ್ನು ಎರಡನೇ ದಿನ ಬೆಳಗ್ಗೆ 10.30ರಿಂದ 12.30ರವರೆಗೆ ಕೆಲವು ಹಿರಿಯ ಪತ್ರಕರ್ತರು ಮಾತನಾಡುತ್ತಾರೆ. ದುರಂತವೆಂದರೆ ಈ ಗೋಷ್ಠಿಗೆ ತುಮಕೂರು ವಿಶ್ವವಿದ್ಯಾಲಯದ ಕುಖ್ಯಾತ ಕುಲಪತಿ ಶರ್ಮ ಅಧ್ಯಕ್ಷತೆ ವಹಿಸಲಿದ್ದಾರೆ. ಅಲ್ಲಿಗೆ ಸಮ್ಮೇಳನ ಮುಗಿದಂತೆಯೇ ಸರಿ. ಇನ್ನು ಉಳಿದಿರುವುದು ಸಂಜೆಗೆ ಸಮಾರೋಪ ಕಾರ್ಯಕ್ರಮ ಮಾತ್ರ.

ಸಮಾರೋಪದಲ್ಲಿ ಮತ್ತಷ್ಟು ರಾಜಕಾರಣಿಗಳ ಮಾತು ಕೇಳುವ ಭಾಗ್ಯ ಪತ್ರಕರ್ತರಿಗೆ ಬರಲಿದೆ. ಕೇಂದ್ರ ವಾರ್ತಾ ಮತ್ತು ಪ್ರಚಾರ ಸಚಿವೆ ಅಂಬಿಕಾ ಸೋನಿ, ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ, ಕನ್ನಡ ಮತ್ತು ಸಂಸ್ಕೃತಿ ಸಚಿವ ಗೋವಿಂದ ಕಾರಜೋಳ, ಮುರುಗೇಶ್ ನಿರಾಣಿ, ಮತ್ತೆ ಸೊಗಡು ಶಿವಣ್ಣ ಇತ್ಯಾದಿಗಳ ಮಾಮೂಲಿ ಪಟ್ಟಿ ಇದ್ದೇ ಇದೆ.

ಪತ್ರಕರ್ತರ ಸಮ್ಮೇಳನವನ್ನು ಒಂದು ರೀತಿಯ ಆಲ್ ಪಾರ್ಟಿ ಹುರಿಯತ್ ಕಾನ್ಫರೆನ್ಸ್ ಆಗಿ ಬದಲಾಯಿಸಿದ್ದರ ಒಳಗುಟ್ಟೇನಿರಬಹುದು ಎಂದು ಕೆದಕಿದರೆ ಕಂಡುಬಂದ ಸತ್ಯಾಂಶಗಳಿಷ್ಟು. ಈ ಇಡೀ ಕಾರ್ಯಕ್ರಮದ ಉಸ್ತುವಾರಿ ಹೊತ್ತವರೇ ಪತ್ರಕರ್ತನ ಲೇಬಲ್ ಹಾಕಿಕೊಂಡಿರುವ ಸೊಗಡು ವೆಂಕಟೇಶ್ ಎಂಬ ಬಿಜೆಪಿ ರಾಜಕಾರಣಿ. ಹಾಲಿ ಈತ ಪಾವಗಡ ಪುರಸಭೆಯ ಸದಸ್ಯ. ಈತ ಸಚಿವ ಶಿವಣ್ಣನ ಬಂಟ. ಆ ಧೈರ್ಯದಿಂದಲೇ ಆತ ತನಗೆ ಬೇಕಾದ ಹಾಗೆ ಕಾರ್ಯಕ್ರಮ ರೂಪಿಸಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

ತುಮಕೂರು ಜಿಲ್ಲೆಯವರೇ ಆದ ಹಲವಾರು ಪತ್ರಕರ್ತರಿಗೆ ಕನಿಷ್ಟ ಸೌಜನ್ಯಕ್ಕಾದರೂ ಆಮಂತ್ರಣ ನೀಡಿಲ್ಲವೆಂಬ ಆರೋಪವಿದೆ. ಮತ್ತೊಂದು ಕಡೆ ಈ ಸಮ್ಮೇಳನದ ಹೆಸರಿನಲ್ಲಿ ಎತ್ತುವಳಿ ಬಿರುಸಾಗಿ ನಡೆದಿದೆಯಂತೆ. ಅದ್ಯಾವುದಕ್ಕೂ ಲೆಕ್ಕವೂ ಇಲ್ಲ ಬುಕ್ಕೂ ಇಲ್ಲ. ಈ ಎತ್ತುವಳಿ ವಿಪರೀತವಾಗಿ ಸಚಿವ ಶಿವಣ್ಣನ ಕಿವಿಗೆ ಬಿದ್ದು ತನ್ನ ಗಮನಕ್ಕೆ ಬರದಂತೆ ಹಣ ವಸೂಲಿಗೆ ಇಳಿಯದಂತೆ ಎಚ್ಚರಿಕೆ ನೀಡಿದ್ದಾರೆಂಬ ಸುದ್ದಿ ಬಂದಿದೆ.

ಇನ್ನು ಸಿಕ್ಕವರಿಗೆ ಸೀರುಂಡೆ ಎಂಬಂತೆ ಹಣ ಲಪಟಾಯಿಸಲು ಕೆಲ ಐನಾತಿ ಪತ್ರಕರ್ತರು ಚುರುಕಾಗಿದ್ದಾರಂತೆ. ವಿ.ಭಟ್ಟ ಎಂಬ ಒಬ್ಬ ಪತ್ರಕರ್ತನೊಬ್ಬ ಅಡುಗೆ ಉಸ್ತುವಾರಿ ವಹಿಸಿಕೊಂಡು, ಹೊಸ ಪಾತ್ರೆಗಳನ್ನು ಖರೀದಿಸಬೇಕೆಂಬುದನ್ನೂ ಒಳಗೊಂಡು 8.5 ಲಕ್ಷ ಬಜೆಟ್ ಮಂಡಿಸಿದ್ದನಂತೆ. ಅದಕ್ಕೆ ಅವಕಾಶ ಸಿಗಲಿಲ್ಲವೆಂದು ಮುನಿಸಿಕೊಂಡು ಹೋಗಿದ್ದಾನಂತೆ. ಹೀಗೆ ಈ ಮೇಳದಲ್ಲಿ ಮತ್ತೊಬ್ಬ ಕಲಾಕಾರ ಪತ್ರಕರ್ತ ಕಲಾತಂಡಗಳ ವೆಚ್ಚವೆಂದು 6.5 ಲಕ್ಷ ಬೇಡಿಕೆ ಇಟ್ಟಿದ್ದಾನಂತೆ. ಹೀಗೆ ಈ ಮೇಳದಲ್ಲಿ ಯಾರ್‍ಯಾರು ಎಷ್ಟೆಷ್ಟು ಗೆಬರಿಕೊಳ್ಳಬಹುದು ಎಂದು ಲೆಕ್ಕ ಹಾಕುತ್ತಿರುವ ಹೊತ್ತಿನಲ್ಲಿ ದೂರದ ಊರುಗಳಿಂದ ಬರುವ ಪತ್ರಕರ್ತರಿಗೆ ಊಟ ವಸತಿಯಾದರೂ ಸರಿಯಾಗಿ ಸಿಗಲಿ ಎಂಬುದಷ್ಟೇ ನಮ್ಮ ಹಾರೈಕೆ.

● ಜಂಗಮ



ಗಂಡನೇ ಯಮ ತಾಯಿಯೇ ಕರ್ಮ!

ಪತಿಯ ರೂಪದಿ ಹೊಂಚಿ ಕೂತಿತ್ತು ಮೃತ್ಯು



ಒಂದಲ್ಲ ಎರಡಲ್ಲ ಹತ್ತಾರು ಬಾರಿ ಆಕೆ ಮನೆಯನ್ನೇ ತೊರೆದು ಬಂದಿದ್ದಳು. ಹೇಗಾದರೂ ಮಾಡಿ ಆತನಿಂದ ನನ್ನನ್ನು ಕಾಪಾಡಿ ಎಂದು ಹಿರಿಯ ಪೊಲೀಸ್ ಅಧಿಕಾರಿ ಶಂಕರ್ ಬಿದರಿಯವರೆದುರು ನಿಂತು ಕಣ್ಣೀರಿಟ್ಟಿದ್ದಳು. ಪದೇಪದೇ ಪೊಲೀಸ್ ಠಾಣೆಗಳಿಗೆ ದೂರಿತ್ತಳು. ಕಂಡಕಂಡ ಗೆಳತಿಯರನ್ನೆಲ್ಲ ನೆರವಿಗಾಗಿ ಯಾಚಿಸಿದ್ದಳು. ಊಹ್ಞುಂ... ಯಾರೂ ಆಕೆಯ ನೆರವಿಗೆ ಬರಲಿಲ್ಲ. ಸಾವಿನ ಹೊರತಾಗಿ ಆತನ ಕಪಿಮುಷ್ಠಿಯಿಂದ ಆಕೆಯನ್ನು ಕಾಪಾಡಲು ಬಹುಶಃ ಆ ದೇವರಿಗೂ ಆಸಕ್ತಿಯಿರಲಿಲ್ಲ!

ಅಂತಿಮವಾಗಿ ಸತತ ನಾಲ್ಕು ವರ್ಷಗಳ ಆಕೆಯ ಸುದೀರ್ಘ ಹೋರಾಟಕ್ಕೆ ತೆರೆಬಿದ್ದದ್ದು ಅಕ್ಟೋಬರ್ 9 ರ ಮಂಗಳವಾರಕ್ಕೆ-

ಅದು ಕಿರುತೆರೆ ನಟಿ ಹೇಮಾಶ್ರೀಯ ಕಗ್ಗೊಲೆ!

ಸಾವೆಂಬುದು ತನ್ನ ಗಂಡನ ಅವತಾರ ತಾಳಿಯೇ ಹಿಂಬಾಲಿಸುತ್ತಿದೆಯೆಂಬುದು ಆಕೆಗೆ ಅದ್ಯಾವತ್ತೋ ಅರ್ಥವಾಗಿತ್ತು. ಹೆತ್ತ ತಾಯಿಯ ಮೂಲಕವೇ ಸಾವು ಸವಾರಿ ಬರುತ್ತಿದೆಯೆಂಬುದೂ ಪಕ್ಕಾ ಗೊತ್ತಿತ್ತು. ಜನ್ಮ ಕೊಟ್ಟ ತಂದೆ, ಒಡಹುಟ್ಟ ಅಕ್ಕ ಎತ್ತಾಡಿ ಬೆಳೆಸಿದ ಸಂಬಂಧಿಗಳೆಲ್ಲರೂ ಒಂದಲ್ಲ ಒಂದು ರೂಪದಲ್ಲಿ ತನ್ನನ್ನು ಸಾವಿನ ಬಾಯಿಗೊಡ್ಡುತ್ತಿದ್ದಾರೆಂಬುದು ಆಕೆಗೆ ಸ್ಪಷ್ಟವಾಗಿತ್ತು. ಕೊನೆಗದು ನಿಜವಾಗಿ ಹೋಗಿತ್ತು.

ಕಿರುತೆರೆ ಕಲಾವಿದೆ ಎಚ್.ಎನ್. ಹೇಮಾಶ್ರೀ ದೊಡ್ಡ ಹೆಸರಿನ ನಟಿಯಲ್ಲದಿರಬಹುದು. ಖ್ಯಾತ ತಾರೆಯೂ ಅಲ್ಲ. ಆದರೆ ತನ್ನ ಗಂಡನ ರೂಪದಲ್ಲಿ ಹಿಂಬಾಲಿಸಿದ ಧುರಿತದ ವಿರುದ್ಧ ಆಕೆಯ ಸೆಣಸಾಟವಿತ್ತಲ್ಲ, ಅದು ಸಾಮಾನ್ಯ ಹೆಂಗಸಿಗಾಗಲಿ, ಬೇರೆ ಯಾರೇ ಮಾಮೂಲಿಯ ಮಹಿಳೆಗಾಗಲಿ, ಸಾಧ್ಯವೇ ಇರಲಿಲ್ಲ. ಹಾಗೆ ಆಕೆಯ ಪಾಲಿನ ಅತೀ ದೊಡ್ಡ ವಿಪತ್ತಾಗಿ ಬಂದವನೇ ಬೆಂಗಳೂರಿನ ಕುಖ್ಯಾತ ಲ್ಯಾಂಡ್ ಗ್ರ್ಯಾಬರ್ ಕಮ್ ರಾಜಕಾರಣಿ ಸುರೇಂದ್ರ ಬಾಬು!

ಬನಶಂಕರಿಯ ನಾಗರಾಜ್ ಮತ್ತು ಲೀಲಾವತಿ ದಂಪತಿಗಳ ಇಬ್ಬರು ಹೆಣ್ಣುಮಕ್ಕಳ ಪೈಕಿ ಕೊನೆಯವಳಾದ ಹೇಮಾಶ್ರೀ ಕನ್ನಡ ಕಿರುತೆರೆಯ ಮಟ್ಟಿಗೆ ಮಿನುಗುತಾರೆ ಕಲ್ಪನಾಳ ಹಾಗೇ ಇದ್ದ ನಟಿ. ಆಕೆ ಓದಿದ್ದು ಇಂಜಿನಿಯರಿಂಗ್. ಆದರೆ ಟೀವಿ ನಟಿಯಾಗಿ ಚಾಲ್ತಿಗೆ ಬಂದಿದ್ದು, ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಸೇರಿ ಅಲ್ಲಿ ಕಾಮಿಡಿ ಗಣೇಶ್ ಜೊತೆ ಅಭಿನಯ ಕಲಿತದ್ದು, ಆನಂತರ ನಾಗ್ತಿಹಳ್ಳಿಯ 'ವಠಾರ' ಮೆಗಾ ಧಾರಾವಾಹಿಯಲ್ಲಿ ಮಿಂಚಿದ್ದು, ಫಣಿ ರಾಮಚಂದ್ರರ 'ದಂಡಪಿಂಡ'ಗಳು ಧಾರಾವಾಹಿಯಲ್ಲಿ ಹೆಸರಾಗಿದ್ದು, 'ಸಾಹಸಲಕ್ಷ್ಮಿಯರು' ಸೀರಿಯಲ್ಲಿನ ಮೂಲಕ ಇನ್ನಷ್ಟು ಬೆಳೆದು ಕನ್ನಡದ ಖ್ಯಾತ ನಿರ್ದೇಶಕ ಎಸ್. ನಾರಾಯಣ್ ಪರಮಾಪ್ತೆಯಾಗಿ ವಿಷ್ಣು, ಅಂಬಿ, ಸುದೀಪ್, ಇತ್ಯಾದಿ ಹೆಸರಾಂತ ನಟರೆದುರು ಸೈ ಎನ್ನಿಸಿಕೊಂಡದ್ದು, ಇದೆಲ್ಲವೂ ಕೇವಲ 'ಹೇಮಾಶ್ರೀ' ಎಂಬ ಉದಯೋನ್ಮುಖ ನಟಿಯ ಕೆರಿಯರ್ ಗ್ರಾಫ್ ಮಾತ್ರವಷ್ಟೇ ಅಲ್ಲ, ಆಕೆಯ ಪ್ರತಿಭೆ ಮತ್ತು ಜೀವನಾಸಕ್ತಿಯ ಪ್ರತೀಕದಂತಿತ್ತು!

ಆಕೆ ಸಿಕ್ಕಿದ್ದು ಕಮ್ಮಿ. ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ಕಾಮಿಡಿ ಗಣೇಶ್ ಮತ್ತು ಕೊಟ್ಟಲ್ಲಿಪ್ಪೋ ಕೈ ಹೀರೋ ಧನುಷ್ ಮುಂತಾದವರ ಜೊತೆ ನಟನೆಯ ತರಬೇತಿಯಲ್ಲಿದ್ದಾಗಲೂ ಆಕೆ ಮಿಕ್ಕೆಲ್ಲರಂತೆ ಲವಲವಿಕೆಯಿಂದಿರುತ್ತಿರಲಿಲ್ಲ. ಸ್ವಭಾವತಃ ಅಂತರ್ಮುಖಿ. ಇಂಜಿನಿಯರಿಂಗ್ ಪದವಿ ಪಡೆದೂ ಬಣ್ಣ ಹಚ್ಚಿ ನಟಿಸಲು ಪೀಡಿಸುವ ತಾಯಿ, ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿ ಗಳಿಸಿದ ಪುಡಿಗಾಸನ್ನೂ ಬಿಡದೇ ಕಿತ್ತುಕೊಳ್ಳುವ ತಂದೆ, ತಾನು ಮೆಡಿಕಲ್ ಓದಿ ಡಾಕ್ಟರಾಗಲು ತನ್ನನ್ನು ನಟನೆಗೆ ದಬ್ಬಿದ ಅಕ್ಕ; ಹೀಗೆ ತನ್ನದೇ ಮನೆಯ ತಣ್ಣನೆಯ ಕ್ರೌರ್ಯದ ವಿರುದ್ಧ ಆಕೆಯೊಳಗೊಂದು ಕೊರಗಿತ್ತು.

ತಾಯಿ ಲೀಲಾವತಿ ಪಕ್ಕಾ ಧನಪಿಶಾಚಿ. ತಂದೆ ನಾಗರಾಜ್ ನರಸತ್ತ ನಾಮರ್ಧ. ತೀರ ಸಣ್ಣ ವಯಸ್ಸಿನಲ್ಲಿ ಕೊನೇ ಮಗಳು ಹೇಮಾಶ್ರೀಯನ್ನು ನಟನೆಗೆ ದಬ್ಬಿ ಆಕೆಯ ಗಳಿಕೆಯಲ್ಲೇ ಇಡೀ ಮನೆಯನ್ನು ಸಂಭಾಳಿಸುವ ಅಸಹ್ಯಕ್ಕೆ ಕೈಯಿಟ್ಟಿದ್ದೂ ತಾಯಿಯೆ. ಅದಕ್ಕಿದ್ದ ಕಾರಣವೊಂದೆ. ಅದು ಹೇಮಾಶ್ರೀಯ ಸೌಂದರ್ಯ. ರೂಪದಲ್ಲಿ ಅಕ್ಕನಿಗಿಂತಲೂ ಸುಂದರಿಯಾಗಿದ್ದ ಹೇಮಾಶ್ರೀಯನ್ನೇ ಬಣ್ಣಕ್ಕೆ ದಬ್ಬಿದ ತಾಯಿ ಅದೇ ದುಡ್ಡಿನಲ್ಲಿ ಹಿರಿಮಗಳು ರೂಪಶ್ರೀಯನ್ನು ಡಾಕ್ಟರ್ ಓದಿಸತೊಡಗಿದ್ದಳು.

ಮೊದಮೊದಲು ಚಿಕ್ಕಪುಟ್ಟ ಪಾತ್ರ ಮಾಡುತ್ತಿದ್ದ ಹೇಮಾಶ್ರೀ ಕಗ್ಗದಾಸಪುರದ ಕುಖ್ಯಾತ ಲ್ಯಾಂಡ್ ಗ್ರ್ಯಾಬರ್ ಸುರೇಂದ್ರ ಬಾಬುವಿನ ಕಣ್ಣಿಗೆ ಬಿದ್ದದ್ದು 2008 ರಲ್ಲಿ. ಆ ಹೊತ್ತಿಗಾಗಲೇ ತೆಲುಗಿನ 'ನೀ ಸುಖಮೆ ನೇ ಕೋರುಕುನ್ನ...!' ಎಂಬ ಮೆಗಾ ಸೀರಿಯಲ್ಲಿನಲ್ಲಿ ನಟಿಸುತ್ತಿದ್ದ ಹೇಮಾಶ್ರೀಯನ್ನು ಡೈರೆಕ್ಟರ್ ಎಸ್. ನಾರಾಯಣ್ ಇನ್ನಿಲ್ಲದಂತೆ ನಂಬಿಸಿಬಿಟ್ಟಿದ್ದ. "ನಿನ್ನನ್ನು ಹೀರೋಯಿನ್ ಮಾಡ್ದೇ ಹೋದ್ರೆ ನಾನು ನಾರಾಯಣೇ ಅಲ್ಲ..." ಎಂದು ಮಾತುಕೊಟ್ಟಿದ್ದ ನಾರಾಯಣ್ ಮೊದಲಿಗೆ ಹೇಮಾಶ್ರೀಯನ್ನು ಹಿರಿತೆರೆಗೆ ಪರಿಚಯಿಸಿದ್ದು ವಿಷ್ಣು ಮೂಲಕ. ವಿಷ್ಣು-ಶೃತಿ ತಾರಾಗಣವಿದ್ದ 'ಸಿರಿವಂತ' ಚಿತ್ರದಲ್ಲಿ ಹೇಮಾಶ್ರೀ ವಿಷ್ಣು ಮಗಳಾಗಿ ನಟಿಸಿದಳಾದರೂ ಅದರಿಂದ ಲಕ್ಕೇನೂ ಕುದುರಲಿಲ್ಲ.

ಇದಾದನಂತರ ಆದೇ ಎಸ್. ನಾರಾಯಣ್ ತನ್ನ ಮುಂದಿನ ಚಿತ್ರ 'ವೀರಪರಂಪರೆ'ಯಲ್ಲಿ ಹೇಮಾಶ್ರೀಗೊಂದು ವಿಶಿಷ್ಟ ಪಾತ್ರವಿಟ್ಟಿದ್ದ. ಅಂಬರೀಷ್ ಮತ್ತು ವಿಜಯಲಕ್ಷ್ಮಿ ಸಿಂಗ್ ಮಗಳಾಗಿ ಸುದೀಪ್ ಎದುರು ಹೇಮಾಶ್ರೀ ನಟಿಸಿದ 'ವೀರಪರಂಪರೆ' ಸಾಧಾರಣ ಚಿತ್ರವಾಗಿತ್ತೇ ಹೊರತು ವಿಶೇಷ ಗಮನವೇನೂ ಸೆಳೆಯಲಿಲ್ಲ. ಹಾಗಂತ ನಾರಾಯಣ್ ಕೈಬಿಡಲಿಲ್ಲ. ತನ್ನ ಮಗದೊಂದು ಚಿತ್ರ 'ವರ್ಷ'ದಲ್ಲೂ ಮತ್ತೆ ಹೇಮಾಶ್ರೀಗೆಂದೇ ಪಾತ್ರವೊಂದನ್ನು ಸೃಷ್ಟಿಸಿದ. ವಿಷ್ಣು ನಟಿಸಿದ್ದ 'ವರ್ಷ'ದಲ್ಲಿ ಆತನ ಮೂವರು ತಂಗಿಯರ ಪೈಕಿ ಹೇಮಾಶ್ರೀಯ ಪಾತ್ರಕ್ಕೇ ಹೆಚ್ಚು ಪ್ರಾಮುಖ್ಯತೆಯಿತ್ತಾದರೂ ಅದು ಆಕೆಯನ್ನು ಹೀರೋಯಿನ್ ಮಾಡುವಷ್ಟು ಪ್ರಬಲವಾಗಿರಲಿಲ್ಲ.



ಹೇಮಾಶ್ರೀ ಹೀರೋಯಿನ್ ಆಗದಿದ್ದರೇನಂತೆ, ಆಕೆ ನಟಿಸಿದ ಯಾವ ಚಿತ್ರವೂ ಹಿಟ್ಟಾಗದೇ ಹೋದರೇನಂತೆ. ದೌರ್ಭಾಗ್ಯದ ಅಕೌಂಟಂತೂ ತೆರೆದಾಗಿತ್ತು!

ಆದೇ ಹೊತ್ತಿಗೆ ಬಿಜೆಪಿ ತೊರೆದು ಜೆಡಿಎಸ್‌ಗೆ ಕಾಲಿಟ್ಟಿದ್ದ ಸುರೇಂದ್ರ ಬಾಬುಗೆ ನಂದೀಶ್ ರೆಡ್ಡಿ ಮತ್ತು ಸಿ.ವಿ. ರಾಮನ್‌ನಗರದ ಬಿಜೆಪಿ ಶಾಸಕ ರಘು ವಿರುದ್ಧ ಆಕ್ರೋಶವಿತ್ತು. ಬಿಬಿಎಂಪಿ ಎಲೆಕ್ಷನ್ನಿಗೂ ಟಿಕೆಟ್ ನೀಡದೆ ಎಮ್ಮೆಲ್ಲೇ ಎಲೆಕ್ಷನ್ನಿಗೂ ಮಣೆಹಾಕದೆ ನಿರ್ಲಕ್ಷಿಸಿದ ಶಾಸಕ ರಘು ಮತ್ತು ನಂದೀಶ್ ರೆಡ್ಡಿ ವಿರುದ್ಧ ಜಿದ್ದಿಗೆ ಬಿದ್ದೇ ದೇವೇಗೌಡರ ಪಾಳಯ ಸೇರಿಕೊಂಡಿದ್ದ ಸುರೇಂದ್ರ ಬಾಬು ಆಗಾಗ ಎಸ್. ನಾರಾಯಣರನ್ನು ಕಾಣಲು ಶೂಟಿಂಗಿಗೆ ಬರುತ್ತಿದ್ದ. ಏಕೆಂದರೆ ನಾರಾಯಣ್ ಕುಮಾರಸ್ವಾಮಿಗೆ ಪರಮಾಪ್ತ ಮತ್ತು ಪಕ್ಷ-ಜಾತಿ ಎರಡರಲ್ಲೂ ಜೆಡಿಎಸ್‌ನ ಪ್ರಮುಖ. ಡೈರೆಕ್ಟರ್ ನಾರಾಯಣನನ್ನು ಹಿಡಿದರೆ ಕುಮಾರಸ್ವಾಮಿಗೆ ಆಪ್ತನಾಗಬಹುದೆಂಬ ಲೆಕ್ಕಾಚಾರ ಸುರೇಂದ್ರ ಬಾಬುಗಾದರೆ, ಇಂಥ ರಿಯಲ್ ಎಸ್ಟೇಟ್ ಖದೀಮನನ್ನು ಜೊತೆಗಿಟ್ಟುಕೊಂಡರೆ ಮುಂದೊಂದು ದಿನ ಈತನ ಬಂಡವಾಳದಲ್ಲೊಂದು ಸಿನಿಮಾ ನಿರ್ಮಿಸಬಹುದೆಂಬ ದುರಾಸೆ ನಾರಾಯಣ್‌ಗೆ.

ಹಾಗೇ ಶೂಟಿಂಗ್ ಮಧ್ಯೆ ಎದುರಾದ ಸುರೇಂದ್ರ ಬಾಬುವಿಗೆ ಏಕಾಏಕಿ ನಾರಾಯಣ್ ಹೇಮಾಶ್ರೀಯನ್ನು ಪರಿಚಯಿಸಿದ್ದೇ 'ನೋಡ್ರೀ. ಈ ಹುಡುಗಿನೂ ನಿಮ್ಮ ಜಾತೀನೇ. ಇವತ್ತಲ್ಲ ನಾಳೆ ಹೀರೋಯಿನ್ ಆಗೋದು ಗ್ಯಾರಂಟಿ. ಇಂಥವರಿಗೆ ನಿಮ್ಮ ಆಶೀರ್ವಾದ ಬೇಕು....' ಎಂದುಬಿಟ್ಟ. ಅವತ್ತು ಹೇಮಾಶ್ರೀ ಕೂಡ ಯಾರೋ ಹಿರಿಯನೆಂಬ ಗೌರವದಲ್ಲಿ ಪ್ರತಿಯಾಗಿ ನಮಸ್ಕರಿಸಿದ್ದಳು. ಆದರೆ ಆದೇ ಆಕೆಯ ಪಾಲಿಗೆ ಮೃತ್ಯುವಾಗಲಿದೆಯೆಂಬ ಲೆಕ್ಕಾಚಾರವಾದರೂ ಆಕೆಗೆಲ್ಲಿದ್ದೀತು?

ಇದಾಗಿದ್ದು 2008 ರಲ್ಲಿ. ಆದೇ ಹೊತ್ತಿಗೆ ವಿಧಾನಸಭಾ ಚುನಾವಣೆ ಬಂದಿತ್ತು. ಹೇಗೂ ಟೀವಿ ಸೀರಿಯಲ್‌ನಲ್ಲಿ ಗಳಿಸಿದ ಚೂರುಪಾರು ಜನಪ್ರಿಯತೆಯಿತ್ತಲ್ಲ, ಅದನ್ನೇ ಎನ್‌ಕ್ಯಾಷ್ ಮಾಡಿಕೊಳ್ಳಲು ಪ್ಲಾನ್ ಒಂದನ್ನು ತಾಯಿ ಲೀಲಾವತಿ ಹಾಕಿದ್ದಳು. ಅದಕ್ಕೂ ಡೈರೆಕ್ಟರ್ ಎಸ್. ನಾರಾಯಣನೇ ದಿಕ್ಕು ತೋರಿಸಿದ್ದ. ಆಗ ಚಿಕ್ಕನಾಯಕನಹಳ್ಳಿಗೆ ಜೆಡಿಎಸ್ ಅಭ್ಯರ್ಥಿಯಾಗಿದ್ದದ್ದು ಗಣಿ ಧಣಿ ಸುರೇಶ್ ಬಾಬು. ಆತನ ವಿರುದ್ಧ ಜೆಡಿಯುನ ಮಾಧುಸ್ವಾಮಿ ಮತ್ತು ಬಿಜೆಪಿಯ ಕಿರಣ್‌ಕುಮಾರ್ ನಿಂತಿದ್ದರು. ತನ್ನ ವಿರೋಧಿಗಳ ಓಟುಗಳನ್ನು ಸಾಧ್ಯವಾದಷ್ಟು ಛಿದ್ರಗೊಳಿಸುವ ಲೆಕ್ಕ ಹಾಕಿಯೇ ಸಣ್ಣಪುಟ್ಟ ಪಾರ್ಟಿಗಳಿಂದ ತನ್ನದೇ ಆಸಾಮಿಗಳನ್ನು ನಿಲ್ಲಿಸಿ ಓಟು ಒಡೆಯುವ ತಂತ್ರ ರೂಪಿಸಿದ್ದ ಸುರೇಶ್ ಬಾಬುವೇ ಹಣ ಸುರಿದು ಹೇಮಾಶ್ರೀಯನ್ನು ಬಿಎಸ್‌ಪಿ ಅಭ್ಯರ್ಥಿಯಾಗಿಸಿದ್ದ!

ಡೈರೆಕ್ಟರ್ ನಾರಾಯಣ್ ಮೂಲಕ ಸುರೇಶ್ ಬಾಬುಗೆ ಪರಿಚಿತಳಾದ ಹೇಮಾಶ್ರೀಯನ್ನು ಚುನಾವಣೆಗಿಳಿಸಲು ಆಕೆಯ ತಾಯಿ ಲೀಲಾವತಿ ಬರೋಬ್ಬರಿ 20 ಲಕ್ಷದ ಶುಲ್ಕ ವಿಧಿಸಿದ್ದಳು. ಲೆಕ್ಕಾಚಾರದಂತೆ ಜೆಡಿಎಸ್ ಗೆದ್ದಿತ್ತು. ಬಿಎಸ್‌ಪಿ ಅಭ್ಯರ್ಥಿಯಾಗಿ ಹೇಮಾಶ್ರೀ ಸರಿಸುಮಾರು 2 ಸಾವಿರದಷ್ಟು ಮತಗಳಿಸಿದ್ದಳು. ಒಂದಲ್ಲ ಒಂದು ಮಾರ್ಗದಿಂದ ಆಕೆಗೂ ಜೆಡಿಎಸ್‌ಗೂ ಫಿಲ್ಮ್ ಡೈರೆಕ್ಟರ್ ನಾರಾಯಣ್‌ಗೂ ಸಂಬಂಧ ಗಾಢವಾಗುತ್ತಿದ್ದಂತೆ ದೌರ್ಭಾಗ್ಯ ಕೂಡ ಸದ್ದಿಲ್ಲದೇ ಸಮೀಪಿಸುತ್ತಿತ್ತು.



ಎಸ್. ನಾರಾಯಣ್ ಶೂಟಿಂಗಿನಲ್ಲಷ್ಟೇ ಅಲ್ಲ, ಜೆಡಿಎಸ್ ಪರವಾಗಿ ಪ್ರಚಾರಕ್ಕೆಂದು ಚಿಕ್ಕನಾಯಕನಹಳ್ಳಿಗೂ ಬಂದಿದ್ದ ಸುರೇಂದ್ರ ಬಾಬು ಅಲ್ಲೇ ಬಿಎಸ್‌ಪಿ ಅಭ್ಯರ್ಥಿಯಾಗಿದ್ದ ಹೇಮಾಶ್ರೀಯನ್ನೂ ಮಾತಾಡಿಸಿದ್ದ. ಆಕೆಯ ತಂದೆ ನಾಗರಾಜ್ ಮೂಲತಃ ಇದೇ ಚಿಕ್ಕನಾಯಕನಹಳ್ಳಿಯ ಹೊಸಳ್ಳಿಯವನಾದ್ದರಿಂದ ಸುರೇಂದ್ರ ಬಾಬು ಬೇರೆಯದೇ ಲೆಕ್ಕಹಾಕಿ ನಾಗರಾಜ್‌ಗೆ ಆತ್ಮೀಯನಾಗಿದ್ದ. 'ನಾನೂ ಕೂಡ ನಿಮ್ಮ ಜಾತಿಯವನೆ. ತೆಲುಗು ಬಳಜಿಗ. ದೂರದಿಂದ ನೀವೂ ನಮಗೆ ಸಂಬಂಧಿಯಾಗಬೇಕು' ಎಂದೆಲ್ಲ ಪಟ್ಟಿ ಕಟ್ಟಿದ ಸುರೇಂದ್ರ ಬಾಬು ಕಾಲಕ್ರಮೇಣ ಬನಶಂಕರಿಯ ನಾಗರಾಜ್ ಮನೆಗೆ ಬರತೊಡಗಿದ. ಒಂದಷ್ಟು ಸಾಲವನ್ನೂ ಕೊಟ್ಟ. ಆ ಹೊತ್ತಿಗಾಗಲೇ ಮದುವೆಯಾಗಿದ್ದರೂ ತನಗಿನ್ನೂ ಮದುವೆಯೇ ಇಲ್ಲ, ತಾನು ಇನ್ನೂ 32 ರ ವಯಸ್ಸಿನವನು ಎಂದೆಲ್ಲ ರೈಲುಬಿಟ್ಟಿದ್ದ.

ಸುರೇಂದ್ರ ಬಾಬು ಇಷ್ಟೆಲ್ಲ ಸುಳ್ಳಿನ ಸರಮಾಲೆ ಕಟ್ಟಿದ್ದೇ ಹೇಮಾಶ್ರೀ ಮೇಲೆ ಕಣ್ಣಿಟ್ಟು. ಆಕೆಯನ್ನು ತಾನು ಮದುವೆಯಾಗೇ ತೀರ್ತೀನಿ ಎಂದು ತನ್ನ ಸ್ನೇಹಿತರ ಬಳಿ ಬೆಟ್ಟಿಂಗ್ ಕಟ್ಟಿದ್ದ ಸ್ವಭಾವತಃ ಕ್ರಿಮಿನಲ್ ಮತ್ತು ವೃತ್ತಿಯಿಂದ ವಂಚಕನಾಗಿದ್ದ ಸುರೇಂದ್ರ ಬಾಬುವಿನ ಹಿನ್ನೆಲೆಯೇ ಅಂಥಾದ್ದು. ಹೆಸರಿಗಷ್ಟೇ ಆತನದು ವಕೀಲಿಕೆ. ಆತ ಫುಲ್‌ಟೈಮ್ ರಿಯಲ್ ಎಸ್ಟೇಟ್ ಕುಳ. ಕಗ್ಗದಾಸಪುರದ ಕೆರೆಗೆ ಹೊಂದಿಕೊಂಡಿದ್ದ ಎರಡೆಕರೆಗೆ ನಕಲಿ ದಾಖಲೆ ಸೃಷ್ಟಿಸಿ ಅದನ್ನು 48 ಲಕ್ಷಕ್ಕೆ ಮಾರಿಹಾಕಿದ್ದ. ಕೆ.ಆರ್. ಪುರದಲ್ಲಿ ಯಾರೋ 'ಬಡಪಾಯಿಯ ಸೈಟು ದೋಚಿ ಅದನ್ನು ಇನ್ನಾರಿಗೋ ಮಾರಿದ್ದ. ಬಿದರಹಳ್ಳಿ, ದೊಡ್ಡಗುಬ್ಬಿ ದೊಡ್ಡೇನೆಕ್ಕುಂದಿಗಳಲ್ಲಿ ಗೋಮಾಳ, ರಾಜಾ ಕಾಲುವೆ, ಪಾರ್ಕ್ ಭೂಮಿಯೆನ್ನದೇ ನಕಲಿ ದಾಖಲೆ ಸೃಷ್ಟಿಸಿ ದೋಚಿದ್ದ.

ಒಂದು ಹಂತದಲ್ಲಿ ಮನೆಯವರ ಒತ್ತಾಯಕ್ಕೆ ಮಣಿದು ಈತನ ಜೊತೆ ಮದುವೆಗೆ ಸಮ್ಮತಿಸಿದ್ದ ಹೇಮಾಶ್ರೀಗೆ 2009 ರ ಲೋಕಸಭಾ ಚುನಾವಣೆಗೆ ಈತ ಬೆಂಗಳೂರು ಉತ್ತರದಿಂದ ಜೆಡಿಎಸ್ ಅಭ್ಯರ್ಥಿಯಾಗಿದ್ದರಿಂದಾಗಿ ಸತ್ಯ ಗೊತ್ತಾಗಿದೆ. ಚುನಾವಣೆಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಸುರೇಂದ್ರ ಬಾಬು ತನ್ನ ವಯಸ್ಸನ್ನು 48 ಎಂದು ನಮೂದಿಸಿದ್ದ. ಅದರರ್ಥ ಆತನಿಗೂ ಆಕೆಗೂ 23 ವಯಸ್ಸಿನ ಅಂತರವಿತ್ತು.

ಹಕೀಕತ್ತು ಗೊತ್ತಾಗಿದ್ದೇ ಆಗ. ಸುರೇಂದ್ರ ಬಾಬು ಹೆಚ್ಚೂಕಮ್ಮಿ ತಂದೆಯ ವಯಸ್ಸಿನವನೆಂದು ಗೊತ್ತಾಗಿದ್ದೇ ಹೇಮಾಶ್ರೀ ಹಠಕ್ಕೆ ಬಿದ್ದು ಮದುವೆಯನ್ನೇ ರದ್ದುಪಡಿಸುವಂತೆ ಪಟ್ಟುಹಿಡಿದಳು. ದುರಂತವೆಂದರೆ ಆ ವೇಳೆಗಾಗಲೇ ಸುರೇಂದ್ರ ಬಾಬು ಮದುವೆ ಕಾರ್ಡ್ ಮುದ್ರಿಸಿಬಿಟ್ಟಿದ್ದ. 'ಈಗ ಮದುವೆ ರದ್ದಾಯಿತೆಂದರೆ ನನ್ನ ಪೊಲಿಟಿಕಲ್ ಕೆರಿಯರ್ರೇ ಮುಗಿದಂತೆ. ಪಕ್ಷದ ಎಲ್ಲಾ ಮುಖಂಡರಿಗೂ ಆಹ್ವಾನಪತ್ರ ಹೋಗಿದೆ. ಇದರಿಂದ ನನ್ನ ಬದುಕೇ ಹಾಳಾಗುತ್ತದೆ. ದಯವಿಟ್ಟು ನಾಟಕಕ್ಕಾದರೂ ಮದುವೆಯಾಗು. ಒಮ್ಮೆ ಮದುವೆ ಮುಗಿದನಂತರ ನಾನೇ ಡೈವೋರ್ಸ್ ಕೊಡ್ತೀನಿ. ಆನಂತರ ಬೇಕಾದ್ರೆ ನಿನ್ನಿಷ್ಟ' ಎಂದು ಬಾಬು ಹೇಳಿದ್ದನ್ನು ಹೇಮಾ ನಂಬಿಬಿಟ್ಟಳು.

ತಿರುಪತಿಯಲ್ಲಿ ಮದುವೆಯೂ ಆಯ್ತು. ಮದುವೆಯಾದ ಎರಡೇ ದಿನಕ್ಕೆ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ಬಂದು ತನ್ನನ್ನು ಬಲಾತ್ಕಾರವಾಗಿ ಮುದುಕನಿಗೆ ಕೊಟ್ಟು ಮದುವೆ ಮಾಡಿದ್ದಾರೆಂದು ತಂದೆ-ತಾಯಿಗಳ ವಿರುದ್ಧವೇ ದೂರು ಕೊಟ್ಟಳು.

ಇದು ಪತ್ರಿಕೆ ಮತ್ತು ಟೀವಿಗಳಲ್ಲಿ ಸುದ್ದಿಯೂ ಆಯ್ತು. ಆದರೆ ದೂರು ಕೊಟ್ಟ ಎರಡೇ ದಿನಕ್ಕೆ ಹೇಮಾಶ್ರೀ ಉಲ್ಟಾ ಹೊಡೆದು ಅಂಥಾದ್ದೇನೂ ಇಲ್ಲ ಎಂದುಬಿಟ್ಟಳು. ಅದಕ್ಕೆ ಕಾರಣ ಆಕೆಯ ತಾಯಿ ಮತ್ತು ತಂದೆ ಈ ಹೊತ್ತಿಗಾಗಲೇ ತಂದೆ ನಾಗರಾಜ್ ಬಾಬುವಿನಿಂದ 50 ಲಕ್ಷ ಪಡೆದಿದ್ದು. ಮದುವೆ ವೇಳೆಗೆ ಬಾಬು ಹಾಕಿದ್ದ ಒಂದೂವರೆ ಕೋಟಿಯ ಒಡವೆಯೂ ಸೇರಿದರೆ ಅದು ದೊಡ್ಡ ಮೊತ್ತವಾಗಿತ್ತು. ಈ ಪಾಟಿ ದುಡ್ಡನ್ನು ಇನ್ನೆಲ್ಲಿ ವಾಪಸ್ಸು ಕೇಳುತ್ತಾನೋ ಎಂಬ ಭೀತಿ ಅಪ್ಪ-ಅಮ್ಮಂದಿರದಾದರೆ ಇತ್ತ ಬಾಬು ಬೇರೆಯದೇ ಒಂದು ತಂತ್ರ ರೂಪಿಸಿದ್ದ.


ಹೇಗೂ ಮದುವೆ ಮುಗಿದಾಗಿದೆ. ಉಳಿದಿರುವುದು ಆರತಕ್ಷತೆ ಮಾತ್ರ. ಆರತಕ್ಷತೆಯ ಆಹ್ವಾನಪತ್ರ ಎಲ್ಲರಿಗೂ ಕೊಟ್ಟಾಗಿದೆ. ಈಗ ಮದುವೆ ಮುರಿದು ಬಿತ್ತೆಂದರೆ ನನ್ನ ಮಾನ ಹೋಗುತ್ತದೆ. ಕನಿಷ್ಠ ಆರತಕ್ಷತೆ ತನಕ ಮದುವೆ ನಾಟಕ ಮುಂದುವರಿದರೆ ಆನಂತರ ನಾನೇ ಡೈವೋರ್ಸ್ ಕೊಡ್ತೀನಿ ಎಂದು ಬಾಬು ಎರಡನೇ ನಾಟಕ ಹೆಣೆದಿದ್ದ. ಹೇಮಾಶ್ರೀ ಇದಕ್ಕೂ ಒಪ್ಪಿ ಆರತಕ್ಷತೆಗೆ ಸಹಕರಿಸಿದರೆ ಆನಂತರ ಮತ್ತೊಂದು ಕುಂಟು ನೆಪ, ಮಗದೊಂದು ನಾಟಕ ಹೆಣೆಯುತ್ತಲೇ ಬಂದ ಸುರೇಂದ್ರ ಬಾಬುಗೆ ಹೇಗಾದರೂ ಮಾಡಿ ಆಕೆಯನ್ನು ತಾನು ವಶಪಡಿಸಿಕೊಳ್ಳಲೇಬೇಕೆಂಬ ಛಲವಿತ್ತು.

ಈ ಮಧ್ಯೆ ಪದೇಪದೇ ಪರಾರಿಯಾಗುವುದು, ಪೊಲೀಸರಿಗೆ ದೂರು ನೀಡುವುದು, ಟೀವಿಗಳಿಗೆ ಸಂದರ್ಶನ ಕೊಡುವುದು ಮಾಡಿಕೊಂಡೇ ಬಂದ ಹೇಮಾಶ್ರೀಯನ್ನು ಒಂದು ಹಂತದಲ್ಲಿ ತಾಯಿತಂದೆಯೇ ನಿಂತು ಬ್ಲ್ಯಾಕ್‌ಮೇಲ್ ಆರಂಭಿಸಿದ್ದರು. ಅದರಲ್ಲೂ ತಾಯಿ ಲೀಲಾವತಿ ಮಗಳನ್ನು ಲಜ್ಜೆಗೆಟ್ಟು ಬಾಬುಗೆ ಮಾರಿದ್ದಳು. ಇಂಥದೊಂದು ಶರಪಂಜರದಿಂದ ಬಿಡುಗಡೆ ಬಯಸಿ ಪದೇಪದೇ ಬಚಾವಾಗಲು ಯತ್ನಿಸುತ್ತಿದ್ದ ಹೇಮಾಶ್ರೀ ಮೊನ್ನೆ 2012 ರ ಅಕ್ಟೋಬರ್ 9 ರ ರಾತ್ರಿ ನಿರ್ಣಾಯಕ ಕಾಳಗಕ್ಕಿಳಿದಿರಬೇಕು.

ಒಲ್ಲದ ಗಂಡನೊಡನೆ ಶುರುವಾದ ಘರ್ಷಣೆ ಅಂತಿಮವಾಗಿ ಆಕೆಯ ಪ್ರಾಣಕ್ಕೇ ಎರವಾಗಿದೆ. ಕನಸು ಹೊತ್ತ ಅಸಹಾಯಕ ಜೀವವೊಂದು ಸ್ವಾತಂತ್ರ್ಯದ ಬಯಕೆ ಸಾವಿನೊಂದಿಗೆ ಮಣ್ಣುಗೂಡಿದೆ.

● ರಾ. ಸೋಮನಾಥ್


ಪ್ರತಿನಿತ್ಯ ಹೊಚ್ಚಹೊಸ ಹಗರಣಗಳು ಅನಾವರಣಗೊಳ್ಳುತ್ತಿವೆ. ಸುಮಾರು 70,000 ಕೋಟಿ ಹಗರಣದಲ್ಲಿ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯ ಕೈವಾಡ ಬೆಳಕಿಗೆ ಬಂದು ಒಂದು ವಾರ ಕಳೆಯುವ ಮುನ್ನವೇ ಗಾಂಧಿ ಕುಟುಂಬದ ಅಳಿಯ ರಾಬರ್ಟ್ ವಾದ್ರಾನ ಹಗರಣ ಹೊರಬಿದ್ದಿದೆ. ಈ ಹೊಸ ಸುದ್ದಿಯ ಗದ್ದಲದಲ್ಲಿ ನಿತಿನ್ ಗಡ್ಕರಿ ತಲೆಮರೆಸಿಕೊಳ್ಳಲು ಅನುಕೂಲವಾಗಿದೆ. ನಾಳೆ ಮತ್ತೊಂದು ಹಗರಣ ಹೊರಬಿದ್ದು ವಾದ್ರಾನ ಸುದ್ದಿ ನೇಪಥ್ಯಕ್ಕೆ ಸರಿಯಬಹುದು. ಹೀಗೆ ಭ್ರಷ್ಟಾಚಾರದ ಕರಾಳಮುಖ ದಿನೇದಿನೇ ಹೊಸಹೊಸ ಆಯಾಮವನ್ನು ಪಡೆದುಕೊಳ್ಳುತ್ತಾ ನಮ್ಮ ವ್ಯವಸ್ಥೆ 'ಹುಚ್ಚನ ಮದುವೇಲಿ ಉಂಡೋನೇ ಜಾಣ' ಎಂಬಂತಾಗಿದೆ.



...ರಾಮಿ ಅಳಿಯ-ರಾಬರ್ಟ್ ವಾದ್ರಾ

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಈತ ಮಹಾಶಯ ಸಾರ್ವಜನಿಕವಾಗಿ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ...ಅಂಥಾ ಹೇಳಿಕೊಳ್ಳುವ ಸಾಧನೆಯನ್ನೂ ಮಾಡಿಲ್ಲ. ಹಾಗಾಗಿ ಆತನ ... ಅಷ್ಟು ಜನಜನಿತವಲ್ಲ. ಆತನ ಏಕೈಕ ಸಾಧನೆಯೆಂದರೆ ದೇಶದ ... ಪ್ರಭಾವಶಾಲಿ ರಾಜಕೀಯ ಕುಟುಂಬದ ಹುಡುಗಿಯನ್ನು ಪ್ರೀತಿಸಿ ...ವೆಯಾಗಿದ್ದು. ಹೀಗಾಗಿ ಜನಸಾಮಾನ್ಯರು ಆತನನ್ನು ಗುರುತಿಸುವುದು



...ಯಾಂಕ ಗಾಂಧಿಯ ಗಂಡ ಉರುಫ್ ಸೋನಿಯಾ ಗಾಂಧಿಯ ಅಳಿಯ ...ದ. ಆತನೇ ರಾಬರ್ಟ್ ವಾದ್ರಾ.

ಈ ರಾಬರ್ಟ್ ವಾದ್ರಾ ಇಲ್ಲಿಗೆ ಸುಮಾರು ಹತ್ತು ವರ್ಷಗಳ ಹಿಂದೆ ...ದ ಸಂದರ್ಶನವೊಂದರಲ್ಲಿ ಆಡಿದ ಮಾತುಗಳು ಆಸಕ್ತಿದಾಯಕವಾಗಿವೆ.

"ನಾನು ಯಾರಿಂದಲೂ ಯಾವುದೇ ಲಾಭ ಪಡೆದುಕೊಳ್ಳಲು ಇಚ್ಚಿಸುವುದಿಲ್ಲ. ಪ್ರಿಯಾಂಕಳನ್ನು ಮದುವೆಯಾಗಿದ್ದು ಅವಳ ವ್ಯಕ್ತಿತ್ವವನ್ನು ಇಷ್ಟಪಟ್ಟಿದ್ದರಿಂದ ...ವೇ ಹೊರತು ಬೇರೆ ಯಾವುದೋ ಲಾಭಕ್ಕಾಗಿ ಅಲ್ಲ... ಒಂದುವೇಳೆ ... ಟಿಕೆಟ್ ಪಡೆಯಲು ಕ್ಯೂ ಇದ್ದರೆ ನಾನು ಕ್ಯೂನಲ್ಲಿ ನಿಲ್ಲುತ್ತೇನೆಯೇ ...ಹೊರತು ಯಾರ ಶಿಫಾರಸ್ಸನ್ನೂ ಬಳಸುವುದಿಲ್ಲ"

ವಾಹ್! ಎಂಥಾ ಮುತ್ತಿನಂಥಾ ಮಾತು! ಎಂಥಾ ಆದರ್ಶ!

...ಇದೇ ಆದರ್ಶ ಪುರುಷ ಅಕ್ರಮ ಆಸ್ತಿಗಳ ರಾಡಿಯಲ್ಲಿ ಸಿಕ್ಕಿಬಿದ್ದು ...ಕಡೆ ಅತ್ತೆಯ ಕೆಂಗಣ್ಣಿಗೆ ಗುರಿಯಾಗಿದ್ದರೆ ಮತ್ತೊಂದೆಡೆ ಮಾಧ್ಯಮಗಳ ...ಗೆ ಗುರಿಯಾಗಿದ್ದಾನೆ. ಅಳಿಯನ ಅಕ್ರಮಗಳಿಂದ ಸೋನಿಯಾ ಗಾಂಧಿ ಇಷ್ಟು ವರ್ಷಗಳ ಕಾಲ ಅತ್ಯಂತ ಜತನದಿಂದ ಕಾಪಾಡಿಕೊಂಡು ಬಂದ ಇಮೇಜಿಗೆ ಕೊಡಲಿ ಪೆಟ್ಟು ಬಿದ್ದಿರುವುದಂತೂ ಸತ್ಯ.


ಈತ ಪ್ರಿಯಾಂಕಳನ್ನು ಮದುವೆಯಾದ ಸಂದರ್ಭದಲ್ಲಿ, ಅಂದರೆ 1997ರಲ್ಲಿ ಆರ್ಟೆಕ್ಸ್ ಎಂಬ ಕಂಪನಿ ಶುರು ಮಾಡಿ ಆಭರಣ ಮತ್ತು ಕರಕುಶಲ ವಸ್ತುಗಳ ವ್ಯಾಪಾರ ನಡೆಸುತ್ತಿದ್ದ. ದೆಹಲಿಯ ಚೌರಿ ಬಜಾರ್ ಮತ್ತು ಹಳೆ ದೆಹಲಿಯ ಗಲ್ಲಿಗಳಲ್ಲಿ ತನ್ನ ಮಾಲುಗಳಿಗೆ ಗಿರಾಕಿ ಹುಡುಕುತ್ತಾ ಅಲೆಯುತ್ತಿದ್ದ. ಆ ಕಾಲಕ್ಕೆ ಆತನಿಗಿದ್ದ ಆಸ್ತಿಯ ಒಟ್ಟು ಮೌಲ್ಯ ಸುಮಾರು 50 ಲಕ್ಷ ಇದ್ದಿರಬಹುದು. ಈತನ ಎಲ್ಲಾ ವ್ಯವಹಾರದಲ್ಲಿ ಆತನ ತಾಯಿ ಮಾರಿನಾ ಕೂಡ ಜೊತೆಗಿದ್ದಳು.

ಇದೆಲ್ಲಾ ಹಳೆಯ ಮಾತಾಯಿತು. ಈಗ ವಾದ್ರಾನ ಖದರ್ರೇ ಬೇರೆ. ಏಕಾಏಕಿ ರಿಯಲ್ ಎಸ್ಟೇಟ್ ದಂಧೆಗಿಳಿದಿರುವ ಈತ ಡಿಎಲ್‌ಎಫ್‌ನಂಥಾ ದೈತ್ಯ ಕಂಪನಿಯೊಂದಿಗೆ ಪಾರ್ಟನರ್ ಆಗಿ ವ್ಯವಹರಿಸುವ ಮಟ್ಟಕ್ಕೆ ಬೆಳೆದಿದ್ದಾನೆ. ಇದರಲ್ಲಿ ವಾದ್ರಾ ಮಾಡಿದ ಪವಾಡವೇನೂ ಇಲ್ಲ. ಬದಲಿಗೆ ಗಾಂಧಿ ಕುಟುಂಬದ ರಾಜಕೀಯ ತಾಕತ್ತೇ ಅಳಿಯನ ಬೆಳವಣಿಗೆಗೆ ಕಾರಣ ಎನ್ನಲು ಹೆಚ್ಚಿನ ಪುರಾವೆಗಳ ಅಗತ್ಯವಿಲ್ಲ.

ಡಿಎಲ್‌ಎಫ್ ಮತ್ತು ವಾದ್ರಾ ನಡುವಿನ ಸಂಬಂಧ ಬ್ಯುಸಿನೆಸ್ ಸಂಬಂಧ ಮಾತ್ರ ಎಂದು ಕಾಂಗ್ರೆಸ್ಸಿಗರು ಬಾಯಿಬಡಿದುಕೊಳ್ಳುತ್ತಿದ್ದಾರೆ. ಹೇಳೋರು ದಡ್ಡರಾದರೆ ಕೇಳೋರು ದಡ್ಡರೇನಲ್ಲ. ಆ ವಾದಗಳನ್ನು ಕಟ್ಟಾ ಕಾಂಗ್ರೆಸ್ಸಿಗರೂ ನಂಬುವ ಸ್ಥಿತಿಯಲ್ಲಿಲ್ಲ. ಯಾಕೆಂದರೆ ಅವರ ನಡುವಿನ ವ್ಯವಹಾರ ಅಷ್ಟು ವಿಚಿತ್ರವಾದುದು.

ಡಿಎಲ್‌ಎಫ್ ಕಂಪನಿ ವಾದ್ರಾನ ಕಂಪನಿಗೆ 65 ಕೋಟಿಗಳ ಬಡ್ಡಿರಹಿತ ಸಾಲ ನೀಡಿದೆ. ಆ ಸಾಲಕ್ಕೆ ಯಾವ ಆಧಾರಗಳನ್ನೂ ಪಡೆದುಕೊಂಡಿಲ್ಲ. ಹೀಗೆ ಮುಫತ್ತಾಗಿ ಬಂದ ಹಣದಲ್ಲಿ ವಾದ್ರಾನ ಕಂಪನಿ ಡಿಎಲ್‌ಎಫ್‌ನ ಶೇರುಗಳನ್ನು ಕೊಂಡುಕೊಳ್ಳುತ್ತದೆ. ಅಲ್ಲದೇ ಅದೇ ಹಣವನ್ನು ವಾದ್ರಾನ ಕಂಪನಿ ಡಿಎಲ್‌ಎಫ್‌ನ ಫ್ಲಾಟ್‌ಗಳನ್ನು ಕೊಂಡುಕೊಳ್ಳಲು ಬಳಸಿದೆ. ಅದೂ ಸಹಜ ವ್ಯವಹಾರವಲ್ಲ. ಒಟ್ಟು ಸುಮಾರು 35 ಕೋಟಿಗಳ ಮಾರುಕಟ್ಟೆ ಮೌಲ್ಯವಿರುವ 7 ಫ್ಲಾಟ್‌ಗಳನ್ನು ಕೇವಲ 5 ಕೋಟಿಗಳಿಗೆ ಡಿಎಲ್‌ಎಫ್ ಮಾರಾಟ ಮಾಡಿದೆ.

ಮತ್ತೊಂದು ವ್ಯವಹಾರದಲ್ಲಿ ಡಿಎಲ್‌ಎಫ್ ಎಸ್‌ಇಜಡ್ ನಿರ್ಮಾಣ ಮಾಡುವ ಯೋಜನೆ ಕೈಗೆತ್ತಿಕೊಳ್ಳುತ್ತದೆ. ಈ ವ್ಯವಹಾರದಲ್ಲಿ ವಾದ್ರಾನ ಕಂಪನಿ 50% ಶೇರುಗಳನ್ನು ಪಡೆದುಕೊಳ್ಳುತ್ತದೆ. ಅದೇನು ಎಡವಟ್ಟಾಯಿತೋ ಏನೋ? ಮರುವರ್ಷವೇ ಆ ಶೇರುಗಳನ್ನು ಮತ್ತೆ ಡಿಎಲ್‌ಎಫ್‌ಗೇ ಬಿಟ್ಟುಕೊಟ್ಟಿದ್ದಾರೆ. ಇಂಥಾ ವಹಿವಾಟನ್ನು ನೋಡುತ್ತಿದ್ದರೆ ಇದು ಬ್ಯುಸಿನೆಸ್ಸೂ ಅಲ್ಲ ಅಥವಾ ದಾನ ಧರ್ಮವೂ ಅಲ್ಲ; ಇದರಲ್ಲಿ ಬೇರೇನೂ ಅಂಡರ್‌ಡೀಲಿಂಗ್ ಇರುವುದು ಖಚಿತ ಎಂದು ಯಾರು ಬೇಕಾದರೂ ಹೇಳಬಹುದು.





ಇಲ್ಲಿ ನಡೆದಿರುವುದು ಅದೇ. ಅರವಿಂದ್ ಕೇಜ್ರಿವಾಲ್ ಆರೋಪಿಸಿರುವಂತೆ ರಿಯಲ್ ಎಸ್ಟೇಟ್ ದೈತ್ಯ ಡಿಎಲ್‌ಎಫ್ ಕಂಪನಿಯ ಜೊತೆ ದೆಹಲಿ, ಹರ್ಯಾಣಗಳಲ್ಲಿರುವ ಕಾಂಗ್ರೆಸ್ ಸರ್ಕಾರಗಳು ಶಾಮೀಲಾಗಿ ಅಕ್ರಮ ಭೂಮಿ ಮುಂಜೂರಾತಿ ಮಾಡಿಕೊಟ್ಟಿದ್ದರ ಪ್ರತಿಫಲ ಸೋನಿಯಾ ಗಾಂಧಿಯ ಅಳಿಯನಿಗೆ ಈ ಮೇಲಿನ ರೂಪದಲ್ಲಿ ದಕ್ಕಿದೆ.

→ 13

ಡಿಎಲ್‌ಎಫ್ - ದೈತ್ಯ ಪುರಾಣ



ದೆಹಲಿ ಲ್ಯಾಂಡ್ ಅಂಡ್ ಫೈನಾನ್ಸ್ (ಡಿಎಲ್‌ಎಫ್) ಕಂಪನಿ ಇಂದು ...ತದಲ್ಲಿ ಮಾತ್ರವಲ್ಲ, ಜಗತ್ತಿನಲ್ಲೇ ದೊಡ್ಡ ರಿಯಲ್ ಎಸ್ಟೇಟ್ ಕಂಪನಿ. ...ವರ್ಷ ವಯಸ್ಸಿನ ಇದರ ಮಾಲಿಕ ಕುಶಾಲ್ ಪಾಲ್ ಸಿಂಗ್ ಉತ್ತರ ...ಶದ ಜಾಟ್ ಜನಾಂಗದ ಹಿನ್ನೆಲೆಯವರು. ಈ ಹಿಂದೆ ಭಾರತ ಸೇನೆಯಲ್ಲಿ ...ರ ಸವಾರನಾಗಿದ್ದ. ಸೇನೆ ತೊರೆದು 70ರ ದಶಕದಲ್ಲಿ ತನ್ನ ಮಾವ ...ಮಾಡಿದ್ದ ಡಿಎಲ್‌ಎಫ್ ಕಂಪನಿಯ ಉಸ್ತುವಾರಿ ವಹಿಸಿಕೊಂಡ. ಈ ...ಾರ ಬರಕತ್ತಾಗದೆ ಈ ಕಂಪನಿಯನ್ನು ಮಾರಾಟ ಮಾಡಲು ಮುಂದಾಗಿದ್ದರು. ... ಕಂಪನಿಯ ಮೌಲ್ಯ ಎಷ್ಟು ಗೊತ್ತೆ? ಕೇವಲ 26 ಲಕ್ಷ ರೂಪಾಯಿ ...! ಕಂಪನಿ ಮಾರಾಟದ ಯೋಚನೆಯನ್ನು ಕೈಬಿಟ್ಟ ಕೆ.ಪಿ.ಸಿಂಗ್ ಭವ್ಯ ...ತದ ಯಶಸ್ವಿ ಉದ್ಯಮಿಗಳ ಹಾದಿಯಲ್ಲಿ ನಡೆಯಲು ಗಟ್ಟಿ ನಿರ್ಧಾರ ...ದ. ನಂತರ ನಡೆದದ್ದೆಲ್ಲಾ ಪವಾಡ.

ಕೆಲವು ಉದಾಹರಣೆಗಳನ್ನು ನೋಡಿ.

...ಎ ವರ್ಷಗಳ ಹಿಂದೆ ಹರ್ಯಾಣಾ ಸರ್ಕಾರ ಮಾನೆಸರ್ ಬಳಿ ಸುಮಾರು ...0 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವುದಾಗಿ ರೈತರಿಗೆ ...ಟೀಸ್ ಜಾರಿ ಮಾಡಿತು. ರೈತರ ಆತಂಕವನ್ನು ಬಳಸಿಕೊಂಡು ವ್ಯವಹಾರ ...ರಿಸಿದ ಡಿಎಲ್‌ಎಫ್ ದುಗ್ಗಾಣಿ ಬೆಲೆಗೆ ಭೂಮಿಯನ್ನು ಕಬಳಿಸಿತು. ...ಕ್ರಿಯಂತೆ ಸರ್ಕಾರ ಸ್ವಾಧೀನ ಪ್ರಕ್ರಿಯೆ ಕೈಬಿಟ್ಟು ಸಿಂಗ್ ಜೊತೆ ಶಾಮೀಲಾಗಿ ... ಟೌನ್‌ಶಿಪ್ ನಿರ್ಮಿಸಲು ಅನುವು ಮಾಡಿಕೊಟ್ಟಿತು. ದೆಹಲಿಯ ...ಹದಲ್ಲೇ ವರ್ಲ್ಡ್ ಕ್ಲಾಸ್ ಡಿಎಲ್‌ಎಫ್ ಸಿಟಿ ತಲೆ ಎತ್ತಿ ಕೆ.ಪಿ.ಸಿಂಗ್ ...ಯನೀರ್ ಆಗಿ ಬೆಳೆದುಬಿಟ್ಟ.

...ದೆಲ್ಲಾ ಸಾಧ್ಯವಾಗಿದ್ದು ಆಗಿನ್ನೂ ರಾಜಕಾರಣಿಯಾಗಿರದಿದ್ದ ರಾಜೀವ್ ...ಯ ಬೆಂಬಲದಿಂದ. ರಾಜೀವ್ ಗಾಂಧಿಯೊಂದಿಗೆ ತನಗಿದ್ದ ಸಂಬಂಧವನ್ನು ... ತನ್ನ ಆತ್ಮ ಚರಿತ್ರೆಯಲ್ಲಿ ಬರೆದುಕೊಂಡಿದ್ದಾನೆ.


...ಸಿಂಗ್ ತನ್ನ ಆತ್ಮ ... ನಿರ್ಮಾಣಕ್ಕೆಂದು ಮೀಸಲಾಗಿದ್ದ ಸುಮಾರು 350 ಎಕರೆ ಜಾಗವನ್ನು ಇದೇ ಕಾಂಗ್ರೆಸ್ ರಾಜಕಾರಣಿಗಳೊಂದಿಗೆ ಶಾಮೀಲಾಗಿ ಡಿಎಲ್‌ಎಫ್ ಕಬಳಿಸಿ ಅಲ್ಲಿ ಐಷಾರಾಮಿ ಗಾಲ್ಫ್ ಕ್ಲಬ್ ನಿರ್ಮಿಸಲು ಹವಣಿಸಿತ್ತು. ಈ ವಿಷಯ ಕೋರ್ಟ್ ಮೆಟ್ಟಿಲೇರಿ ಸದ್ಯಕ್ಕೆ ತಡೆಯಾಜ್ಞೆ ಜಾರಿಯಲ್ಲಿದೆ.

ಒಟ್ಟಾರೆಯಾಗಿ ದೇಶಾದ್ಯಂತ 32 ನಗರಗಳಲ್ಲಿ ಡಿಎಲ್‌ಎಫ್ ವಾಸದ ಅಪಾರ್ಟ್‌ಮೆಂಟ್‌ಗಳನ್ನು ಹಾಗೂ ಭಾರೀ ಶಾಪಿಂಗ್ ಮಾಲ್‌ಗಳನ್ನು ನಿರ್ಮಾಣ ಮಾಡಿದೆ. ಬೆಂಗಳೂರಿನಲ್ಲೂ ಸಾವಿರಾರು ಕೋಟಿ ಮೊತ್ತದ ಯೋಜನೆಗಳು ನಿರ್ಮಾಣ ಹಂತದಲ್ಲಿವೆ. ಡಿಎಲ್‌ಎಫ್ ಸಾಮ್ರಾಜ್ಯ ವಿಸ್ತರಣೆ ಸಾಧ್ಯವಾಗಿರುವುದು ಸ್ಥಳೀಯ ಸರ್ಕಾರಗಳ ಸಕ್ರಿಯ ಬೆಂಬಲದಿಂದ ಮಾತ್ರ. ಈಗ ಶೇರು ಮಾರುಕಟ್ಟೆಯನ್ನು ಪ್ರವೇಶಿಸಿರುವ ಡಿಎಲ್‌ಎಫ್ ಕಂಪನಿಯ ಆಡಳಿತಮಂಡಳಿಯ ತುಂಬಾ ಕೆ.ಪಿ.ಸಿಂಗ್‌ನ ಮಕ್ಕಳು, ಸೊಸೆಯರು, ಮೊಮ್ಮಕ್ಕಳು ತುಂಬಿಕೊಂಡಿದ್ದಾರೆ. ಅದರ ವಾರ್ಷಿಕ ವಹಿವಾಟು ಸಾವಿರಾರು ಕೋಟಿಗಳು. ವಿಶ್ವದ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ ಕೆ.ಪಿ.ಸಿಂಗ್ 8ನೇ ಸ್ಥಾನ ಪಡೆದಿದ್ದಾನೆ. ಆತನ ವೈಯಕ್ತಿಕ ಆಸ್ತಿಪಾಸ್ತಿಗಳ ಮೊತ್ತ ಸುಮಾರು 40,000 ಕೋಟಿಗಳಿಗೂ ಅಧಿಕ. ನ್ಯಾಯಮಾರ್ಗದಲ್ಲೇ ಇಷ್ಟೆಲ್ಲಾ ಸಾಧ್ಯವಾಗಿದೆ ಎಂದರೆ ನೀವು ನಂಬುತ್ತೀರಾ?

ಭಾರತ ಸರ್ಕಾರ ಕೆ.ಪಿ.ಸಿಂಗ್‌ನ ಸಾಧನೆಯನ್ನು ಮೆಚ್ಚಿ 2010ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿದೆ. ದೆಹಲಿಯ ಕಾಂಗ್ರೆಸ್ ಸರ್ಕಾರ ಇವರಿಗೆ ದೆಹಲಿ ರತ್ನ ಬಿರುದು ನೀಡಿದೆ. ಇಷ್ಟೆಲ್ಲಾ ಆದಮೇಲೆ ನಮ್ಮ ಮಾಧ್ಯಮ ಸಂಸ್ಥೆಗಳು ಹಿಂದೆ ಬೀಳುತ್ತವೆಯೆ? 2008ರಲ್ಲಿ ಈತ ಫೋರ್ಬ್ಸ್ ಶ್ರೀಮಂತರ ಪಟ್ಟಿಯಲ್ಲಿ 8ನೇ ಸ್ಥಾನ ಪಡೆಯುತ್ತಿದ್ದಂತೆ ಎನ್‌ಡಿಟಿವಿ ಯವರು 'ವರ್ಷದ ಭಾರತೀಯ' ಪ್ರಶಸ್ತಿ ನೀಡಿ ಕೃತಾರ್ಥರಾಗಿದ್ದಾರೆ.

ಈ ಸಾಧನೆಗಳನ್ನು ಕಂಡು ಬಡ ಚೋರೇಗೌಡ ದಿಗ್‌ಭ್ರಾಂತನಾಗಿದ್ದಾನೆ!


ದೇಶಭಕ್ತರಿಗೆ ಒಂದು ಪ್ರಶ್ನೆ



ಯೋಗಿ ಬಾಬಾ, ಹಜಾರೆ, ಕೇಜ್ರಿವಾಲಾಗಳಿಗೆ ಹಾಗೂ ಅವರ ಹಿಂದೆ ತೆರೆಮರೆಯಲ್ಲಿ ನಿಂತಿರುವ ದೇಶಭಕ್ತರಿಗೆ ನಾವು ಕೇಳಲೇಬೇಕಾದ ಪ್ರಶ್ನೆ ಯೊಂದಿದೆ. ನಮ್ಮ ರಾಷ್ಟ್ರೀಯ ಸಂಪತ್ತನ್ನು ರಿಲಯನ್ಸ್, ಡಿಎಲ್‌ಎಫ್‌ನಂತಹ ನೂರಾರು ಕಾರ್ಪೊರೇಟ್ ಕಂಪನಿಗಳು ಲೂಟಿ ಹೊಡೆಯುತ್ತಿರುವಾಗ ನೀವು ಆ ಬಗ್ಗೆ ಒಂದೇಒಂದು ಮಾತನ್ನೂ ಆಡುವುದಿಲ್ಲ ಯಾಕೆ? ಈ ದೇಶದ ಜನತೆ ನಾನಾ ಕಷ್ಟಕೋಟಲೆಗಳಲ್ಲಿ ಪರಿತಪಿಸುತ್ತಿರುವ ಹೊತ್ತಿನಲ್ಲೇ ಬಂಡವಾಳಿಗ ಬಕಾಸುರರು ಸಾರ್ವಜನಿಕ ಸಂಪತ್ತನ್ನು ಲೂಟಿ ಹೊಡೆದು, ನೆಲ ಜಲ ಅರಣ್ಯ ಎಲ್ಲವನ್ನೂ ಕಬಳಿಸಿ, ಸರ್ಕಾರದ ತೆರಿಗೆಗಳನ್ನು ಗುಳುಂ ಮಾಡಿ ನಾನಾ ಗೋಲ್‌ಮಾಲ್ ಮಾಡಿ ಸಾವಿರಾರು ಕೋಟಿಗಳನ್ನು ಬಾಚುತ್ತಾ ಮೆರೆಯುತ್ತಿರುವುದು ನಿಮ್ಮ ಕಣ್ಣಿಗೆ ಕಾಣುವುದೇ ಇಲ್ಲ ಯಾಕೆ?

ಒಂದು ವಾರದ ಹಿಂದಷ್ಟೇ ವಾದ್ರಾ ಹಗರಣಕ್ಕಿಂತ ನೂರಾರು ಪಟ್ಟು ದೊಡ್ಡ ಹಗರಣದಲ್ಲಿ ಬಿಜೆಪಿಯ ಅಧ್ಯಕ್ಷ, ಸಂಘ ಪರಿವಾರದ ಕಣ್ಮಣಿ ನಿತಿನ್ ಗಡ್ಕರಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಾನಲ್ಲಾ? ಆ ವಿಷಯವನ್ನು ಮೂಲೆಗುಂಪು ಮಾಡುವುದೇಕೆ? ಬಿಜೆಪಿಯ ಬಿ ಟೀಮ್ ಆಗದೆ ಭ್ರಷ್ಟ ವ್ಯವಸ್ಥೆಯ ವಿರುದ್ಧ ನೀವು ಪ್ರಾಮಾಣಿಕ ಹೋರಾಟ ಮಾಡುತ್ತೀರೆಂದು ನಾವು ನಿರೀಕ್ಷಿಸಬಹುದೆ?

ಸಮಾಧಿಯಾಗಲಿದೆ ಬಿಜೆಪಿ



ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಬಿಜೆಪಿಯ ಚಡ್ಡಿ ಬಿಚ್ಚಿ ಹೊಸ ರಾಜಕೀಯ ಪಕ್ಷ ಕಟ್ಟುವ ಸುದ್ದಿ ದಾವಣಗೆರೆ ಜಿಲ್ಲಾ ಬಿಜೆಪಿಯೊಳಗೆ ತಲ್ಲಣವನ್ನುಂಟು ಮಾಡಿದೆ.

ಈ ಜಿಲ್ಲೆಯಲ್ಲಿ ಬಿಜೆಪಿಯದ್ದು ವಿಚಿತ್ರ ಪರಿಸ್ಥಿತಿ. ಈ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳ ಶಾಸಕರು ಇತರೆ ಪಕ್ಷಗಳಿಂದ ಬಿಜೆಪಿಗೆ ವಲಸೆ ಬಂದವರು. ಹರಿಹರದ ಹರೀಶ, ಚನ್ನಗಿರಿಯ ಮಾಡಾಳು ವಿರುಪಾಕ್ಷಪ್ಪ ಮಾಯಕೊಂಡದ ಬಸವರಾಜನಾಯ್ಕ, ಜಗಳೂರಿನ ರಾಮಚಂದ್ರ, ಹರಪನಹಳ್ಳಿಯ ಕರುಣಾಕರ ರೆಡ್ಡಿ ಕಾಂಗ್ರೆಸ್‌ನಿಂದ ಬಂದವರಾದರೆ ಹೊನ್ನಾಳಿಯ ರೇಣುಕಾಚಾರ್ಯ ಜನತಾ ಪರಿವಾರದಿಂದ ಬಂದವನು. ದಾವಣಗೆರೆ ಉತ್ತರ ಕ್ಷೇತ್ರದಿಂದ ಗೆದ್ದು ಈಗ ತರಕಾರಿ ಮಂತ್ರಿಯೂ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವನೂ ಆಗಿರುವ ರವೀಂದ್ರನಾಥ ಮತ್ತು ವಿಧಾನ ಪರಿಷತ್ ಸದಸ್ಯ ಮತ್ತು ಸದ್ಯದ ಸಚೇತಕ ಶಿವಯೋಗಿ ಸ್ವಾಮಿಗಳಿಬ್ಬರು ಮಾತ್ರ ಕ್ರಮವಾಗಿ ಜನಸಂಘ ಮತ್ತು ಸಂಘ ಪರಿವಾರಿಗಳು. ಇನ್ನು ಸಂಸದ ಸಿದ್ದೇಶ್ವರ ಕೂಡ ವಲಸಿಗರೇ.

ಹೀಗೆ ವಲಸೆ ಬಂದವರೆಲ್ಲಾ ಯಡ್ಡಿಯ ಹಿಂದೆ ಹೋಗಿ ಆತನ ಹೊಸ ಪಕ್ಷ ಸೇರುವುದು ಈಗ ಗ್ಯಾರಂಟಿ ಆಗಿದೆಯಲ್ಲದೆ ಆ ಮೂಲಕ ಜಿಲ್ಲಾಮಟ್ಟದಲ್ಲಿ ಬಿಜೆಪಿಯನ್ನು ಅನಾಥ ಮಾಡಲಿದ್ದಾರೆ.

ಜಿಲ್ಲಾ ಬಿಜೆಪಿಯಲ್ಲಿ ಯಾವುದೂ ಸರಿ ಇಲ್ಲ

ದಾವಣಗೆರೆ ಜಿಲ್ಲೆಯ ಬಿಜೆಪಿ ಅಧ್ಯಕ್ಷ ಗುರುಸಿದ್ದನಗೌಡರಿಗೆ ರವೀಂದ್ರನಾಥರನ್ನು ಕಂಡರಾಗುವುದಿಲ್ಲ. ಗುರುಸಿದ್ದನಗೌಡ, ಮಾಡಾಳು ವಿರುಪಾಕ್ಷಪ್ಪ ರವೀಂದ್ರನಾಥ ಮತ್ತು ಹರೀಶ ಸಾದು ಲಿಂಗಾಯತರಾದರೂ, ಸಂಸದ ಮತ್ತು ಮಂತ್ರಿ ರವೀಂದ್ರರ ನಡುವೆ ಜಿಲ್ಲಾ ನಾಯಕತ್ವಕ್ಕಾಗಿ ಒಳಗೊಳಗೇ ಮಸಲತ್ತು ನಡೆದಿತ್ತು.

ರವೀಂದ್ರನಾಥ ಮಂತ್ರಿಯಾದದ್ದೇ ಸಾದು ಲಿಂಗಾಯತರ ಕೋಟಾದಡಿ. ಅದೂ ಸಿರಿಗೆರೆಯ ಸಾದು ಸಧರ್ಮ ಪೀಠದ ಶಿಫಾರಸಿನ ಮೇಲೆ. ಆದರೂ ರವೀಂದ್ರನಾಥ ಎಂದೂ ತನ್ನ ಪಾರ್ಟಿಯ ಶಾಸಕರನ್ನು, ಹಿರಿಯ ನಾಯಕರನ್ನು, ಕಾರ್ಯಕರ್ತರನ್ನು ತನ್ನವರೆಂದು ಪರಿಗಣಿಸಲಿಲ್ಲ. 'ತಾನೇ ಸಾಚಾ ಉಳಿದವರೆಲ್ಲಾ ಲುಚ್ಚಾ' ಎಂಬ ಆತನ ದುರಹಂಕಾರವೇ ಆತನನ್ನು ಪಾರ್ಟಿಯ ಒಳಗೆ ಏಕಾಂಗಿಯನ್ನಾಗಿಸಿದೆ.

ಸಂಸದ ಸಿದ್ದೇಶ್ವರರಲ್ಲದೆ ಶಾಸಕರಾದ ಹರೀಶ, ರೇಣುಕಾಚಾರ್ಯ, ಮಾಡಾಳು ವಿರುಪಾಕ್ಷಪ್ಪ, ರಾಮಚಂದ್ರರೆಲ್ಲ ಯಡ್ಡಿಯ ಬೆನ್ನಿಗೆ ನಿಂತಿದ್ದಾರೆ. ಶಾಸಕ ಬಸವರಾಜನಾಯ್ಕ ಮಾತ್ರ ಮಂತ್ರಿ ರವೀಂದ್ರನಾಥರ ಬೆನ್ನ ಹಿಂದಿದ್ದಾರೆ. ಈ ಮಧ್ಯೆ ವಿಧಾನ ಪರಿಷತ್ ಸದಸ್ಯ ಶಿವಯೋಗಿ ಮಾತ್ರ ಒಮ್ಮೆ ಮಂತ್ರಿ ರವೀಂದ್ರರಿಗೆ, ಇನ್ನೊಮ್ಮೆ ಯಡ್ಡಿಗೆ ಬಕೀಟು ಹಿಡಿದು ಸಮಯ ಸಾಧಿಸುತ್ತಾ ಬಂದಿದ್ದಾರೆ.

ಈ ಹಿಂದೆ ಮಾಯಕೊಂಡ ವಿಧಾನಸಭಾ ಕ್ಷೇತ್ರ ರವೀಂದ್ರನಾಥರ ಸ್ವಕ್ಷೇತ್ರವಾಗಿತ್ತು. ಆದರೆ 2008ರ ಚುನಾವಣೆಯಿಂದ ಅದು ಮೀಸಲು ಕ್ಷೇತ್ರವಾದಾಗ ಬಸವರಾಜನಾಯ್ಕನಿಗೆ ಬಿಜೆಪಿ ಟಿಕೆಟ್ ಲಭಿಸಿತ್ತು. ಮಾಯಕೊಂಡದಲ್ಲಿ ರವೀಂದ್ರನಾಥರ ಪ್ರಭಾವ ಮತ್ತು ಜಾತಿ ಬೆಂಬಲದ ಮತಗಳಿರುವುದರಿಂದ ಬಸವರಾಜನಾಯ್ಕ ಗೆದ್ದಿದ್ದ. ಆದ್ದರಿಂದ ರವೀಂದ್ರನಾಥರ ಬೆನ್ನಿಗೆ ನಿಲ್ಲುವುದು ಬಸವರಾಜನಾಯ್ಕರಿಗೆ ಅನಿವಾರ್ಯವಾಗಿತ್ತು. ಇಂತಹ ಬಸವರಾಜನಾಯ್ಕನನ್ನು ಯಡಿಯೂರಪ್ಪನೇ ಕರೆದು ತಾಂಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾದಿಯನ್ನು ದಯಪಾಲಿಸಿದ್ದರು.

ಒಂದು ವದಂತಿಯ ಪ್ರಕಾರ ಮಾಯಕೊಂಡದಿಂದ ಬರುವ ಚುನಾವಣೆಯಲ್ಲಿ ಬಸವರಾಜನಾಯ್ಕನಿಗೆ ಬಿಜೆಪಿ ಟಿಕೆಟು ತಪ್ಪುವ ಸಾಧ್ಯತೆಗಳಿವೆ. ಆದ್ದರಿಂದ ಆತನೀಗ ಯಡ್ಡಿಯ ಹಿಂದೆ ಹೋಗುವುದೋ, ರವೀಂದ್ರನಾಥರ ಜೊತೆ ನಿಲ್ಲುವುದೋ ಎಂಬ ಡೋಲಾಯಮಾನ ಸ್ಥಿತಿಯಲ್ಲಿ ಇದ್ದಾನೆ. ಹಾಗೊಮ್ಮೆ ಆತ ಯಡ್ಡಿಯ ಹಿಂದೆ ಹೋದರೆ ದಾವಣಗೆರೆ ಜಿಲ್ಲೆಯಲ್ಲಿ ಬಿಜೆಪಿ ನಾಶವಾಗಿ ರವೀಂದ್ರನಾಥನೊಬ್ಬನೇ ಬಾವುಟ ಬೀಸಿ ಗಾಳಿ ಹೊಡಕೊಳ್ಳುವ ದುಸ್ಥಿತಿ ಬಂದರೂ ಬರಬಹುದು.

ಕರುಣಾಕರ ರೆಡ್ಡಿಯ ಸಮಸ್ಯೆ

ಕರುಣಾಕರ ರೆಡ್ಡಿ ಕರುಣಾಜನಕ ಸ್ಥಿತಿಯಲ್ಲಿದ್ದಾನೆ. ಆತನ ತಮ್ಮ ಜನಾರ್ಧನ ರೆಡ್ಡಿ ಜೈಲು ಸೇರಿದ ನಂತರ ಬಿಜೆಪಿಯೊಳಗೆ ಅಸ್ಪೃಶ್ಯನಾಗಿರುವ ಕರುಣಾಕರ ಬರುವ ಚುನಾವಣೆಯಲ್ಲಿ ಹರಪನಹಳ್ಳಿ ಕ್ಷೇತ್ರದಿಂದ ಯಾವ ಪಾರ್ಟಿಯಿಂದ ಸ್ಪರ್ಧಿಸಬೇಕೆನ್ನುವ ಗೊಂದಲದಲ್ಲಿದ್ದಾನೆ.

ಈಗಾಗಲೇ ಹರಪನಹಳ್ಳಿಯಲ್ಲಿ ಕಾಂಗ್ರೆಸ್ ವತಿಯಿಂದ ಎಂ.ಪಿ.ರವೀಂದ್ರ ಅಬ್ಬರದ ಪ್ರಚಾರ ಶುರುಮಾಡಿದ್ದಾರೆ. ಇದರ ಮುಂದೆ ಕರುಣಾಕರ ರೆಡ್ಡಿ ಡಲ್ಲಾಗಿದ್ದಾರೆ. ಒಂದೆಡೆ ರೆಡ್ಡಿಗೆ ಬಿಜೆಪಿ ಟಿಕೆಟ್ ಸಿಗದಿರಬಹುದು. ಇನ್ನೊಂದೆಡೆ ಯಡಿಯೂರಪ್ಪನ ಪಕ್ಷ ಸೇರಿದರೆ ಜನಾರ್ಧನ ರೆಡ್ಡಿಯ ಗೆಳೆಯ ಮತ್ತು ಬಿಎಸ್‌ಆರ್ ಪಕ್ಷದ ನಾಯಕ ಶ್ರೀರಾಮುಲುಗೆ ಮುಜುಗರವಾಗುತ್ತದೆ. ಮತ್ತೊಂದೆಡೆ ಬಿಎಸ್‌ಆರ್ ಪಕ್ಷ ಸೇರಿದರೆ ಗೆಲುವು ಗ್ಯಾರಂಟಿ ಇಲ್ಲ. ಇದು ರೆಡ್ಡಿಯ ಬಿಕ್ಕಟ್ಟು.

ಹರೀಶನೆದುರು ಕಲ್ಲೇಶ

ಹರಿಹರದ ಶಾಸಕ ಹರೀಶ ಯಡಿಯೂರಪ್ಪನ ಹಿಂದೆ ಹೋಗುವುದು ಗ್ಯಾರಂಟಿಯಾಗಿದೆ. ಯಡ್ಡಿ ಹಗಲು ಕಂಡ ಬಾವಿಗೆ ಹಾರು ಎಂದರೂ ಅದನ್ನು ಪಾಲಿಸುವಷ್ಟು ಹುಂಬ ಈ ಹರೀಶ. ಯಡ್ಡಿಯ ಪಕ್ಷದಿಂದ ಹರೀಶ ಸ್ಪರ್ಧಿಸಿದರೆ ಆತನ ವಿರುದ್ಧ ಬಿಜೆಪಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿರುವ ಕಲ್ಲೇಶ ಎಂಬಾತನನ್ನು ರವೀಂದ್ರನಾಥ್ ಚುನಾವಣಾ ಕಣಕ್ಕಿಳಿಸುವುದು ಗ್ಯಾರಂಟಿ.

ಈ ಕಲ್ಲೇಶಿ ಐದಾರು ವರ್ಷಗಳ ಹಿಂದಷ್ಟೇ ಏನೂ ಆಗಿರಲಿಲ್ಲ. ಹರೀಶನ ಮನೆಯಲ್ಲಿ ಆಕಳುಗಳನ್ನು ನೋಡಿಕೊಳ್ಳುತ್ತಿದ್ದ. ಹಾಲು ಕರೆದು ಸೊಸೈಟಿಗೆ ಹಾಕುವ ಕೆಲಸ ಮಾಡುತ್ತಿದ್ದ. ಇದ್ದಕಿದ್ದಂತೆ ಹರೀಶ ಮತ್ತು ಕಲ್ಲೇಶ ನಡುವೆ ಅದೆಂತಹ ವೈಮನಸ್ಸು ಶುರುವಾಯಿತೋ ಯಾರಿಗೂ ಗೊತ್ತಿಲ್ಲ. 2008ರ ಚುನಾವಣೆಯಲ್ಲಿ ಹರೀಶನನ್ನು ಸೋಲಿಸಬೇಕೆಂದು ಹರಿಹರದ ನಟ್ಟನಡುವೆ ನಿಂತು ಈ ಕಲ್ಲೇಶಿ ಕೂಗಾಡಿದ್ದ.

ಮೊದಲಿಂದಲೂ ರವೀಂದ್ರನಾಥನಿಗೂ ಹರೀಶನನ್ನು ಕಂಡರಾಗುತ್ತಿರಲಿಲ್ಲ. ಆ ಕಾರಣಕ್ಕೇ ರವೀಂದ್ರನಾಥ್ ಕಲ್ಲೇಶಿಯನ್ನು ಕರೆತಂದು ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿ ಪ್ರತಿಷ್ಠಾಪಿಸಿದರು. ಈಗ ಯಡಿಯೂರಪ್ಪನ ಹೊಸ ಪಾರ್ಟಿಯಿಂದ ಹರೀಶ ನಿಂತರೆ ಅವನ ವಿರುದ್ಧ ಕಲ್ಲೇಶಿ ಕಲ್ಲು ಬೀಸಲು ತಯಾರಿ ಮಾಡುತ್ತಿದ್ದಾನೆ.

ರೇಣುಕನ ವಿರುದ್ಧ ರಣಕಹಳೆ

ಹೊನ್ನಾಳಿಯಲ್ಲಿ ರೇಣುಕಾಚಾರ್ಯನದ್ದು ಶೋಚನೀಯ ಪರಿಸ್ಥಿತಿ. ಯಡ್ಡಿಯ ಹೊಸ ಪಾರ್ಟಿಯ ಹುಟ್ಟಿಗೆ ಈ ರೇಣುಕನೂ ಬೀಜ ಊರಿದ್ದಾನೆ. ಇತ್ತೀಚೆಗೆ ಹೊನ್ನಾಳಿಯಲ್ಲಿ ನಡೆದ ಬಿಜೆಪಿ ಮಹಿಳಾ ಸಮಾವೇಶಕ್ಕೆ ಈತ ಇದುವರೆಗೂ ಅಬಕಾರಿ ಇಲಾಖೆಯಲ್ಲಿ ಲೂಟಿ ಮಾಡಿದ ರೊಕ್ಕವನ್ನೇ ಖರ್ಚು ಮಾಡಿದ. ಹೊನ್ನಾಳಿ ತಾಲ್ಲೂಕಿನಲ್ಲಿ ಬರಗಾಲವಿದೆ, ಕುಡಿಯಲು ನೀರಿಲ್ಲ, ಜಾನುವಾರುಗಳಿಗೆ ಮೇವಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಸಮಾವೇಶವನ್ನು ಏರ್ಪಡಿಸಿದ ರೇಣುಕಾ ಅದನ್ನು ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಬಳಸಿದ. ಇದನ್ನು ಕಂಡು ಹೊನ್ನಾಳಿಯ ಜನ ಈತನಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಇಂತಹ ರೇಣುಕಾಚಾರ್ಯ ಯಡ್ಡಿಯ ಚಡ್ಡಿ ಹಿಡಿದು ಹೊಸ ಪಕ್ಷದ ಅಭ್ಯರ್ಥಿಯಾದರೆ ಆತನ ರಾಜಕೀಯ ಬದುಕೇ ಸಮಾಧಿಯಾಗುವುದು ಗ್ಯಾರಂಟಿ ಎಂಬ ಪರಿಸ್ಥಿತಿ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ.

ಪಶ್ಚಾತ್ತಾಪ ಪಡುತ್ತಿರುವ ರಾಮಚಂದ್ರ

ಜಗಳೂರಿನ ಶಾಸಕ ಎಸ್.ವಿ.ರಾಮಚಂದ್ರನದ್ದೂ ಡೋಲಾಯಮಾನ ಸ್ಥಿತಿಯೇ. ಕಾಂಗ್ರೆಸ್‌ನಿಂದ ಬಿಜೆಪಿಗೆ ಹಾರಿ ಶಾಸಕನಾದ ರಾಮಚಂದ್ರನಿಗೆ ಈಗ ಪಶ್ಚಾತ್ತಾಪ ಶುರುವಾಗಿದೆ. ಯಡಿಯೂರಪ್ಪನ ಹಿಂದೆ ಹೋಗಬೇಕೋ, ಬಿಜೆಪಿಯಲ್ಲೇ ಇರಬೇಕೋ ಎಂಬ ಗೊಂದಲದಲ್ಲಿದ್ದಾನೆ. ಈ ಎರಡೂ ಆಯ್ಕೆಗಳನ್ನು ಬಿಟ್ಟು ಮತ್ತೆ ಕಾಂಗ್ರೆಸ್‌ಗೆ ಹಿಂದಿರುಗುವಂತಿಲ್ಲ. ಯಾಕೆಂದರೆ ಈಗಾಗಲೇ ಬಿಜೆಪಿಯಿಂದ ಕಾಂಗ್ರೆಸ್‌ಗೆ ವಲಸೇ ಹೋಗಿರುವ ರಾಜೇಶ್ ಆ ಪಕ್ಷದ ಟಿಕೆಟಿಗೆ ಕಾಯುತ್ತಿದ್ದಾನೆ. ಅರ್ಥಾತ್ ರಾಮಚಂದ್ರನ ಪಾಲಿಗೆ ಕಾಂಗ್ರೆಸ್‌ಗೆ ಕದ ಮುಚ್ಚಿದೆ.

ಕಾಂಗ್ರೆಸ್‌ಗೆ ಸೊಂಟವೇ ಇಲ್ಲ

ಯಡಿಯೂರಪ್ಪ ಮತ್ತು ಬಿಜೆಪಿ ನಡುವಿನ ಈ ರಾಜಕೀಯ ಗೊಂದಲದ ಉಪಯೋಗವನ್ನು ಪಡೆಯುವಲ್ಲಿ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ವಿಫಲವಾದಂತಿದೆ. ಶಾಮನೂರು ಶಿವಶಂಕರಪ್ಪ ಲಿಂಗಾಯತರ ನಾಯಕರಾಗುವ ಆತುರದಲ್ಲಿ ಜಿಲ್ಲಾ ರಾಜಕಾರಣವನ್ನು ಮರೆತಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಬ್ಬಾರ್ ಎತ್ತಿಕೊಂಡವರ ಕೂಸಾಗಿ ವರ್ತಿಸುತ್ತಿದ್ದಾರೆ. ಜಿಲ್ಲಾ ಕಾಂಗ್ರೆಸ್‌ನ ಶೋಚನೀಯ ಸ್ಥಿತಿಗೆ ಚಿಕಿತ್ಸೆ ನೀಡುವುದನ್ನು ಮರೆತು ಶಾಮನೂರು ಶಿವಶಂಕರಪ್ಪನವರ ಮನೆ ಅಂಗಳದ ದಾಸನಂತೆ ವರ್ತಿಸುತ್ತಿದ್ದಾರೆ ಜಬ್ಬಾರ್.

ಇಬ್ಬರ ಜಗಳದ ಲಾಭವನ್ನು ಪಡೆದುಕೊಂಡರೆ ಜಿಲ್ಲಾ ಕಾಂಗ್ರೆಸ್‌ಗೆ ಭವಿಷ್ಯವಿದೆ. ಇನ್ನಾದರೂ ಜಿಲ್ಲಾ ಕಾಂಗ್ರೆಸ್ ನಾಯಕರು ಮೈಕೊಡವೇಳಬೇಕಿದೆ. ಯಡ್ಡಿಗೆ ಲಿಂಗಾಯತರ ಬೆಂಬಲ ಕುಗ್ಗುತ್ತಿರುವುದನ್ನು ಶಾಮನೂರರು ಸೂಕ್ತವಾಗಿ ಉಪಯೋಗಿಸಿಕೊಂಡರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಕಳೆದುಕೊಂಡಿರುವ ಅಸ್ತಿತ್ವವನ್ನು ಪಡೆದುಕೊಳ್ಳಬಹುದು.

● ಟಿ.ಎನ್.ಷಣ್ಮುಖ

ಸಂಕೇಶ್ವರರ ದಿಗ್ವಿಜಯ ಇಲ್ಲ


ಮೀಡಿಯಾ ಮಸಾಲ

ಕಳೆದ ಏಪ್ರಿಲ್ 1ರಂದು, ಅಂದರೆ ಏಪ್ರಿಲ್ ಫೂಲ್ ದಿನದಂದು, 'ವಿಜಯವಾಣಿ' ಎಂಬ ದಿನಪತ್ರಿಕೆಯನ್ನು ಪ್ರಾರಂಭಿಸಿದ್ದ ವಿಜಯ ಸಂಕೇಶ್ವರ್ ಅವರು ಸದ್ಯದಲ್ಲೇ 'ದಿಗ್ವಿಜಯ' ಎಂಬ ಮತ್ತೊಂದು ದಿನಪತ್ರಿಕೆಯನ್ನು ಪ್ರಾರಂಭಿಸಲಿದ್ದಾರೆ ಎಂಬ ಮಾತು ಕೇಳಿಬಂದಿತ್ತು.

ಈ ಹೊಸ ಪತ್ರಿಕೆಯ ಬಗೆಗಿನ ಸುದ್ದಿ ಯಾರಲ್ಲೂ ಅಚ್ಚರಿ ಮೂಡಿಸಿರಲಿಲ್ಲ. ಯಾಕೆಂದರೆ ಈ ಹಿಂದೆ 'ವಿಜಯ ಕರ್ನಾಟಕ' ಎಂಬ ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಿದ್ದ ಸಂಕೇಶ್ವರರು ಅದು ಚೆನ್ನಾಗಿ ನಡೆಯುತ್ತಿದ್ದಾಗಲೇ 'ಉಷಾಕಿರಣ' ಎಂಬ ಮತ್ತೊಂದು ಕನ್ನಡ ದಿನಪತ್ರಿಕೆಯನ್ನೂ ಹುಟ್ಟುಹಾಕಿದ್ದರು.

ಅನಂತರ, 'ವಿಜಯ ಕರ್ನಾಟಕ' ಮಾತ್ರವಲ್ಲದೆ 'ಉಷಾಕಿರಣ'ವನ್ನೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮಾಲೀಕರಾದ ಬೆನ್ನೆಟ್ ಕೋಲ್ಮನ್ ಕಂಪನಿಗೆ ಬರೋಬ್ಬರಿ 300 ಕೋಟಿ ರೂಪಾಯಿಗಳಿಗೆ ಸಂಕೇಶ್ವರ್ ಮಾರಿದರು. ಮಾಲೀಕರು ಬದಲಾದರೂ 'ವಿಜಯ ಕರ್ನಾಟಕ' ತನ್ನ ಅಸಲೀ ಸ್ವರೂಪದಲ್ಲೇ ಮುಂದುವರೆದರೆ ಪಾಪ 'ಉಷಾಕಿರಣ' ಹಲವಾರು ಸರ್ಜರಿಗಳನ್ನು ಕಂಡಿತು. ಟೈಮ್ಸ್ ಮಾಲೀಕತ್ವದಡಿ ಅದು ಮೊದಲು ಇಂಗ್ಲಿಷ್ ಟೈಮ್ಸ್ ಪತ್ರಿಕೆಯ ಕನ್ನಡ ಅನುವಾದದ ರೂಪ ಪಡೆಯಿತು. ಅದು ಬರಕಾಸ್ತಾಗಲಿಲ್ಲ, ಈಗ 'ವಿಜಯ್ ನೆಕ್ಸ್ಟ್' ಎಂಬ ರೂಪ ಪಡೆದಿದೆ. ಮುಂದೆ ಏನಾಗುತ್ತದೋ ಬಲ್ಲವರಿಲ್ಲ.

ಈ ಮಧ್ಯೆ ವಿಜಯ ಕರ್ನಾಟಕದಲ್ಲೂ ಕೆಲವು ಬದಲಾವಣೆಗಳಾದವು. ಆ ಪತ್ರಿಕೆಯಲ್ಲಿ ಸಂಕೇಶ್ವರರ ಕಾಲದಿಂದ ಝಂಡಾ ಹೂಡಿದ್ದ ಕೇಸರಿ ತಂಡಕ್ಕೆ ಗೇಟ್‌ಪಾಸ್ ನೀಡಿದ ಮಾಲೀಕರು ಈ.ರಾಘವನ್ ಎಂಬ ಸಭ್ಯನನ್ನು ಸಂಪಾದಕ ಸ್ಥಾನದಲ್ಲಿ ಕೂರಿಸಿತು. ರಾಘವನ್ ಅವರು ಪತ್ರಿಕೆಯ ಪ್ರತಿ ಪುಟದಲ್ಲಿ ರಾರಾಜಿಸುತ್ತಿದ್ದ ಚೆಡ್ಡಿಗಳ ಕೆಸರನ್ನು ತೊಳೆದು ಹಾಕಿದರಲ್ಲದೆ ಪತ್ರಿಕೆಯ ಪ್ರಸಾರ ಸಂಖ್ಯೆಯನ್ನೂ ಕಾಪಾಡಿದರು. ದುರದೃಷ್ಟವಶಾತ್ ರಾಘವನ್ ಅಕಾಲಿಕವಾಗಿ ಹೃದಯಾಘಾತದಿಂದ ತೀರಿಕೊಂಡರು. ಈಗ ಸುಗತಾ ಶ್ರೀನಿವಾಸರಾಜು 'ವಿಕ'ದ ಸಂಪಾದಕರಾಗಿ ತಮ್ಮ ಕೆಲಸವನ್ನು ಸಮರ್ಥವಾಗಿ ಮುಂದುವರೆಸುತ್ತಿದ್ದಾರೆ.



ಇದೆಲ್ಲ ನಡೆಯುವ ಹೊತ್ತಿಗೆ ಐದು ವರ್ಷಗಳ ಕಾಲ ತಾನು ಪತ್ರಿಕೋದ್ಯಮಕ್ಕೆ ಕಾಲಿಡುವುದಿಲ್ಲ ಎಂದು ಸಂಕೇಶ್ವರ್ ಟೈಮ್ಸ್‌ನವರೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಅವಧಿ ಅಂತ್ಯಗೊಂಡಿತು. ಕೂಡಲೆ ಕಾರ್ಯಪ್ರವೃತ್ತರಾದ ಸಂಕೇಶ್ವರ್ ತುಮಕೂರಿನಲ್ಲಿ ಎದುಸಿರುಬಿಡುತ್ತಿದ್ದ 'ವಿಜಯವಾಣಿ' ಎಂಬ ಸ್ಥಳೀಯ ಪತ್ರಿಕೆಯ ಟೈಟಲ್ ಅನ್ನು ಖರೀದಿಸಿ ಅಖಾಡಕ್ಕೆ ಇಳಿದೇಬಿಟ್ಟರು. ಈ ಪತ್ರಿಕೆಗೆಂದು ಬರೋಬ್ಬರಿ 125 ಕೋಟಿ ರೂಪಾಯಿಗಳನ್ನು ಕಿಸೆಯಲ್ಲಿಟ್ಟುಕೊಂಡಿದ್ದ ಸಂಕೇಶ್ವರ್ ಈಗ ಗಂಗಾವತಿ ಎಂಬ ಚಿಕ್ಕ ಶಹರದಿಂದಲ್ಲದೇ ಒಟ್ಟು ಒಂಭತ್ತು ಕಡೆಗಳಲ್ಲಿ ಪ್ರಕಟಿಸುತ್ತಿದ್ದಾರೆ.

ಇಲ್ಲಿಯುತನಕ 'ವಿಜಯವಾಣಿ' ಕರ್ನಾಟಕದ ಪತ್ರಿಕಾರಂಗದಲ್ಲಿ ದೊಡ್ಡ ಗದ್ದಲವನ್ನೂ ಮಾಡಿಲ್ಲ, ಬದಲಾವಣೆಯನ್ನೂ ತಂದಿಲ್ಲ. ಆದರೂ ಜಿಲ್ಲಾ ಮತ್ತು ಸ್ಥಳೀಯ ಸುದ್ದಿಗಳಿಗೆ ಆದ್ಯತೆಯನ್ನು ನೀಡುವ ಮೂಲಕ ಅದು ತನ್ನದೇ ಆದ ಓದುಗರನ್ನು ಸೃಷ್ಟಿಸಿಕೊಂಡಿದೆ. ಜೊತೆಗೆ ಅದು 'ಲಿಂಗಾಯತರ ಪತ್ರಿಕೆ' ಎಂಬ 'ಹೆಗ್ಗಳಿಕೆ' ಪಡೆದು ಆ ಜಾತಿಯ ಓದುಗರನ್ನು ದೊಡ್ಡ ಸಂಖ್ಯೆಯಲ್ಲಿ ಪಡೆದಿದೆ ಎಂಬ ಮಾತೂ ಅಲ್ಲಲ್ಲಿ ಕೇಳಿಬರುತ್ತಿದೆ.

ಅದೇನೇ ಇರಲಿ, ಇತ್ತೀಚೆಗೆ ಸಂಕೇಶ್ವರ್ ಅವರು 'ದಿಗ್ವಿಜಯ' ಎಂಬ ಮತ್ತೊಂದು ದಿನಪತ್ರಿಕೆಯನ್ನು ಪ್ರಾರಂಭಿಸುವ ಯೋಜನೆಯನ್ನು ಪ್ರಕಟಿಸಿದ್ದರು. ಅದಕ್ಕೆಂದು ಅವರು ಬೆಂಗಳೂರಿನ 'ವಿಜಯವಾಣಿ' ಪತ್ರಿಕೆಯ ಕಚೇರಿಯ ಕಟ್ಟಡದ ನಾಲ್ಕನೆ ಮಹಡಿಯಲ್ಲಿ ಒಂದು ಆಫೀಸನ್ನು ತೆರೆದಿದ್ದರು. ಅಷ್ಟೇ ಅಲ್ಲ, ಸತೀಶ್ ಚಪ್ಪರಿಕೆ ಅವರನ್ನು ಸಂಪಾದಕರನ್ನಾಗಿ ನೇಮಿಸಿ ಇತರೆ ಸಿಬ್ಬಂದಿಯನ್ನೂ ಆಯ್ಕೆ ಮಾಡಿದ್ದರು. ಹೀಗೆ ಆಯ್ಕೆಯಾದ ಬಹಳಷ್ಟು ಪತ್ರಕರ್ತರು ಮತ್ತು ಇತರೆ ಸಿಬ್ಬಂದಿ ತಮ್ಮ ಈಗಿನ ಕೆಲಸಕ್ಕೆ ರಾಜೀನಾಮೆ ನೀಡಿ ಹೊಸ ಪತ್ರಿಕೆಯನ್ನು ಸೇರಲು ಸಿದ್ಧರಾಗಿದ್ದರು.


ಆದರೀಗ 'ದಿಗ್ವಿಜಯ' ಕಚೇರಿಯಿಂದ ಅವರಿಗೆಲ್ಲ ಆಘಾತಕಾರಿ ಸುದ್ದಿ ಬಂದಿದೆ. ಅದೇನೆಂದರೆ "ನೀವು ಈಗಿರುವಲ್ಲಿಯೇ ಮುಂದುವರೆಯಿರಿ. ಇಲ್ಲಿಗೆ ಬರುವ ಅವಶ್ಯಕತೆ ಇಲ್ಲ" ಎಂಬ ಸಂದೇಶ. ಇದರಿಂದಾಗಿ ಈಗ ರಾಜ್ಯಾದ್ಯಂತ "ಅಲ್ಲೂ ಇಲ್ಲ, ಇಲ್ಲೂ ಇಲ್ಲ" ಎಂಬ ಪರಿಸ್ಥಿತಿಯಲ್ಲಿ ನೂರಕ್ಕೂ ಹೆಚ್ಚು ಜನ ಸಿಲುಕಿಕೊಂಡಿದ್ದಾರೆ ಎಂದು ಅಂದಾಜಿಸಲಾಗಿದೆ.

ಯಾಕೆ ಹೀಗಾಯಿತು? ಏನಾಯಿತು? ಎಂದು ವಿಚಾರಿಸಿದವರಿಗೆ ಸಿಗುತ್ತಿರುವ ಉತ್ತರ "ಹೊಸ ಪತ್ರಿಕೆಯನ್ನು ಪ್ರಾರಂಭಿಸುವ ಯೋಜನೆಯಿಂದ ಮ್ಯಾನೇಜ್‌ಮೆಂಟ್ ಸದ್ಯಕ್ಕೆ ಹಿಂದೆ ಸರಿದಿದೆ."

ಇದರರ್ಥ ಸಂಕೇಶ್ವರರ 'ದಿಗ್ವಿಜಯ' ಸದ್ಯಕ್ಕಿಲ್ಲ...

ಪಂಚಮಸಾಲಿಗಳ ಮೇಲೆ ಯಡ್ಡಿ ವಕ್ರದೃಷ್ಟಿ

ಯಡಿಯೂರಪ್ಪ ಬಿಜೆಪಿಯಿಂದ ಹೊರಬಂದು ಹೊಸ ಪಕ್ಷ ಕಟ್ಟುವ ಸೂಚನೆಗಳು ಕರ್ನಾಟಕದಾದ್ಯಂತ ಹೊಸ ರಾಜಕೀಯ ತಿರುವುಗಳಿಗೆ ಕಾರಣವಾಗುತ್ತಿರುವಾಗಲೇ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಪ್ರತಿನಿಧಿಸುವ ಎರಡು ಪೀಠಗಳೂ ಒಂದಾಗುವ ಸೂಚನೆಗಳು ಕಾಣುತ್ತಿವೆ. ಉತ್ತರ ಕರ್ನಾಟಕ ಪಂಚಮಸಾಲಿ ಸಮುದಾಯ ಪ್ರಬಲವಾಗಿದ್ದು ಚುನಾವಣೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಹಿನ್ನೆಲೆಯಲ್ಲಿ ಯಡ್ಡಿ ಹಿಂಬಾಲಕ ಮುರುಗೇಶ್ ನಿರಾಣಿ ಇತ್ತೀಚೆಗೆ ತಮ್ಮ ಬೆಂಗಳೂರಿನ ಮನೆಯಲ್ಲಿ ಹರಿಹರದಲ್ಲಿರುವ ಪಂಚಮಸಾಲಿ ಲಿಂಗಾಯತರ ಮಹಾಂತ ಸ್ವಾಮಿಗಳು ಮತ್ತು ಗುರುಪೀಠದ ಪಾಡಕ್ಕಾದ ಕೂಡಲ ಸಂಗಮ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಶರಣರನ್ನು ಕೂರಿಸಿ ಇವರಿಬ್ಬರ ನಡುವೆ ರಾಜಿಸಂಧಾನ ಮಾಡಿದ್ದಾರೆ. ಹೀಗೆ ಪಂಚಮಸಾಲಿಗಳ ಇಬ್ಬರು ಸ್ವಯಂಘೋಷಿತ ಜಗತ್ತಾರಿ ಜಗದ್ಗುರುಗಳನ್ನು ಒಂದು ಕಡೆ ಕಲೆಹಾಕಿದ್ದು ಯಾರೆ ಲಿಂಗಾಯತರ ವಿವಿಧ ಒಳಪಂಗಡ ಗಳಲ್ಲಿ ತಳಮಳ ಹುಟ್ಟುಹಾಕಿದೆ. ಅದರಲ್ಲೂ ಪ್ರಬಲವಾಗಿರುವ ಸಾದುಲಿಂಗಾಯತರು ಪಂಚಮಸಾಲಿ ಜಗದ್ಗುರುಗಳ ನಡುವಿನ ಬೆಸುಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಮುಂದಾಗಲಿರುವ ರಾಜಕೀಯ ಪರಿಣಾಮವನ್ನು ಗಂಭೀರವಾಗಿ ಲೆಕ್ಕಹಾಕುತ್ತಿದ್ದಾರೆ.



ಎರಡು ಪಂಚಮಸಾಲಿ ಮಠಗಳು ತಮ್ಮ ಪ್ರತಿಷ್ಠೆಯ ಸಂಘರ್ಷವನ್ನು ಮರೆತು ಒಂದಾಗುವ ರಾಜೀಪಂಚಾಯತಿ ನಡೆದ ಬೆನ್ನಲ್ಲೇ ಇದೇ ಪಂಚಮಸಾಲಿ ಸಮುದಾಯದ ಬಸವನಗೌಡ ಯತ್ನಾಳರನ್ನು ಜೆಡಿಎಸ್‌ನಿಂದ ಜಗ್ಗುವ ಪ್ರಯತ್ನವೂ ಶುರುವಾಗಿದೆ. ಇಬ್ಬರು ಸ್ವಾಮಿಗಳ ಬೈಟಕ್‌ನಲ್ಲೇ ಖುದ್ದು ನಿರಾಣಿಯೇ ಯತ್ನಾಳರಿಗೆ ದೂರವಾಣಿ ಕರೆ ಮಾಡಿ "ನಮ್ಮ ಜೊತೆ ಬಂದುಬಿಡಿ" ಎಂದಿದ್ದಾರೆ.

ಇಂಥ ಪ್ರಯತ್ನದ ಹಿಂದೆ ಹೊಸ ಪಕ್ಷ ಕಟ್ಟಲು ತುದಿಗಾಲಲ್ಲಿ ನಿಂತಿರುವ ಯಡ್ಡಿಯ ಕುತಂತ್ರ ಅಡಗಿದೆ. ಬೆಂಗಳೂರು ಮತ್ತು ಮೈಸೂರು ಭಾಗದಲ್ಲಿ ಒಕ್ಕಲಿಗರ ಪ್ರಭಾವ ಹೆಚ್ಚಾಗಿದ್ದರೆ ಮಧ್ಯ ಕರ್ನಾಟಕದಲ್ಲಿನ ಸಾದು ಲಿಂಗಾಯತರ ಪ್ರಭಾವವಿದೆ. ಹಾಗೆಯೇ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಪಂಚಮಸಾಲಿ ಲಿಂಗಾಯತರ ಪ್ರಭಾವವಿದೆ. 2008ರ ಚುನಾವಣೆಯಲ್ಲಿ ದೇವೇಗೌಡ ಮತ್ತು ಕುಮಾರಸ್ವಾಮಿಯೆಂಬ ಒಕ್ಕಲಿಗರು ಲಿಂಗಾಯತರಾದ ತಮಗೆ ಅನ್ಯಾಯ ಮಾಡಿದರು ಎಂದು ಬೊಬ್ಬೆ ಹೊಡೆದ ಯಡ್ಡಿ ತನ್ನ ಸ್ವಜಾತಿ ಲಿಂಗಾಯತ ಸಮುದಾಯದಲ್ಲಿ 'ಜಾಗೃತಿ'ಯನ್ನು ಮೂಡಿಸಿ ಅಧಿಕಾರ ಹಿಡಿದದ್ದು ಈಗ ಇತಿಹಾಸ.

ಆದರೆ ಈ ಬಾರಿ ಜಾತಿ ರಾಜಕೀಯದ ಪರಿಸ್ಥಿತಿ ಅಷ್ಟು ಸರಳವಾಗಿಲ್ಲ. ಇತ್ತೀಚೆಗೆ ಮಧ್ಯ ಕರ್ನಾಟಕದ ದಾವಣಗೆರೆಯ ಸಾದು ಲಿಂಗಾಯತರ ಪ್ರಭಾವಿ ನಾಯಕ ಶಾಮನೂರು ಶಿವಶಂಕರಪ್ಪ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಹೊರಹೊಮ್ಮಿದ್ದಾರೆ. ಆ ಮೂಲಕ ತಾನೇ ಸಮಗ್ರ ಲಿಂಗಾಯತರ ಸರ್ವೋಚ್ಚ ನಾಯಕ ಎಂಬ ಯಡ್ಡಿಯ ಭ್ರಮೆಗೆ ಭಂಗ ತಂದಿದ್ದಾರೆ.

ಹೇಳಿಕೇಳಿ, ಶಾಮನೂರು ಕಾಂಗ್ರೆಸ್ ಪಕ್ಷದಲ್ಲಿ ಪ್ರಭಾವಿ ನಾಯಕ. ಅವರ ಸಮಾಜ ಅವರನ್ನು ಗೌರವಿಸುತ್ತದೆ. ಸಿರಿಗೆರೆಯ ಸಾದು ಸಧರ್ಮಮಠ ಶಿವಶಂಕರಪ್ಪನವರ ಬೆನ್ನ ಹಿಂದಿದೆ. ಶಿವಶಂಕರಪ್ಪ ವೀರಶೈವ ಮಹಾಸಭಾದ ಅಧ್ಯಕ್ಷರಾದನಂತರ ಯಡಿಯೂರಪ್ಪನಿಗೆ ರಾಜಕೀಯ ಆತಂಕ ಶುರುವಾಗಿದೆ. ತನ್ನ ಜಾತಿ ಜನರ ಬೆಂಬಲ ಇಲ್ಲದಿದ್ದರೆ ತನಗೆ ರಾಜಕೀಯ ಭವಿಷ್ಯ ಇಲ್ಲ ಎಂದು ಅರಿತ ಯಡ್ಡಿ ಉತ್ತರ ಕರ್ನಾಟಕದ ಪ್ರಭಾವಿ ಪಂಚಮಸಾಲಿ ಲಿಂಗಾಯತರ ಕಡೆ ತಮ್ಮ ವಕ್ರದೃಷ್ಟಿ ಹರಿಸಿದ್ದಾರೆ. ಹಾಗಾಗಿಯೇ ಆ ಸಮುದಾಯವನ್ನು ಪ್ರತಿನಿಧಿಸುವ ಎರಡು ಮಠಗಳನ್ನು ಒಗ್ಗೂಡಿಸುವ ಪ್ರಯತ್ನಕ್ಕೆ ಚಾಲನೆ ನೀಡಿದ್ದಾರೆ.

ನಿರಾಣಿಯ ದುರಾಲೋಚನೆ

ಮುರುಗೇಶ್ ನಿರಾಣಿ ಸದ್ಯ ಬೀಳಗಿಯ ಶಾಸಕ. ಬೀಳಗಿಯಲ್ಲಿ ಪಂಚಮಸಾಲಿ ಲಿಂಗಾಯತರ ಮತಗಳು ಕೇವಲ 10 ಸಾವಿರವಿದ್ದರೂ ನಿರಾಣಿ ಹಿಂದಿನ ಶಾಸಕ ಅಜಯ್ ಕುಮಾರ ಸರನಾಯಕರನ್ನು ಸೋಲಿಸಿದ್ದರು. ಹಾಗೆ ನೋಡಿದರೆ ಆಂಧ್ರ ರೆಡ್ಡಿಗಳ ಪ್ರಭಾವವಿರುವ ಬೀಳಗಿಯಿಂದ ನಿರಾಣಿ ಶಾಸಕನಾದದ್ದೇ ಪವಾಡದಂತಿತ್ತು. ಆದರೆ ಬರುವ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ನಿರಾಣಿ ಸ್ಪರ್ಧಿಸಿದರೆ ಆತ ಮನೆ ಸೇರುವುದು ಗ್ಯಾರಂಟಿ. ಈ ಭೀತಿ ಈಗ ನಿರಾಣಿಯನ್ನು ಕಾಡುತ್ತಿದೆ.

ಸದ್ಯ ಬಿಜಾಪುರದ ಬಬಲೇಶ್ವರ ಎಂಬ ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್‌ನ ಕುಡು ಒಕ್ಕಲಿಗ ಲಿಂಗಾಯತ ಸಮುದಾಯದ ಎಂ.ಬಿ.ಪಾಟೀಲರು ಪ್ರತಿನಿಧಿಸುತ್ತಿದ್ದರೆ. ಇದೇ ಬಬಲೇಶ್ವರದಲ್ಲಿ ಪಂಚಮಸಾಲಿ ಲಿಂಗಾಯತರ 60 ಸಾವಿರ ಮತಗಳಿವೆ. ಈ ಕಾರಣಕ್ಕೆ ಬರುವ ಚುನಾವಣೆಯಲ್ಲಿ ಬೀಳಗಿಯಿಂದ ಬಬಲೇಶ್ವರ ಕ್ಷೇತ್ರಕ್ಕೆ ನಿರಾಣಿ ಜಿಗಿಯುವ ಹುನ್ನಾರದಲ್ಲಿದ್ದಾರೆ. ಇದಕ್ಕೆ ಪೂರ್ವಭಾವಿ ಸಿದ್ಧತೆ ಎಂಬಂತೆ ಕೂಡಲಸಂಗಮ ಮತ್ತು ಹರಿಹರದ ಪಂಚಮಸಾಲಿ ಪೀಠಗಳನ್ನು, ಒಗ್ಗೂಡಿಸುವ ಪ್ರಯತ್ನದ ಮುಂಚೂಣಿಯಲ್ಲಿದ್ದಾರೆ ನಿರಾಣಿ.

ವಿಚಿತ್ರವೆಂದರೆ ಪಂಚಮಸಾಲಿಗಳ ಈ ಇಬ್ಬರು ಜಗದ್ಗುರುಗಳು ತಮ್ಮ ಪ್ರತ್ಯೇಕ ಪೀಠಗಳನ್ನು ಸ್ಥಾಪಿಸಿಕೊಂಡು ಹಲವಾರು ವರ್ಷಗಳೇ ಆಗಿದ್ದರೂ ಈ ಹಿಂದೆ ಈ ಎರಡೂ ಮಠಗಳನ್ನು ಒಂದುಗೂಡಿಸುವ ಬಗ್ಗೆ ನಿರಾಣಿ ಸೊಲ್ಲೆತ್ತಿರಲಿಲ್ಲ. ಆದರೆ ಈಗ ಇದ್ದಕ್ಕಿದ್ದಂತೆ ಯಾಕೆ ಮುಂದಾಗಿದ್ದಾರೆ ಎಂಬುದು ಗುಟ್ಟಾಗಿ ಉಳಿದಿಲ್ಲ.

ಉತ್ತರ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕದಲ್ಲಿ ಕೂಡಲಸಂಗಮದ ಮೃತ್ಯುಂಜಯ ಶರಣರ ಪ್ರಭಾವವಿದೆ. ನಿರಾಣಿ ಕೂಡಲಸಂಗಮ ಪೀಠಕ್ಕೆ ಸಮೀಪದವರಾಗಿದ್ದರೂ ಹರಿಹರದ ಪಂಚಮಸಾಲಿ ಮಹಾಂತಸ್ವಾಮಿಗಳ ಮಠಕ್ಕೂ ಬಂದುಹೋಗುವ ವರಾಗಿದ್ದಾರೆ. ಈ ಎರಡೂ ಮಠಗಳ ನಡುವೆ ಮತ್ಸರ ಮುಂದುವರೆದರೆ ಬಬಲೇಶ್ವರ ವಿಧಾನಸಭಾ ಕ್ಷೇತ್ರದಿಂದ ಮುಂಬರುವ ಚುನಾವಣೆಯಲ್ಲಿ ಗೆದ್ದುಬರುವ ನಿರಾಣಿಯ ಕನಸು ಭಗ್ನವಾಗುತ್ತದೆ. ಯಾಕೆಂದರೆ ಒಂದು ಪೀಠವನ್ನು ನಂಬಿದರೆ ಇನ್ನೊಂದು ಪೀಠ ಅನುಮಾನಿಸುತ್ತದೆ. ಅದರಲ್ಲೂ ನಿರಾಣಿ ಯಡ್ಡಿಯ ನೂತನ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ ಬಿಜೆಪಿಯಿಂದ ಪಂಚಮಸಾಲಿ ಲಿಂಗಾಯತ ಸ್ಪರ್ಧಿಸಿದರೆ ಇನ್ನೊಂದು ಪಕ್ಷ ತನ್ನ ವಿರೋಧಿಯನ್ನು ಬೆಂಬಲಿಸುವ ಸಾಧ್ಯತೆ ಇದ್ದೇ ಇರುತ್ತದೆ. ತನ್ನ ಸ್ವಾರ್ಥಕ್ಕೆ ಈಗ ನಿರಾಣಿ ಈ ಎರಡೂ ಪೀಠಗಳನ್ನು ಒಂದು ಮಾಡುವ ತೇಪೆ ಕೆಲಸಕ್ಕೆ ಮುಂದಾಗಿದ್ದಾರೆ.



ಲಿಂಗಾಯತರಲ್ಲಿ ಗಾಣಿಗ ಲಿಂಗಾಯತ ಸಮುದಾಯವೇ ಅಲ್ಪಸಂಖ್ಯಾತ. ಆದರೂ ಗಾಣಿಗ ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಯಾದರು. ಅಧಿಕಾರ ಹಿಡಿದನಂತರ ಲಿಂಗಾಯತರ ಮೇಲೆ ತನ್ನ ಹಿಡಿತ ಸಾಧಿಸಲು ಮಧ್ಯ ಕರ್ನಾಟಕದ ಶಾಸಕರಾದ ರವೀಂದ್ರನಾಥ, ಹರೀಶ, ಮಾಡಾಳು ವಿರುಪಾಕ್ಷಪ್ಪ, ರೇಣುಕಾಚಾರ್ಯ ತರಹದವರಿಗೆ ಮಣೆ ಹಾಕುತ್ತಾ ಬಂದರು. ಹಾಗೆಯೇ ಉತ್ತರ ಕರ್ನಾಟಕದ ಶಾಸಕರಾದ ಬಸವರಾಜ ಬೊಮ್ಮಾಯಿ, ಉದಾಸಿ, ನಿರಾಣಿ, ಚರಂತಿಮಠ ತರಹದವರನ್ನು ಬೆಂಬಲಿಸುತ್ತಾ ಬಂದರು. ಆ ಮೂಲಕ ರಾಜ್ಯದ ಸಾದು ಲಿಂಗಾಯತರು ಮತ್ತು ಪಂಚಮಸಾಲಿ ಲಿಂಗಾಯತರ ನಾಯಕ ಎನಿಸಿಕೊಂಡರು. ಇದೇ ಹೊತ್ತಿನಲ್ಲಿ ರಾಜ್ಯಾದ್ಯಂತ ಲಿಂಗಾಯತ ಮಠಗಳಿಗೆ ಧಾರಾಳವಾಗಿ ಸರ್ಕಾರಿ ತಿಜೋರಿಯಿಂದ ಹಣದ ಹೊಳೆಯನ್ನೇ ಹರಿಸಿದರು. ಇಂತಹ ಕಾರಣಕ್ಕಾಗಿಯೇ ಯಡ್ಡಿಯನ್ನು ಮುಖ್ಯಮಂತ್ರಿ ಕುರ್ಚಿಯಿಂದ ಬಿಜೆಪಿ ನಾಯಕರು ಇಳಿಸಿದಾಗ ಲಿಂಗಾಯತ ಶಾಸಕರು ಮತ್ತು ಮಠಗಳು ನಾಚಿಕೆ ಇಲ್ಲದೆ ಬೀದಿಗಿಳಿದು ಭ್ರಷ್ಟ ಯಡ್ಡಿಯನ್ನು ಬೆಂಬಲಿಸಿದ್ದವು.

ಪಂಚಮಸಾಲಿಗಳ ಸಮಾವೇಶ

ಕಳೆದ ಅಕ್ಟೋಬರ್ 8ರಂದು ಕೂಡಲ ಸಂಗಮದ ಪಂಚಮಸಾಲಿ ಪೀಠದ ಜಯಮೃತ್ಯುಂಜಯ ಶರಣರ ನೇತೃತ್ವದಲ್ಲಿ ಬಬಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಪಂಚಮಸಾಲಿ ಸಮಾಜದ ಜಿಲ್ಲಾ ಮಟ್ಟದ ಬೃಹತ್ ಸಮಾವೇಶ ನಡೆಯುವುದಿತ್ತು. ಅದು ನಿರಾಣಿಯ ನೇತೃತ್ವದಲ್ಲಿ ಸಂಘಟನೆಗೊಂಡಿತ್ತು. ಆದರೆ ಯಡಿಯೂರಪ್ಪ ನಿರಾಣಿಯ ಕಿವಿಹಿಂಡಿ ಬಬಲೇಶ್ವರದಲ್ಲಿ ನಡೆಯುವ ಸಮಾವೇಶವನ್ನು ತಡೆದು ಪಂಚಮಸಾಲಿ ಸಮಾಜದ ಎರಡೂ ಪೀಠಗಳನ್ನು ಒಂದುಗೂಡಿಸಲು ಸೂಚಿಸಿದರು.

ನಿರಾಣಿ ತಡಮಾಡದೆ ಕಾರ್ಯಪ್ರವೃತ್ತರಾದರು. ಪರಿಣಾಮವಾಗಿ 8ರಂದು ನಡೆಯಬೇಕಾಗಿದ್ದ ಬಬಲೇಶ್ವರದ ಪಂಚಮಸಾಲಿ ಸಮಾಜದ ಜಿಲ್ಲಾ ಸಮಾವೇಶ ರದ್ದಾಯಿತು. ಅದರ ಬದಲಾಗಿ ಒಂದಾದ ಎರಡೂ ಪೀಠಗಳ ಜಗದ್ಗುರುಗಳ ಸಮ್ಮುಖದಲ್ಲಿ ಇದೇ 28ರಂದು ಅದೇ ಬಬಲೇಶ್ವರದಲ್ಲಿ ರಾಜ್ಯ ಮಟ್ಟದ ಪಂಚಮಸಾಲಿ ಲಿಂಗಾಯತರ ಶಕ್ತಿ ಪ್ರದರ್ಶನ ನಡೆಯಲಿದೆ. ಅಂದರೆ ಬಬಲೇಶ್ವರದಲ್ಲಿ ಜರುಗಲಿರುವ ಸಮಾವೇಶ ದಲ್ಲಿ ಯಡಿಯೂರಪ್ಪ ಕಟ್ಟಲಿರುವ ಹೊಸ ಪಕ್ಷಕ್ಕೆ ಪಂಚಮಸಾಲಿಗಳನ್ನು ಕಟ್ಟಿಹಾಕುವ ಯತ್ನ ನಡೆಯಲಿದೆ.

ಯಡಿಯೂರಪ್ಪ ನಡೆಸುತ್ತಿರುವ ಇಷ್ಟೆಲ್ಲ ತಂತ್ರ-ಕುತಂತ್ರಗಳನ್ನು ಲಿಂಗಾಯತ ಸಮಾಜದ ಇತರೆ ಒಳಪಂಗಡಗಳೂ ಸೂಕ್ಷ್ಮವಾಗಿ ಗಮನಿಸುತ್ತಿವೆ. ಹಾಗೊಂದು ವೇಳೆ ಯಡಿಯೂರಪ್ಪ ಉತ್ತರ ಕರ್ನಾಟಕದ ಪಂಚಮಸಾಲಿ ಲಿಂಗಾಯತ ಸಮುದಾಯದ ಬೆಂಬಲದೊಂದಿಗೆ ತನ್ನ ರಾಜಕೀಯ ಪಕ್ಷವನ್ನು ಪ್ರಾರಂಭಿಸಿದರೆ ಮಧ್ಯ ಕರ್ನಾಟಕದ ಸಾದುಲಿಂಗಾಯತರು, ಪಂಚಾಚಾರ್ಯ ಲಿಂಗಾಯತರು, ನೊಣಬರು ಮತ್ತು ಇತರೆ ಪಂಗಡದವರು ಯಡಿಯೂರಪ್ಪನನ್ನು ಲಿಂಗಾಯತ ಸಮಾಜದ ಪ್ರಶ್ನಾತೀತ ನಾಯಕನೆಂದು ಸ್ವೀಕರಿಸುವುದಿಲ್ಲ.

ಅದೇನೇ ಇದ್ದರೂ ಯಾರೂ ಮಧ್ಯ ಕರ್ನಾಟಕದಲ್ಲಿ ಸಾದು ಲಿಂಗಾಯತರ ಪ್ರಭಾವವನ್ನು ಕಡೆಗಣಿಸುವಂತಿಲ್ಲ. ಶಾಮನೂರು ಶಿವಶಂಕರಪ್ಪ ವೀರಶೈವ ಸಮಾಜದ ಅಧ್ಯಕ್ಷರಾಗುವ ಮುನ್ನವೇ ಕಾಂಗ್ರೆಸ್ ಪಕ್ಷದಲ್ಲಿ ಲಿಂಗಾಯತರಿಗೆ ಪಕ್ಷದ ಅಧ್ಯಕ್ಷ ಗಾದಿ ನೀಡಬೇಕು ಎಂದಿದ್ದರಲ್ಲದೆ, ತನಗೆ ಆ ಸ್ಥಾನ ನೀಡಿದರೆ ಬರುವ ಚುನಾವಣೆಯಲ್ಲಿ ಕನಿಷ್ಟ 150 ಅಸೆಂಬ್ಲಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ತಮ್ಮ ಪಾರ್ಟಿಯನ್ನು ಅಧಿಕಾರಕ್ಕೆ ತರುತ್ತೇನೆಂದು ಹೇಳಿದ್ದರು.

ಶಾಮನೂರರ ಈ ಮಾತುಗಳು ಲಿಂಗಾಯತರ ಒಳಪಂಗಡಗಳಲ್ಲಿ ಸಂಚಲನವನ್ನು ಮೂಡಿಸಿತ್ತು. ಜೊತೆಗೆ ಯಡಿಯೂರಪ್ಪನ ಅಧಿಕಾರ ದಾಹಕ್ಕೂ ತಣ್ಣೀರು ಎರಚಿತ್ತು. ಹಾಗಾಗಿಯೇ ಯಡಿಯೂರಪ್ಪ ಮಧ್ಯ ಕರ್ನಾಟಕದ ದಾವಣಗೆರೆ, ಶಿವಮೊಗ್ಗ ಚಿತ್ರದುರ್ಗದ ವೀರಶೈವ ಶಾಸಕರಿಗೆ ಮಣೆ ಹಾಕುತ್ತಲೇ ತಮ್ಮ ತಂತ್ರಗಾರಿಕೆಯನ್ನು ಉತ್ತರ ಕರ್ನಾಟಕದ ಕಡೆಯೂ ವಿಸ್ತರಿಸಿದ್ದಾರೆ.

ಇದೇ 28 ರಂದು ನಡೆಯಲಿರುವ ಪಂಚಮಸಾಲಿ ಸಮುದಾಯದ ಎರಡು ಪೀಠಗಳ ಸಮಾಗಮದ ಬೃಹತ್ ಸಮಾವೇಶದ ವೇದಿಕೆಯಿಂದ ಯಾವ ರಾಜಕೀಯ ನಿರ್ಣಯ ಹೊರಬೀಳುತ್ತದೋ ಕಾದು ನೋಡಬೇಕಾಗಿದೆ.

● ಟಿ.ಎನ್.ಷಣ್ಮುಖ

→ 11

ಹರಾಮಿ ಅಳಿಯ


ದೆಹಲಿಯ ಬಜಾರುಗಳಲ್ಲಿ ಅಂಡಲೆಯುತ್ತಿದ್ದ ಈ ಹರಾಮಿ ಅಳಿಯ ಈಗ ಪಂಜಾಬ್, ರಾಜಸ್ಥಾನ ಮುಂತಾದೆಡೆಗಳಲ್ಲಿ ಭಾರೀ ಭೂಮಿಯನ್ನು ಖರೀದಿಸಿದ್ದಾನೆ. 2007ರ ನಂತರ ಈತನ ವ್ಯವಹಾರಗಳು ಹಲವು ಕ್ಷೇತ್ರಗಳಿಗೆ ವಿಸ್ತರಿಸಿದೆ. ಸ್ಕೈ ಲೈಟ್ ಹಾಸ್ಪಿಟಾಲಿಟಿ ಪ್ರೈ ಲಿ, ನಾರ್ತ್ ಇಂಡಿಯಾ ಐಟಿ ಪಾರ್ಕ್ಸ್ ಪ್ರೈ ಲಿ, ಬ್ಲೂ ಬ್ರೀಜ್ ಟ್ರೇಡರ್ಸ್ ಪ್ರೈ ಲಿ, ಸ್ಕೈ ಲೈಟ್ ರಿಯಾಲಿಟಿ ಪ್ರೈ ಲಿ, ರಿಯಲ್ ಅರ್ಥ್ ಎಸ್ಟೇಟ್ಸ್ ಪ್ರೈ ಲಿ – ಹೀಗೆ ನಾನಾ ಕಂಪನಿಗಳನ್ನು ಪ್ರಾರಂಭಿಸಿದ್ದಾನೆ. ಈ ಎಲ್ಲಾ ಕಂಪನಿಗಳು ಕಳೆದ 5 ವರ್ಷಗಳಲ್ಲಿ ಆರಂಭವಾಗಿವೆ ಎಂಬುದು ಮತ್ತೊಂದು ವಿಶೇಷ. ಇದೂ ಅಲ್ಲದೆ 2ಜಿ ಹಗರಣದಲ್ಲಿ ಭಾಗಿಯಾಗಿದ್ದ ಯೂನಿಟೆಕ್ ಎಂಬ ಕಂಪನಿಯಲ್ಲಿ 20% ಶೇರುಗಳನ್ನು ವಾದ್ರಾ ಪಡೆದುಕೊಂಡಿದ್ದ ಎಂಬ ಆರೋಪವೂ ಕೇಳಿಬಂದಿದೆ. ಆದರ್ಶದ ಮಾತುಗಳು ಕೇವಲ ಬೂಟಾಟಿಕೆ ಮಾತ್ರ.

ಈತ ವ್ಯಕ್ತಿಗತವಾಗಿ ಬಾಡಿ ಬಿಲ್ಡಿಂಗ್‌ನಲ್ಲಿ ವಿಶೇಷ ಆಸಕ್ತಿಯಿರುವ ಮನುಷ್ಯ. ಶ್ರೀಮಂತಿಕೆಯೂ ಇಲ್ಲದೆ, ವಿಶೇಷ ಪ್ರತಿಭೆಯೂ ಇಲ್ಲದೆ ಪ್ರಿಯಾಂಕಳನ್ನು ಆಕರ್ಷಿಸಲು ಈತನ ಸಹಾಯಕ್ಕೆ ಬಂದಿದ್ದು ಬಹುಶಃ ಈತನ ಸಿಕ್ಸ್ ಪ್ಯಾಕ್ ಬಾಡಿಯೇ ಇರಬೇಕು. ಈಗಲೂ ಕೆಲವು ಮ್ಯಾಗಜಿನ್‌ಗಳಲ್ಲಿ ಈತನ ಸಿಕ್ಸ್‌ಪ್ಯಾಕ್ ಫೋಟೋಗಳು ಅಚ್ಚಾಗುತ್ತವೆ. ಬಹಾರಾಮಿ ಬೈಕ್‌ಗಳು, ಕಾರುಗಳೆಂದರೆ ಈತನಿಗೆ ಇನ್ನಿಲ್ಲದ ಹುಚ್ಚು. ಟಾಪ್ ಎಂಡ್ ಬಿಎಂಡಬ್ಲ್ಯು ಮರ್ಸಿಡಿಸ್, ರೇಂಜ್ ರೋವರ್ ಕಾರುಗಳ ಸಾಲು ಈತನ ಮನೆಯ ಮುಂದೆ ನಿಂತಿರುತ್ತವೆ.

ರೈಲ್ವೆ ಟಿಕೆಟ್ ಪಡೆಯಲು ಕ್ಯೂನಲ್ಲಿ ನಿಲ್ಲುತ್ತೇನೆ ಎಂದಿದ್ದ ರಾಬರ್ಟ್ ವಾದ್ರಾನ ಹೆಸರು ಈಗ ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಸೆಕ್ಯೂರಿಟಿ ಚೆಕ್‌ನಿಂದ ವಿನಾಯಿತಿಯಿರುವ ಗಣ್ಯಾತಿಗಣ್ಯರ ಪಟ್ಟಿಯಲ್ಲಿ ಪ್ರದರ್ಶಿತವಾಗುತ್ತಿದೆ. ಅಂದಹಾಗೆ ಆ ಪಟ್ಟಿ ಹೀಗಿದೆ. ಭಾರತದ ರಾಷ್ಟ್ರಪತಿ, ಭಾರತದ ಪ್ರಧಾನಿ, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ...... ಹೀಗೆ 30 ಹುದ್ದೆಗಳ ಪಟ್ಟಿ ಮುಂದುವರೆಯುತ್ತದೆ. 31 ನೇ ಹುದ್ದೆಯ ಹೆಸರೇ ರಾಬರ್ಟ್ ವಾದ್ರಾ! ಸೋನಿಯಾ ಗಾಂಧಿಯ ಅಳಿಯನಾಗುವುದೆಂದರೆ ಈ ದೇಶದ ಅತ್ಯಂತ ಪ್ರಭಾವಿ ಹುದ್ದೆಗೆ ಸರಿಸಮ ಎಂದರ್ಥ! ●

ವಾದ್ರಾಗಳ ದುರಂತ ಹಾಗೂ ಆರೆಸ್ಸೆಸ್ ನೀತಿ

ವಾದ್ರಾ ಕುಟುಂಬ ಮೂಲತಃ ಪಂಜಾಬಿನವರಾದರೂ ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ನೆಲೆಸಿದೆ. ರಾಬರ್ಟ್‌ನ ದೊಡ್ಡಪ್ಪ ಓಂಪ್ರಕಾಶ್ ವಾದ್ರಾ ಆರೆಸ್ಸೆಸ್‌ನ ಕಟ್ಟಾ ಅನುಯಾಯಿ. ಆತನ ಮಕ್ಕಳು ಅಪಘಾತದಲ್ಲಿ ತೀರಿಕೊಂಡ ನಂತರ ಜಿಗುಪ್ಸೆಗೊಂಡ ಆತ ತನ್ನ ಆಸ್ತಿಯನ್ನು ಆರೆಸ್ಸೆಸ್‌ನವರು ನಡೆಸುತ್ತಿರುವ ಸರಸ್ವತಿ ಶಿಶುಮಂದಿರ ಟ್ರಸ್ಟ್‌ಗೆ ಕೊಟ್ಟುಬಿಟ್ಟರು. ಕೇಸರಿಕೂಟದ ಬಗ್ಗೆ ಆತನ ಕಮಿಟ್‌ಮೆಂಟ್ ಅಂಥಾದ್ದು.



ರಾಬರ್ಟ್‌ನ ತಂದೆ ರಾಜೇಂದರ್ ವಾದ್ರಾ ಹಿತ್ತಾಳೆ ಮತ್ತು ಮರದಿಂದ ಮಾಡಿದ ಕರಕುಶಲ ವಸ್ತುಗಳ ವ್ಯಾಪಾರ ಮಾಡುತ್ತಿದ್ದವರು. ಆರೆಸ್ಸೆಸ್ ಪ್ರತಿನಿಧಿಸುವ ಪೊಳ್ಳು ದೇಶಭಕ್ತಿಯ ವಾದವನ್ನೇ ಮುಂದುಮಾಡಿ ಅವರು ಮಗನ ಮದುವೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ದೇಶದ ಭದ್ರತೆಯನ್ನು ವಿದೇಶೀ ಶಕ್ತಿಗಳಿಗೆ ಅಡಮಾನವಿಟ್ಟ ಕುಟುಂಬದ ಜೊತೆ ಸಂಬಂಧ ನನಗೆ ಸುತರಾಂ ಇಷ್ಟವಿಲ್ಲವೆಂದು ಪಕ್ಕಾ ದೇಶಭಕ್ತರ ಭಾಷೆಯಲ್ಲಿ ಹೂಂಕರಿಸಿದ್ದರು.

ಆದರೆ ನಂತರದ ದಿನಗಳಲ್ಲಿ ಏನಾಯಿತು ಗೊತ್ತೆ? ಈ ದೇಶಭಕ್ತ ಅದೇ 'ವಿದೇಶಿ' ಬೀಗತಿ ಹೆಸರನ್ನು ಬಳಸಿಕೊಂಡು ದಂಧೆ ನಡೆಸಲು ಪ್ರಾರಂಭಿಸಿದ. ತಾನು ಪ್ರಿಯಾಂಕಾ ಗಾಂಧಿಯ ಮಾವ ಎಂಬ ಲೇಬಲ್ ಹಚ್ಚಿಕೊಂಡು ಅಧಿಕಾರ ಕೇಂದ್ರಗಳಲ್ಲಿ ಅಡ್ಡಾಡಲು ಶುರುವಿಟ್ಟುಕೊಂಡ. ಮೆಡಿಕಲ್, ಇಂಜಿನಿಯರಿಂಗ್ ಸೀಟು ಕೊಡಿಸುವುದಾಗಿ, ಕೆಲಸ ಕೊಡಿಸುವುದಾಗಿ ಹೇಳಿ ಹಣ ಬಾಚುವ ದಂಧೆಗಿಳಿದ. ಹಾಗೇ ಮುಂದುವರೆದು ಪ್ರದೇಶ್ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಸದಸ್ಯರ ನೇಮಕಾತಿ ವಿಷಯಕ್ಕೂ ಕೈಹಾಕಿದ. ಮತ್ತೊಂದು ಕಡೆ ದೆಹಲಿ ಹಾಗೂ ಮುಂಬೈನ ಅಧಿಕಾರ ಕೇಂದ್ರಗಳಲ್ಲಿದ್ದ ಕಾಂಗ್ರೆಸ್ ನಾಯಕರಿಗಂತೂ ರಾಜೇಂದರ್‌ನ ಹಾವಳಿ ಹುಚ್ಚ ರಿಚರ್ಡ್ಸ್‌ನ ಕಾಟ ಅತಿಯಾಗಿ ಹೋಗಿತ್ತು. ಸೀದಾ ಮುಖ್ಯಮಂತ್ರಿ ಚೇಂಬರ್‌ಗೆ ದಾಂಗುಡಿಯಿಟ್ಟು ಚಂಡಿ ಹಿಡಿದು ಕೂರುತ್ತಿದ್ದ.

ಈ ವಾದ್ರಾಗಳ ಹಾವಳಿ ಹೆಚ್ಚುತ್ತಿದ್ದಂತೆ, ಹಲವಾರು ಹಿರಿಯ ಕಾಂಗ್ರೆಸ್ಸಿಗರು ಈ ವಾದ್ರಾಗಳ ವಾರ್ತೆಯನ್ನು ಸೋನಿಯಾ ಗಾಂಧಿ ಕಿವಿಗೆ ಹಾಕಿದರು. ಈ ಅಸಹ್ಯಗಳಿಂದ ದೂರವಾಗುವುದು ಸೋನಿಯಾಗೆ ಅನಿವಾರ್ಯವಾಗಿತ್ತು. ಕೂಡಲೇ ಅಳಿಯ, ಮಗಳನ್ನು ಕರೆಸಿದ ಸೋನಿಯಾ ಈ ಅವಾಂತರಗಳಿಗೆ ಅಂತ್ಯ ಹಾಡುವಂತೆ ತಾಕೀತು ಮಾಡಿದರು. ಪರಿಣಾಮವಾಗಿ ರಾಬರ್ಟ್ ವಾದ್ರಾ ತನ್ನ ಬಂಧುಗಳು ತನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳದಂತೆ 2002ರ ಜನವರಿಯಲ್ಲಿ ವಕೀಲರ ಮೂಲಕ ಸಾರ್ವಜನಿಕ ನೋಟಿಸ್ ಜಾರಿ ಮಾಡಿದರು. ಈ ನೋಟಿಸ್ ಜಾರಿ ಮಾಡಿದ ವಕೀಲ ಬೇರಾರೂ ಅಲ್ಲ, ಅಂದಿನ ಕಾನೂನು ಸಚಿವ, ಕರ್ನಾಟಕದ ಇಂದಿನ ರಾಜ್ಯಪಾಲ ಹಂಸರಾಜ್ ಭಾರದ್ವಾಜ್‌ರ ಮಗ ಅರುಣ್ ಭಾರದ್ವಾಜ್.


ಹಾಗೆಯೇ ತಮ್ಮ ಕುಟುಂಬದ ಹೆಸರು ಹೇಳಿಕೊಂಡು ಬರುವವರನ್ನು ಕಟ್ಟುನಿಟ್ಟಾಗಿ ದೂರ ಇರಿಸಬೇಕೆಂದು ಕಾಂಗ್ರೆಸ್‌ನ ಎಲ್ಲಾ ಸಿಎಂಗಳಿಗೂ ಹಾಗೂ ಪ್ರದೇಶ್ ಕಾಂಗ್ರೆಸ್ ಸಮಿತಿಗಳಿಗೂ ಸೋನಿಯಾ ವಿಶೇಷ ಆದೇಶವೊಂದನ್ನು ಜಾರಿ ಮಾಡಿದ್ದರು.

ಈ ಮೂಲಕ ರಾಬರ್ಟ್ ತನ್ನ ಕುಟುಂಬದೊಂದಿಗಿನ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡ. ವಾದ್ರಾ ಕುಟುಂಬ ಆರೆಸ್ಸೆಸ್ ಜೊತೆ ಸಂಬಂಧ ಇರಿಸಿಕೊಂಡಿದ್ದ ಕಾರಣಕ್ಕಾಗಿಯೇ ಆತ ಕುಟುಂಬದ ಸಂಬಂಧ ಕಡಿದುಕೊಂಡ ಎಂದು ಆರೆಸ್ಸೆಸ್‌ನ ಕೆಲ ಕಟ್ಟರ್ ಅಭಿಮಾನಿಗಳು ಅಗ್ಗದ ಪ್ರಚಾರ ಕೈಗೊಂಡರು. ಕೆಲಕಾಲದ ನಂತರ ರಾಬರ್ಟ್‌ನ ಅಣ್ಣ ಆತ್ಮಹತ್ಯೆ ಮಾಡಿಕೊಂಡ. ರಾಬರ್ಟ್‌ನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಅಕ್ಕ ಕೂಡ ಕಾರು ಅಪಘಾತದಲ್ಲಿ ತೀರಿಕೊಂಡಳು. ರಾಬರ್ಟ್‌ನ ತಾಯಿ ತನ್ನ ಗಂಡನೊಂದಿಗೆ ಹೊಂದಿಕೊಳ್ಳಲಾಗದೆ ದೂರವಾದಳು. ಕೆಲ ವರ್ಷಗಳ ನಂತರ ಅನಾರೋಗ್ಯ ಪೀಡಿತನಾಗಿ ಒಂಟಿಯಾಗಿ ಜೀವಿಸುತ್ತಿದ್ದ ಆತನ ವೃದ್ಧ ತಂದೆ ಕೂಡ ಆತ್ಮಹತ್ಯೆ ಮಾಡಿಕೊಂಡರು.

ಈ ಎಲ್ಲ ದುರಂತ ಸಾವುಗಳಲ್ಲೂ ಏನೋ ನಿಗೂಢತೆಯಿದೆ ಎಂಬ ಅಪಪ್ರಚಾರವನ್ನು ಆರೆಸ್ಸೆಸ್‌ವಾದಿಗಳು ಚಾಲ್ತಿಯಲ್ಲಿಟ್ಟಿದ್ದಾರೆ. ಈ ಆರೋಪಗಳಲ್ಲಿ ಹುರುಳಿದ್ದರೆ ಅದನ್ನು ಬಯಲಿಗೆಳೆದು ಹೋರಾಡಲು ಅವರು ಸುತರಾಂ ಸಿದ್ಧರಿಲ್ಲ. ಗಾಳಿ ಸುದ್ದಿ ಹಬ್ಬಿಸುವುದರಲ್ಲೇ ಹೆಚ್ಚಿನ ರಾಜಕೀಯ ಲಾಭ ಎಂಬುದು ಈ ಕೂಟದ ಮಾಮೂಲಿ ಲೆಕ್ಕಾಚಾರ ತಾನೇ?

ಶಾಲಾ ಪಠ್ಯ ಪುಸ್ತಕಗಳಲ್ಲಿ ಮಹಿಳೆ ನಾಪತ್ತೆ

● ಡಾ.ಸಬಿಹಾ ಭೂಮೀಗೌಡ



ಶಿಕ್ಷಣ ತಜ್ಞರೆಂದು ಸರಕಾರ ನೇಮಿಸಿದ ಪಠ್ಯಪುಸ್ತಕ ಸಮಿತಿಯವರು 2012 ರಿಂದ 5ನೇ ತರಗತಿ ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗೆ ಹೊಸ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿದ್ದಾರೆ. ಐದು ಮತ್ತು ಎಂಟನೆಯ ತರಗತಿಯ ವಿದ್ಯಾರ್ಥಿಗಳದು 11 ಮತ್ತು 14ರ ವಯಸ್ಸು. ಈ ಟೀನ್‌ಏಜ್‌ನಲ್ಲಿ ಅವರಿಗೆ ಒದಗಿಸುವ ಶಿಕ್ಷಣದ ಮಾದರಿ ಅವರು ಬದುಕಿನ ಕುರಿತು ಹೊಂದುವ ದೀರ್ಘಕಾಲೀನ ನಿಲುವುಗಳಿಗೆ ತಳಹದಿಯ ಹಾಗೆ ಕೆಲಸ ಮಾಡುತ್ತಿರುತ್ತದೆ. ಆದುದರಿಂದ ಪಠ್ಯವನ್ನು ರೂಪಿಸುವಾಗ ನಮ್ಮ ಜವಾಬ್ದಾರಿ ಮತ್ತು ಕಾಳಜಿಗಳು ಹೆಚ್ಚು ಗುರುತರವೂ ನಿಖರವೂ ಆಗಿರಬೇಕಾಗುತ್ತದೆ. ನಮ್ಮ ಎಳೆಯ ತಲೆಮಾರು ಹೇಗೆ ಬೆಳೆಯಬೇಕೆಂದು ನಾವು ಆಶಿಸುತ್ತೇವೆ ಎಂಬುದೇ ಮೂಲಭೂತವಾಗಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ನಮ್ಮ ಮಕ್ಕಳಲ್ಲಿ ಲಿಂಗತ್ವದ ಪೂರ್ವಾಗ್ರಹಗಳು ಇರಬೇಕೇ? ಅವು ಬೆಳೆಯಬೇಕೇ? ಅಥವಾ ಹೆಣ್ಣಾಗಲಿ-ಗಂಡಾಗಲಿ, ಲಿಂಗತ್ವಸೂಕ್ಷ್ಮತೆ (gender sensitiveness) ಹೊಂದಿದವರಾಗಬೇಕೇ? ಪುರುಷಪ್ರಧಾನ ಚಿಂತನೆ, ದೃಷ್ಟಿಕೋನ, ಅದು ರೂಪಿಸಿದ ಸ್ತ್ರೀ-ಪುರುಷರ ಪಾತ್ರಗಳ ಪಡಿಯಚ್ಚು (stereotyped roles) ಎಂಬ ಅನಿಷ್ಟಗಳಿಗೆ ಅವರನ್ನೂ ತುತ್ತಾಗಿಸಬೇಕೇ? ಎಂಬ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕಾಗಿದೆ.

ಎಳೆಯ ಮನಸ್ಸುಗಳು ಎಲ್ಲವನ್ನೂ ಕುತೂಹಲ, ಬೆರಗು ಮತ್ತು ಎಚ್ಚರದಿಂದ ವೀಕ್ಷಿಸುತ್ತಿರುತ್ತವೆ. ಹಸಿಮಣ್ಣಿನಂಥ ಮಕ್ಕಳ ಮನಸ್ಸಿಗೆ ಬಿದ್ದ ಸಂಗತಿಗಳು ಅವರ ಬದುಕಿನ ದೃಷ್ಟಿ ಮತ್ತು ಅವರ ಲೋಕದೃಷ್ಟಿಯನ್ನು ನಿರ್ಮಿಸುತ್ತಿರುತ್ತವೆ. ಹೀಗಿರುವಾಗ ನಮ್ಮ ಮಕ್ಕಳು ಹೇಗೆ ಬೆಳೆಯಬೇಕು? ಸಮಾಜದಲ್ಲಿ ಈಗಾಗಲೇ ಇರುವ ಜಾತಿ, ವರ್ಗ, ವರ್ಣಗಳ ಕಾಯಿಲೆಗಳನ್ನು ಅವರೂ ಅಂಟಿಸಿಕೊಂಡೋ, ಅವುಗಳಿಗೆ ಸೋಂಕಿತರಾಗಿಯೋ ಬೆಳೆಯಬೇಕೇ? ಅಥವಾ ಇಂಥ ಕಾಯಿಲೆಗಳಿಂದ ಮುಕ್ತರಾಗಿ ಆರೋಗ್ಯಪೂರ್ಣರಾಗಿ ಬೆಳೆಯಬೇಕೇ? ಇಂಥ ಪ್ರಶ್ನೆಗಳನ್ನು ಕೇಳಿಕೊಳ್ಳುವ ಸಂದರ್ಭದಲ್ಲೇ ಪಠ್ಯಗಳಲ್ಲಿ ಮಹಿಳಾ ಪ್ರತಿನಿಧೀಕರಣದ ಸ್ವರೂಪವನ್ನು ಚರ್ಚಿಸುವ ಅಗತ್ಯವೂ ಮುನ್ನಲೆಗೆ ಬರುತ್ತದೆ. ಲಿಂಗಾಧಾರಿತ ಅಸಮಾನತೆಯನ್ನು ತೊಡೆದುಹಾಕಿ, ಲಿಂಗಸಮಾನತೆಯ ಸಮಾಜವನ್ನು ಕಟ್ಟುವುದು ನಮ್ಮ ಗುರಿ ಆಗಿರುವಾಗ-ಪಠ್ಯಗಳಲ್ಲಿ ಮಹಿಳಾ ಪ್ರತಿನಿಧೀಕರಣ ಹೇಗಿರಬೇಕು? ಎಂಬ ಚರ್ಚೆಗೆ ಮಹತ್ವ ಪ್ರಾಪ್ತವಾಗುತ್ತದೆ. ಲಿಂಗಸೂಕ್ಷ್ಮತೆಯನ್ನು ಎಳೆಯರಲ್ಲಿ ಬಿತ್ತುವ ಮೂಲಕವೇ ಭವಿಷ್ಯದಲ್ಲಿ ಲಿಂಗಸಮಾನತೆಯ ಸಮಸಮಾಜದ ನಿರ್ಮಾಣ ಸಾಧ್ಯವೆಂದು ಹಲವು ಪ್ರಜ್ಞಾವಂತರು ಒಪ್ಪಿಕೊಂಡಿದ್ದಾರೆ. ಅಂತಹ ಲಿಂಗ ಸೂಕ್ಷ್ಮತೆಯನ್ನು ಪಠ್ಯಪುಸ್ತಕ ಸಮಿತಿಯ ಸದಸ್ಯರು ಹೊಂದಿದ್ದಾರೆಯೇ? ಅದು ಯಾವ ಸ್ತರದಲ್ಲಿ ಇದೆ ಎಂಬುದನ್ನು ಪಠ್ಯಗಳ ಹಿನ್ನೆಲೆಯಲ್ಲಿ ಗುರುತಿಸುವುದು ಮುಖ್ಯವಾಗುತ್ತದೆ.

5ನೇ ತರಗತಿಯ ಸಮಾಜವಿಜ್ಞಾನ ಪುಸ್ತಕದ 'ಸಾಹಿತ್ಯ-ಕಲೆ-ಜನಪದ' ಎಂಬ ಪಾಠದಲ್ಲಿ 26 ಮಂದಿ ಸಾಹಿತ್ಯ ಸಾಧಕರ ಪರಿಚಯ ನೀಡಲಾಗಿದೆ. 26 ಜನರಲ್ಲಿ ಮಹಿಳೆಯರ ಸಂಖ್ಯೆ ಕೇವಲ ನಾಲ್ಕು, ಅದರಲ್ಲಿ ಅವಕಾಶ ಪಡೆದವರೆಂದರೆ ಸಂಚಿಹೊನ್ನಮ್ಮ, ತಿರುಮಲಾಂಬಾ, ತ್ರಿವೇಣಿ ಮತ್ತು ಕೊಡಗಿನ ಗೌರಮ್ಮ.

ಈ ಬಗೆಯ ಸಂಖ್ಯೆಯ ಪ್ರತಿನಿಧೀಕರಣಕ್ಕೆ ಪಠ್ಯಪುಸ್ತಕ ಸಮಿತಿಯವರಿಗೆ ಕೆಲವು ಸಮರ್ಥನೆಗಳು ಇರಬಹುದು ಎಂದು ಒಪ್ಪಿಕೊಂಡರೆ, ಈ ಸಾಹಿತ್ಯ ಸಾಧಕರನ್ನು ಪರಿಚಯಿಸುವ ಕ್ರಮದಲ್ಲಿ ಸಮಾನತೆ ಇದೆಯೇ? ಎಂದು ಪರಿಶೀಲಿಸಬಹುದು. ಪುರುಷ ಸಾಧಕರನ್ನು ಪರಿಚಯಿಸುವಾಗ, ಅವರ ಹುಟ್ಟು, ಉದ್ಯೋಗ, ಅವರು ಬರೆದ ಕೃತಿಗಳು, ಪಡೆದ ಪ್ರಶಸ್ತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ತಿಳಿಸಲಾಗಿದೆ. ಹೊಸಗನ್ನಡದ ಮೂವರು ಲೇಖಕಿಯರನ್ನು ಪರಿಚಯಿಸುವಾಗ 'ಸಾಹಿತ್ಯ ಕ್ಷೇತ್ರದಲ್ಲಿ ಹೆಸರಿಸಲೇಬೇಕಾದ ಲೇಖಕಿಯರೆಂದರೆ ನಂಜನಗೂಡು ತಿರುಮಲಾಂಬಾ, ಕೊಡಗಿನ ಗೌರಮ್ಮ ಮತ್ತು ತ್ರಿವೇಣಿ' ಎಂದು ಒಂದೇ ವಾಕ್ಯದಲ್ಲಿ ಮುಗಿಸಲಾಗಿದೆ. ಎಂದರೆ ಈ ಮೂವರ ಕೃತಿಗಳ ಬಗ್ಗೆ, ಪಡೆದ ಪ್ರಶಸ್ತಿಗಳ ಬಗ್ಗೆ ಹೇಳುವ ಅಗತ್ಯ ಅವರಿಗೆ ಯಾಕೆ ಕಂಡುಬಂದಿಲ್ಲ? ಮೂವರು ಲೇಖಕಿಯರು ಉದ್ಧರಣೆಗೆ ಮಾತ್ರ ಅರ್ಹರೇ? ಅಥವಾ ಮೂವರನ್ನು ಹೆಸರಿಸಿದ್ದೇ ಪಠ್ಯಪುಸ್ತಕ ಸಮಿತಿಯವರು ಸಾಹಿತ್ಯ ಸಾಧಕಿಯರ ಬಗ್ಗೆ ತೋರಿದ ಉದಾರತೆ ಎಂದು ಭಾವಿಸಬೇಕೇ?

ಅದೇ ಪಾಠದ 'ಕಲೆ'ಯ ವಿಭಾಗದಲ್ಲಿ 12 ಜನ ಕಲಾವಿದರ ಪರಿಚಯವನ್ನು ಕೊಡಲಾಗಿದೆ. ಆದರೆ ಒಬ್ಬರೇ ಒಬ್ಬ ಕಲಾವಿದೆಯ ಪರಿಚಯ ನೀಡುವ ಅಗತ್ಯ ಇವರಿಗೆ ಕಂಡುಬಂದಿಲ್ಲ, ಗಾನಕೋಗಿಲೆ ಗಂಗೂಬಾಯಿ ಹಾನಗಲ್ ಆಗಿರಲಿ, ಪ್ರಸಿದ್ಧ ರಂಗಕಲಾವಿದೆಯರಲ್ಲಿ ಓರ್ವರನ್ನಾಗಲಿ ಇಲ್ಲಿ ಪರಿಚಯಿಸುವ ಅಗತ್ಯ ಅವರಿಗೆ ಯಾಕೆ ನೆನಪಾಗಿಲ್ಲ? ಕಲಾಕ್ಷೇತ್ರದ ಸಾಧಕಿಯರ ಕುರಿತ ಈ ಬಗೆಯ ಮೌನ ಅಥವಾ ಅವಗಣನೆಯಿಂದ 'ಕಲೆಯ ಕ್ಷೇತ್ರ ಕೇವಲ ಪುರುಷ ಸಾಧಕರದು' ಎಂಬ ಅಘೋಷಿತ ತೀರ್ಮಾನವನ್ನು ಎಳೆಯರಿಗೆ ದಾಟಿಸಿದಂತಾಗುತ್ತದೆ.

'ಮರೆಯಲಾಗದ ಮಹಾನುಭಾವರು' ಎಂಬ ಭಾಗದಲ್ಲಿ ಒಟ್ಟು 25 ಮಂದಿ ಸಾಧಕರ ಪರಿಚಯ ನೀಡಲಾಗಿದ್ದು, ಅದರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಬಿಟ್ಟರೆ ಬೇರೆ ಇನ್ನೋರ್ವ ಸಾಧಕಿಯನ್ನು ಕೊಡಲು ಇವರಿಗೆ ಸಾಧ್ಯವಾಗಿಲ್ಲ.

ಪಠ್ಯಪುಸ್ತಕ ಸಮಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಕುರಿತು ಗಮನಹರಿಸಿದರೆ, ಅಲ್ಲೂ ಪೂರ್ವಾಗ್ರಹ ಕೆಲಸ ಮಾಡಿದೆ. 8ನೇ ತರಗತಿಯ 'ಸಿರಿಕನ್ನಡ' ಪಠ್ಯಪುಸ್ತಕ ಸಮಿತಿಯಲ್ಲಿ ಅಧ್ಯಕ್ಷರು ಮತ್ತು 6 ಜನ ಸದಸ್ಯರಿದ್ದಾರೆ. ಆದರೆ ಇವರಲ್ಲಿ ಓರ್ವ ಮಹಿಳಾ ಸದಸ್ಯೆಯೂ ಇಲ್ಲ! ಇನ್ನು ಪರಿಶೀಲಕರು ಹಾಗೂ ಸಂಪಾದಕೀಯ ಮಂಡಳಿ ಎಂಬ ಉನ್ನತ ಸಮಿತಿಗಳಲ್ಲಿ ಕೂಡ ಮಹಿಳಾ ಪ್ರಾತಿನಿಧ್ಯವೇ ಇಲ್ಲ, ಯಾಕೆ ಹೀಗೆ?

ನಮಗೆಲ್ಲ ತಿಳಿದಿರುವಂತೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತಗಳಲ್ಲಿ ಪುರುಷ ಶಿಕ್ಷಕರಿಗಿಂತ ಮಹಿಳಾ ಶಿಕ್ಷಕರ ಸಂಖ್ಯೆ ಹೇರಳವಾಗಿದೆ. ಹೀಗಿದ್ದೂ ಅವರನ್ನು ಸಮಿತಿಗಳಲ್ಲಿ ಸೇರಿಸಿಕೊಳ್ಳದಿರುವ ಮನೋಧರ್ಮವೇ ಪ್ರಶ್ನಾರ್ಹ. ದುಡಿಮೆಗೆ ಮಾತ್ರ ಮಹಿಳೆಯರು; ನೀತಿನಿರೂಪಣೆಗೆ ಪುರುಷರೇ ಅರ್ಹರು ಎಂಬ ನಿಲುವು ಪಠ್ಯಪುಸ್ತಕ ಸಮಿತಿಯವರದೇ? ಸ್ತ್ರೀ-ಪುರುಷರ ಸಹಭಾಗಿತ್ವದ ಅಗತ್ಯ ಅವರಿಗೇ ಇಲ್ಲದ ಮೇಲೆ ಅವರು ಸಿದ್ಧಪಡಿಸಿದ ಪಠ್ಯಗಳಲ್ಲಿ ಆ ಸಂಗತಿಗಳು ಇರುತ್ತವೆ ಎಂದು ನಾವು ನಿರೀಕ್ಷಿಸಲು ಸಾಧ್ಯವೇ?

5ನೇ ತರಗತಿಯ ಸಮಾಜವಿಜ್ಞಾನದ 6ನೆಯ ಪಾಠ 'ಗ್ರಾಮೀಣ ಸಮುದಾಯ'. ಇದರಲ್ಲಿ ಕಮಲಮ್ಮ ಮತ್ತು ಶಂಕರಯ್ಯ ಎಂಬ ಗ್ರಾಮೀಣ ಸಮುದಾಯದ ಎರಡು ಪಾತ್ರಗಳನ್ನು ಪರಿಚಯಿಸಲಾಗಿದೆ. ಅವರ ವ್ಯಕ್ತಿತ್ವ, ಬದುಕಿನ ಸಾಧ್ಯತೆ ಮತ್ತು ಪರಿಮಿತಿಗಳನ್ನು ಪಾಠವು ತಿಳಿಸಿಕೊಡುತ್ತದೆ.

ಇಲ್ಲಿ ಕಮಲಮ್ಮ ಕೃಷಿ ಕೂಲಿಕಾರ್ಮಿಕಳು. ಅವಳ ಬಡತನ, ಕಡಿಮೆ ಕೂಲಿ, ಗೃಹಕೃತ್ಯದ ಹೊರೆ, ತಾಯ್ತನದ ಹೊರೆ ಮತ್ತು ಹೊರದುಡಿಮೆಯ ಹೊರೆ- ಹೀಗೆ ಕಮಲಮ್ಮ ಮುಮ್ಮಡಿ ಹೊರೆಯನ್ನು ಹೊರುವ ವಿವರಗಳಿವೆ. ಮನೆಗೆಲಸದಲ್ಲಿ ಆಕೆಗೆ 'ಮಗಳ' ನೆರವು ಒಂದಿಷ್ಟು ಸಿಗುತ್ತದೆ ಎಂಬ ಅಂಶವೂ ದಾಖಲಾಗಿದೆ. ಬಳಿಕ ಪಾಠದಲ್ಲಿ ವಿದ್ಯಾರ್ಥಿಗಳಿಗೆ ಕೇಳಿದ ಪ್ರಶ್ನೆ: 'ಸಮಾನ ಕೆಲಸ ಮಾಡಿದರೂ ಕಡಿಮೆ ಸಂಬಳ ನೀಡುವುದು ಸರಿಯೇ?' ಎಂಬುದಾಗಿದೆ. ಇಲ್ಲಿ ಕುಟುಂಬದೊಳಗೆ ಸ್ತ್ರೀ-ಪುರುಷರ ಜವಾಬ್ದಾರಿಯ ಅಸಮಾನ ಹಂಚಿಕೆ ಇರುವ ಬಗ್ಗೆ ಪ್ರಶ್ನೆಯನ್ನು ಕೇಳಬಹುದಿತ್ತು. ಅದು ಪಠ್ಯಪುಸ್ತಕ ಸಮಿತಿಯವರಿಗೆ ಮುಖ್ಯವಾಗಿಲ್ಲ. ಕಮಲಮ್ಮನ ಗಂಡನ ಕುರಿತ ಈ ಮೌನ, ಮಗನ ಸಂದರ್ಭದಲ್ಲೂ ಮುಂದುವರಿದಿದೆ. ಕಮಲಮ್ಮನಿಗೆ ಮನೆ ಕೆಲಸಕ್ಕೆ ಮಗಳೇ ನೆರವಾಗುವ ಚಿತ್ರ gender stereotype ಅನ್ನು ಮುಂದುವರಿಸುತ್ತಿದೆ. ತಾಯಿಗೆ ನೆರವಾಗುವ ಜಾಗದಲ್ಲಿ ಮಗಳೊಂದಿಗೆ ಮಗನನ್ನೂ ಚಿತ್ರಿಸಿದ್ದರೆ ಅಥವಾ ಮಗನನ್ನೇ ಚಿತ್ರಿಸಿದ್ದರೆ ಪಾಠದ ಮೂಲಕ ಎಳೆಯರಿಗೆ ಲಿಂಗ-ಸಮಾನತೆಯ ಪಾಠವನ್ನೂ ಹೇಳಿದಂತಾಗುತ್ತಿತ್ತು, ಮನೆಗೆಲಸ ತನ್ನದಲ್ಲ ಎಂಬ ಗಂಡುಹುಡುಗರ ಮನೋಭಾವದ ಮೂಲ ಎಳೆಗಳು ಇಲ್ಲೇ ಸ್ಥಿರೀಕರಣಗೊಳಿಸುವ ಕೆಲಸ ನಡೆಯುವುದು ವಿಷಾದಕರ.

ಶಂಕರಯ್ಯ ಗ್ರಾಮದ ಜಮೀನ್ದಾರ. ಅವನು ತನ್ನ ಜಮೀನಿನಲ್ಲಿ ವಿವಿಧ ಬೆಳೆಗಳನ್ನು ಬೆಳೆದು ಧನಿಕನೂ, ಇತರರಿಂದ ಗೌರವ ಪಡೆಯುವ, ಇತರರಿಗೆ ಉದ್ಯೋಗ ನೀಡುವ ಸ್ಥಾನದಲ್ಲಿ ಒಡಮೂಡಿದ್ದಾನೆ. ಅವನ ಸಂಪತ್ತಿನ ಒಡೆತನದಲ್ಲಿ ಆತನ ಮಡದಿಯ ಕೊಡುಗೆಯ ಕುರಿತು ಯಾವ ದಾಖಲೆಯೂ ಇಲ್ಲದೆ ಮೌನವಿದೆ. ಇದು ಅಪಾಯಕಾರಿಯಾದುದು.


ಶಂಕರಯ್ಯ ಮತ್ತು ಕಮಲಮ್ಮ ಇವರ ಪಾತ್ರಗಳ ನಿರ್ಮಾಣದಲ್ಲೇ ಲಿಂಗಸೂಕ್ಷ್ಮತೆ ಗೋಚರವಾಗಿಲ್ಲ. ಒಂದೆಡೆ ಅಧಿಕಾರರಹಿತ, ಪರಾವಲಂಬಿ, ಅನಕ್ಷರಸ್ಥ ಹಾಗೂ ಸಾಲಗಾರ ವರ್ಗದ ಪ್ರತಿನಿಧಿಯಾಗಿ ಕಮಲಮ್ಮ ಒಡಮೂಡಿದರೆ, ಶ್ರೀಮಂತನೂ, ಸ್ವಾವಲಂಬಿಯೂ, ಇತರರನ್ನು ದುಡಿಸಿಕೊಂಡು ಬದುಕುವ, ಅಧಿಕಾರ ಹೊಂದಿದ ಶಂಕರಯ್ಯನ ವ್ಯಕ್ತಿತ್ವ ಒಡಮೂಡಿದೆ. ಲಿಂಗತಾರತಮ್ಯದ ಇಂಥ ಮಾದರಿಗಳು ಎಳೆಯರಿಗೆ ಸ್ತ್ರೀ-ಪುರುಷರ ಕುರಿತ ಪೂರ್ವಾಗ್ರಹವನ್ನು ಬಿತ್ತುತ್ತವೆ. ಕಮಲಮ್ಮನ ಜಾಗದಲ್ಲಿ ಸ್ತ್ರೀ-ಪುರುಷರ ಪಾತ್ರವನ್ನು ತಂದಿದ್ದರೆ ಅಥವಾ ಶಂಕರಯ್ಯನ ಸಂಪಾದನೆಯಲ್ಲಿ ಆತನ ಮಡದಿಯ ಕೊಡುಗೆಯ ಬಗ್ಗೆ ಪ್ರಸ್ತಾವಿಸಿದ್ದರೆ, ಆಗ ಅದು ಲಿಂಗಸೂಕ್ಷ್ಮತೆಯನ್ನು ಒಳಗೊಳ್ಳುತ್ತಿತ್ತು. ಒಟ್ಟಿನಲ್ಲಿ ಲಿಂಗಸೂಕ್ಷ್ಮತೆಯನ್ನು ಒಳಗೊಂಡ ಪಾಠಗಳು ಹೀಗಿರುವುದಿಲ್ಲ; ಹೀಗಿರಬಾರದು ಕೂಡ.

ಮಹಿಳೆಯರ ಕುರಿತ ಚಿತ್ರಗಳು ನೀಡುವ ಅರ್ಥದ ನೆಲೆ

ಎಳೆಯರ ಪಠ್ಯಪುಸ್ತಕಗಳಲ್ಲಿ ಪಾಠಗಳಲ್ಲಿ ಚಿತ್ರಗಳಿಗೆ ಮಹತ್ವ ಇದ್ದೇ ಇದೆ. ಬರಹ ಮತ್ತು ಚಿತ್ರ ಎರಡೂ ಬಹುತೇಕ ಸಮಪ್ರಮಾಣದಲ್ಲಿ ಎಳೆಯರಿಗೆ ನಿರ್ದಿಷ್ಟ ವಿಚಾರಗಳನ್ನು ಮುಟ್ಟಿಸಲು ದುಡಿಯುತ್ತವೆ. ಹೀಗಿರುವಾಗ ನಾವು ನೀಡುವ ಚಿತ್ರಗಳ ಆಯ್ಕೆಯಲ್ಲೂ ಎಚ್ಚರ ತುಂಬಾ ಅವಶ್ಯವಾಗಿರುತ್ತದೆ. ಲಿಂಗಸೂಕ್ಷ್ಮತೆ ಇಂಥ ಚಿತ್ರಗಳ ಆಯ್ಕೆಯಲ್ಲಿ ಇಲ್ಲದೇ ಹೋದರೆ, ಅವೂ ಗಂಭೀರವಾದ ಪ್ರಮಾದಗಳನ್ನು ಮಾಡಬಲ್ಲವು. 5ನೇ ತರಗತಿಯ ಗಣಿತ ಪಾಠಪಠ್ಯದಲ್ಲಿ ಲಿಂಗಸೂಕ್ಷ್ಮತೆ ಚಿತ್ರದಲ್ಲಿ ಗೋಚರಿಸುತ್ತದೆ. ಗಣಿತಕ್ಕೆ ಪೂರಕವಾಗಿ ಬಳಸಿಕೊಂಡ ಚಿತ್ರಗಳಲ್ಲಿ ಹುಡುಗ-ಹುಡುಗಿಯರಿಬ್ಬರ ಚಿತ್ರಗಳೂ ಬರುವಂತೆ ನೋಡಲಾಗಿದೆ. ಈ ನಿಲುವು ಉಳಿದೆಡೆ ಕಾಣುವುದಿಲ್ಲ.

5ನೇ ತರಗತಿಯ ಸಮಾಜವಿಜ್ಞಾನ ಪಠ್ಯದ 6ನೇ ಪಾಠ 'ಗ್ರಾಮೀಣ ಸಮುದಾಯ'. ಈ ಪಾಠದ ಆರಂಭದಲ್ಲಿ ಗ್ರಾಮ ಸಮುದಾಯವನ್ನು ವಿವರಿಸುವ ಒಂಬತ್ತು ಚಿತ್ರಗಳನ್ನು ನೀಡಲಾಗಿದೆ. ಅವುಗಳೆಂದರೆ-ಮಡಿಕೆ ಮಾಡುವ, ಪೈರು ಕೊಯ್ಯುವ, ಕಬ್ಬಿಣದ ಕೆಲಸ ಮಾಡುವ, ದೋಣಿಯಲ್ಲಿ ಜನರನ್ನು ಕರೆದೊಯ್ಯುವ, ಗದ್ದೆ ಉಳುಮೆ ಮಾಡುವ, ಮರದ ಕೆಲಸ ಮಾಡುವ, ಧಾನ್ಯ ರಾಶಿಮಾಡುವ ವ್ಯಕ್ತಿಗಳ ಚಿತ್ರಗಳು-ಈ ಎಲ್ಲ ಕೆಲಸಗಳನ್ನು ಚಿತ್ರಗಳಲ್ಲಿ ನಿರ್ವಹಿಸುವವರು ಪುರುಷರು. ಬುಟ್ಟಿ ಹೆಣೆಯುವ ಚಿತ್ರದಲ್ಲಿ ಮಹಿಳೆ ಇದ್ದಾಳೆ. ಹೊಡಿಮಂಚಕ್ಕೆ ಭತ್ತ ಬಡಿಯುವ

ಸೇವಕನ ಮನೆಯಿಂದ



ಬುದ್ಧ ನಡೆದ ದಾರಿ ಎಂದು ನೋಡಲು
ಬಂದರೆ ಇಲ್ಲಿ ಹುಲಿಸರಿಗಳ ಸಂಚಾರ
ಹುತ್ತ ಕಟ್ಟುತ್ತಲೇ, ಸೇವೆಯ ಶಿಲುಬೆ
ಹೊತ್ತು ಸಾಗುವ ಇರುವೆಗಳ ದಂಡು
ನೀರಿಲ್ಲ, ತಂಪಿಲ್ಲ ಎದೆ ಮೀಟಿ ಹಲಬುತ್ತಿವೆ
ಜೀವ ನೀನು ದಾಸ ನಾನು ಎಂದು.

ನಾಗರಿಕತೆಯ ದಂಡಕಾರಣ್ಯದ
ಚರಿತೆಯುದ್ದಕ್ಕೂ ಮೃಗಗಳ ಕ್ರೂರ
ಸಿಂಹಾಸನ. ಸೋಲಿಸಿದ ಸೊಣ ಮಣಿಸಿದ
ಇರುವೆ, ಹಣೆಕುಕ್ಕಿದ ಕೋಳಿ ಕಾಡಿದ


ತಿಗಣೆಯ 'ತಣ್ಣನೆಯ ಬೆಂಕಿ' ನಾಲ್ಕು
ಕಾಲುಗಳ ಪದ ತಲದಲ್ಲಿಯೇ ಹೂತು
ಹೋಗಿದೆ ನಾಳೆಗಳ ಕನಸು ಕಾಣದೇ!


ಮತ್ತೆಮತ್ತೆ ಹುಟ್ಟುತ್ತಲೇ ಇರುತ್ತಾರೆ
ಗಿಡ್ಡನಾಗಿ ಉದ್ದವಾಗುವ, ಗಾಳಿ-ಬೆಂಕಿಯಾಗುವ
ಹೆಣ್ಣು ಕ್ರಿಮಿಯಾಗುವ ಗರುಡ ವಾಮನರ
ತಂತ್ರ ಅರಿಯದೆ. ಈ ಶಿಬಿ ಸಂತತಿ
ಬೆಳೆದ ರಕ್ತಮಾಂಸದ ತೋಳನ್ನು ತೊಡೆಯನ್ನು
ಕತ್ತರಿಸಿ ಕೊಡುತ್ತಲೇ 'ಸಿಡಿ ಬಂಡಿಗೆ'
ನೇತಾಡುತ್ತಾರೆ ಧನ್ಯತೆಯ ಅಮಲಿನಲ್ಲಿ

ಡಾ.ವೆಂಕಟಗಿರಿ ದಳವಾಯಿ

ವಕ್ರ ಯುವ ಬಂಡಾಯಕ್ಕೆ 50 ವರ್ಷ

ರೂಢಿಗತ ಲೋಕದ ವಿರುದ್ಧ ವಕ್ರ ಬಂಡಾಯ ಸಾರಿ, 60ರ ದಶಕದ ...ವಕರಲ್ಲಿ ತಮ್ಮ ವಿಭಿನ್ನ ಬಂಡಾಯ ಸಂಗೀತದ ಮೂಲಕ ಬದಲಾವಣೆಯ ... ಹುಟ್ಟಿದ 'ಬೀಟ್ಲ್ಸ್' ತಂಡ ಹುಟ್ಟಿಕೊಂಡು ಈ ವಾರಕ್ಕೆ 50 ವರ್ಷವಾಯ್ತು. ...ನ್ ಲೆನಾನ್, ಪೌಲ್ ಮೆಕಾರ್ಟ್ನಿ, ಜಾರ್ಜ್ ಹ್ಯಾರಿಸನ್ ಮತ್ತು ರಿಂಗೊ ...ರ್ ಒಗ್ಗೂಡಿ ಕಟ್ಟಿದ ತಂಡ 1962ರ ಅಕ್ಟೋಬರ್‌ನಲ್ಲಿ 'LOVE ... DO' ಹಾಡಿನೊಂದಿಗೆ ಲೋಕಕ್ಕೆ ಲಗ್ಗೆ ಇಟ್ಟಿತು. 1967ರ ಪ್ಯಾರಿಸ್ ...ರ್ಥಿ ಬಂಡಾಯ ಹಾಗು ವಿಯಟ್ನಾಮ್ ಯುದ್ಧ ವಿರೋಧಿ ಆಂದೋಲನಕ್ಕೆ ...ವಕರು ನೆಗೆಯಲು ಅಂತರ್ಗಾಮಿಯಾಗಿ ಬಲ ನೀಡಿದ ಈ ತಂಡ ...ವರ ಹಾಡುಗಳು 70ರ ದಶಕದಲ್ಲಿ ಯುವಕರ ಲೋಕವಿರೋಧಿ ಪ್ರಜ್ಞೆಗೆ ...ಮ ವಕ್ರ ಪ್ರತಿಮೆಯಾಗಿದ್ದವು. ಆ ನೆನಪಿಗೆ ಅವರ ಖ್ಯಾತ ನಂಬರ್ ...LL YOU NEED IS LOVE' ಹಾಡು, ಜಾಣ-ಜಾಣೆಯರಾದ ...ವ ಜನರಿಗೆ-ಕನ್ನಡದಲ್ಲಿ-ಮಜಾ ಮಾಡಿ.





ಪ್ರೀತಿಯೊಂದೇ ನಿಂಗೆ ಬೇಕಾಗಿರೋದು
– ಜಾನ್ ಲೆನಾನ್, ಮೆಕಾರ್ಟ್ನಿ

ಪ್ರೀತಿ, ಪ್ರೀತಿ, ಪ್ರೀತಿ... ಪ್ರೀತಿಯೊಂದೇ ನಿಂಗೆ ಬೇಕಾಗಿರೋದು
ಮಾಡೋಕಾಗ್ದನ್ನ ನಿಂಗೆ ಮಾಡಕಾಗೊಲ್ಲ
ಹಾಡ್ಲಿಕಾಗ್ದನ್ನ ನೀನು ಹಾಡ್ಲಿಕಾಗೋಲ್ಲ
ಹೇಳೋಕಾಗಲ್ಲ ಆದ್ರೆ ಆಡ್ಬೇಕಾದ ಆಟನ ನೀನು
ಹಿಂಗೇ ಕಲ್ತು ಬಿಡ್ಬೋದು.

ಕಟ್ಲಿಕಾಗ್ದನ್ನ ನಿಂಗೆ ಕಟ್ಲಿಕಾಗೋಲ್ಲ
ಉಳ್ಸಕಾಗ್ದನ್ನ ನಿಂಗೆ ಉಳ್ಸೋಕಾಗಲ್ಲ
ನಿಂಗೇನು ಮಾಡಕಾಗಲ್ಲ ಆದ್ರೆ ನೀ ಹೆಂಗಿರ್ಬೇಕು ಅಂತ
ಹಿಂಗೆ ಕಲ್ತುಬಿಡ್ಬೋದು.

ಪ್ರೀತಿಯೊಂದೇ ನಿಂಗೆ ಬೇಕಾಗಿರೋದು, ಬೇಕಾಗಿರೋದು ನಿಂಗೆ ಪ್ರೀತಿಯೊಂದೆ
ಬೇಕಾಗಿರೋದು ನಿಂಗೆ ಪ್ರೀತಿಯೊಂದೆ, ಪ್ರೀತಿಯೊಂದೇ ನಿಂಗೆ ಬೇಕಾಗಿರೋದು
ಪ್ರೀತಿ, ಪ್ರೀತಿ, ಪ್ರೀತಿ ಪ್ರೀತಿಯೊಂದೇ ನಿಂಗೆ ಬೇಕಾಗಿರೋದು
ಪ್ರೀತಿಯೊಂದೇ ನಿಂಗೆ ಬೇಕಾಗಿರೋದು, ಬೇಕಾಗಿರೋದು ನಿಂಗೆ ಪ್ರೀತಿಯೊಂದೆ
ಬೇಕಾಗಿರೋದು ನಿಂಗೆ ಪ್ರೀತಿಯೊಂದೆ, ಪ್ರೀತಿಯೊಂದೇ ನಿಂಗೆ ಬೇಕಾಗಿರೋದು

ಇಲ್ದೆ ಇರೋದ್ನ ನಿಂಗೆ ಕಲಿಯೋಕಾಗಲ್ಲ
ತೋರ್ಸದೆ ಇರೋದ್ನ ನಿಂಗೆ ಕಾಣಕಾಗೊಲ್ಲ
ನಿಂದಲ್ದ ಲೋಕ್ದಲ್ಲಿ ನಿಂಗೇ ಇರೋಕಾಗಲ್ಲ
ಅದು ಹಂಗೆ
ಪ್ರೀತಿಯೊಂದೇ ನಿಂಗೆ ಬೇಕಾಗಿರೋದು, ಬೇಕಾಗಿರೋದು ನಿಂಗೆ ಪ್ರೀತಿಯೊಂದೆ
ಬೇಕಾಗಿರೋದು ನಿಂಗೆ ಪ್ರೀತಿಯೊಂದೆ, ಪ್ರೀತಿಯೊಂದೇ ನಿಂಗೆ ಬೇಕಾಗಿರೋದು
ಪ್ರೀತಿ, ಪ್ರೀತಿ, ಪ್ರೀತಿ ಪ್ರೀತಿಯೊಂದೇ ನಿಂಗೆ ಬೇಕಾಗಿರೋದು
ಪ್ರೀತಿಯೊಂದೇ ನಿಂಗೆ ಬೇಕಾಗಿರೋದು, ಬೇಕಾಗಿರೋದು ನಿಂಗೆ ಪ್ರೀತಿಯೊಂದೆ
ಬೇಕಾಗಿರೋದು ನಿಂಗೆ ಪ್ರೀತಿಯೊಂದೆ, ಪ್ರೀತಿಯೊಂದೇ ನಿಂಗೆ ಬೇಕಾಗಿರೋದು

...ಯದಲ್ಲಿ ನಿರತರಾದ ಮೂವರಲ್ಲಿ ಓರ್ವ ಮಹಿಳೆಯ ...ವಿದೆ.

ಈ ಚಿತ್ರಗಳನ್ನು ಲಿಂಗತ್ವದ ನೆಲೆಯಿಂದ ಗಮನಿಸಿದರೆ ...ವ ಪ್ರಶ್ನೆಗಳು ಏಳುತ್ತವೆ? ಮೇಲೆ ಸೂಚಿಸಿದ ವೃತ್ತಿಗಳಲ್ಲಿ ...ಹಿಳೆಯರು ಮಾಡದ ಕೆಲಸ ಯಾವುದು? ಕುಂಬಾರ ...ನೆತನದಲ್ಲಿ ಮಹಿಳೆಯರೂ ಮಡಿಕೆ ಮಾಡಬಲ್ಲರು. ...ು ಕೊಯ್ಯುವ ಕೆಲಸದಲ್ಲಿ ಮಹಿಳೆಯರ ಶ್ರಮ ...ರಳವಾಗಿ ಬಳಕೆಯಾಗುತ್ತದೆ. ಪುರುಷರಿಲ್ಲದ ...ುಂಬಗಳಲ್ಲಿ ಮಹಿಳೆಯರೇ ಬಡಗಿ ಮತ್ತು ಕಮ್ಮಾರಿಕೆಯ ...ಸಗಳನ್ನು ನಿರ್ವಹಿಸಿದ ಉದಾಹರಣೆಗಳು ಸಿಗುತ್ತವೆ. ...ರೆ ಚಿತ್ರಗಳು ಅಂಥ ಯಾವ ಸಾಧ್ಯತೆಯ ಬಗೆಗೂ ...ತನಾಡುವುದಿಲ್ಲ. ಎಂದರೆ ಚಿತ್ರಗಳಲ್ಲಿ ಸ್ತ್ರೀ-ಪುರುಷರ ...ನಿಧೀಕರಣವು ಲಿಂಗಪೂರ್ವಾಗ್ರಹದಿಂದ ಕೂಡಿದ್ದಾಗಿದೆ.

ಪಾಠ 7 'ನಗರ ಸಮುದಾಯ'ವನ್ನು ...ಚಯಿಸುತ್ತದೆ. ಇಲ್ಲಿ ಒಂಬತ್ತು ಚಿತ್ರಗಳಿವೆ. ಅವುಗಳಲ್ಲಿ ...ಸ್ತಕದಂಗಡಿಯಾತ, ಟೇಲರ್ (ಚಿಪ್ಪಿಗ), ಕ್ಷೌರಿಕ, ...ಕ್ಯಾನಿಕ್, ಹಣ್ಣು ಮಾರಾಟಗಾರ, ದಿನಸಿ ಮಾರಾಟಗಾರ, ...ಾ ಚಾಲಕ, ಪೂಜಾರಿ ಹೀಗೆ ಎಂಟು ವೃತ್ತಿಗಳನ್ನು ...ಡುವ ವ್ಯಕ್ತಿ ಪುರುಷನಾಗಿದ್ದರೆ, ಮೀನು ಮಾರಾಟ ...ಡುವಾಕೆ ಮಾತ್ರ ಮಹಿಳೆ! ಇದನ್ನೂ ಯಾಕೋ ...ುಷನ ಚಿತ್ರವನ್ನಾಗಿ ಮಾರ್ಪಡಿಸಿಲ್ಲ! ಇಲ್ಲಿ ಯಾಕೆ ...ಗೆ ಚಿತ್ರಿಸಲಾಗಿದೆ ಎಂದು ಕೇಳಬೇಕು. ಪುಸ್ತಕ ...ಪಾರಿ ಇಂದು ಪುರುಷರೇ ಆಗಿಲ್ಲ, ಸಲೂನ್ ...ುಷರದ್ದಾದರೆ ಬ್ಯೂಟಿಪಾರ್ಲರ್‌ಗೆ ಮಹಿಳೆಯರು ... ಇಟ್ಟಿದ್ದಾರೆ. ರಿಕ್ಷಾ ಚಾಲನೆ, ಹಣ್ಣು ವ್ಯಾಪಾರ, ...ಸಿ ವ್ಯಾಪಾರಗಳು ಮಹಿಳೆಯರಿಂದ ಅಸಾಧ್ಯದ ...ಸಗಳೇ? ನಮ್ಮ ಸುತ್ತಮುತ್ತ ಅಂಥ ...ದರಿಗಳಿಲ್ಲವೇ? ಹೀಗಿದ್ದೂ ಎಳೆಯರಿಗೆ ನೀಡುವ ...ದರಿಗಳು ಯಾಕೆ ಪುರುಷಪ್ರಧಾನ ಮಾದರಿಯನ್ನು ...ಬಿಸುತ್ತಿವೆ?

ಒಟ್ಟಿನಲ್ಲಿ ಚಿತ್ರ ರಚಿಸುವವರ ಮತ್ತು ಅದನ್ನು ...ಶೀಲಿಸಬೇಕಾದ ಪಠ್ಯಪುಸ್ತಕ ಸಮಿತಿ ಸದಸ್ಯರ, ...ಶೀಲಕರ, ಸಂಪಾದಕರ 'ಲಿಂಗತ್ವ ಕುರುಡುತನ' ...ender blindness) ಎಳೆಯರಿಗೆ ಇಂಥ ...ಗಪೂರ್ವಾಗ್ರಹದ ಮಾದರಿಗಳನ್ನು ನೀಡಿವೆ ಎಂಬುದು ...ಸಾರ್ಹ ಮತ್ತು ಅದೇ ಕಾರಣಕ್ಕೆ ಇವು ಅಪಾಯಕಾರಿ.

'ಜನಪದ ಕ್ರೀಡೆ ಮತ್ತು ಕಲೆ'ಗಳನ್ನು ವಿವರಿಸುವ ...ದರ್ಭದಲ್ಲಿ ಚಿತ್ರಗಳಿಗೆ ಆಯ್ಕೆಯಾದವು ಕಂಸಾಳೆ, ...ಕ್ಷಗಾನ, ಭೂತಾರಾಧನೆ, ಕಂಬಳ ಮತ್ತು ಕೋಳಿಅಂಕಗಳು. ...ಜವಾಗಿ ಇಲ್ಲಿ ಇವುಗಳನ್ನು ಪ್ರದರ್ಶಿಸುವ ಅಥವಾ ...ವುಗಳಲ್ಲಿ ಭಾಗಿಯಾಗುವ ತಂಡದವರು ಪುರುಷರೇ ...ದ್ದಾರೆ. ಒಂದು ವೇಳೆ ಪಠ್ಯಪುಸ್ತಕ ಸಮಿತಿಯ ಸದಸ್ಯರು ...ಗಸೂಕ್ಷ್ಮತೆ ಉಳ್ಳವರಾಗಿದ್ದರೆ, ಮಹಿಳೆಯರ ಕಲೆ ...ತ್ತು ಕ್ರೀಡೆಗಳ ಚಿತ್ರಗಳನ್ನೂ ಆಯ್ಕೆ ಮಾಡಿಕೊಳ್ಳುತ್ತಿದ್ದರು. ...ಲ್ಲವಾದರೆ ಇಂದು ಕಂಸಾಳೆ, ಯಕ್ಷಗಾನ ಮುಂತಾದವುಗಳಲ್ಲಿ ...ಹಿಳಾ ತಂಡದ ಪ್ರದರ್ಶನವನ್ನು ನೆನಪಿಸಿಕೊಂಡು ಅಂಥ ಚಿತ್ರವನ್ನಾದರೂ ಅಲ್ಲಿ ಹಾಕುತ್ತಿದ್ದರು. ಈ ಎರಡೂ ಆಯ್ಕೆಗಳತ್ತ ಗಮನಹರಿಸದಿರುವುದೇ ಸದಸ್ಯರ 'ಲಿಂಗತ್ವ ಕುರುಡುತನ'ದ ಸೂಚಕವಾಗಿದೆ.

5ನೇ ತರಗತಿಯ ಎರಡನೆ ಸೆಮಿಸ್ಟರ್‌ನ 'ಬಲ ಮತ್ತು ಕೆಲಸ' ಪಾಠ ಸ್ನಾಯುಶಕ್ತಿಯನ್ನು ವಿವರಿಸುವ ಉದ್ದೇಶವನ್ನು ಹೊಂದಿದೆ. ಸ್ನಾಯುಶಕ್ತಿಯ ಬಳಕೆಯ ಸ್ವರೂಪವನ್ನು ನಡಿಗೆ, ಓಟ, ಮೆಟ್ಟಿಲು ಏರುವಿಕೆ ಮತ್ತು ಸೈಕಲ್ ತುಳಿಯುವ/ತಳ್ಳುವ ಕ್ರಿಯೆಯಲ್ಲಿ ಸೂಚಿಸುವ ಚಿತ್ರಗಳಲ್ಲಿ ತೋರಿಸುತ್ತದೆ. ಈ ಎಲ್ಲ ಕ್ರಿಯೆಗಳನ್ನು ಮಾಡುವ ವ್ಯಕ್ತಿಗಳಾಗಿ ಅಲ್ಲಿ ಚಿತ್ರಿತರಾಗಿರುವವರು ಮತ್ತೆ ಪುರುಷರೇ! ಇದರಲ್ಲಿ ಮಹಿಳೆಯರಿಂದ ಅಸಾಧ್ಯವಾದ ಕಾರ್ಯ ಯಾವುದಾದರೂ ಇದೆಯೇ? ಬದಲಾಗಿ ಅಥ್ಲೆಟಿಕ್ಸ್‌ನಲ್ಲಿ ಸಾಧನೆ ಮಾಡಿದ ಹಲವು ಮಹಿಳೆಯರು ಇದ್ದಾರಲ್ಲ, ಅವರ್‍ಯಾರೂ ಇವರಿಗೆ ನೆನಪಾಗುವುದಿಲ್ಲವೇ? 'ಸ್ನಾಯುಬಲ ಕೇವಲ ಪುರುಷರಲ್ಲಿದೆ'



ಎಂಬ ತಪ್ಪುಕಲ್ಪನೆಯನ್ನು ಎಳೆಯರಲ್ಲಿ ಬಿತ್ತುವ ಇಂಥ ಪೂರ್ವಾಗ್ರಹಪೀಡಿತ ನಿಲುವು ಮತ್ತು ಚಿತ್ರಗಳನ್ನು ಯಾವ ತಕರಾರೂ ಇಲ್ಲದೆ ಅಂಗೀಕರಿಸಿದ, ಪಠ್ಯಪುಸ್ತಕ ಸಮಿತಿಯ ಸದಸ್ಯರು ಮತ್ತು ಪರಿಶೀಲಕರ ಕುರಿತು ಏನು ಹೇಳೋಣ?

ಪಠ್ಯದ ಭಾಷೆಯ ನೆಲೆಯಲ್ಲಿ ಪುರುಷಪ್ರಧಾನ ಸಂರಚನೆಯ ನೆಲೆಗಳು

ಎಳೆಯರ ಪಠ್ಯಪುಸ್ತಕಗಳಲ್ಲಿ ಭಾಷಾ ಬಳಕೆಯ ಕುರಿತು ಎಚ್ಚರ ಅತ್ಯಂತ ಅಗತ್ಯ. ಸಮಾಜೋ ಭಾಷಾವಿಜ್ಞಾನವು ವ್ಯಕ್ತಿಯ ಭಾಷಾಸ್ವರೂಪಕ್ಕೂ ಸಮಾಜದಲ್ಲಿ ವ್ಯಕ್ತಿ ಹೊಂದಿರುವ ಸ್ಥಾನಮಾನ ಮತ್ತು ಅಧಿಕಾರಗಳಿಗೂ ಸಂಬಂಧವಿರುವುದನ್ನು ವಿಶ್ಲೇಷಿಸುತ್ತದೆ. ಅದೇ ರೀತಿಯಲ್ಲಿ ಸ್ತ್ರೀವಾದಿಗಳು ಮಹಿಳೆಯರ ವಾಕ್ಯಗಳು ಸಾಮಾನ್ಯವಾಗಿ ಅನುಮೋದನೆಯ ನಿರೀಕ್ಷೆಯ ಸ್ವರೂಪವನ್ನೂ ಪುರುಷರ ವಾಕ್ಯಗಳು ಆದೇಶಾತ್ಮಕ ಸ್ವರೂಪವನ್ನೂ ಹೊಂದಿರುವುದನ್ನು ಗಮನಿಸುತ್ತ, ನಾವು ಸಹಜವಾಗಿ ಬಳಸುತ್ತಿರುವ ಭಾಷೆಯಲ್ಲಿ ಪುರುಷಪ್ರಧಾನ ಸಂರಚನೆ ಹೇಗೆ ಪ್ರಕಟವಾಗಿದೆ ಎಂಬುದನ್ನು ಗುರುತಿಸಿದ್ದಾರೆ. ಇವು ನಮ್ಮನ್ನು ಎಷ್ಟು ಗಾಢವಾಗಿ ಪ್ರಭಾವಿಸಿವೆ ಎಂದರೆ, ಮಾತನಾಡುವವರಿಗೂ ಕೇಳುವವರಿಗೂ ಅದರಲ್ಲಿನ ಅಧಿಕಾರದ ನೆಲೆ ಮತ್ತು ಪುರುಷಪ್ರಧಾನ ನೆಲೆ ಅರಿವಿಗೇ ಬರುವುದಿಲ್ಲ. Gender blindnessನ ಪೊರೆ ಕಳಚಿಬಿದ್ದರೆ, ನಮ್ಮ ಭಾಷಾಸ್ವರೂಪಗಳಲ್ಲಿನ ಈ ಬಗೆಯ ಕಾಯಿಲೆಗಳು ನಮ್ಮ ಅರಿವಿಗೆ ಬರಬಲ್ಲವು.

ಎಂಟನೆಯ ತರಗತಿಯ 'ಸಮಾಜವಿಜ್ಞಾನ' ಪಠ್ಯದ ಎರಡನೆಯ ಅಧ್ಯಾಯವನ್ನು ಈ ನೆಲೆಯಲ್ಲಿ ಗಮನಿಸಬಹುದು.

ಮಾನವನು ಲೇಖನ ಕಲೆಯನ್ನು ಕಂಡುಹಿಡಿಯುವುದಕ್ಕೆ... ಬೇಟೆಯಾಡುತ್ತಿದ್ದ ಮಾನವನು... ತಿಳಿದುಕೊಂಡನು, ಕೆಲ ಪ್ರಾಣಿಗಳನ್ನು ಹಿಡಿದು ತಂದು ಪೋಷಿಸ ತೊಡಗಿದನು... ದವಸಧಾನ್ಯಗಳನ್ನು ಇವನು ಆಹಾರವಾಗಿ ಬೆಳೆಯುವ ವಿಧಾನವನ್ನು ಕಂಡುಕೊಂಡನು... ಬಟ್ಟೆ ನೇಯುವುದನ್ನು ಕಲಿತಿದ್ದನು.

ಇಲ್ಲಿ ನಾನು ನೀಡಿರುವ ಅವಧಾರಣೆಯನ್ನು ಗಮನಿಸಿ. ಮಾನವಕುಲದ, ಸಂಸ್ಕೃತಿಯ ಎಲ್ಲ ಉಗಮಗಳೂ ಪುರುಷನೆಲೆಯ, ಪುರುಷ ನಿರ್ಮಿತ ಎಂಬಂತೆ ಇಲ್ಲಿ ವಿವರಿಸಲಾಗಿದೆ. ಮಹಿಳೆಯರ ಗೈರುಹಾಜರಿಯಿಂದ ಎಲ್ಲ ಶೋಧಗಳೂ ಪುರುಷನದೇ ಎಂಬ ಅರ್ಥವನ್ನು ಧ್ವನಿಸುತ್ತವೆ. ವಾಸ್ತವಿಕವಾಗಿ ಬೇಟೆಯಲ್ಲಿ ಮಹಿಳೆಯರು ಸರಿಸಮವಾಗಿ ಪಾಲ್ಗೊಳ್ಳುತ್ತಿದ್ದರು; ಕೃಷಿ ಎಂಬುದು ಮೂಲಭೂತವಾಗಿ ಮಹಿಳೆಯ ಶೋಧ ಎಂಬ ಮಾನವಶಾಸ್ತ್ರ ತಿಳಿವಳಿಕೆಯೇ ಇಲ್ಲಿ ಬುಡಮೇಲಾಗಿದೆ; ಮಹಿಳೆಯರ ಜ್ಞಾನ ಮತ್ತು ಸಾಮರ್ಥ್ಯವನ್ನು ಹಿನ್ನೆಲೆಗೆ ಸರಿಸಿದೆ. ಈ ಪಾಠದ ಉದ್ದಕ್ಕೂ, ಮಾನವನು, ಮನುಷ್ಯನು, ತಿಳಿದಿದ್ದನು, ಕಲಿತಿದ್ದನು ಎಂಬುದು ಮುಂದುವರಿಯುತ್ತದೆ. ಎಂದರೆ ಎಲ್ಲ ಬಗೆಯ ಕಲಿಕೆ, ತಿಳಿವಳಿಕೆ ಮತ್ತು ಸಂಶೋಧನೆಗಳು ಪುರುಷರಿಂದ ಸಾಧ್ಯವಾದುದು ಎಂಬ ಅಪಾಯಕಾರೀ ಸಂದೇಶವನ್ನು ಎಳೆಯ ಮನಸ್ಸಿಗೆ ಊಡಿಸುವ ಕೆಲಸವನ್ನು ಇಂಥ ವಾಕ್ಯಗಳು ಮಾಡುತ್ತವೆ.

'ಚರಿತ್ರೆ' ಎಂಬುದು ಪುರುಷನ ಸಾಧನೆಯ ಕಥನವಾಗಿದೆ. ಎಲ್ಲ ರಾಜಮನೆತನದ ಪರಿಚಯ ನೀಡುವ ಈ ಪಾಠದಲ್ಲಿ ದೇವಾಲಯ ಕಟ್ಟಿಸಿದ್ದು, ಕಲೆ, ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದ್ದು ಎಲ್ಲವೂ ರಾಜನೇ ಎಂಬ ಅರ್ಥ ಬರುವಂಥ ವಾಕ್ಯಗಳಿವೆ. ವಾಸ್ತವವಾಗಿ ರಾಜ್ಯಾಡಳಿತ ಮಾಡಿದ, ಕಲೆ, ಸಾಹಿತ್ಯ, ಶಿಲ್ಪಕಲೆಗಳಿಗೆ ಪ್ರೋತ್ಸಾಹ ನೀಡಿದ ಅರಸಿಯರು ಹಲವರು ಚರಿತ್ರೆಯಲ್ಲಿ ಆಗಿಹೋಗಿದ್ದಾರೆ. ಅದನ್ನು ಗಮನಕ್ಕೇ ತೆಗೆದುಕೊಳ್ಳದ, ಕೇವಲ ಒಮ್ಮುಖದ ನೆಲೆಯಿಂದ ರೂಪಿತವಾದ ಇಂಥ ಚರಿತ್ರೆಯ ಪಾಠಗಳು History ಎಂದರೆ His Story ಎಂಬ ಸ್ತ್ರೀವಾದಿ ವ್ಯಾಖ್ಯಾನಕ್ಕೆ ನಿದರ್ಶನದಂತೆ ಒದಮೂದಿದೆ.

ರಾಜ್ಯಶಾಸ್ತ್ರದ ಎರಡನೆಯ ಅಧ್ಯಾಯ 'ಪೌರ ಮತ್ತು ಪೌರತ್ವ'. ಈ ಪಾಠದಲ್ಲಿ ಪೌರ ಪದ ಎಲ್ಲೆಡೆಯೂ ಪುಲ್ಲಿಂಗ ಏಕವಚನವಾಗಿ ಬಳಕೆಯಾಗಿ 'ಒಬ್ಬ ಪೌರನಾಗಿರಬೇಕಾದರೆ, ಅವನು ವಾಸಿಸುವ ರಾಜ್ಯ... ಪೌರನು, ಪೌರನಾದವನು... ಅನುಭೋಗಿಸುತ್ತಾನೆ... ಹೀಗೆ ವಾಕ್ಯಗಳು ಜೀವನ ನಡೆಸುತ್ತಾನೆ, ಪಡೆಯುತ್ತಾನೆ, ತೋರುತ್ತಾನೆ ಎಂದು ಕೊನೆಗೊಳ್ಳುತ್ತವೆ.

ಶಿಕ್ಷಕರಿಗೆ ಪಾಠ ಮಾಡುವಾಗ ಇಂಥ ವಾಕ್ಯರಚನೆಗಳ ದೋಷಗಳು ಮತ್ತು ಅವು ಬೀರುವ ಪರಿಣಾಮಗಳು ಅರಿವಿಗೆ ಬಂದೇ ಬರುತ್ತವೆ ಎಂದು ಹೇಳುವಂತಿಲ್ಲ. ಅವರಲ್ಲೇ ಪ್ರಶ್ನೆ ಮೂಡದಿದ್ದರೆ, ಈ ಭಾಷಾ ಕಾಯಿಲೆಗಳು ಯಥಾವತ್ ತರಗತಿಯಲ್ಲಿ ಅನುರಣನಗೊಂಡು ಎಳೆಯರ ಚಿಂತನೆಯಲ್ಲಿ ಆಳವಾಗಿ ಬೇರೂರುತ್ತವೆ. ಹಿಂದಿನ ಇಂಥ ಪ್ರಮಾದಗಳೇ ಇಂದಿನ ವಯಸ್ಕ ಸ್ತ್ರೀ-ಪುರುಷರ ಚಿಂತನೆಗಳಲ್ಲಿ ಪುರುಷಪ್ರಧಾನ ಚಿಂತನಾಧಾರೆಗಳಿಗೆ ಕಾರಣವಾಗಿರುವುದನ್ನು ನಾವು ಹೇಗೆ ಮರೆಯಲಾದೀತು?

ಪಠ್ಯಪುಸ್ತಕದ ನಿರ್ಮಾಣದಲ್ಲಿ ಮಹಿಳಾ ಪ್ರತಿನಿಧೀಕರಣ ಯಾಕೆ ಅವಶ್ಯಕ ಮತ್ತು ಮಹಿಳಾ ಪ್ರಾತಿನಿಧ್ಯ ಇಲ್ಲದೇ ಹೋದಲ್ಲಿ ಏನಾಗುತ್ತದೆ ಎಂಬುದನ್ನು ಕೆಲವು ನಿದರ್ಶನಗಳ ಮೂಲಕ ಗುರುತಿಸಿದ್ದೇನೆ. ಮಹಿಳೆಯರ ಪ್ರತಿನಿಧೀಕರಣ ಕೇವಲ ಸಂಖ್ಯೆಯ ನೆಲೆಯಲ್ಲಿ ಆದರೆ ಸಾಲದು. ಸತ್ವದ ನೆಲೆಯಲ್ಲಿ ಪ್ರತಿನಿಧೀಕರಣವನ್ನು ಅರ್ಥಮಾಡಿಕೊಳ್ಳಬೇಕು. ಲಿಂಗಸೂಕ್ಷ್ಮತೆ ಇರುವ ಸದಸ್ಯರು ಸಮಿತಿಗಳಲ್ಲಿ ಇದ್ದಾಗ ಮಾತ್ರ ಇದು ಸಾಧ್ಯ (ಇಲ್ಲವಾದರೆ 5ನೇ ತರಗತಿಯ ಸಮಾಜವಿಜ್ಞಾನದ ಪಾಠಗಳ ಪಠ್ಯಪುಸ್ತಕ ಸಮಿತಿಯಲ್ಲಿ ಮಹಿಳಾ ಸದಸ್ಯರಿದ್ದೂ ಪೂರ್ವಾಗ್ರಹಗಳು ನುಸುಳಿದಂತೆ ಆಗುತ್ತದೆ).

ಶಿಕ್ಷಣ ಎಂದರೆ ಅರಿವು. ಈ ಅರಿವು ಮೂಡಿದಾಗ ವ್ಯಕ್ತಿಘನತೆ, ವೃತ್ತಿಘನತೆಗೆ ಬೆಲೆ ಬರುತ್ತದೆ. ವ್ಯಕ್ತಿಗಳನ್ನು ಸ್ವಾವಲಂಬಿಗಳಾಗುವಂತೆ ರೂಪಿಸುವುದು ಶಿಕ್ಷಣದ ಜವಾಬ್ದಾರಿ. ಅವರು ಬಲ ಮತ್ತು ಅಧಿಕಾರವನ್ನು ಅರ್ಥಮಾಡಿಕೊಳ್ಳುವುದು, ಅದರ ಸದ್ಬಳಕೆ ಮಾಡುವುದು, ಅದಕ್ಕೆ ತಲೆಬಾಗದೆ ಬೆಲೆ ಕೊಡುವುದನ್ನು ಕಲಿಯುವುದು ಮುಖ್ಯವಾಗುತ್ತದೆ. ಇಂಥ ಬೆಳವಣಿಗೆಗೆ ಪಾಠಪಠ್ಯಗಳು ಪೂರಕವಾಗುವಂತೆ ಅವುಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಪಠ್ಯಪುಸ್ತಕ ಸಮಿತಿಯದ್ದಾಗಿರುತ್ತದೆ.

ಪೂರ್ವಾಗ್ರಹಗಳಿಂದ ಕೂಡಿದ ಪಠ್ಯಗಳು ಎರಡು ಬಗೆಯ ಅಪಾಯಗಳನ್ನು ತಂದೊಡ್ಡುತ್ತವೆ. ನಗರಪ್ರದೇಶದ ಹೆಣ್ಣುಮಕ್ಕಳಿಗೆ ಲಿಂಗತ್ವಸೂಕ್ಷ್ಮತೆ ಇಲ್ಲದ ಇಂಥ ಪಾಠಗಳು ಅವರನ್ನು ಪುರುಷ ಪ್ರಧಾನತೆ ತರಬೇತುಗೊಳಿಸುವ, ಪಳಗಿಸುವ ಕೆಲಸವನ್ನು ಮಾಡುತ್ತವೆ. ಗ್ರಾಮಪರಿಸರದಲ್ಲಿ ಇವು ಅವರನ್ನು ಲಿಂಗತಾರತಮ್ಯ ವ್ಯವಸ್ಥೆಗೆ ತಮ್ಮನ್ನು ಒಪ್ಪಿಸಿಕೊಳ್ಳುವಂತೆ, ಪ್ರಶ್ನಿಸದಂತೆ ತಡೆಯುವ ಕಾರ್ಯವನ್ನು ಮಾಡುತ್ತವೆ. ಅಂತೆಯೇ ಪಾಠಗಳು ಕೇವಲ ಪಾಠಗಳಲ್ಲ; ಅವು ಬದುಕನ್ನು ರೂಪಿಸುವ ಪಾಠಗಳು. ಓದಿ ಪ್ರಶ್ನೆಗೆ ಉತ್ತರಿಸಿದರೆ ಅವುಗಳ ಉದ್ದೇಶ ಪೂರ್ಣವಾಗುವುದಿಲ್ಲ. ಆದುದರಿಂದ ಪಠ್ಯಪುಸ್ತಕಗಳು ಹೊಸದಾಗಿ ಬಂದಾಗ ಪಾಠಗಳ ಕುರಿತ ಚರ್ಚೆ, ವಿಮರ್ಶೆ ಮತ್ತು ಸಂವಾದ ಅತ್ಯಂತ ಮುಖ್ಯವಾಗಿ ಜರುಗಬೇಕಾದ ಕಾರ್ಯ. ●

ಹಳ್ಳಿ ಹಿತವಾಗಿ ಕಾಣಲು ಮುಖ್ಯ ಆಕರ್ಷಣೆ ಅಲ್ಲಿಯ ಸೌಕರ್ಯಗಳಲ್ಲ, ಸಂಬಂಧಗಳು. ಅವು ಮಾಯವಾಗಿರುವುದರಿಂದಲೇ ನಾವು ನಗರಗಳ ಕಡೆ ಮುಖ ಮಾಡುತ್ತಿದ್ದೇವೆ. ಇಲ್ಲದಿರುವುದನ್ನು ಹುಡುಕುತ್ತಿದ್ದೇವೆ.

● ಎಂ.ಇಕ್‌ಬಾಲ್ ಹುಸೇನ್

ಮಿಂಚಿ ಮರೆಯಾದವರು



ಕೆಲವು ವ್ಯಕ್ತಿಗಳು ಯಾಕೆ ನಮ್ಮ ಗಮನ ಸೆಳೆಯುತ್ತಾರೆ? ಅವರ ರೂಪವೇ? ಮಾತೇ? ನಡವಳಿಕೆಯೇ? ಅವನು ಅಥವಾ ಅವಳು ನವ್ಮೊಂದಿಗೆ ನಡೆದುಕೊಂಡ ರೀತಿನೀತಿಗಳೇ? ಅವರೇನಾಗಬೇಕು ನನಗೆ? ಏನೂ ಇಲ್ಲ! ಆದರೂ ದಶಕಗಳು ಕಳೆದರೂ ಎದೆ ಆಳದಲ್ಲಿ, ಮಿದುಳಿನಲ್ಲಿ ಸದಾ ಹಸಿರಾಗಿ ನೆನಪಾಗಿ ಉಳಿದುಬಿಡುತ್ತಾರೆ. ಹಾಗೆ ಉಳಿದವರಲ್ಲಿ ನನ್ನ ತಾಯಿಯ ತವರು ಗ್ರಾಮದ ಗಂಗಪ್ಪ ಕೂಡಾ ಒಬ್ಬ.

ನನ್ನ ತಾಯಿಯ ಊರು ಕುಣಿಗಲ್ ಮತ್ತು ಯಡಿಯೂರುಗಳ ಮಧ್ಯೆ ಇರುವ ಸಾಧಾರಣ ಗ್ರಾಮ. ಗ್ರಾಮ ಪಂಚಾಯತಿ, ಅಂಚೆಕಚೇರಿ ಇತ್ಯಾದಿಗಳನ್ನು ಹೊಂದಿರುವ ಹೆದ್ದಾರಿ ಪಕ್ಕದ ಹಳ್ಳಿ. ಶಾಲಾ ರಜೆಗಳಲ್ಲಿ ತಾಯಿಯ ತವರು ಮನೆಗೆ ನಾನು, ನಮ್ಮಣ್ಣ ಹೋಗುತ್ತಿದ್ದೆವು. ಬೇಸಿಗೆ ರಜೆ, ಮೊಹರಂ ಹಬ್ಬ, ಉರುಸ್‌ಗಳನ್ನು ನಮ್ಮ ಚಿಕ್ಕಮ್ಮ, ದೊಡ್ಡಮ್ಮನ ಮಕ್ಕಳ ಜೊತೆ ಊರಿನಲ್ಲೇ ಕಳೆಯುತ್ತಿದ್ದೆವು. ಜೊತೆಗೆ ನಮ್ಮ ಸೋದರ ಮಾವಂದಿರು, ಅವರ ಮಕ್ಕಳು ಎಲ್ಲರೂ ಸೇರಿ ಆಟ ಆಡುವುದು, ಹೊಲಕ್ಕೆ ಹೋಗುವುದು, ದನ, ಹಸು, ಕರು ಹಿಡಿದು ಮೇಯಿಸುವುದು, ಮರ-ಕೋತಿ ಆಟ ಆಡುತ್ತಾ ತಿಬ್ಬನಲ್ಲಿ ತಿರುಗುವುದನ್ನೆಲ್ಲ ಮಾಡುತ್ತಿದ್ದೆವು. ನಾವೆಲ್ಲರೂ ಆಗ ಪ್ರೈಮರಿ, ಮಿಡ್ಲ್ ಸ್ಕೂಲುಗಳಲ್ಲಿ ಓದುತ್ತಿದ್ದ ಹುಡುಗರು. ಆಗ ನಮಗೆಲ್ಲಾ ಸಾಲಾಗಿ ಹೇರ್ ಕಟಿಂಗ್ ಮಾಡಲು ಕಂಟ್ರಾಕ್ಟರ್ ಕೂಡಾ ಆಗಿದ್ದ ನಮ್ಮ ದೊಡ್ಡ ಸೋದರಮಾವ ಅಬ್ದುಲ್ ಖಾದರ್ ಸಾಹೇಬರು ಗಂಗಪ್ಪ ಎನ್ನುವವರನ್ನು ನೇಮಿಸಿದ್ದರು.

ಕಟಿಂಗ್ ಮಾಡಲು ಬಂದ ಗಂಗಪ್ಪ ತನ್ನ ಪೆಟ್ಟಿಗೆ ತೆಗೆದು, ಉಪಕರಣಗಳನ್ನು ಹೊರಗಿಟ್ಟು, ಮನೆ ಅಂಗಳದಲ್ಲಿ ಒಬ್ಬೊಬ್ಬರನ್ನಾಗಿ ಕರೆದು "ಈಗ ಯಾವ ಕ್ಲಾಸು? ಮುಂದೆ ಏನು ಓದುತ್ತೀಯಾ? ಸ್ಕೂಲು ಹೆಂಗದೆ" ಮುಂತಾದವನ್ನು ಕನ್ನಡ-ಉರ್ದುವಿನಲ್ಲಿ ವಿಚಾರಿಸುತ್ತಾ ತಲೆಗೂದಲು ತೆಗೆದು, ಸಣ್ಣದಾಗಿ ಕ್ರಾಪುಬಾಚಿ ಕಳಿಸುತ್ತಿದ್ದ. ಈತನೇ ಊರಿನ ಎಲ್ಲಾ ಧರ್ಮ, ಜಾತಿಗಳ ಮದುವೆ, ಮುಂಜಿ, ಮೆರವಣಿಗೆಗಳಲ್ಲಿ ನಾಯಕತ್ವ ವಹಿಸಿ ತನ್ನ ಸಹಾಯಕ ವಾಲಗದವರು ಹಾಗೂ ತಮಟೆ ಮುನಿಯಪ್ಪನ ತಂಡದವರೊಂದಿಗೆ ಹಾಜರಾಗುತ್ತಿದ್ದ. ಮೊಹರಂ ಹಬ್ಬದ ಸಮಯದಲ್ಲಿ ಒಂದುಕಡೆ ತಮಟೆ ಮುನಿಯಪ್ಪ, ನಂಜಪ್ಪ ಮತ್ತು ರಂಗಪ್ಪ ಇನ್ನೊಂದು ಕಡೆ ಗಂಗಪ್ಪನ ವಾಲಗದವರು. ಹೀಗೆ ಎದುರುಬದುರು ನಿಂತು ಸಂದರ್ಭಕ್ಕೆ ತಕ್ಕಂತೆ ವಾಲಗದ ರಾಗ, ವೇಗ, ಆಲಾಪ ಬದಲಾಯಿಸುತ್ತಿದ್ದರು. ಅದಕ್ಕೆ ಉತ್ತರವಾಗಿ ತಮಟೆ ಮೇಳದವರು ತಮಟೆ ಲಯ ಬದಲಿಸುತ್ತಿದ್ದರು. ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ತಮಟೆ ಕಾಯಿಸುತ್ತಾ ವಾಲಗದವರತ್ತ ನಕ್ಕು ಕಣ್ಣು ಮಿಟುಕಿಸಿ ಕುಣಿಯುತ್ತಿದ್ದರು. ಬಿಳಿ ಷರ್ಟು, ಪಂಚೆ, ಹೆಗಲಿನಲ್ಲಿ ಬಿಳಿ ಶಲ್ಯ ಧರಿಸುತ್ತಿದ್ದ ಗಂಗಪ್ಪನ ಸನ್ನೆಯನ್ನು ಅರಿತು ತಟ್ಟನೆ ವಾಲಗ ನಿಲ್ಲಿಸಿ, ಉಸಿರೆಳೆದು ಶಕ್ತಿಯನ್ನೆಲ್ಲಾ ವಾಲಗದ ಪೀಪಿಯಲ್ಲಿ ತುಂಬುವಂತೆ ಒಮ್ಮೆ ತಾರಕಕ್ಕೆ ಧ್ವನಿ ಏರಿಸಿ, ನಂತರ ನಿಧಾನಕ್ಕೆ ಇಳಿಸಿ, ಹೊಸಾಯಟ್ಟಿಗೆ ಪೀಠಿಕೆ ಹಾಕಿಕೊಂಡು ಮುನ್ನಡೆದರೆ ಇಡೀ ಮೆರವಣಿಗೆ ಅವನನ್ನು ಹಿಂಬಾಲಿಸುತ್ತಿತ್ತು.

ಮುಸ್ಲಿಮರ ಮದುವೆ (ನಿಕಾ) ಸಂದರ್ಭದಲ್ಲಿ ಖುಷಿ ಕೊಡುವ ಕನ್ನಡ, ಹಿಂದಿ ಚಿತ್ರಗೀತೆಗಳು ಗಂಗಪ್ಪನ ವಾಲಗದಲ್ಲಿ ಸುಮಧುರವಾಗಿ ಮೂಡಿಬರುತ್ತಿದ್ದವು. ನಿಕಾ ಮುಗಿದು, ಮದುವಣಗಿತ್ತಿಯನ್ನು ಗಂಡಿನ ಮನೆಗೆ ಕಳಿಸುವ ವಿದಾಯದ ಸಂದರ್ಭದಲ್ಲಿ ಗಂಗಪ್ಪ ತನ್ನ ವಾದ್ಯದಲ್ಲಿ ಮೊಳಗಿಸುತ್ತಿದ್ದ ರಾಗಗಳಿಗೆ ಗಂಡಿನ ಕಡೆಯವರೂ ಕರ್ಚೀಫು, ಟವೆಲ್, ಸೆರಗುಗಳಿಂದ ಕಣ್ಣೀರು ಒರೆಸಿಕೊಳ್ಳುತ್ತಿದ್ದರು.

ಇಂತಹ ಗಂಗಪ್ಪನ 'ಹೇರ್ ಕಟ್ಟಿಂಗ್ ಮತ್ತು ಶೇವಿಂಗ್ ಸಲೂನ್' ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಹಾಲಪ್ಪನ ಗುಡ್ಡೆ ಎಂಬ ಮೂರುದಾರಿ ಕೂಡುವ ವ್ಯಾಪಾರ ಕೇಂದ್ರದ ಬಳಿ ಪ್ರಾರಂಭವಾಯಿತು. ನಾವು ಯುವಕರಾಗಿ ಉದ್ಯೋಗಕ್ಕಾಗಿ ಬೇರೆಬೇರೆ ಊರುಗಳಲ್ಲಿ ನೆಲೆಕಂಡುಕೊಂಡೆವು. ಆದರೂ ಮದುವೆ, ಹಬ್ಬ, ಸಮಾರಂಭಗಳಿಗೆಂದು ಹಳ್ಳಿಗೆ ಹೋದಾಗ ತಪ್ಪದೆ ಬೆಳಗ್ಗೆ ಗಂಗಪ್ಪನ ಬಳಿ ಹೋಗಿ ಶೇವಿಂಗ್ ಮಾಡಿಸಿಕೊಳ್ಳುತ್ತಿದ್ದೆವು. ಅದು ಒಂದು ರೀತಿಯ ಖುಷಿ ಕೊಡುತ್ತಿತ್ತು.

ನಾವು ಬರುವುದನ್ನು ಮೊದಲೇ ಅರಿತಿದ್ದವನಂತೆ "ನಿಮಗೋಸ್ಕರ ತಂದದ್ದು" ಎಂದು ಪನಾಮಾ ಬ್ಲೇಡುಗಳನ್ನು ತೋರಿಸಿ, ಅದನ್ನು ಹಜಾಮತಿ ಕತ್ತಿಗೆ ಸೇರಿಸಿ, ಶೇವಿಂಗ್ ಮಾಡುತ್ತಾ, ಕುಶಲೋಪರಿ ಕೇಳುತ್ತಾ, ಮನೆಮಂದಿಯ ಯೋಗಕ್ಷೇಮ ವಿಚಾರಿಸುತ್ತಾ, ಹಳೆಯ ಘಟನೆಗಳನ್ನು ನೆನಪಿಸಿ ಬಾಯಿತುಂಬಾ ನಗುತ್ತಿದ್ದ. ನಾವು ಕೊಟ್ಟ ಹಣ ಎಷ್ಟು ಎಂದು ಎಣಿಸುವುದಕ್ಕೆ ಸಹ ಹೋಗುತ್ತಿರಲಿಲ್ಲ. ಒಬ್ಬೊಬ್ಬರ ಶೇವಿಂಗ್ ಮುಗಿಯುವುದಕ್ಕೆ ತಲೆಗೂದಲು ಕಟಿಂಗ್‌ಗೆ ಬೇಕಾಗುವಷ್ಟು ಸಮಯ ತೆಗೆದುಕೊಂಡರೂ ಸ್ವಲ್ಪವೂ ಬೇಸರಿಸದೆ, ಎಲ್ಲರೂ ಹೊರಡುವಾಗ 'ಮತ್ತೆ ಯಾವಾಗ ಇತ್ತ ಕಡೆ?' ಎಂದು ವಿಚಾರಿಸಿ ಬಾಯಿತುಂಬಾ ಹರಸುವನು.

ಹಬ್ಬ-ಹರಿದಿನಗಳಲ್ಲಿ ಮೈಕು, ಬ್ಯಾಂಡುಗಳು ತಮ್ಮ ಗದ್ದಲ ಪ್ರಾರಂಭಿಸಿದ ನಂತರ ಗಂಗಪ್ಪ ಅಪರೂಪವಾಗಿಬಿಟ್ಟ. ನಂತರದ ದಿನಗಳಲ್ಲಿ ಅನಾರೋಗ್ಯದಿಂದ ಕಣ್ಮರೆಯಾಗಿಬಿಟ್ಟ. ಈಗ ನಮ್ಮ ಗಂಗಪ್ಪ, ನಂಜಪ್ಪ, ಮುನಿಯಪ್ಪ ಯಾರೂ ಬದುಕಿಲ್ಲ, ಆದರೆ ಅವರ ನೆನಪು, ಮುಖ, ಮಾತು ಮಾತ್ರ ಶಾಶ್ವತವಾಗಿ ನನ್ನ ಮನಸ್ಸಿನಲ್ಲಿ ಉಳಿದಿದೆ.

ಗಂಗಪ್ಪನ ಮಗ ಹೇರ್ ಕಟಿಂಗ್ ಶಾಪ್ ಮುಂದುವರೆಸಿದ್ದಾನೆ. ಕನ್ನಡ-ಇಂಗ್ಲಿಷ್‌ನಲ್ಲಿ ಬೋರ್ಡು ಬರೆಸಿ ಆಧುನಿಕವಾಗಿ ಅಲಂಕರಿಸಿದ್ದಾನೆ. ಅಂಗಡಿಯ ಮಾಲೀಕನಾಗಿದ್ದಾನೆ. ಆತನ ಮಾತು ಮನೋಭಾವ ಬದಲಾಗಿವೆ. ಆದರೂ ಅಭ್ಯಾಸಬಲದಿಂದ ಹಳೆಯ ಸೆಳೆತ ಹೋಗುತ್ತಿಲ್ಲ. ಅವನ ಮಗನನ್ನು ಮಾತನಾಡಿಸಿ ಶೇವಿಂಗ್ ಮುಗಿಸಿ ಹಳೆಯದನ್ನು ನೆನೆದು ಭಾರವಾದ ಮನಸ್ಸಿನಿಂದ ಹಿಂತಿರುಗುತ್ತೇವೆ.

ಊರು ಬದಲಾಗಿದೆ, ಜನ ಬದಲಾಗಿದ್ದಾರೆ. ಹಳೆಯ ಜನಗಳ ಬದಲಿಗೆ ನಮಗೆ ಪರಿಚಯವೇ ಇಲ್ಲದ ಹೊಸ ಮುಖಗಳನ್ನು ನೋಡಿ ಸುಮ್ಮನಾಗುತ್ತೇವೆ. ಹಳೆಯ ತಲೆಮಾರಿನ ಜನಗಳಲ್ಲಿ ಕಾಣುತ್ತಿದ್ದ ಪ್ರೀತಿ, ವಾತ್ಸಲ್ಯ ಮಮತೆ 'ಇವ ನಮ್ಮವ' ಎಂಬ ಭಾವ ಇಂದಿನ ತಲೆಮಾರಿನಲ್ಲಿ ಕಾಣಸಿಗುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಇಂದು ಹಳ್ಳಿಯ ಹಿರಿಯರನ್ನು ಗುರುತು ಹಿಡಿದು ಮಾತಾಡಿಸಿದರೆ, "ಅಯ್ಯೋ ನೀನು ಖಾದರ್ ಸಾಹೇಬರ ಅಳಿಯ, ಇವರ ಮೊಮ್ಮಗ ಅಲ್ಲವಾ?" ಎಂದು ತುಂಬ ಪ್ರೀತಿಯಿಂದ ಹತ್ತಿರ ಕರೆದು ಮಾತಾಡಿಸಿ ಹಳೆಯ ದಿನಗಳ ಮೆಲುಕು ಹಾಕುತ್ತಾರೆ. ಆ ಹಿರಿಯ ಜೀವಿಗಳ ಜೊತೆ ಮಾತಾಡುವುದು ಒಂದು ರೀತಿಯಲ್ಲಿ ಗತಕ್ಕೆ ಪ್ರಯಾಣಿಸಿದಂತೆ. ಆದರೆ ಆ ಪ್ರಯಾಣದ ಸುಖಸುಮ್ಮನೆ ಸಿಗುವ ವಸ್ತುವಲ್ಲ, ನಾವು ಅವರಿಗೆ ಏನು ಕೊಟ್ಟೆವು? ಅವರೇಕೆ ನಮಗೆ ಅಷ್ಟೊಂದು ಪ್ರೀತಿಯನ್ನು ಎರೆದರು? ಧರ್ಮ, ಜಾತಿ ಯಾಕೆ ಯಾವತ್ತೂ ಅವು ಬೇರೆಯವರದ್ದು, ಇದು ನಮ್ಮದು ಎಂದು ಅನ್ನಿಸಲಿಲ್ಲ?

ಎತ್ತಿನಬಂಡಿಯಲ್ಲಿ ಕೊಡೆಹಿಡಿದು ಕೂರುತ್ತಿದ್ದ ನಮ್ಮ ತಾತ ಹಳ್ಳಿಯಿಂದ ಹೊರಟರೆ ಐದು ಮೈಲಿ ದೂರದ ಕುಣಿಗಲ್ ಮುಟ್ಟುವವರೆಗೆ ಕನಿಷ್ಠ ಇಪ್ಪತ್ತು ಬಾರಿಯಾದರೂ ದಾರಿಯಲ್ಲಿ ನಿಲ್ಲುತ್ತಿತ್ತು. ರಸ್ತೆಯಲ್ಲಿ, ಹಳ್ಳಿಗಳ ಪಕ್ಕದಲ್ಲಿ ಪರಿಚಯಸ್ಥರನ್ನು ಕಂಡಕೂಡಲೇ ಅವರನ್ನು ಮಾತನಾಡಿಸಿ, ಯೋಗಕ್ಷೇಮ ವಿಚಾರಿಸಿ ಗಾಡಿ ಮುಂದಕ್ಕೆ ಹೋಗುತ್ತಿತ್ತು. ಗಾಡಿ ಹೊಡೆಯುತ್ತಿದ್ದ ನನ್ನ ಸಣ್ಣಮಾವ ಸಿಟ್ಟಿನಿಂದ "ತಾತ, ಮೊಮ್ಮಕ್ಕಳು ಸವಾರಿ ಮುಗಿಸಿದರೇನಪ್ಪಾ?" ಎಂದು ತಮಾಷೆ ಮಾಡುತ್ತಲೇ ಬೀಡಿ ಹಚ್ಚಲು ಅವಕಾಶ ಸಿಗಲಿಲ್ಲವೆಂದು ಪೇಚಾಡುತ್ತಿದ್ದ.

ಹಳ್ಳಿ ಹಿತವಾಗಿ ಕಾಣಲು ಮುಖ್ಯ ಆಕರ್ಷಣೆ ಅಲ್ಲಿಯ ಸೌಕರ್ಯಗಳಲ್ಲ, ಸಂಬಂಧಗಳು. ಅವು ಮಾಯವಾಗಿರುವುದರಿಂದಲೇ ನಾವು ನಗರಗಳ ಕಡೆ ಮುಖ ಮಾಡುತ್ತಿದ್ದೇವೆ. ಇಲ್ಲದಿರುವುದನ್ನು ಹುಡುಕುತ್ತಿದ್ದೇವೆ. ●


ಹಿಂಸೆಯಿಂದ ವರ್ಚಸ್ಸು ಮುಸುಕಾಗುತ್ತದೆ

ಸಹನೆ ಹಾಗೂ ಸಹಬಾಳ್ವೆಯ ಸಂಸ್ಕೃತಿಯು ಮಾಯವಾಗುತ್ತಿದ್ದು, ಅದರ ಬದಲಿಗೆ ತಮ್ಮ ಶ್ರೇಷ್ಠತೆ ಹಾಗೂ ಅಸಹನೆಯ ವಿಚಾರಧಾರೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಚಾಕು-ಚೂರಿ-ಬಂದೂಕು-ಬಾಂಬ್‌ಗಳಂತೆಯೇ ಮಾತು ಮತ್ತು ಬರಹಗಳೂ ಕಿಡಿಗಳನ್ನು ಹಾರಿಸುತ್ತಿವೆ. ಕೆಲವೊಮ್ಮೆ ಸೃಜನಶೀಲ ಮತ್ತು ವಸ್ತುನಿಷ್ಠ ಬರಹ ಮತ್ತು ಅಭಿವ್ಯಕ್ತಿಯು ಫ್ಯಾಸಿಸ್ಟ್ ಶಕ್ತಿಗಳ ದುರಾಕ್ರಮಣಕ್ಕೆ ತುತ್ತಾದರೆ ಇನ್ನೂ ಕೆಲವು ಸಂದರ್ಭದಲ್ಲಿ ಫ್ಯಾಸಿಸ್ಟ್ ಶಕ್ತಿಗಳೇ ತಮ್ಮ ಮಾತು, ಬರವಣಿಗೆ ಹಾಗೂ ಇತರೆ ಅಭಿವ್ಯಕ್ತಿ ಮಾಧ್ಯಮದ ಮೂಲಕ ಇನ್ನೊಂದು ವರ್ಗ, ಲಿಂಗ, ದೇಶ ಮತ್ತು ಧರ್ಮಗಳನ್ನು ಗುರಿಯಾಗಿಸಿ ಅವಹೇಳನ ಮಾಡುವುದನ್ನೇ ತಮ್ಮ ಬದುಕಿನ ಗುರಿಯನ್ನಾಗಿಸಿಕೊಂಡಿವೆ ಹಾಗೂ ಈ ಮೂಲಕ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿವೆ.

ವಿಶ್ವದಾದ್ಯಂತ ನಡೆಯುತ್ತಿರುವ ಈ ಪ್ರಕ್ರಿಯೆಯಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆಯ ಮೂಲಕ ಸಂಬಂಧವಿರಲಿ ಅಥವಾ ಇಲ್ಲದೆ ಇರಲಿ ಅನೇಕ ಅಮಾಯಕರು ಪ್ರಾಣ, ಹಣ ಮತ್ತು ಮಾನವನ್ನು ಕಳೆದುಕೊಂಡು ಹತಾಶರಾಗುತ್ತಿದ್ದಾರೆ. ಭಾವನೆಗಳಿಗೆ ನೋವಾಯಿತು ಎಂಬ ಉದ್ರೇಕಕಾರಿ ನೆಪವನ್ನು ಮುಂದೊಡ್ಡಿ ಅತ್ಯಂತ ಅಮಾನವೀಯ ಗಲಭೆಗಳನ್ನು ಆಯೋಜಿಸಲಾಗುತ್ತಿದೆ. ಈಗ ಇಡೀ ವಿಶ್ವದಲ್ಲಿಯೇ ಈ ಮನೋಭಾವವು ಮೂಡಿದೆ.

ಇಂತಹ ಸಂದರ್ಭದಲ್ಲಿ ತನ್ನನ್ನು ವಿಚಿತ್ರವಾಗಿ ಪರಿಗಣಿಸಿದ, ಅವಹೇಳನ ಮಾಡಿದ ಘಟನೆಯನ್ನು ಬಲ್‌ಪ್ರೀತ್ ಕೌರ್ ಎಂಬ ಯುವತಿ ಅತ್ಯಂತ ಘನತೆಯಿಂದ ನಿಭಾಯಿಸಿದಳು (ನೋಡಿ 'ಕಂಡಹಾಗೆ' ಅಂಕಣ, ಪತ್ರಿಕೆ ಅಕ್ಟೋಬರ್ 17, 2012ರ ಸಂಚಿಕೆ).

ಬಲ್‌ಪ್ರೀತ್ ಕೌರ್ ವಯಸ್ಸಿನಿಂದ ಮಾಗಿದವಳಲ್ಲ, ಸಾರ್ವಜನಿಕ ಜೀವನದ ಅನುಭವಗಳೂ ಆಕೆಯ ಬೆನ್ನಿಗಿಲ್ಲ, ಆದರೆ ಸಮುದಾಯದ ನ್ಯಾಯ ಅನ್ಯಾಯಗಳನ್ನು ಬಲ್ಲ ಮತ್ತು ವಿವೇಕಯುತ ನಿರ್ಧಾರವನ್ನು ಕೈಗೊಳ್ಳಬಲ್ಲ ಎಲ್ಲಾ ಸಾಮರ್ಥ್ಯ ಆಕೆಗಿದೆ ಎಂಬುದನ್ನು ಆಕೆ ಸಾಬೀತುಪಡಿಸಿದ್ದಾಳೆ. ಅಪರಿಮಿತ ತಾಳ್ಮೆ, ಧೈರ್ಯ ಹಾಗೂ ಎಲ್ಲಾ ನಕಾರಾತ್ಮಕತೆಯನ್ನು ಆಪೋಶನ ತೆಗೆದುಕೊಂಡು ಅದನ್ನು ತನ್ನ ಶಕ್ತಿಯನ್ನಾಗಿಸುವ ಕಲೆಗಾರಿಕೆ ಆಕೆಯದು: ಬುದ್ಧ ನಡೆದು ಬರುತ್ತಿದ್ದಾಗ ಮೊಗ್ಗುಗಳು ಬಿರಿಯುತ್ತಿದ್ದವಂತೆ.... ಅಂಗುಲಿ ಮಾಲಾನಂತಹ ಕ್ರೂರಿ ಅವನ ಪಾದಕ್ಕೆರಗಿ ಶರಣಾದಂತೆ!



"ಸೌಂದರ್ಯವನ್ನು ನಿರ್ಧರಿಸುವ ಸಾಮಾಜಿಕ ಮಾನದಂಡಗಳನ್ನು ನಾನು ಈ ಮೂಲಕ ಪ್ರಶ್ನಿಸುತ್ತಿದ್ದೇನೆ. ನನ್ನನ್ನು ಜನ ಹೇಗೆ ಕಾಣುತ್ತಾರೆಂಬುದರ ಬಗ್ಗೆ ನನಗೆ ಅರಿವಿದೆ. ಜನರು ನನ್ನನ್ನು ವಿವಿಧ ರೀತಿಯಲ್ಲಿ ಅರ್ಥೈಸುವುದನ್ನು ನಾನು ತಪ್ಪಿಸಲಾರೆ. ಆದರೆ ಅವರ ಅಜ್ಞಾನವನ್ನು ದೋಷಪೂರಿತವಾಗಿ ಗ್ರಹಿಸುವುದನ್ನು ಅಥವಾ ಅವರ ಆ ನಿಲುವಿನ ಮುಂದುವರೆದ ಭಾಗವಾಗಿ ದ್ವೇಷಸಾಧನೆ ಮಾಡುವುದನ್ನು ತಪ್ಪಿಸಬಲ್ಲೆ. ಈ ಪ್ರಕ್ರಿಯೆಯಲ್ಲಿ ಜನರ ಮಧ್ಯೆ ಸಂಪರ್ಕ ಸೇತುವೆಯಾಗುವ ಪಾತ್ರವನ್ನು ನಾನು ನಿರ್ವಹಿಸುತ್ತಿದ್ದೇನೆ ಹಾಗೂ ಈ ಪಾತ್ರನಿರ್ವಹಣೆ ತೀವ್ರ ಸಂಕಷ್ಟಕರವಲ್ಲ, ಪರಸ್ಪರ ಪ್ರಾಮಾಣಿಕ ಸಂವಾದ ಮತ್ತು ಅರ್ಥಪೂರ್ಣ ಶಬ್ದಗಳ ವಿನಿಮಯವು ನಮ್ಮ ಬದುಕನ್ನು ಸುಂದರವಾಗಿಸುತ್ತದೆ. ಈ ಪ್ರಯತ್ನವು ಇತರೆಯವರ ಅಭಿಪ್ರಾಯವನ್ನು ಬದಲಾಯಿಸಲು ಮತ್ತು ಆ ಮೂಲಕ ಹಂತಹಂತವಾಗಿ ಸುಂದರಜಗತ್ತಿನ ನಿರ್ಮಾಣಕ್ಕೆ ಕಾರಣೀಭೂತವಾಗುತ್ತದೆ" ಎಂದು ಹೇಳುವ ಮೂಲಕ ಅತ್ಯಂತ ಘನತೆ, ಗೌರವ ಮತ್ತು ಹೃದಯವೈಶಾಲ್ಯವನ್ನು ಮೆರೆದಿದ್ದಾಳೆ ಬಲ್‌ಪ್ರೀತ್.

ಪಾಶ್ಚಾತ್ಯ ಸೌಂದರ್ಯದ ಮೌಲ್ಯಕ್ಕೆ ಮಾರುಹೋಗದೆ, ಮುಖದ ಮೇಲೆ ಅಪಾರ ಕೇಶರಾಶಿಯನ್ನು ಹೊಂದಿರುವ ಬಲ್‌ಪ್ರೀತ್‌ಳ ವಿವೇಕ, ಸಹನೆ ಹಾಗೂ ಸಂದರ್ಭೋಚಿತ ಪ್ರಾಮಾಣಿಕತೆ ಆಕೆಗೆ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಒದಗಿಸಿದೆ. ಕೌರ್‌ಳ ಈ ನಿಲುವು ಹೆಚ್ಚಿನ ಮಹತ್ವವನ್ನು ಪಡೆಯಲು ಒಂದು ಪ್ರಸಂಗ ಕೂಡಾ ಮುಖ್ಯವಾಗುತ್ತದೆ. ಹ್ಯಾರಿ ಪಾಟರ್ ಖ್ಯಾತಿಯ ಜೆ.ಕೆ.ರೌಲಿಂಗ್ ತನ್ನ ಹೊಸ ಕೃತಿಯಾದ 'ಕಾಶುಯಲ್ ವೇಕೆನ್ಸಿ'ಯಲ್ಲಿ ಸಿಖ್ ಕುಟುಂಬವೊಂದರ ಚಿತ್ರಣವನ್ನು ನೀಡಿದ್ದಾಳೆ. ಆ ಕುಟುಂಬದ ಒಬ್ಬ ಹೆಣ್ಣಿನ ಪಾತ್ರವು ವಿಚಿತ್ರ ಸಂಯೋಗದಂತೆ ಬಲ್‌ಪ್ರೀತ್ ಕೌರ್‌ಳಂತೆ ದೇಹದ ಮೇಲೆ ಅಪಾರ ಕೇಶರಾಶಿಯನ್ನು ಹೊಂದಿದವಳಾಗಿದ್ದಾಳೆ. ಈ ಪಾತ್ರದ ಮೂಲಕ ಜೆ.ಕೆ.ರೌಲಿಂಗ್ ಸಿಖ್ ಸಮುದಾಯದವರ ಅವಹೇಳನವನ್ನು ಮಾಡಿದ್ದಾಳೆ ಎಂದು ಆಕೆಯ ವಿರುದ್ಧ ಭಾರತದಲ್ಲಿ ಸಿಖ್ ಸಮುದಾಯದವರಿಂದ ಅನೇಕ ಪ್ರತಿಭಟನೆಗಳು ನಡೆದಿವೆ. ಈ ಬಗ್ಗೆ ಕೂಡಾ ತನ್ನ ಅಭಿಪ್ರಾಯವನ್ನು ಬಲ್‌ಪ್ರೀತ್ ವ್ಯಕ್ತಪಡಿಸಿದಳು.

"ಈ ಪ್ರತಿಭಟನೆಗಳು ಮುಂದುವರೆಯಬಾರದೆಂದು ನಾನು ಆಶಿಸುತ್ತೇನೆ. ಹಿಂಸೆ ಮತ್ತು ಕೋಪದಿಂದ ಶಾಂತಿಪ್ರಿಯ ಸಿಖ್ಖರ ವರ್ಚಸ್ಸು ಮುಸುಕಾಗುತ್ತದೆ. ಸಿಖ್ ರಾಷ್ಟ್ರವು ಅವಹೇಳನ ಮತ್ತು ಕುಚೋದ್ಯದ ವಾಸ್ತವತೆ ಮತ್ತು ರಾಜಕೀಯವನ್ನು ಅರ್ಥಮಾಡಿಕೊಂಡು ಸೂಕ್ತ ಕಾರ್ಯಸೂಚಿಯನ್ನು ರೂಪಿಸಬೇಕೆಂದು ನಾನು ಬಯಸುತ್ತೇನೆ. ರೌಲಿಂಗ್ ಪಾತ್ರ ನಿರ್ಮಾಣದ ಹಿನ್ನೆಲೆಯನ್ನು ಬಳಸಿಕೊಂಡು ಸಾವಿರಾರು ಜನರೆದುರಿಗೆ ಸಿಖ್ ಸಮುದಾಯದ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕಿತ್ತು. ನಮಗೆ ಗುರುತಿಲ್ಲದ ಜನರ ಹಾಗೂ ನಮಗಿಂತ ವಿಭಿನ್ನರಾಗಿರುವ ಜನರ ಬಗ್ಗೆ ನಮಗೆ ವಿಚಿತ್ರ ಪೂರ್ವಾಗ್ರಹಗಳಿರುತ್ತವೆ. ಆದರೆ ಪ್ರಥಮ ನೋಟದ ನಂತರ ಅವರು ಕೂಡಾ ನಮ್ಮಂತೆಯೇ ಇದ್ದಾರೆ ಮತ್ತು ನಮ್ಮವರು ಎಂಬ ಭಾವ ಮೂಡುತ್ತದೆ. ಹೊರ ಜಗತ್ತಿನ ಈ ರೀತಿಯ ಪೂರ್ವಾಗ್ರಹಗಳಿಗೆ ನಾವು ಪ್ರತಿಭಟಿಸುವ ಬದಲಿಗೆ ಯಾಕೆ ನಾವು ನಮ್ಮ ಸಂಕಥನಗಳನ್ನು ನಮ್ಮ ಕ್ರಿಯೆಗಳ ಮೂಲಕ ಇಡೀ ಪ್ರಪಂಚಕ್ಕೆ ತೆರೆದಿಡಬಾರದು? ಈ ಪೂರ್ವಾಗ್ರಹಗಳಿಗೆ ನಾನು ಹೇಗೆ ಪ್ರತಿಕ್ರಿಯೆಯನ್ನು ಸೂಚಿಸುತ್ತೇನೆ ಎಂಬುದರ ಮೇಲೆ ನನ್ನ ವ್ಯಕ್ತಿತ್ವವು ನಿರ್ಧಾರವಾಗುತ್ತದೆ. ಆದುದರಿಂದ ಅಕಾಲ್‌ತಖ್ತ್‌ನ ನಮ್ಮ ರಾಷ್ಟ್ರದಲ್ಲಿ ನಂಬಿಕೆಯನ್ನು ಇಡೋಣ. ಕೌರ್‌ಗಳಾಗಿ ನಮಗೆ ತಿಳಿದಿರುವ ಸತ್ಯವೇನೆಂದರೆ ಈ ಶಬ್ದಗಳು ನಮ್ಮನ್ನು ವ್ಯಾಖ್ಯಾನಕ್ಕೆ ಒಳಪಡಿಸುವುದಿಲ್ಲ, ಬದಲಿಗೆ ನಮ್ಮ ಕ್ರಿಯೆ ಹಾಗೂ ಪ್ರತಿಕ್ರಿಯೆಗಳು ನಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ."

ಬಲ್‌ಪ್ರೀತ್ ಕೌರ್‌ಳ ಎಲ್ಲಾ ವಾದವನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಆದರೆ ಆಕೆಯು ಹೊರದೇಶದಲ್ಲಿ ಅತ್ಯಂತ ಅಮಾನವೀಯವಾದ ಜನಾಂಗೀಯ ಪ್ರೇರಿತವಾದ ಅವಹೇಳನವನ್ನು ಎದುರಿಸಿದ ಬಗೆ, ಸ್ವಅನುಕಂಪದಿಂದ ಹೊರ ಬಂದು ಇಡೀ ಇಂಟರ್‌ನೆಟ್ ಬಳಗದ ಬೆಂಬಲವನ್ನು ಪಡೆದ ಕ್ರಮ ಮತ್ತು ನಾಯಕತ್ವದ ಗುಣವನ್ನು ಮೆಚ್ಚಲೇ ಬೇಕು. ಸೌಂದರ್ಯದ ಪಾಶ್ಚಾತ್ಯ ಮಾನದಂಡಗಳನ್ನು ಆಕೆ ಪ್ರಶ್ನಿಸಿದ ಮಾರ್ಗವಂತೂ ಅದ್ಭುತ ಹಾಗೂ ದೂರಗಾಮೀ ಪರಿಣಾಮಗಳನ್ನು ಮೂಡಿಸುವಂತಹದ್ದಾಗಿದೆ.

● ಬಾನು ಮುಷ್ತಾಕ್

ನಾವು ನೀರಿಟ್ಟಗಂಡು ಇಲ್ಲ ಅನ್ನೊ ಸಣ್ಣಜನಲ್ಲ ಕಂಡ್ಳ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ವಾಟಿಸ್ಸೆ ಕೈಗೊಂದು ಬ್ಯಾಂಡೇಜ್ ಕಟ್ಟಿಕೊಂಡು ರಳುತ್ತ ಬಂದ. ಅದನ್ನು ನೋಡಿದ ಜುಮ್ಮಿ ತೂಹಲದಿಂದ,

"ಅದ್ಯಾಕ್ಲ ಕೈಗೆ ಬಟ್ಟೆ ಕಟ್ಟಗಂದಿದ್ದಿ? ಏನಾಗ್ಯದ್ಲ?" ಂದಳು.

"ಕುಡುದು ಜಾಸ್ತಿಯಾಗಿ ಎಲ್ಲೊ ಬಿದ್ದಿರಬೇಕು ಕಣೆ" ಂದ ಉಗ್ರಿ.

"ಕುಡುದು ಬಿದ್ರೆ ತಲಿಗೇಟಾಯ್ತದಪ್ಪ, ಇವ್ರುನು ಕೈ ಯರಕೊಂಡು ಬಂದಿರಂಗವ್ರುನೆ. ಆದ್ಯಂಗೇ ಅಂತ" ಎಂದ ರ.

"ಅದು ಏನಾಯ್ತದೆ ಗೊತ್ತೇನೊ ಮಾವ, ಯಾರೇ ಕೆ ಬಿದ್ರುವೆ, ಮದ್ಲು ಕೈಯೂರತರೆ, ಯಾಕಪ್ಪ ಅಂದ್ರೇ ಲೆಗೇಟಾಗಬಾರದು ಅಂತ. ನವಿಗೆ ಗೊತ್ತಿಲ್ದೆ ಯೂರಿಬುಡ್ತಿವಿ. ಅಂಗೆ ವಾಟಿಸ್ಸೆನೂ ಊರಿರಬೇಕು" ಂದು ಉಗ್ರಿ ಹೇಳುತ್ತಿರುವಾಗಲೇ,

"ಮಿಸ್ಟರ್ ಉಗ್ರಿ, ಏಟು ತಿಂದೋನು ಯಿಬುಡದ್ಕೂ ಮದ್ಲೆ ನೀವು ನೀವೇ ಅಂದಾಜಲ್ಲಿ ಾತಾಡದ ಬುಡ್ತೇಯಿಲ್ಲ ಕಣೊ. ಏನು ಮಾಡ್ತಿರೇಳಿ ನ್ಯಲದ ಗುಣನೇ ಅಂತದ್ದು. ಇಲಿ ಹೋಯ್ತು ಂದ್ರೆ ಹುಲಿ ಹೋಯ್ತು ಅನ್ನದು, ಗುಳ್ಳೆ ನರಿ ೋಡಿ ಚಿರತೆನೆ ನೋಡಿದೆ ಅನ್ನದು, ಇದ್ಯಲ್ಲ ಕಾಮನ್ನು. ವಾದ ವಿಷಯ ಏನು ಗೊತ್ತೇನೊ? ನಾನು ವೇರಿ ಚಳುವಳಿಗೆ ಹೋದಾಗ ಕೈಗೆ ಏಟು ಬಿತ್ತು" ಂದ ವಾಟಿಸ್ಸೆ.

"ಪೊಲೀಸ್‌ನೋರು ವಡುದರೇನ್ಲ?"

"ಪಾಪ, ಪೊಲೀಸ್‌ನೋರು ಯಾರಿಗೂ ವಡಿಲಿಲ್ಲ ಕ್ಕ. ನಮ್ಮೊರೆ ನಮಿಗ್ವಡುದ್ರು."

"ಅಂತದೇನು ಮಾಡಿದೆ ನೀನು?"

"ನಾನೇನೂ ಮಾಡಲಿಲ್ಲ ಕಣಕ್ಕ. ಚಳುವಳಿ ಡಿಯೊ ಜಾಗಕ್ಕೆ ಚಲುವರಾಯಸ್ವಾಮಿ ಬಂದ. ನಮ್ಮ ಲೊಕಿನೋನು ಅಂತ ಮಾತಾಡಸಕ್ಕೆ ಅತ್ತಕೋದೆ. ಅಷ್ಟರಲ್ಲಿ ನ ಬಂದೊ ನೋಡವ್ವ. ನಿಮ್ಮ ಚಳವಳಿನೂ ಬ್ಯಾಡ, ಮ್ಮ ಕಾವೇರಿ ನೀರೂ ಬ್ಯಾಡ ಅಂತ ಓಡೋದೆ ಆಯ್ತು. ಲುವಣ್ಣನಂತೂ ಸಡನ್ನಂತ ಕಾರಿಗತ್ತಿಗಂಡು ಮಾಮೇಗೌಡನಂಗೆ ಓಡಿದ ಕಣಕ್ಕ. ನಿಜವಾಗ್ಲು ಮಾಬಿಗೆ ರನೆ ಇರದಿಲ್ಲ ಅನ್ನದ ಅವತ್ತು ಕಣ್ಣಾರೆ ಕಂಡೆ ನಾನು."

"ಕೈ ಮುರುದೋಗ್ಯದೇನ್ಲ?"

"ಬಂದ ಕಲ್ಲಿಗೆ ಡೈರಕ್ಟಾಗಿ ಕೈ ಕೊಟ್ಟಿದ್ರೆ ಲಟ್ಕಂತ ಮುರುದೋಗದು ಕಣಕ್ಕ. ಆದ್ರೆ ನಾನು ತಪ್ಪಿಸಿಗಂಡೆ. ದ್ರು ಲೈಟಾಗಿ ಪ್ಯಾಕ್ಚರಾಗ್ಯದೆ."

"ಅಲ್ಲ ಕಂಡ್ಯ, ಚಲುವರಾಯಸ್ವಾಮಿಗ್ಯಾಕ್ಲ ಕಲ್ಲು ಡುದ್ರು? ಅವುನು ಮಂಡ್ಯಾದವುನಲ್ವವೆ" ಎಂದ ಳಮಾವ.

"ಚಲುವನಿಗೆ ಅಷ್ಟೆ ಅಲ್ಲ ದೊಡಪ್ಪಾ, ಶ್ರೀನಿವಾಸನಿಗೆ, ದ್ದರಾಮಯ್ಯನಿಗೆ, ನಾಣಯ್ಯನಿಗೂ ಗೂಸಾ ಬೀಳವು ಪಾಪ. ಯಂಗೋ ಬಚಾವಾಗ್ಯವ್ರುರೆ."

"ಜನಗಳ ಸಿಟ್ಟಿಗೆ ಕಾರಣ ಇರತವೆ ಕಣೊ ವಾಟಿಸ್ಸೆ" ಎಂದ ಉಗ್ರಿ.

"ಅದು ನನಿಗೂ ಗೊತ್ತು ಕಣೊ ಉಗ್ರಿ. ಸಿದ್ದರಾಮಯ್ಯ ವಿರೋಧಪಕ್ಷದ ನಾಯಕ ಆಗಿರೋನು. ಅವುರ ಪಾರ್ಟಿ ಪ್ರಧಾನಿ ಮಾಡಿರೊ ಅನ್ಯಾಯ. ಮತ್ತೆ ಅವುನು ತಡವಾಗಿ ಬಂದು ಚಳವಳಿ ಮಾಡ್ತ ಅವುನೆ ಅಂತ ಜನಕ್ಕೆ ಸಿಟ್ಟು ಬಂದರೆ ಅದು ಸರಿ. ಇನ್ನ ಜೆಡಿಎಸ್‌ನೋರು ಇದೇ ವಳ್ಳೆ ಟೈಮು ಅಂತ ಪಾರ್ಟಿ ಬ್ಯಳಸಕ್ಕೆ ನೋಡಿದ್ರು. ಅವ್ರಿಗೆ ಬಿದ್ದ ಕಲ್ಲು ಸರಿ. ಆದ್ರುವೆ ವಿವೇಕ ಇದ್ದ ಯಾರೇ ಆದ್ರೂ ಚಳವಳಿ ಟೈಮಲ್ಲಿ ನಮ್ಮೊರಿಗೆ ನಾವು ವಡಕಂಡ್ರೆ ಸರಿನೇನೊ?"

"ಆ ಮಾದೇಗೌಡನಂತ ಲೀಡ್ರು ಇಲ್ದಿದ್ರೆ ಕಾವೇರಿ ಚಳವಳಿ ಇನ್ನು ಏನೇನು ಮಾಡ್ತಿತ್ತಪ್ಪ"

"ಅದ್ನೆ ನಾನೂ ಯೋಚನೆ ಮಾಡ್ತಿನಿ ಕಣೊ ಉಗ್ರಿ."



"ಆ ಯಸ್ಸೆಂ ಕಿಷ್ಣ ಏನು ಮಾಡ್ತ ಅವುನ್ಲ?" ಎಂದ ಕಾಳಮಾವ.

"ಅವುನು ಪಾರಿನ್ನಿಗೋಗ್ಯವುನೆ ದೊಡ್ಡಪ್ಪ. ಅಲ್ಲಿ ಕುಂತಗಂಡೆ ತಮಿಳನಾಡಿಗೆ ನೀರು ಬುಡಬ್ಯಾಡಿ ಅಂತ ಕಾಗದ ಬರದು ಅದು ಯಲ್ಲಾ ಪೇಪರ್‌ನೋರಿಗೂ ತಿಳಿಯಂಗೆ ನೋಡಿಕಂಡವುನೆ."

"ಕಾಗದ ಬರಿಯದಕ್ಕಿಂತ ನೀರು ಬುಡದ್ಕು ಮದ್ಲೆ ಫೋನಲ್ಲಿ ಹೇಳಕ್ಕಾಯ್ತಿರಲಿಲ್ವೆ?"

"ಅವುನ್ದಿರಲಿ ದೊಡಪ್ಪಾ, ನಿಮ್ಮ ದ್ಯಾವೇಗೌಡ್ರು ಯಲ್ಲಾ ಹತ್ತಿ ಉರಿಯದ ನೋಡಿ ಅಮ್ಯಾಲೋಗಿ ಪರಿಶೀಲನೆ ಮಾಡಿ ಅಂದನೆ ವರತೂ, ನೀರು ನಿಲ್ಸಿ ಅನ್ನಲಿಲ್ಲ."

"ಏ ಅವುನೊಂದು ಸತಿ ನೀರಿಗೆ ಬದ್ಲು ನನ್ನ ರಕ್ತ ಹರಿತದೆ ಅಂದಿದ್ದ ಗೊತ್ತೇನೊ. ಯಸ್ಸೆಂ ಕಿಷ್ಣ ಬೆಂಗಳೂರಿನಿಂದ ಮಂಡ್ಯಕ್ಕೆ ಪಾದಯಾತ್ರೆ ಬಂದಾಗ, ದ್ಯಾವೇಗೌಡ ತಲಕಾವೇರೀಲಿ ಪೂಜೆ ಮಾಡಿ, ರಾಜಕಾರಣ ಮಾಡಿದ. ಕಾವೇರಿ ವಿಷಯದಲ್ಲಿ ಯಲ್ಲಾರು ರಾಜಕಾರಣ ಮಾಡೋರೆ ಆಗ್ಯವುರೆ. ನಿನ್ನ ಕತೆ ಹೇಳು ಕೈ ಯಾವಾಗ ಉಷಾರು ಮಾಡಕತ್ತಿ."

"ಕೈ ಉಸಾರಾಗ್ಲಿ ಬುಡ್ತಿ, ನಾನಿನ್ನ ಕಾವೇರಿ ಚಳವಳಿಗೆ ಹೋಗದಿಲ್ಲ ಕಣೊ. ಯಾಕೊ ಅವುರು ನಮ್ಮ ಚಳವಳಿ ನಾವು ಮಾಡಕತ್ತಿವಿ ನೀವ್ಯಾಕ್ ಬತ್ತಿರಿ ಅನ್ನಂಗೆ ನ್ಯಡಕತ್ತಾ ಅವುರೆ."

"ಯಾರೂ ಅಂಗೆ ನ್ಯಡಕಳದಿಲ್ಲ ಕಣೊ. ಚಳವಳಿವಳಗೆ ಯಾವ್ದೊ ಮೂರುನಾಕು ಬಡ್ಡೆತ್ತವು ಸೇರಿಕಂಡ್ರೆ ಯಲ್ಲಾರಿಗೂ ಕೆಟ್ಟೆಸುರು ಬತ್ತದೆ. ಕ್ಯಟ್ಟ ಹೆಸುರು ತರೋರು ಎಲ್ಲಿಲ್ಲ ಹೇಳು. ಯಲ್ಲಾ ಪಾರ್ಟಿಲೂ ಅವುರೆ. ಯಲ್ಲಾ ಜನಾಂಗದಲ್ಲೂ ಅವುರೆ."

"ನಾವು ನೀರಿಗೆ ಅಂತ ಈಟೊಂತರ ಕೂಗಾಡಿ ವಡದಾಡಿ ಸತ್ರೆ, ಆ ತಮುಳ ನಾಡಿನಜನ ಸದ್ದಿಲ್ಲದಂಗವುರಲ್ಲ ಯಂಗ್ಲಾ?" ಎಂದ ಕಾಳಮಾವ.

"ಬೇಡೋರು ಯಾವತ್ತು ಗಲಾಟೆ ಮಾಡದಿಲ್ಲ ಕಣಮಾವ. ಅದರಲ್ಲೂ ತಮುಳನಾಡಿನ ಜನ ಯಾವತ್ತೂ ತಂಟೆ ತಕರಾರು ಮಾಡದಂಗೆ, ನೀರ ಎಲ್ಲಿಂದ ಬುಡಿಸಿಕೊಬೇಕು. ಅಲ್ಲಿಂದ ಬುಡುಸಿಗಂಡು ಸುಮ್ಮನಾಯ್ತರೆ. ಆದ್ರೆ ಬುಡೋರದೆ ಕೂಗಾಟ. ಯಾಕೆ ಅಂದ್ರೆ ಇದ್ರೆ ತಾನೆ ಬುಡದು."

"ನಾವು ನೀರಿಟ್ಟಗಂಡು ಇಲ್ಲ ಅನ್ನುವಷ್ಟು ಸಣ್ಣ ಜನಲ್ಲ ಅಂತ ಅವುರು ತಿಳಿಕಬೇಕು ಕಂಡ್ಯ."

"ತಿಳಕಬೇಕು ಅಂದ್ರೆ ಬರಿ ಅವುರು ನಾವೆ ಆದ್ರೆ ಕೂತಗಂಡು ಮಾತಾಡಿ ಒಂದು ಸೆಟ್ಲುಮೆಂಟ್ ಮಾಡಿಕಬವುದು ಮಾವ. ಆದ್ರೆ ಕೋರ್ಟು, ಕಾವೇರಿ ನ್ಯಾಯಮಂಡಳಿ, ಅಂತ ಅವಲ್ಲಾ ಅವಿರಗಂಟ ಹಿಂಗೆಯಾ."

"ಮಿಸ್ಟರ್ ಉಗ್ರಿ, ಕೋರ್ಟು ನ್ಯಾಯಮಂಡಲ ಇಲ್ದೆಯಿದ್ರೆ ಇನ್ನೂ ಅದ್ವಾನಾಗದು ಕಣೊ. ನಮ್ಮೊರಿಗೆ ನೀರು ಕೊಡಕ್ಕಾಗದೆ ವರುಣ ನಾಲೆ ಗಲಾಟೆ ಎಷ್ಟು ದಿನ ನ್ಯಡಿತು ನೋಡಲಿಲ್ವ. ಅಂಗೆ ಜನಗಳು ತಮಿಗೆ ತಾವೆ ದೊಡ್ಡ ಜನ, ದೊಡ್ಡ ಮನಸಿನೋರಾದ್ರೆ ಕೋರ್ಟು ಕಚೇರಿ ಪೋಲಿಟೀಶನ್ನು ಬೇಕಾಗದಿಲ್ಲ. ಇಲ್ಲೆ ನಮ್ಮೂರನೆ ನೋಡು ಏನಾಗ್ಯದೆ. ಅಕಸ್ಮಾತ್ ಪೋಲಿಟೀಶನ್ನೆ ಇಲ್ದೆಯಿದ್ರೆ, ಇಷ್ಟೊತ್ತಿಗೆ ಎಷ್ಟು ಜನ ಹೆಣ್ಣುಮಕ್ಕಳ ವಡದಾಕರು ಅಂತೀ" ಎಂದ ವಾಟಿಸ್ಸೆ. ಆಗ ಜುಮ್ಮಿ,

"ಅದೇನೊ ನಿಜಕಂಡ್ಯ. ಪಾಪ ಆ ಹುಡುಗಿಯ ವಡದಾಕಿದಾಗಿಂದ ನನಿಗೆ ಅನ್ನವೇ ಸೇರದಿಲ್ಲ" ಎಂದಳು.

"ಮತ್ತೆ ನ್ಯಾಣಾಯ್ಕಂಡು ಸತ್ತದೆ ಅಂದ್ರಲ್ಲೋ" ಎಂದ ಕಾಳಮಾವ.

"ಅಯ್ಯೋ ಅದೇನಾಯ್ತು ಗೊತ್ತೇನೊ ಮಾವ. ಉಂಡು ಯಲ್ಲ ಮನಿಕಳೋ ಟೇಮಿಗೆ, ಆ ಹುಡುಗಿ ಮೈದ ನನಿಗೂ ಹಾಸಗೆ ಆಸತ್ತಿಗೆ ಅಂದ. ಆ ಹುಡುಗಿ ವತ್ತಾಂದ ಕ್ಯಲಸ ಮಾಡಿ ಸುಸ್ತಾಗಿದ್ಲಂತೆ. ನಿಮ್ಮವ್ವನ ಕ್ಯಲಿ ಹಾಸಿಕೊ ಅಂದಳಂತೆ. ಈ ಮುಂಡೆ ಮಗ ಅಂಗಂದೇಟಗೆ ಗುದುಮುಚ್ಚಿ ವಡದು, ಅತ್ತಿಗೆ ಅನ್ನದ್ನು ನೋಡದೆ, 'ಸಾಯುಗಂಟ ವಡದನಂತೆ ಕಣಮಾವ. ಆ ಹುಡುಗಿ ಬಾಯಿಬಡಕತಂತೆ. ಮಗ್ಗಲು ಮನಿಯೋರು ಕತೆ ಓದುಸ್ತಿದ್ರಂತೆ. ಮೈಕಾಕಿದರಲ್ಲಾ–ಆ ಹುಡುಗಿ ಕೂಗು ಯಾರಿಗೂ ಕೇಳಿಲ್ಲ, ಪಾಪ ಸತ್ತೆ ಹೋಗ್ಯದೆ."

"ಅಯ್ಯೋ ಮುಂಡೆಮಗನೆ, ಅಂಗರೆ ಸಾಯಿಸೆ ಬಟ್ನೆ?"

"ಊ ಕಣಮಾವ. ರಾತ್ರೆಲ್ಲ ಅಂಗೇ ಮನಿಗಿಸಿದ್ದು ವತ್ತಾರಿಕೆದ್ದು ಕತ್ತಿಗೆ ಹಗ್ಗ ಹಾಕಿ, ಜಂತಿಗೆ ಬಿಗದು, ನ್ಯಾಣಾಯ್ಕಂಡವುಳೆ ಅಂತು ಸುದ್ದಿ ಹಬ್ಬಿಸಿ ಆಗ್ಲೆ ಹ್ಯಣಸುಡಕ್ಕೆ ತಯಾರಾಗಿದ್ರು. ಆಟೊತ್ತಿಗೆ ವಾಟಿಸ್ಸೆ ಬಂದು ನ್ಯಾಣಾಯ್ಕಂಡೋಳಯದೆ ಮ್ಯಾಲೆ ಯಾಕೆ ಗಾಯದೆ? ಮೈಕೈಯಲ್ಲಿ ಬಾಸುಂಡೆ ಯಂಗೆ ಬಂದೆ? ಅಂತ ತಕರಾರು ಮಾಡಿದ. ವಡದಾಕಿದೋನು ದಳದೋನಾದ್ರಿಂದ ಅವುರ್ಯಲ್ಲ ಹುಡುಗಿ ಸುಟ್ಟಾಕಕ್ಕೆ ತಯಾರಾಗಿದ್ರು. ಆಗ ಕಾಂಗ್ರೆಸ್ ಲೀಡ್ರು ಪೊಲೀಸ್‌ನವರನ್ನು ಕರೆಸಿ ಪೋಸ್ಟ್‌ಮಾರಟಂ ಮಾಡಿಸಿದ್ರು. ಕಿಡ್ನಿನೆ ಕದಿರೋಗಂಗೆ ವಡದಿದ್ದ, ಅವುನ ಕೈ ಸೇದ. ಅವುನ ಕೈಗೆ ಕನ್ನಾಗರು ಕಡಿಯ" ಎಂದು ಜುಮ್ಮಿ ಕಣ್ಣು ಮುಚ್ಚಿದಳು.

"ವಳ್ಳೆ ಹುಡುಗಿ ಕಂಡ್ಳೆ ಅದು. ನಾನು ನೋಡಿದ್ದೆ. ಅದೋಗ್ಲಿ ಕೊಲೆ ಮಾಡಿದೋನು ನಮ್ಮ ಪಾರ್ಟಿಯೋನು ಅಂತ ಉಳಸಕ್ಕೆ ನೋಡ್ಯವುರಲ್ಲಾ, ಇವುರಿನ್ಯಂತ ಮನಿಯಾಳನನ್ನ ಮಕ್ಕಳು."

"ಅದೆ ಕಣಮಾವ ನಾನು ಹೇಳದು. ಏನಾರ ಆದಾಗ ದಳ ಕಾಂಗ್ರೆಸ್ಸು ತರದು ಯಲಕ್ಷನ್ ಟೇಮೆಲ್ಲಿ, ಈಗ್ಯಾಕೆ ಯಲ್ಲಾಕ್ಕು ಪಾರ್ಟಿ ತತ್ತಿರಿ ಅಂದೆ ಆದ್ರೂ ಕೇಳದಿಲ್ಲ."

"ನೋಡಕ್ಕ ಇವತ್ತು ಯಾವುದೇ ಇನ್ಸಿಡೆಂಟ್ ನ್ಯಡಿಲಿ, ಅದು ಒಂದು ಪಾರ್ಟಿಲಿ ನ್ಯಡದ ಘಟನೆ ಆಗಿರತದೆ. ಆಗ ಉಳದ ಪಾರ್ಟಿಯೋರು ಹೋರಾಡ್ತರೆ. ಪಾರ್‌ಎಗ್‌ಜಾಂಪಲ್ ಕಾವೇರಿ ಮ್ಯಾಟ್ರುನೆ ತಗೊ. ನೀರುಬುಟ್ಟೋನು ಬಿಜೆಪಿ ಮುಖ್ಯಮಂತ್ರಿ. ಬುಟ್ರೆ ರಾಜೀನಾಮೆ ಕೊಡ್ತಿವಿ ಅಂತ ನಾಟಕ ಮಾಡಿದೋರು ದಳದೋರು. ಉಪಾಸ ಕುಂತಿದ್ದು ಕಾಂಗ್ರೆಸ್ ಮಾದೇಗೌಡ್ರು. ಈ ಕಡೆ ಜನಗಳಿಗೆ ಸರಿಯಾಗಿ ಬುದ್ಧಿ ಕಲಸಬೇಕು ಅಂತ ಓಡಾಡಿದೋನು ನೀರಾವರಿ ಮಂತ್ರಿ ಬಸವರಾಜ್ ಬೊಮ್ಮಾಯಿಯಂತೆ. ಹಿಂಗೆ ಯಾವುದೇ ಮ್ಯಾಟ್ರು ತಗೊ, ಅಲ್ಯಲ್ಲ ಹೇಸಿಗೆ ತರ ಪಾರ್ಟಿ ವಾಸನೆ ವಡಿತದೆ. ಆದ್ರೆ ತೊಂದ್ರೆ ಅನುಭವಿಸಿದೋರು ಯಾವ ಪಾರ್ಟಿಗೂ ಸೇರದ ರೈತರು, ಮಣ್ಣಿನ ಮಕ್ಕಳು. ಇದಕೇನು ಮಾಡನಾ?" ಎಂದ ವಾಟಿಸ್ಸೆ.

ಪ್ರೇಮ

ಇವರಿಗೆ ಮಹಾ ಕುತೂಹಲ. 'ನಿಮ್ಮ ಜೀವನ ಚರಿತ್ರೆಯಲ್ಲಿ ಅಷ್ಟೊಂದು ಜನ ಹೆಂಗಸರ ಜೊತೆಗೆ ಅನ್ಯೋನ್ಯವಾಗಿ, ತೀವ್ರತರದ ಸಂಬಂಧವನ್ನು ಇಟ್ಟುಕೊಂಡಿದ್ದಿರಿ ಎಂದು ತಿಳಿದುಬರುತ್ತದೆ. ಆದರೆ ಯಾರ ಜೊತೆಗೂ ಲೈಂಗಿಕ ಸಂಬಂಧವಿರಲಿಲ್ಲ ಎಂಬಂತೆ ಬರೆದುಬಿಟ್ಟಿದ್ದೀರಿ. ನಾನು ಇದನ್ನು ನಂಬುವುದಿಲ್ಲ" ಎಂದು ಒಬ್ಬ ಕಾಗದ ಬರೆದ. ನಾನು ಆತನ ಮಾತಿನಿಂದ ನಗಲಿಲ್ಲ, ಬೇಸರಿಸಲಿಲ್ಲ, 'ನನ್ನ ಮಾತನ್ನು ನೀನು ನಂಬದಿರಲು ಕಾರಣವೇ ಇಲ್ಲ' ಎಂದು ವಾದಿಸಲಿಲ್ಲ, ಎರಡು ದಿನ ಈ ಬಗ್ಗೆ ಚಿಂತಿಸಿದ ನಾನು ಹೇಳಿದೆ: ಮಿತ್ರ, ನಿನ್ನ ಕುತೂಹಲ ಮತ್ತು ಅವಸರದ ತೀರ್ಮಾನಗಳನ್ನು ಕ್ಷಣ ಎತ್ತಿಟ್ಟು ಯೋಚಿಸು. ಪ್ರೇಮ ಎನ್ನುವುದೇ ಸ್ವಪ್ರದರ್ಶನ, ಅಹಂಕಾರ ಇಲ್ಲದಿರುವ ಸ್ಥಿತಿ. ಅಹಂಕಾರವಿದ್ದಲ್ಲಿ ನಿನ್ನ ಪ್ರೇಮ ಬಲಾತ್ಕಾರ, **rape** ಅನ್ನಿಸಿಕೊಳ್ಳುತ್ತದೆ; ನೀನು ಜಾತಿ, ಪ್ರತಿಷ್ಠೆ, ಖ್ಯಾತಿ ಇದನ್ನೆಲ್ಲ ಇಳಿಸಿಕೊಂಡು ಮೆರೆಯುತ್ತೀ. ಅದು ಪ್ರೇಮವಲ್ಲ, ಪ್ರೇಮ ಎನ್ನುವುದು ಒಬ್ಬ ಹಳ್ಳಿಗನ ದೃಷ್ಟಿಯಲ್ಲಿ ಪ್ರೇಮಿಯ ದೇಹಕ್ಕೆ ಹೊಸ ಕಾವು ಒದಗಿಸುವ, ಹೊಸ ಹುಟ್ಟಿನ ಸಾಧ್ಯತೆ ತೋರುವ ಭಾವನೆ. ಒಬ್ಬ ವಿದ್ವಾಂಸನ ದೃಷ್ಟಿಯಲ್ಲಿ ಅದೊಂದು ಅಮೂರ್ತ ಭಾವನೆ. ನನಗೆ ಅದು ದೇಹದ, ಮನಸ್ಸಿನ ಆರೋಗ್ಯ, ಪ್ರೀತಿ, ಆಕರ್ಷಣೆಗೆ ಸಂಬಂಧಿಸಿದ್ದು; ಕೊರಡಾಗಿರುವ ವ್ಯಕ್ತಿತ್ವಕ್ಕೆ ಹೊಸಜೀವ ತಂದುಕೊಡುವ ವಸ್ತು. ಆದ್ದರಿಂದಲೇ ನಾನು ಪ್ರೇಮಿಸುವ ಪ್ರತಿಯೊಬ್ಬರೂ ನನ್ನ ಕೃತಜ್ಞತೆಗೆ ಅರ್ಹರು; ಅವರಿಗೆ ವಂಚನೆ ಬಗೆಯುವುದು ಪಾತಕ. ಹಾಗೆಂದು ಪ್ರೇಮದ ವಿವರಗಳನ್ನು ಹೇಗೆ ಬಣ್ಣಿಸುವುದು? ಶ್ರೀಕೃಷ್ಣನ ಕಾಲುಬೆರಳನ್ನು ಮುಟ್ಟಿದ ಗೋಪಿಕೆಯರಿಗೆ **orgasm** ಆಗುತ್ತಿತ್ತು ಎನ್ನುವವರಿದ್ದಾರೆ; ಪ್ರೇಯಸಿಯ ದರ್ಶನವೇ ಪ್ರೀತಿಯ ಉತ್ತುಂಗವಾಗಬಹುದು. ಆದ್ದರಿಂದ ಲೈಂಗಿಕ ವಿವರಗಳ ಬಗ್ಗೆ ಕುತೂಹಲಗೊಳ್ಳುವುದು ಅಗ್ಗವಾದದ್ದು. **It's vulgar and cheap.**

ಅಲ್ಲದೆ ಪ್ರೇಮದ ಬಗ್ಗೆ ಪ್ರೇಮ ಬಲ್ಲವನು ದುಃಖ ಪಡಲು, ಪಶ್ಚಾತ್ತಾಪಪಡಲು, ನಿರಂತರ ವಿರಹ ಅನುಭವಿಸಲು ಕಾರಣಗಳಿವೆ. ಪ್ರೇಮ ಅಷ್ಟು ಅಮೂಲ್ಯವಾದದ್ದರಿಂದಲೇ ಅದು ಕ್ಷಣಿಕವಾದದ್ದು, ಮಿಂಚಿ ಮಾಯವಾಗುವಂಥಾದ್ದು. ಅದನ್ನು 'ಅಮರ ಮಧುರ ಪ್ರೇಮ' ಎಂದು ಹಾಡುವವರು ಪ್ರೇಮದಲ್ಲಿ ಒಲಾಡುತ್ತಿರುತ್ತಾರೆ. ಒಮ್ಮೆ ಅನುಭವಿಸಿದ ಭಾವನೆಯನ್ನೇ ನೆನೆದು 'ಅದು ಇನ್ನೂ ಇದೆ' ಎನ್ನುವಂತೆ ಹಾಡುತ್ತಾರೆ. ಅವರು ಕರುಣಾಜನಕ ವ್ಯಕ್ತಿಗಳು. ಪ್ರೇಮದ ಕ್ಷಣಿಕತೆ ಅರಿಯದವನಿಗೆ ಅದರ **splendour** ಗೊತ್ತಿರುವುದಿಲ್ಲ, ಹಾಗೆಯೇ ಕ್ಷಣಿಕವಾದದ್ದರಿಂದಲೇ ಪ್ರತಿಯೊಬ್ಬನೂ ವಿರಹಿ; ಅದೇ ದುಗುಡದ ವಿಷಯ. ಇದನ್ನೆಲ್ಲ ಅರಿತವನು ಯಾವನೂ ತಾನು ಇಷ್ಟು ಜನರನ್ನು ಸಂಭೋಗಿಸಿದೆ, ಇಷ್ಟು ಜನರ ಒಡನಾಟ ಮಾಡಿದೆ ಎಂದು ಹೆಮ್ಮೆಪಡುವುದಿಲ್ಲ. ಇದರಿಂದಾಗಿಯೇ ನನ್ನ ಜೀವನದಲ್ಲಿರುವಂತೆಯೇ ಜೀವನಚರಿತ್ರೆಯಲ್ಲಿ ವಿಚಿತ್ರ ವಿಪರ್ಯಾಸವೊಂದಿದೆ. ಹೊಸ ಸ್ಫೂರ್ತಿ ಪಡೆಯಲು ಹಾತೊರೆಯುವ ನಾನು ಎಲ್ಲ ಸ್ಫೂರ್ತಿಗಳ ಮಿತಿ ಅರಿತಿರುತ್ತೇನೆ; ಆದ್ದರಿಂದಲೇ 'ಈ ಬದುಕಿನಲ್ಲಿ ಇದೆಲ್ಲ ಏನು' ಎಂದು ಕೇಳಿಕೊಂಡು ನನ್ನ ಅಂತರಂಗವನ್ನು ಪರೀಕ್ಷಿಸುತ್ತಿರುತ್ತೇನೆ.



ಆದ್ದರಿಂದ ಸೂಕ್ಷ್ಮಜ್ಞರಾದ ಯಾರೂ ಈ **sad, lonely, trasitory** ಆದ ಪ್ರೇಮವನ್ನು ಸಂಭೋಗದ ಮಟ್ಟಕ್ಕೆ ಇಳಿಸಿ ಮಾತಾಡಬಾರದು.


ನನ್ನನ್ನೂ ಒಳಗೊಂಡು ಮನುಷ್ಯರೆಲ್ಲರೂ ಸಹಾನುಭೂತಿಯನ್ನು ಕೋರುವುದು, ಕತೆಗಳ ವಸ್ತುವಾದಾಗ ತಮ್ಮ ಒಳತೋಟಿಯನ್ನು ಬಿಚ್ಚಿಡುವುದು ಈ ಕಾರಣದಿಂದಾಗಿಯೇ. ಮಹಾ ಪ್ರತಿಭಾವಂತನೂ ಮಹಾ ಮುಗ್ಧನೂ ಮಹಾ ಕೇಡಿಯೂ ಈ ಬದುಕೆಂಬ ಸಂದರ್ಭ, ಕಾಲ, ಯಾತನೆಯಲ್ಲಿ ಕರಗುತ್ತಲೇ, ರೂಪಗೊಳ್ಳುತ್ತಲೇ, ಮಾಯವಾಗುತ್ತಲೇ ಇರುತ್ತಾನೆ. ಒಬ್ಬ ವ್ಯಕ್ತಿಯ ಎದೆಯ ಮೇಲಿನ ಗಾಯ, ಕೆನ್ನೆಯ ನೋವಿನ ಗುರುತು, ಕೂದಲಿನ ಮಧ್ಯದ ಬೋಳು ಜಾಗ.... ಎಲ್ಲವೂ ಕುತೂಹಲ, ಕರುಣೆ ಹುಟ್ಟಿಸುತ್ತವೆ. ಕರುಣೆ ಪ್ರೇಮಕ್ಕೆ ದಾರಿ ಮಾಡಿಕೊಡುತ್ತದೆ.

ಮಾತು, ಬರಹ

ಹೀಗೆಲ್ಲ ಯೋಚಿಸುವಾಗ ಈ ಬರೆಯುವ ಕ್ರಿಯೆಯನ್ನು ಕುರಿತು ನನ್ನ ಮಿದುಳಿನ ಸ್ತರವೊಂದು ಚಿಂತಿಸುತ್ತದೆ. ಸಾಕ್ರೆಟಿಸ್ ಬರೆಯಲಿಲ್ಲ, ಆದರೆ ಅವನ ಶಿಷ್ಯ ಪ್ಲೇಟೋ ಬರೆದ. ಬರೆಯದಿರುವವನ ನೆನಪು ಸ್ವಚ್ಛವೂ ತೀವ್ರವೂ ಇದೆ. ಆಗಿರುತ್ತದೆ; ಅವನ ವ್ಯಕ್ತಿತ್ವ ಗಟ್ಟಿಯಾಗಿರುತ್ತದೆ. ಬರೆಯುವವನು ತನಗೆ ಅನ್ನಿಸಿದ್ದನ್ನೆಲ್ಲ ಈ ಬರಹ ಎಂಬ ಸಂಕೇತಗಳಲ್ಲಿ ಇಟ್ಟು ನೆನಪಿಟ್ಟುಕೊಳ್ಳಬೇಕಾದ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾನೆ. ಒಂದು ಪುಸ್ತಕ ಭಂಡಾರದಲ್ಲಿ ಏನಿಂತು ಎಂದಾದರೂ ಯೋಚಿಸಿದ್ದೀರಾ? ಅಲ್ಲಿರುವ ವಿಷಯಗಳನ್ನು ನಾನು ನನ್ನೊಳಗೆ ತೆಗೆದುಕೊಳ್ಳಬೇಕಾದರೆ ಲಕ್ಷ ಜನ್ಮಗಳನ್ನೆತ್ತಿದರೂ ಆಗುವುದಿಲ್ಲ. ಮನುಷ್ಯನ ತಿಳಿವಳಿಕೆಯ ಭಂಡಾರವೇ ನಮ್ಮಲ್ಲಿ ಭಯ ಹುಟ್ಟಿಸುತ್ತದೆ. ಆದರೆ ಆಫ್ರಿಕಾದ ಸರಳ ಸಮಾಜಗಳಲ್ಲಿ ಆಡುವ ಮಾತಿನ ಮೂಲಕವೇ ಅಲ್ಲಿಯ ಜ್ಞಾನ, ಪರಂಪರೆ, ಹಾಡು, ಕತೆಗಳೆಲ್ಲ ನೂರಾರು ವರ್ಷಗಳ ಕಾಲ ಹರಿದುಬಂದಿವೆ. ಅದು ಆದರ್ಶ ಸಮಾಜ ಎಂದು ನಾನು ಹೇಳುತ್ತಿಲ್ಲ, ಆದರೆ ಈ ಬರಹ ಎಂಬ ವಿಚಿತ್ರವನ್ನು ಕುರಿತು ಯೋಚಿಸುತ್ತಿದ್ದೇನೆ.

ಸಾಕ್ರೆಟಿಸ್ ಮಾತಿನಿಂದಲೇ ಶತ್ರುಗಳನ್ನು ಗಳಿಸಿಕೊಂಡು ಅವರಿಂದ ಹತನಾದ. ಆತನ ಮಾತಿನ ಸವಲತ್ತಿನಿಂದಾಗಿ ಆತನ ವ್ಯಕ್ತಿತ್ವ ಉತ್ತಮವಾಗಿತ್ತು ಎಂದು ಹೇಳಲಾಗುವುದಿಲ್ಲ; ಯಾಕೆಂದರೆ ತಾನು ನಂಬಿದ್ದಕ್ಕಾಗಿ ಅನೇಕರು ಅವನಂತೆಯೇ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಸರ್ ಥಾಮಸ್ ಮೋರ್, ಜೋನ್ ಆಫ್ ಆರ್ಕ್, ಭಗತ್ ಸಿಂಗ್ ಮುಂತಾದವರು ನೆನಪಿಗೆ ಬರುತ್ತಿದ್ದಾರೆ.

ಬರೆಯುವುದು, ಓದುವುದು ಅಸಹಜ ಕ್ರಿಯೆ ಎಂದು ತೋರಿಸುವುದು ಅಷ್ಟು ಸುಲಭವಾಗುವುದಿಲ್ಲ. ಆದರೆ ಅದು ಮನುಷ್ಯನನ್ನು ಪ್ರಾಣಿಗಳಿಂದ ಪ್ರತ್ಯೇಕಿಸುವ **knowledge** ಎನ್ನುವುದನ್ನು, **power** ಆಗಿ ಮಾಡುವ ಸವಲತ್ತು... ಇದನ್ನೆಲ್ಲ ಇನ್ನೊಮ್ಮೆ ಹೇಳುವೆ.



• ಜನವರಿ 21, 1998


ಪೂಜೆ ಮಾಡ್ಸಿ ಮಳೆ ಸುರ್ಸಿ

ಅದು ಯಾವ್ದೋ ಕಂಕುಳಲ್ಲಿ ಮಗು ಇಟ್ಟುಕೊಂಡು ಊರೆಲ್ಲ 'ನನ್ ಮಗ ಎಲ್ಲಿದೆ; ನನ್ ಮಗ ಎಲ್ಲಿದೆ' ಅಂತ ಹುಡುಕುತಿದ್ದಳಂತಲ್ಲಾ ಹಂಗಾಗಿದೆ ನಮ್ ಜನದ ಕತೇನೂವೆ. ಮಳೆ ಇಲ್ಲ, ನೀರು ನಮಗೇ ಇಲ್ಲ, ಬಿಲ್‌ಕುಲ್ ಬುದಾಕಾಗೋದಿಲ್ಲ ಅಂತೆಲ್ಲ ಚಂಡಿ ಹಿಡಿದು ಕುಂತವೆ. ಇವಕ್ಕೇನು ಬುದ್ಧಿಗಿದ್ಧಿ ಇದೆಯ ಅಂತೀನಿ. ಏನು ಮಳೆ ಹೋಗಿ ಬರ ಬಂದದ್ದು ಇದೇ ಮೊದಲಾ? ಇಲ್ವಲ್ಲ, ಆಗೆಲ್ಲ ನಮ್ ದೈವಭಕ್ತಿ ಸರ್ಕಾರ ಏನು ಮಾಡಿತ್ತು ಹಂಗೇ ನೆನಪು ಮಾಡಿಕೊಳ್ಳಿ. ಅಷ್ಟು ದೂರ ಹೋಗೋಕೆ ಆಗಲ್ಲ ಅಂದ್ರೆ ಒಂದೆರಡು ತಿಂಗಳಲ್ಲಿ ನಡೆದಿದ್ದನ್ನಾದರೂ ನೆನೆಸಿಕೊಳ್ಳಿ. ನೆನಪಿಗೆ ಬಂತಾ.... ಆ ಅದೇ ಎಲ್ಲಾ ಮುಜರಾಯಿ ದೇವಸ್ಥಾನಗಳಲ್ಲಿ ಮಳೆಗಾಗಿ ಪೂಜೆ ನಡೆಯಲಿ ಅಂತ ಘನ ಸರ್ಕಾರ ಆದೇಶ ನೀಡಿತ್ತಲ್ಲವಾ. ಹಂಗೆ ಮಾಡಿದ ಮೇಲೆ ಮಾಮೂರಿ ಮಳೆ ಸುರ್ದದೆ ಅಂತಾವ ಮುಜರಾಯಿ ಮಂತ್ರಿ ಶ್ರೀನಿವಾಸ ಪೂಜಾರಿ ಬಡಾಯಿ ಕೊಚ್ಚಿಕೊಂಡಿದ್ದರಲ್ಲವಾ. ಈಗಲೂ ಹಂಗೆ ಮಾಡಿದರಾಯಿತು! ಹಂಗೆ ಎಂದರೆ ಹೆಂಗೆ ಅಂತೀರಾ? ಅದೇ ದೇವಸ್ಥಾನಗಳಲ್ಲಿ ಪೂಜೆ ಮಾಡ್ಸೋದು, ಮಳೆ ಸುರ್ಸೋದು! ಸರ್ಕಾರಾನೆ ಆವಾಗ ಮಾಡಿದಂತೆ ಈಗಲೂ ಮಾಡೋಕೆ ಮುಂದೆ ಬರಬೇಕಿತ್ತು, ಯಾಕೋ ಬಂದಂಗಿಲ್ಲ, ನೊಂದ ಜನ ಆದರೂ ಇದನ್ನು ನೆನಪು ಮಾಡಿಕೊಂಡು, ಮುಜರಾಯಿ ಮಂತ್ರಿ ಹಿಡಿದು 'ಪೂಜೆ ಮಾಡಿ ಮಳೆ ಸುರ್ಸು' ಅಂತಾವ ಎಕ್ಕತ್ತಿನ ಮೇಲೆ ಮಿದ್ದಾಯಿತು! ಪೂಜೆ ಮಾಡ್ಸಿ ಮಳೆ ಸುರುಸ್ತಾನೆ! ಅವನ್ನ ಎಲ್ಲೋ ಕಾಣೋಕೆ ಕಾಣೊ, ಅಂಗರ ಸಂತೆ ಮಂಗರ ಮಾಯ ಆಗವ್ನೆ ಅಂದಿರಾ. ಅವನ್ನ ಬುಡ್ರಿ, ಸಿಎಮ್ಮು ಅವ್ರಲ್ಲಾ, 'ಆಗ ಮಾಡ್ಸಿದಂಗೆ ಈಗ್ಲೂ ಮಾಡುಸ್ರಿ' ಅಂತ ಕುತ್ತಿಗೆ ಪಟ್ಟಿ ಹಿಡಿದುಕೇಳಿ. 'ಧರ್ಮಕ್ಕೆ ಸುರುಸ್ತಾನಾ' ಅಂದರೆ 'ಅದೂ ಆಗಲ್ಲ ಕಣ್ರೀ ಅವನೂ ಪತ್ತೆ ಇಲ್ಲ' ಅಂತಾರೆ....! ಇದೇನಯ್ಯಾ ಇದು ಪೂಜೆ ಮಾಡ್ಸಿ ಮಳೆ ಸುರ್ಸಿ ಅನ್ನೋಕೆ ಒಬ್ಬನೂ ಕೈಗೇ ಸಿಗ್ತಿಲ್ಲವಲ್ಲಾ.....!

ಪವಾಡದ ಪೆಟ್ರೋಲು!

ಕಳೆದ ಎಪ್ಪತ್ತನೇ ದಶಕದ ಒಂದು ಘಟನೆ. ಅಬ್ರಹಾಂ ಟಿ. ಕೊವೂರ್ ಮಂಡ್ಯಕ್ಕೆ ಬಂದಿದ್ದರು. ಬೂದಿಬಾಬಾಗಳ ಬಂಡವಾಳ ಬಯಲು ಮಾಡುವುದು ಅವರ ಉದ್ದೇಶ ಆಗಿತ್ತು, ಬಹುಪ್ರಚಾರದಿಂದ ಬೀಗುತ್ತಿದ್ದ ಸಾಯಿಬಾಬಾ ಅವರ ಪ್ರಮುಖ ಗುರಿಯಾಗಿತ್ತು. 'ಪವಾಡ'ದ ಹೆಸರಿನಲ್ಲಿ ಜನರಿಗೆ ಮಂಕುಬೂದಿ ಎರಚುವ ವಂಚಕತನವನ್ನು ಎಳೆಎಳೆಯಾಗಿ ಬಿಡಿಸುತ್ತಾ ಹೋದರು. ಸಾಯಿಬಾಬಾನ ಜೀವನಚರಿತ್ರೆ ವಿಷಯಕ್ಕೆ ಬಂದರು. ಅದನ್ನು ಬರೆದಿರೋರು ನಾ. ಕಸ್ತೂರಿ. ಬಾಬಾನ ಕಟ್ಟಾ ಭಕ್ತರು. ಅದರಲ್ಲಿ ಒಂದು ಘಟನೆ ಬರುತ್ತದಂತೆ. ಅದು ಏನೆಂದರೆ ಒಮ್ಮೆ ಸಾಯಿ ಬಾಬಾ ಕಾರಿನಲ್ಲಿ ಎಲ್ಲಿಗೋ ಪ್ರಯಾಣ ಮಾಡುತ್ತಿದ್ದರಂತೆ. ಮಾರ್ಗ ಮಧ್ಯೆ ಪೆಟ್ರೋಲು ಮುಗಿದುಹೋಯಿತಂತೆ. ಚಾಲಕ ತುಂಬಾ ಪೇಚಿಗೆ ಸಿಲುಕಿದನಂತೆ. ಅಂಜುತ್ತಾ ಅಳುಕುತ್ತಲೇ ಬಾಬಾ ಗಮನಕ್ಕೆ ಅದನ್ನು ತಂದನಂತೆ. ಬಾಬಾ ವಿಚಲಿತರಾಗಲಿಲ್ಲವಂತೆ. ಒಂದು ಕ್ಯಾನು ನೀರು ತರುವಂತೆ ಹೇಳಿದರಂತೆ. ತಂದ ನೀರಿನ ಒಳಕ್ಕೆ ತಮ್ಮ ಬೆರಳನ್ನು ಅದ್ದಿದರಂತೆ. ಪವಾಡ ಘಟಿಸಿತ್ತಂತೆ! ಕ್ಯಾನಿನ ನೀರು ಪೆಟ್ರೋಲ್ ಆಗಿ ಮಾರ್ಪಟ್ಟಿತ್ತಂತೆ!

ಮೇಲಿನ ಘಟನೆಯನ್ನು ಉದ್ಧರಿಸಿದ ಕೊವೂರ್ ಅವರು



"ಈಗ ದೇಶದಲ್ಲಿ ಪೆಟ್ರೋಲ್ ಅಭಾವ ಇದೆ. 'ಬಾಬಾ ಅವರೆ ಕನ್ನಂಬಾಡಿ ಕಟ್ಟೆಯ ಬಳಿ ಬನ್ನಿ. ನಿಮ್ಮ ಬೆರಳನ್ನು ಅಲ್ಲಿರುವ ನೀರಿಗೆ ಅದ್ದಿ' ಎಂದು ಕೇಳಿಕೊಳ್ಳೋಣ. ಅವರು ಅದಕ್ಕೆ ಒಪ್ಪಿದರೆ ಕನ್ನಂಬಾಡಿಯ ನೀರು ಪೆಟ್ರೋಲ್ ಆಗುತ್ತದೆ; ದೇಶದ ಪೆಟ್ರೋಲ್ ಬರ ಮುಕ್ತವಾಗುತ್ತದೆ! ಒಂದು ವೇಳೆ ಅವರು ಇದಕ್ಕೆ ಸಮ್ಮತಿಸದಿದ್ದರೆ ಬಲವಂತವಾಗಿಯಾದರೂ ಅವರನ್ನು ಕರೆತಂದು ಬೆರಳು ಅದ್ದಿಸಬೇಕು" ಎಂದರು!

ಇದುವರೆವಿಗೂ ಯಾರೂ ಕೊವೂರ್ ಅವರ ಹೇಳಿಕೆಯನ್ನು ಕಾರ್ಯರೂಪಕ್ಕೆ ತಂದಿಲ್ಲ, ಈಗಲಾದರೂ ಮಾಡೋಣ ಎಂದರೆ ಬಾಬಾನೇ ಇಲ್ಲ! ಪುಸ್ತಕದಲ್ಲಿ ಮಾತ್ರ ಬಾಬಾ ಪವಾಡದಿಂದ ನೀರು ಪೆಟ್ರೋಲ್ ಆಗುತ್ತಲೇ ಇದೆ!

ಉರಿಯೋ ಬೆಂಕೀಲಿ ಮೈ ಕಾಯಿಸ್ಕಳಾನ ಅಂದ್ರೆ....

ರಾಜಕೀಯ ಧುರೀಣರಿಗೆ ಶಾನೆ ತಾಪತ್ರಯ ಆಗಿಹೋಗಿದೆ. ಚುನಾವಣೆ ಹತ್ತಿರ ಬಂದಾಗ ಕಾವೇರಿ ಕಾವು ಏರಿದ್ದು ಅವರಿಗೆ ಖುಷೀನೆ ತಂದಿತ್ತು, ಹಿಂದೆಲ್ಲ ಆ ಬೆಂಕೀಲಿ ತಮ್ಮ ಬೇಳೇನ ಸೊಗಸಾಗಿ ಬೇಯಿಸಿಕೊಂಡಿದ್ದರು. ಈಗಲೂ ಹಂಗೇ ಮಾಡಾನ ಅಂದ್ರೆ ಎಲ್ಲೋ ಯಡವಟ್ಟಾಗಿ ಕುಂತದೆ. ಈ ನೀರಿನ ತಗಾದೆ ಯಾವತ್ತೂ ಇದ್ದದ್ದೇಯ. ಹಿಂದೇನೂ ಇತ್ತು, ಆಗೆಲ್ಲ ವಸಿ ಜನ ರಸ್ತೆತಡೆ, ರೈಲುತಡೆ ಇದು ಅಂತ ಹಾರಾಡುತ್ತಿದ್ದರೆ ಇನ್ನೊಸಿ ಜನ 'ಮಾಡೋಕೆ ಕೇವಿಲ್ದೆ ಹಿಂಗಾಡ್ತ ಬಿದ್ದವೆ' ಅಂತ ಅವರ್‍ನ ಉಗೀತಿದ್ರು. ಈಗ ನೋಡಿದ್ರೆ ಜನಾದಜನೆಲ್ಲ ಎದ್ದು ನಿಂತದೆ. ಹೈಕ್ಳು ಮಕ್ಳು ಎಲ್ಲ 'ಕಾವೇರಿ ನಮ್ಮದು' ಅಂತ ಅರಚಾಡ್ತಾ ಬಿದ್ದವೆ. ಇದೂ ಒಳ್ಳೆ ಶಕುನ ಇರಂಗದೆ ಅನ್ಕೊಂಡು ಧರಣಿ ಜಾಗಕ್ಕೆ ಹೋದರು ಅನ್ನಿ. 'ಬಿಲ್‌ಕುಲ್ ಮಾತಾಡಕೂಡ್ದು' ಅಂತಾವ ವೋಲೇ ಬೀಳಕ್ಕೆ ಬತ್ತವೆ. 'ಆಗುಲ್ರಪ್ಪ ಒಂದಿಷ್ಟೊತ್ತು ಕುಂತಿದ್ದು ಹೋಯ್ತೀನಿ' ಅಂದ್ರೆ 'ಈಗಲೇ ಆ ಕೆಲಸ ಮಾಡು' ಅಂತ ದಬ್ಬಕ್ಕೇ ಬತ್ತವೆ. ಓಹೊಹೋ ಆ ಪಕ್ಷದ ಲೀಡ್ರಿಗೆ ಹಂಗ್ಮಾಡ್ಬೇಕಾದರೆ ಅವರು ನಂ ಪಕ್ಷದವರೇ ಇರಬೇಕು, ನಾನು ಹೋದ್ರೆ ಭಾರೀ ಸ್ವಾಗತ ಸಿಕ್ಕೇ ಸಿಗ್ತದೆ ಅಂತೇನಾದ್ರೂ ಹೋದರೆ ಅವನ ತಿಕ್ಕೊ ಬಿಸಿನೀರು ಕಾಯಿಸ್ತಾರೆ. ಹಂಗಾಗಿ ಈಗ ಹೆಂಗಾಗದೆ ಕತೆ ಅಂದ್ರೆ... ಯಡ್ಯೂರಪ್ನೋರು ಎಂದರೇನು? ಏನು ಕತೆ? ಮಾಜಿ ಮುಖ್ಯಮಂತ್ರಿ ಆಗಿದ್ದೋರು; ಅಂಗಿ ಕಳಚಿದಂಗೆ ಮುಖ್ಯಮಂತ್ರಿಗಳನ್ನೇ ಕಿತ್ತು ವರ್ಗಾಯಿಸಿದವರು ಅಲ್ಲವಾ. ಅಂತಹವರೇ ಮಂಡ್ಯಕ್ಕೆ ಬರೋಕೆ ಪರ್ಮಿಷನ್ ಕೇಳೋ ಹಂಗಾಗದೆ! ಅಂಥ ದೊಡ್ಡ ಮನುಸರು ಕೇಳಿದ್ರಲ್ಲಾ ಇವು ಏನೆನ್ನಬೇಕು? 'ನಿನ್ ಮೊಕನೂ ತೋರಿಸೋದು ಬ್ಯಾಡ' ಅಂದ್ಬುಡಾದ! ಅಲ್ಲಾ ಜನಾದಜನ ಎಲ್ಲ ಹಿಂಗೆ ಜಾಣರಾಗ್ತಾ ಹೋದ್ರೆ ರಾಜಕೀಯ ಮಾಡೋದು ಹೆಂಗೆ ಅನ್ನೋದು ಅವರ ತಲೆ ತಿನ್ನುತ್ತಿದೆಯಂತೆ!

******

'ಕಾವೇರಿಗಾಗಿ ಎಂತಹ ಹೋರಾಟಕ್ಕೂ ಸಿದ್ಧ'

ಅಣಕ



• ಎಚ್.ಎಲ್.ಕೇಶವಮೂರ್ತಿ

ಯಾರು ಹೇಳಿದ ಮಾತು ಇದು?

ಯಡ್ಯೂರಪ್ಪನವರು!

ಅವರ ಮಾತು ಅಂದರೆ ಸಾಮಾನ್ಯ ಅಲ್ಲ, ನುಡಿದಂತೆ ನಡೆವವರು ಅವರು! ಶುಕ್ರವಾರ ಬೆಳಗ್ಗೆ ಗಾಂಧಿ ಪ್ರತಿಮೆಯ ಬಳಿ ಧರಣಿಗೆ ಕುಳಿತರು!

ಮೊದಲು ಒಂದು ದಿವಸ ಧರಣಿ ಸತ್ಯಾಗ್ರಹ ಎಂದಿದ್ದರು. ಬಿಸಿಲು ಏರುತ್ತಿದ್ದಂತೆ ಸಾಲದು ಅನ್ನಿಸಿರಬೇಕು. ಎರಡು ದಿನಕ್ಕೆ ಏರಿಸಿದರು.

ಧರಣಿ ಸತ್ಯಾಗ್ರಹ ಎಲ್ಲರೂ ಮಾಡುತ್ತಾರೆ. ಇವರದ್ದೇನು ವಿಶೇಷ?

ಇತ್ತು. ಬೇರೆ ಕಡೆ ಇದು ಹಗಲು ಮಾತ್ರ. ಇವರದ್ದು ಹಗಲೂ ರಾತ್ರಿ!

ಶನಿವಾರ ಬಂತು. ಕಾವೇರಿಗಾಗಿ 'ತ್ಯಾಗ' ಸಾಲದು ಎನ್ನಿಸಿರಬೇಕು. ಮೂರನೇ ದಿನವೂ ಮಾಡುವುದಾಗಿ ಘೋಷಿಸಿದರು:

ಆದರೇನು ಮಾಡುತ್ತೀರಿ. ಶನಿವಾರ ಸಂಜೆ ಧಾರಾಕಾರ ಮಳೆ!

ಹುಟ್ಟು ಹೋರಾಟಗಾರ ಯಡ್ಯೂರಪ್ಪನವರೇನು ಮಾಡಿದರು?

ಟೆಂಟ್ ಕಿತ್ತರು!

******

'ಬೆಂಗಳೂರಿನಿಂದ ಮಂಡ್ಯಕ್ಕೆ ಕಾಲ್ನಡಿಗೆಯ ಜಾಥಾ!'

ಯಾರಿಂದ?

ಯಡ್ಯೂರಪ್ಪನವರಿಂದ!

ಯಾರು ಹೇಳಿದ್ದು?

ಅವರೇ!

ಕಾವೇರಿಗಾಗಿ ಈ ನಡಿಗೆ!

ಅದ್ಭುತ!

ನಡೆಯಿತೆ ಜಾಥಾ?

ನಡೆಯುತ್ತಿತ್ತು.... ಆದರೆ.....

ಏನು ಈ 'ಆದರೆ' ರಾಗ?

ಅಪ್ಪನವರ ಕಾಲು ಊದುಕೊಂಡಿದೆಯಂತೆ!

ಕಾಲಿನ ಊತ ಇದ್ದಾಗಲೂ ಯಾಕೆ ಹೀಗೆ ಘೋಷಿಸಿದರು?

ಇದು ತಮ್ಮಿಂದ ಸಾಧ್ಯವಾಗದ್ದು ಎಂದು ತಿಳಿದಿರಲಿಲ್ಲವೆ?

ಅವರನ್ನೇ ಕೇಳಿ!


ಟಿಎಸ್‌ಎಸ್ ಮುಖ ಬಯಲು ಮಾಡಿದ್ದಕ್ಕೆ ಧನ್ಯವಾದಗಳು

ಅಕ್ಟೋಬರ್ 17, 2012 ರ ಪತ್ರಿಕೆಯಲ್ಲಿ 'ಚೋರ ಶಾಂತಗ್ನೆ ಚಮತ್ಕಾರ, ಟಿಎಸ್‌ಎಸ್‌ನಲ್ಲಿ ನೂರೊಂದು ಕೋಟಿಯ ಕರ್ಮಕಾಂಡ' ಲೇಖನಕ್ಕೆ ಪ್ರತಿಕ್ರಿಯಿಸಲು ಬಯಸುತ್ತೇನೆ.

ಈ ಹಿಂದೆಯೂ ನೀವು ಟಿಎಸ್‌ಎಸ್ ದುರಾಡಳಿತದ ಬಗ್ಗೆ ಎಚ್ಚರಿಸಿದ್ದಿರಿ. ಈಗ ಸಕಾಲಿಕವಾಗಿ, ಅಂಕಿ-ಸಂಖ್ಯೆ ಮತ್ತು ಆಧಾರಸಹಿತ ವಿಸ್ತೃತ ಲೇಖನ ಪ್ರಕಟಿಸಿದ್ದಕ್ಕೆ ಕೃತಜ್ಞತೆಗಳು. ಟಿಎಸ್‌ಎಸ್ ಸದಸ್ಯರ ಮತ್ತು ತೋಟಗಾರರ ಮನದಾಳದ ವಿಚಾರಗಳಿಗೆ ಮೂರ್ತ ಸ್ವರೂಪವನ್ನೂ ಕೊಟ್ಟದ್ದೀರಿ. ಲೇಖನವನ್ನು ಓದಿದನಂತರ, ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಚರ್ಚೆಗಳು ನಡೆಯುತ್ತಿರುವುದನ್ನು ಗಮನಿಸಿದರೆ ನೀವು ಜನಸಾಮಾನ್ಯರನ್ನು ತಲುಪುವಲ್ಲಿ ಯಶಸ್ವಿಯಾಗಿದ್ದೀರಿ.

ಕೋಟಿ ಲೂಟಿ, ಹಿಕಮತ್ತಿನ ಹತ್ತುಮುಖ, ದಿವಾಳಿಯತ್ತ ಟಿಎಸ್‌ಎಸ್, ಶಾಂತಗ್ನೆ-ಪಾಟೀಲ ಜಗಲಬಂದಿ, ಅಡಿಕೆ ಖರೀದಿ ಅಡ್ಡ ಕಸುಬು, ಡ್ಯಾಮೇಜರ್ ರವೀಶ್ ರಗಳೆ, ರಿಜಿಸ್ಟ್ರಾರ್ ಹೆಗಡೆಗೆ ಕಾಣಿಕೆ-ಈ ಎಲ್ಲ ವಿವರಗಳೂ ಸಮಂಜಸವಾಗಿವೆ.

ಟಿಎಸ್‌ಎಸ್‌ನ ಕಾರ್ಯವೈಖರಿಯ ಬಗ್ಗೆ ಶಾಸನಬದ್ಧ ವಿಚಾರಣೆ ನಡೆದು, ಗಂಭೀರ ನ್ಯೂನತೆ-ಅಕ್ರಮ ಬಹಿರಂಗಗೊಂಡರೂ, ಸಹಕಾರ ಇಲಾಖೆ ಕಣ್ಣುಮುಚ್ಚಿ ಕುಳಿತಿದೆ. ಶಾಂತಗ್ನೆ ಪರಿವಾರದ ಥೈಲಿ ಮಹಿಮೆಗೆ ಮರುಳಾಗಿರುವ ಸಹಕಾರ ಇಲಾಖೆಯ ದೊಡ್ಡವರು ಉದಾಸೀನದಿಂದಿದ್ದಾರೆ ಎನ್ನುವ ಕಟುಸತ್ಯವನ್ನು ತೆರೆದಿಟ್ಟದ್ದೀರಿ. ಜೊತೆಗೆ 'ಸಹಕಾರಿ ಇಲಾಖೆ ಟಿಎಸ್‌ಎಸ್ ಆಡಳಿತಮಂಡಳಿ ಸೂಪರ್‌ಸೀಡ್ ಮಾಡಿ ದಕ್ಷ-ಪ್ರಾಮಾಣಿಕ ಆಡಳಿತಾಧಿಕಾರಿ ನೇಮಿಸಬೇಕಿದೆ. ಆ ಮೂಲಕ ಶಿರಸಿ ಸೀಮೆಯ ಸಂಕಷ್ಟದಲ್ಲಿರುವ ಅಡಿಕೆ ತೋಟಗರನ್ನು ಗಂಡಾಂತರದಿಂದ ಪಾರು ಮಾಡಬೇಕಿದೆ ಎಂದು ಎಚ್ಚರಿಸಿರುವುದನ್ನು ಸಹಕಾರ ಇಲಾಖೆ ಗಂಭೀರವಾಗಿ ಪರಿಗಣಿಸಿ, ಇಲಾಖೆಯ ಮೇಲಿನ ಸಂಶಯವನ್ನು ದೂರ



'ಮಾರ್ಜಾಲ ಸನ್ಯಾಸತ್ವ'ದ ತವಕದಲ್ಲಿ ಬಿಜೆಪಿ ನಾಯಕಮಣಿಗಳು

ಅಯೋಧ್ಯೆಯ ಮುಸಲ್ಮಾನರೇ ಈಗ ಮುಂದೆ ಬಂದು "ನಮಗೆ ಈ ತಕರಾರೆಲ್ಲ ಸಾಕಾಗಿಹೋಗಿದೆ. ಈ ರಾಮ ಜನ್ಮಭೂಮಿಯನ್ನು ನೀವೇ ಇಟ್ಕೊಳ್ಳಿ" ಅಂತ ಹೇಳಿದರೂ ಕೂಡ ಬಿಜೆಪಿಗಳು ಒಪ್ಪುವುದಿಲ್ಲ, ಕಾರಣ ಅವರಿಗೆ ರಾಮಜನ್ಮಭೂಮಿ ಅಂತಂದ್ರೇನೇ ವಾಕರಿಕೆಯ ಮಟ್ಟಕ್ಕೆ ಬಂದು ಈಗ ರಾಮನ ಹೆಸರೇ ಅವರಿಗೆ ಬೇಡವಾಗಿಹೋಗಿದೆ.

ಅವತ್ತು ತಮ್ಮ ಕಾರ್ಯಸಾಧನೆಗಾಗಿ ರಾಮನನ್ನು ದುರ್ಬಳಕೆ ಮಾಡಿಕೊಂಡಿದ್ದ ಬಿಜೆಪಿಗೆ ಈಗ ಆತನ ಹೆಸರನ್ನು ಬಳಸಿಕೊಂಡರೆ ಇದ್ದ ಓಟೂ ಸಿಗದಂತಹ ಪರಿಸ್ಥಿತಿ ಎದುರಾಗಿದೆ.

ಒಂದು ವೇಳೆ ಆಗಿನಂತೆ ಇವತ್ತೂ ರಾಮನ ಇಶ್ಯು ಪವರ್‌ಫುಲ್ ಆಗಿದ್ದಿದ್ದರೆ ಅಥವಾ ಬಿಜೆಪಿಗೆ ಇನ್ನೂ ಅಧಿಕಾರ ಸಿಗದೇ ಜನರಿಗೆ ಇವರ "ಹಣೆಬರಹ" ಗೊತ್ತಾಗದೇ ಇದ್ದಿದ್ದರೆ ಇವತ್ತಿಗೂ "ರಾಮನಾಮ" ಖಂಡಿತ ಚಾಲ್ತಿಯಲ್ಲಿರುತ್ತಿತ್ತು, ಆದರೀಗ ಬಿಜೆಪಿ ನಾಯಕಮಣಿಗಳು ರಾಮನನ್ನು ಬಿಟ್ಟು ತಮ್ಮದಲ್ಲದ ಅಥವಾ ತಮ್ಮ ಜಾಯಮಾನಕ್ಕೆ ತಕ್ಕುದಲ್ಲದ "ಹೊಸಮಂತ್ರ"ವನ್ನು ಪಠಿಸಲು ಮುಂದಾಗುತ್ತಿದ್ದಾರೆ. ಅದು ಅಲ್ಪಸಂಖ್ಯಾತರ ಹಾಗು ದಲಿತರ ಓಲೈಕೆ.

ಸಂಘ ಪರಿವಾರದ ಭಾಗವಾದ ಬಿಜೆಪಿಗಳು ಅಲ್ಪಸಂಖ್ಯಾತರ ವಿರುದ್ಧ ಹಿಂದೂಗಳ ಭಾವನೆಯನ್ನು ಕೆರಳಿಸುತ್ತಾ ಇಟ್ಟಿಗೆ ಯಾತ್ರೆ ತರಹದ ಮೂರನೇ ದರ್ಜೆಯ ಟೆಕ್ನಿಕ್‌ಗಳನ್ನು ಬಳಸುತ್ತಾ ಅಧಿಕಾರಕ್ಕೇರಿದ್ದರು. ತನ್ನ ಪ್ರತಿಸ್ಪರ್ಧಿ ಪಕ್ಷಗಳ ನೀತಿಯನ್ನು "ಅಲ್ಪಸಂಖ್ಯಾತರ ತುಷ್ಟೀಕರಣ" ಎಂದು ಜರಿದು ಹಿಂದೂಗಳ ಭಾವನೆಗಳೊಂದಿಗೆ ಆಟವಾಡುತ್ತಿದ್ದ ಈ ಪಕ್ಷವೇ ಇದೀಗ ಓಟಿಗಾಗಿ ತಾನೇ ಖುದ್ದು ವಿರೋಧಿಸುತ್ತಿದ್ದ "ಅಲ್ಪಸಂಖ್ಯಾತರ ತುಷ್ಟೀಕರಣ"ಕ್ಕೆ ನಿಂತಿದೆ. ಅಲ್ಪ ಸಂಖ್ಯಾತರಿಗೆ ಹಿಂದಿನ ಸರಕಾರಗಳಿಗಿಂತ ತಾವೇ ಹೆಚ್ಚಿಗೆ ಅನುದಾನವನ್ನು ನೀಡಿದ್ದೇವೆ ಎಂದು ಬಿಂಬಿಸತೊಡಗಿವೆ.

ನಿತಿನ್ ಗಡ್ಕರಿಯಂತಹ ಬಿಜೆಪಿಯ ಅಧ್ಯಕ್ಷನಂತೂ ಬಿಜೆಪಿ ಅಲ್ಪಸಂಖ್ಯಾತರ ಹಾಗು ದಲಿತರ ವಿರೋಧಿಯಲ್ಲ ಎಂದು ಹೋದಲ್ಲೆಲ್ಲ ಭಾಷಣ ಕುಟ್ಟುತ್ತಿದ್ದಾರೆ. ಜಿನ್ನಾನನ್ನು ಹೊಗಳಿದ್ದಕ್ಕಾಗಿ ಅಡ್ವಾಣಿಯನ್ನೇ ಅಧಿಕಾರದಿಂದ ಕೆಳಗಿಳಿಸಿದ್ದ ಪಕ್ಷ ಈಗ ತಾವು ಅಲ್ಪಸಂಖ್ಯಾತರ ಸ್ನೇಹಿತರು, ಅವರ ಒಳಿತನ್ನೇ ಬಯಸುವವರು ಎಂದೆಲ್ಲ ಹೇಳಿಕೊಳ್ಳುವ ಮುಲಾಜಿಗೆ ಬಿದ್ದಿರುವುದು ತಮಾಷೆಯಾಗಿದೆ.

ತನ್ನ ಕುಖ್ಯಾತ ರಥಯಾತ್ರೆ ಮೂಲಕ ದೇಶದ ಅಲ್ಪಸಂಖ್ಯಾತರ ಮೇಲೆ ಅಭದ್ರತೆಯ ಛಾಯೆಯನ್ನು ಹರಡಿ ಒಂದು ಕೆಟ್ಟ ಬೆಳವಣಿಗೆಗೆ ಕಾರಣನಾದ ಅಡ್ವಾಣಿಯಂತೂ ಇದೀಗ ಮುಸ್ಲಿಮರನ್ನು ಕೆಟ್ಟದಾಗಿ ಚಿತ್ರಿಸಿದ್ದ ಚಲನಚಿತ್ರವನ್ನು ಜರೆದಿದ್ದಲ್ಲದೇ ತಾನೀಗ ಮುಸಲ್ಮಾನರ ಧರ್ಮಗ್ರಂಥ ಕುರಾನನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಲು ಉತ್ಸುಕನಾಗಿದ್ದೇನೆ ಎಂದಿದ್ದಾರೆ. ಸ್ವಂತಿಕೆಯಿಲ್ಲದ ರಾಜಕಾರಣಿಗಳು ಯಾವ ಮಟ್ಟಕ್ಕೂ ಇಳಿಯಬಲ್ಲರು ಎಂಬುದಕ್ಕೆ ಇದು ಒಳ್ಳೆ ನಿದರ್ಶನವಾಗಿದೆ.

ಈ ಗಡ್ಕರಿ-ಅಡ್ವಾಣಿಗಳು ಅಲ್ಪಸಂಖ್ಯಾತರ ಹಾಗು ದಲಿತರ ಮೇಲೆ ತೋರುತ್ತಿರುವ ದಿಢೀರ್ ಕಾಳಜಿ ಎಷ್ಟು ದಿನದವರೆಗೋ ಎಂಬುದನ್ನ ಕಾದು ನೋಡಬೇಕಷ್ಟೇ.

- ರವಿ ಪುತ್ತೂರ, ದ

ಮೂವರಿಗೆ ಶ್ರದ್ಧಾಂಜಲಿ

ಈ ವಾರ ರಂಗಭೂಮಿ, ಸಿನಿಮಾ ಮತ್ತು ಚಲನಚಿತ್ರ ಪತ್ರಿಕಾರಂಗದ ಹಳೆ ತಲೆಮಾರಿನ ಮೂವರು ...ರನ್ನು ನಾವು ಕಳೆದುಕೊಂಡಿದ್ದೇವೆ.

ರಂಗಭೂಮಿಯಲ್ಲಿ ಸ್ತ್ರೀ ಪಾತ್ರ ಮತ್ತು ಪುರುಷ ಪಾತ್ರಗಳಲ್ಲಿ ವಿಜೃಂಭಿಸುತ್ತಿದ್ದ ನಾಗರತ್ನಮ್ಮ ಕಳೆದ ವಾರ ...ಧನರಾದಾಗ ಬಹುತೇಕ ರಂಗಕರ್ಮಿಗಳು "ರಂಗಭೂಮಿ ಹಳೆ ತಲೆಮಾರಿನ ಕೊನೆಯ ಕೊಂಡಿಯನ್ನು ...ಳಚಿಕೊಂಡಿದೆ" ಎಂದು ಹೇಳಿದ್ದರು. ರಂಗಭೂಮಿಯಲ್ಲಿ ಬಹಳ ದೊಡ್ಡ ತಾರೆಯಾಗಿದ್ದ ನಾಗರತ್ನಮ್ಮನವರು ...ಂದು ರೀತಿಯಲ್ಲಿ ರಂಗಭೂಮಿಯ ಸೂಪರ್ ಸ್ಟಾರ್ ಎಂದೇ ಹೇಳಬಹುದು.

ನಿರ್ಮಾಪಕರಾಗಿದ್ದ ಕೆ.ಸಿ.ಎನ್ ಗೌಡರ ನಿಧನ ಕೂಡ ಚಿತ್ರೋದ್ಯಮಕ್ಕೆ ಒಂದು ದೊಡ್ಡ ನಷ್ಟ. ಸಿನಿಮಾರಂಗದಲ್ಲಿ ...ರ್ಮಾಪಕ ಮತ್ತು ಥಿಯೇಟರ್ ಮಾಲಿಕರಾಗಿ ಮಾತ್ರವಲ್ಲ, ತನ್ನದೇ ಆದ ಅನೇಕ ಕೊಡುಗೆಗಳಿಂದ ...ನಪ್ರಿಯರಾಗಿದ್ದವರು ಕೆ.ಸಿ.ಎನ್.ಗೌಡರು. ಅವರ ಪುತ್ರರಾದ ಕೆ.ಸಿ.ಎನ್.ಚಂದ್ರು ಮತ್ತು ಕೆ.ಸಿ.ಎನ್.ಮೋಹನ್ ...ಾದ ಈಗ ಚಿತ್ರರಂಗದಲ್ಲಿ ಅತ್ಯಂತ ಸಕ್ರಿಯರಾಗಿ ದುಡಿಯುತ್ತಿದ್ದಾರೆಂಬುದು ನಿಮಗೆಲ್ಲ ಗೊತ್ತಿರುವ ವಿಚಾರ. ...ಂಗಾರದ ಮನುಷ್ಯ' ತರಹದ ಸದಭಿರುಚಿಯ ಚಿತ್ರವನ್ನು ನಿರ್ಮಿಸಿದ್ದ ಕೆ.ಸಿ.ಎನ್.ಗೌಡರು ನವರಂಗ್ ...ತ್ತು ಊರ್ವಶಿ ಥಿಯೇಟರ್ ಮಾಲಿಕರು. ಅಷ್ಟೇ ಅಲ್ಲ, ಅನೇಕ ಉತ್ತಮ ಚಿತ್ರ ನಿರ್ಮಿಸಿ, ಅನೇಕ ...ತ್ರಗಳನ್ನು ಹಂಚಿಕೆ ಮಾಡಿಯೂ ಜನಪ್ರಿಯರಾಗಿದ್ದವರು. ಚಿತ್ರರಂಗವನ್ನು ಬೆಳೆಸಿ, ಪೋಷಿಸಿದ್ದ ಕೆ.ಸಿ.ಎನ್.ಗೌಡರು ...ಪಕ್ಕೂ ಕನ್ನಡ ಚಿತ್ರರಂಗದ ಆಧಾರಸ್ಥಂಭಗಳಲ್ಲೊಬ್ಬರಾಗಿದ್ದರು ಎಂದರೆ ತಪ್ಪಾಗಲಾರದು. ಈ ಆಧಾರಸ್ತಂಭ ...ಗ ಕುಸಿದುಬಿದ್ದಿದೆ. ಸಹಜವಾಗಿ ಉದ್ಯಮಕ್ಕೆ ಇದರಿಂದಾಗಿ ನೋವಾಗಿದೆ.

ರಾಜಕೀಯ ಪತ್ರಿಕೋದ್ಯಮದ ಜೊತೆ-ಜೊತೆಗೆ ಸಿನಿಮಾ ಪತ್ರಿಕೋದ್ಯಮದಲ್ಲೂ ದೊಡ್ಡ ಹೆಸರು ...ಾಡಿದ್ದ ಪತ್ರಕರ್ತ ವಿ.ಎನ್.ಸುಬ್ಬರಾವ್ ಅವರ ನಿಧನ ಕೂಡ ಚಿತ್ರೋದ್ಯಮಕ್ಕೆ ದೊಡ್ಡ ನಷ್ಟವೇ ಸರಿ. ...ನ್ನಡ ಚಿತ್ರರಂಗ ಬಾಲ್ಯಾವಸ್ಥೆಯಲ್ಲಿದ್ದಾಗ 'ಮೇನಕಾ' ಎಂಬ ಸಿನಿ ಪತ್ರಿಕೆಯನ್ನು ಆರಂಭಿಸಿದ ಸುಬ್ಬರಾವ್ ...ನಂತರ ಚಿತ್ರೋದ್ಯಮದ ಜೊತೆಗೆ ನಿಕಟವಾದ ಸಂಬಂಧವನ್ನು ಉಳಿಸಿಕೊಂಡಿದ್ದರು. ಚಿತ್ರ ನಿರ್ಮಾಪಕರಾಗಿ ...ಾತ್ರವಲ್ಲ, ಚಲನಚಿತ್ರ ಆಯ್ಕೆ ಸಮಿತಿಯ ಅಧ್ಯಕ್ಷರಾಗಿಯೂ, ಸುಚಿತ್ರ ಫಿಲ್ಮ್ ಸೊಸೈಟಿಯ ಅಧ್ಯಕ್ಷರಾಗಿಯೂ, ...ನಿಮಾ ಪತ್ರಕರ್ತರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ ಸುಬ್ಬರಾವ್ ಅವರ ಕೊಡುಗೆ ...ೂಡ ಅನನ್ಯ. ಚಿತ್ರೋದ್ಯಮದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಸುಬ್ಬರಾವ್ ನೇತೃತ್ವದಲ್ಲಿ ಒಂದು ...ಮಿತಿಯನ್ನು ರಚಿಸಿತ್ತು. ಆ ಸಮಿತಿ ನೀಡಿದ ವರದಿಗೆ ಸುಬ್ಬರಾವ್ ವರದಿಯೆಂದೇ ಹೆಸರಿಟ್ಟಿದ್ದು ...ವರ ವ್ಯಕ್ತಿತ್ವಕ್ಕೆ ಸಂದ ಗೌರವ. ಹೀಗೆ ಎರಡೇ ವಾರದ ಅಂತರದಲ್ಲಿ ಸಾಂಸ್ಕೃತಿಕ ಲೋಕದ ಹಳೆ ...ಲೆಮಾರಿನ ಮೂರು ವಿಭಿನ್ನ ಕೊಂಡಿಗಳು ಕಳಚಿಕೊಂಡು ಈ ಬಣ್ಣದಲೋಕದಲ್ಲಿ ದುಃಖ ಮಡುಗಟ್ಟಿದೆ ...ಂದರೆ ತಪ್ಪಾಗಲಾರದು. ಈ ಮೂರು ಹಿರಿಯ ಚೇತನಗಳಿಗೆ ತಮ್ಮ ಶ್ರದ್ಧಾಂಜಲಿ.



ನಿನ್ನೆ 'ಲಕ್ಕಿ', ಇಂದು 'ಸ್ವೀಟಿ'

ಇದು ರಾಧಿಕಾ ಕುಮಾರಸ್ವಾಮಿ ನಿರ್ಮಾಣದ ಚಿತ್ರಗಳ ಹೆಸರು. 'ಲಕ್ಕಿ' ಚಿತ್ರದಲ್ಲಿ ರಮ್ಯ ನಾಯಕ ನಟಿಯಾಗಿಯೂ, ಯಶ್ ನಾಯಕ ನಟನಾಗಿಯೂ ನಟಿಸಿದ್ದು ನಿಮಗೆ ಗೊತ್ತೇ ಇದೆ. ಆದರೆ ಈ ಚಿತ್ರ ರಾಧಿಕಾ ಪಾಲಿಗೆ 'ಅನ್‌ಲಕ್ಕಿ' ಆಯಿತು. ಏಕೆಂದರೆ ಬಾಕ್ಸ್ ಆಫೀಸ್‌ನಲ್ಲಿ 'ಲಕ್ಕಿ' ಚಿತ್ರ ಮುಗ್ಗರಿಸಿದ್ದರಿಂದ ಕನಿಷ್ಠವೆಂದರೂ ಮೂರರಿಂದ ಮೂರುವರೆ ಕೋಟಿ ರೂ. ಆಕೆಯ ಪಾಲಿಗೆ ನಷ್ಟವಾಗಿತ್ತು, ಅದಕ್ಕೆ ಈ ಬಾರಿ ಸ್ವತಃ ರಾಧಿಕಾಳೇ ಅಖಾಡಕ್ಕೆ ಇಳಿದಿದ್ದಾಳೆ. 'ಮುಖಕ್ಕೆ ಬಣ್ಣ ಹಚ್ಚುವುದಿಲ್ಲ, ನಟನೆಗೆ ವಿದಾಯ' ಎಂದೆಲ್ಲ ಹೇಳಿದ್ದ ರಾಧಿಕಾ ಸುಮಾರು ಎಂಟು ವರ್ಷಗಳ ನಂತರ ಇದೀಗ ಮತ್ತೆ ಮುಖಕ್ಕೆ ಬಣ್ಣ ಹಚ್ಚಿ ನಾಯಕಿಯಾಗಲು ಹೊರಟಿದ್ದಾಳೆ. ಈ ಚಿತ್ರಕ್ಕೆ ವಿಜಯಲಕ್ಷ್ಮಿ ಸಿಂಗ್ ಅವರ ನಿರ್ದೇಶನವಿದ್ದು ರಾಜೇಂದ್ರಸಿಂಗ್ ಬಾಬು ಅವರ ಪುತ್ರ ಆದಿತ್ಯ ನಾಯಕನಟನಾಗಿ ನಟಿಸುತ್ತಿದ್ದಾರೆ. 'ಲಕ್ಕಿ' ತರಹ ಎರಡಕ್ಷರದ ಶೀರ್ಷಿಕೆಯೇ ಬೇಕೆಂದು ಹಠ ಹಿಡಿದು ಕುಳಿತುಕೊಂಡಿದ್ದ ರಾಧಿಕಾ ಕೊನೆಗೂ ತನ್ನ ಚಿತ್ರಕ್ಕೆ 'ಸ್ವೀಟಿ' ಎಂದು ಹೆಸರಿಟ್ಟಿದ್ದಾಳೆ.

ಹೆಸರಿಗೆ ತಕ್ಕಂತೆ ರಾಧಿಕಾ ಸ್ವೀಟ್ ಹುಡುಗಿ ಎಂಬುದರಲ್ಲಿ ಎರಡು ಮಾತಿಲ್ಲ. ಹಾಲುಗಲ್ಲದ ಈ ಚೆಲುವೆ ನಾಯಕಿಯಾಗಿದ್ದಾಗಲೂ ಕೂಡ 'ಸ್ವೀಟಿ' ಎಂದೇ ಎಲ್ಲರಿಂದ ಕರೆಯಲ್ಪಡುತ್ತಿದ್ದಳು. ಈಗ ಕುಮಾರಸ್ವಾಮಿಯವರನ್ನು ಮದುವೆಯಾಗಿ ಮಗುವನ್ನು ಹೆತ್ತ ನಂತರವೂ ತನ್ನ ದೇಹ ಸೌಂದರ್ಯ ಮತ್ತು ಚರಿಷ್ಮಾವನ್ನು ಉಳಿಸಿಕೊಂಡಿರುವ ರಾಧಿಕಾ ಈ ಚಿತ್ರದ ಮುಖಾಂತರ ತನ್ನ ವೃತ್ತಿಜೀವನದ ಹೊಸ ಮಜಲನ್ನು ಪ್ರವೇಶಿಸಿದ್ದಾರೆ. ಈಗ ಪ್ರಶ್ನೆ ಇಷ್ಟೆ: ಈ ಚಿತ್ರದ ಮುಖಾಂತರ ರಾಧಿಕಾ ಮತ್ತೆ ಕಳೆದುಹೋದ ತನ್ನ ಗ್ಲಾಮರ್ ಜೀವನದ ವೈಭವವನ್ನು ಮರು ಪಡೆಯುತ್ತಾರೆಯೇ? ಈ ಚಿತ್ರ ಅವರ ಪಾಲಿಗೆ ನಿಜವಾಗಿಯೂ ಸಿಹಿ ನೆನಪು ಸೃಷ್ಟಿಸುತ್ತದೆಯೇ? ಅಥವಾ 'ಲಕ್ಕಿ' ತರಹ ಕಹಿ ನೆನಪು ನೀಡುತ್ತದೆಯೇ? ನೋಡಬೇಕು.




ದೈವಶಕ್ತಿ ಮತ್ತು ದುಷ್ಟಶಕ್ತಿ ಅಥವಾ ನಾಗಶಕ್ತಿಗಳ ನಡುವಿನ ಹೋರಾಟದ ಚಿತ್ರಗಳನ್ನು ನಿರ್ಮಿಸುವುದರಲ್ಲಿ ಎತ್ತಿದ ಕೈ ಎಂದರೆ ತೆಲುಗಿನ ನಿರ್ದೇಶಕ ಕೋಡಿ ರಾಮಕೃಷ್ಣ. ಅವರು ತೆಲುಗಿನಲ್ಲಿ ತೆಗೆದ ಇಂತಹ ಚಿತ್ರಗಳೆಲ್ಲ ಸೂಪರ್‌ಹಿಟ್ ಆಗಿವೆ. ಏಳೆಂಟು ವರ್ಷಗಳ ಹಿಂದೆ ಪ್ರೇಮ ನಾಯಕಿಯಾಗಿ ನಟಿಸಿದ್ದ 'ದೇವಿ' ಚಿತ್ರವನ್ನು ಕೋಡಿ ರಾಮಕೃಷ್ಣ ನಿರ್ಮಿಸಿ ನಿರ್ದೇಶಿಸಿದ್ದರು. 'ದೇವಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಚಿರಂಜೀವಿ ಚಿತ್ರದ ಗಳಿಕೆಯನ್ನೂ ಓವರ್‌ಟೇಕ್ ಮಾಡಿತ್ತು.

ದೈವತ್ವದತ್ತ ರಮ್ಯಾ?

ಅಂತಹ ಕೋಡಿ ರಾಮಕೃಷ್ಣ ಈಗ ಸದ್ದುಗದ್ದಲವಿಲ್ಲದೆ ಕನ್ನಡದಲ್ಲಿ ಅದೇ ಮಾದರಿಯ ಒಂದು ಚಿತ್ರವನ್ನು ಮಾಡಿಮುಗಿಸಿದ್ದಾರೆ. ಈ ಚಿತ್ರದಲ್ಲಿ ರಮ್ಯ ಮತ್ತು ದಿಗಂತ್ ಜೋಡಿಯಾಗಿ ನಟಿಸಿದ್ದಾರೆ ಎಂಬುದನ್ನು ಹೊರತುಪಡಿಸಿದರೆ ಬೇರೇನೂ ಸುದ್ದಿ ಹೊರಬಂದಿಲ್ಲ. ಈ ಚಿತ್ರ ಬಿಡುಗಡೆಯಾಗುವತನಕ ಯಾವುದೇ ಸಭೆ-ಸಮಾರಂಭಗಳಿಗೆ ತಾನು ಹಾಜರಾಗುವುದಿಲ್ಲ ಅಥವಾ ಟಿ.ವಿ.ಗಳಿಗೆ ಸಂದರ್ಶನ ನೀಡುವುದಿಲ್ಲ ಎಂದಿದ್ದ ರಮ್ಯ ಚಿತ್ರದಲ್ಲಿ ಸಂಪೂರ್ಣವಾಗಿ ತನ್ನನ್ನು ತಾನು ತೊಡಗಿಸಿಕೊಂಡಿರುವ ಸುದ್ದಿ ಕೇಳಿಬಂದಿದೆ.

ಅಂದು 'ದೇವಿ' ಚಿತ್ರದಿಂದಾಗಿ ಪ್ರೇಮಾಳಿಗೆ ದಿಢೀರನೆ ಎಲ್ಲಿಲ್ಲದ ಬೇಡಿಕೆ ಮತ್ತು ತಾರಾಮೌಲ್ಯ ಒದಗಿಬಂದಿತ್ತು. ಈಗ ರಮ್ಯಳೂ ಅದೇ ರೀತಿಯಲ್ಲಿ ಈ ಚಿತ್ರ ಬಿಡುಗಡೆಯಾದ ನಂತರ ಗಾಂಧಿನಗರದಲ್ಲಿ ವಿಜೃಂಭಿಸಿ ತನ್ನ ಪಾರುಪತ್ಯವನ್ನು ಪ್ರದರ್ಶಿಸುತ್ತಾರೋ? ಹಾಗೆಯೇ ಅನೇಕ ವರ್ಷಗಳಿಂದ ಗೆಲುವನ್ನೇ ಕಾಣದ ನಾಯಕನಟ ದಿಗಂತ್ ಕೂಡ ಈ ಚಿತ್ರದ ಮೂಲಕ ಸೋಲಿನ ಸರಪಳಿಯಿಂದ ಮುಕ್ತಿ ಪಡೆಯುತ್ತಾರೋ ಎಂಬಿತ್ಯಾದಿ ಕುತೂಹಲ ಎಲ್ಲರಲ್ಲಿದೆ.

'ಅಂಬಾರಿ' ಟೀಮಿನಿಂದ 'ರಾಟೆ'



'ಅಂಬಾರಿ' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗದ ದಿಗಂತದಲ್ಲಿ ಉದಯಿಸಿದ ಹೊಸ ತಾರೆಯೆಂದರೆ ನಿರ್ದೇಶಕ ಅರ್ಜುನ್. ಆ ಚಿತ್ರದಲ್ಲಿ ನಾಯಕನಟ ಯೋಗೇಶ್ ಯಾನೆ ಲೂಸ್ ಮಾದಾ ಮತ್ತು ನಿರ್ದೇಶಕ ಅರ್ಜುನ್ ಕಾಂಬಿನೇಷನ್ ಚೆನ್ನಾಗಿ ವರ್ಕ್‌ಔಟ್ ಆಗಿತ್ತು. ಆ ಚಿತ್ರ ಪ್ರೇಕ್ಷಕರ ಮನಸ್ಸು ಗೆದ್ದಿದ್ದು ಮಾತ್ರವಲ್ಲ, ವಿಮರ್ಶಕರ ಹೃದಯವನ್ನೂ ಗೆದ್ದಿತ್ತು. ನಿರ್ಮಾಪಕರಿಗೆ ಲಾಭದ ಜೊತೆಗೆ ಪ್ರಶಸ್ತಿಯೂ ಈ ಚಿತ್ರದ ಮುಖಾಂತರ ಬಂದಿತ್ತು.

ಅಂತಹ ಹಿಟ್ ಚಿತ್ರ ನೀಡಿದ ನಂತರವೂ ಅರ್ಜುನ್ ನಾಲ್ಕು ವರ್ಷಗಳ ಕಾಲ ನಿರುದ್ಯೋಗಿಯಾಗಿ ಗಾಂಧಿನಗರದಲ್ಲಿ ಅಲೆದಾಡಿದರು. ಕೊನೆಗೆ ಕಷ್ಟಪಟ್ಟು ಹಠ ಬಿಡದ ತ್ರಿವಿಕ್ರಮನಂತೆ ಅರ್ಜುನ್ ತನ್ನ ಎರಡನೆಯ ಚಿತ್ರ 'ಅದ್ದೂರಿ'ಯನ್ನು ಮಾಡಿ ಮುಗಿಸಿದರು. ಈಗ ಅದೂ ಕೂಡ ಯಶಸ್ವಿ ಚಿತ್ರಗಳ ಸಾಲಿಗೆ ಸೇರಿ ಹೊಸ ಇತಿಹಾಸವನ್ನು ಸೃಷ್ಟಿಸಿದೆ.

ತನ್ನ ಎರಡನೇ ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ಗೆದ್ದ ನಂತರ ಅರ್ಜುನ್‌ಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಅರ್ಜುನ್ ನಿರ್ದೇಶನದಲ್ಲಿ ದುನಿಯಾ ವಿಜಿ ನಾಯಕನಾಗಿ ನಟಿಸುವ ಚಿತ್ರವೊಂದು ಸದ್ಯದಲ್ಲೇ ಸೆಟ್ಟೇರಲಿದೆ. ಅದರ ಬೆನ್ನಲ್ಲೇ ಅರ್ಜುನ್ ಮತ್ತು ಲೂಸ್ ಮಾದ ಮತ್ತೆ ಹೊಸ ಚಿತ್ರದಲ್ಲಿ ಜೋಡಿಯಾಗಿ ಕಾಣಿಸಿಕೊಳ್ಳಲಿದ್ದಾರೆ. 'ರಾಟೆ' ಎಂಬ ಚಿತ್ರದ ಮೂಲಕ ಈ ಯಶಸ್ವಿ ಜೋಡಿ ಮತ್ತೆ ಪ್ರೇಕ್ಷಕರನ್ನು ಮೋಡಿ ಮಾಡಲು ಹೊರಟಿದೆ.

ಹೊಗಳಿಕೆ ತೆಗಳಿಕೆ

...ಾಡುವರೆಂದು ಆಶಿಸುತ್ತೇನೆ. ಇಲ್ಲವಾದರೆ ಬೇಲಿಯೇ ...ದ್ದು ಹೊಲ ಮೇಯ್ದಂತೆ ಸಹಕಾರ ಇಲಾಖೆಯೇ ...ಎಸ್‌ಎಸ್‌ನ ಎಲ್ಲ ಅವ್ಯವಹಾರಗಳಲ್ಲಿ ...ಮೀಲಾಗಿದೆಯೆನ್ನುವುದನ್ನು ಒಪ್ಪಿಕೊಂಡಂತೆ ...ಗುವುದಿಲ್ಲವೇ?

- ರಾಮನಾಥ ಹೆಗಡೆ, ಮುಂಬಯಿ

ಸೊಲಬಕ್ಕನವರಿಗೆ ಹ್ಯಾಟ್ಸ್ ಆಫ್

ರಾಕ್ ಗಾರ್ಡನ್‌ನಲ್ಲಿ ನಿರ್ಮಿಸಿರುವ ಮಹಾನ್ ...ಾವಿದ ರಾಜ್ ಕುಮಾರ್ ಅವರ ಪ್ರತಿಮೆಗಳು ಗೌರಿ ...ೀಡಂ ಅವರಿಗೆ ಅದ್ಯಾಕೆ ಇಷ್ಟವಾಗಲಿಲ್ಲವೋ ...ರ್ಥವಾಗಲಿಲ್ಲ. ನೆರೆಯ ಆಂಧ್ರದಲ್ಲಿ ರಾಜಬಾಬುವಿನಂತಹ ...ಮಾನ್ಯ ಹಾಸ್ಯ ನಟನ ಪ್ರತಿಮೆಯನ್ನು ನಿರ್ಮಿಸಲಾಗಿದೆ. ...ಜ್‌ಕುಮಾರ್ ಅವರು ಭಾರತೀಯ ಚಿತ್ರರಂಗದಲ್ಲಿಯೇ ...ಸಾಟಿ ಇಲ್ಲದ ಮಹಾನ್ ಕಲಾವಿದರು. ಅಂತಹ ...ಲಾವಿದನ ಪ್ರತಿಮೆಗಳನ್ನು ನಿರ್ಮಿಸಿರುವ ಪ್ರೊ. ...ೊಲಬಕ್ಕನವರಿಗೆ ಹ್ಯಾಟ್ಸ್ ಆಫ್.


- ಎನ್.ಕೆ.ವರದರಾಜು, ಕೋಲಾರ

ತನ್ನ ಮುಖಪುಟದ ಮೇಲಿರುವ ಕೂದಲಿನ ಬಗ್ಗೆ ...ರ್ ಪ್ರೀತ್ ಕೌರ್‌ಳ ಪ್ರತಿಕ್ರಿಯೆ ಮತ್ತು ರಾಷ್ಟ್ರಪತಿ ಭವನಕ್ಕೆ ...ಕ್ಯ ಎಂಬ ಲಿಂಗತ್ವ ಅಲ್ಪಸಂಖ್ಯಾತೆಯ ಐತಿಹಾಸಿಕ ...ಯಣದ ಬಗ್ಗೆ ಓದಿ ಸಂತೋಷವಾಯಿತು. ಥ್ಯಾಂಕ್ಸ್.

- ರಂಗಣ್ಣ, ಕೊಡಗು

ಕರ್ನಾಟಕದಲ್ಲಿ ಈ ವರ್ಷ ಮುಂಗಾರು ಮಳೆಗಾಲ ...ಂದಿದೆ ಎನಿಸುವುದೇ ಇಲ್ಲ... ಒಳ್ಳೆ ಬೇಸಿಗೆ ಇದ್ದಂತಿದೆ... ...ದರೂ ಸಹ ಪ್ರಧಾನಿ ಮನಮೋಹನ್ ಸಿಂಗ್ ಕರ್ನಾಟಕದ ...ಲಾಶಯಗಳಲ್ಲಿ ಈವರೆಗೆ ಸಂಗ್ರಹವಾಗಿರುವ ಅಲ್ಪಸ್ವಲ್ಪ ...ರಿನಲ್ಲಿ ಪ್ರತಿದಿನ 2 ಟಿಎಂಸಿಯಷ್ಟು ನೀರನ್ನು ...ಮಿಳುನಾಡಿಗೆ ಬಿಟ್ಟುಕೊಡಬೇಕೆಂದು ಆಜ್ಞೆ ಮಾಡಿದ್ದಾರೆ!! ಇದು ಯಾವ ನ್ಯಾಯ ಸ್ವಾಮಿ??? ಯಾರಾದರೂ ಇದನ್ನು ಒಪ್ಪಲು ಸಾಧ್ಯವೇ?

ನಾವು ಬೆಂಗಳೂರಿನಲ್ಲಿ ಬಿಡಿಎ ಬಡಾವಣೆಯ ನಿವಾಸಿಗಳಾದ್ದಾಗ್ಯೂ 2001 ರಿಂದಲೂ ಕುಡಿಯುವ ನೀರಿಲ್ಲದೆ ಒದ್ದಾಡುತ್ತಿದ್ದೇವೆ!! 500 ಅಡಿ ಆಳದ ಕೊಳವೆ ಬಾವಿ ಕೊರೆದರೆ ಅದರಲ್ಲಿ ಸಿಕ್ಕಿದ್ದು ಉಪ್ಪುನೀರು. ಆ ಉಪ್ಪುನೀರನ್ನೇ ಕುಡಿಯುತ್ತಾ ಇದ್ದೇವೆ. ಕಾವೇರಿ ನೀರು ಕೊಡುತ್ತೇವೆ... ಕೊಡುತ್ತೇವೆ... ಎಂದು



ಬಿಡಿಎ ಹೇಳುತ್ತಲೇ ಇದೆ. ಅದು ಯಾವಾಗ ಕೊಡುತ್ತಾರೊ ಗೊತ್ತಿಲ್ಲ, ಹೀಗಿದ್ದಾಗ್ಯೂ ಕರ್ನಾಟಕ ತಮಿಳುನಾಡಿಗೆ ನೀರು ಕೊಡಬೇಕಾ?

ಕರ್ನಾಟಕದ ಜಲಾಶಯಗಳಲ್ಲಿ ನೀರಿದೆ ಎಂದೇ ಇಟ್ಟುಕೊಳ್ಳೋಣ. ಅದು ನಮಗೆ ಮುಂದಿನ ದಿನಗಳಲ್ಲಿ ಉಪಯೋಗಕ್ಕೆ ಬೇಕು. ಅಣೆಕಟ್ಟೆಗಳನ್ನು ಕಟ್ಟಿ ನೀರು ಸಂಗ್ರಹ ಮಾಡುವುದು ತಮಿಳುನಾಡಿಗೆ ಬೇಕೆಂದಾಗ ಬಿಟ್ಟುಕೊಡುವುದಕ್ಕೋ ಅಥವಾ ಸ್ವಂತ ಉಪಯೋಗಕ್ಕೋ?? ಹೀಗೆ ಸಂಗ್ರಹಿಸಿದ ನೀರನ್ನು ತಮಿಳುನಾಡಿಗೆ ಬಿಟ್ಟು ಕೊಡಿ ಎಂದರೆ ನಾವೇಕೆ ಬಿಟ್ಟುಕೊಡಬೇಕು?

ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾರ ಹತ್ತಿರ ವಿಪರೀತ ಹಣ, ಆಸ್ತಿ ಇವೆ. ತುಂಬ ಬೆಲೆ ಬಾಳುವ ಸಾವಿರಾರು ಸೀರೆಗಳಿವೆ. ಅವುಗಳಲ್ಲಿ ಅರ್ಧ ಭಾಗವನ್ನು ಅವರ ಅಕ್ಕಪಕ್ಕದಲ್ಲಿ ವಾಸಿಸುವ ಬಡ ಮಹಿಳೆಯರಿಗೆ ಕೊಡಲಿ. ಕರ್ನಾಟಕದ ಕಾವೇರಿ ನೀರನ್ನು ತಮಿಳನಾಡಿಗೆ ಪಾಲು ಕೊಡಿ ಎನ್ನುವವರೆಲ್ಲಾ ಅವರವರ ಆಸ್ತಿಯಲ್ಲಿ ಅರ್ಧ ಭಾಗವನ್ನು ಅವರ ಅಕ್ಕಪಕ್ಕದಲ್ಲಿ ವಾಸಿಸುವ ಬಡವರಿಗೆ ಹಂಚಲಿ. ನಂತರ ಅವರು ತಮಿಳನಾಡಿನ ಪರ ಧ್ವನಿ ಎತ್ತಲಿ. ಆಗ ಖಂಡಿತ ಅವರ ಧ್ವನಿಗೆ ಮನ್ನಣೆ ಕೊಡೋಣ. ಅಲ್ಲಿಯವರೆಗೂ ಅವರಿಗೆ ಧ್ವನಿ ಎತ್ತಲು ಯಾವ ಹಕ್ಕೂ ಇಲ್ಲ, ಇದು ನಿಸರ್ಗದ ನಿಯಮ. (Law of Nature) ವಿಶ್ವದೆಲ್ಲೆಡೆ ಮನ್ನಣೆ ಇರುವ ನಿಯಮ.

- ವೀರಯ್ಯಾತಯ್ಯ, ಬೆಂಗಳೂರು

ಬರುವ ನವೆಂಬರ್ 3 ರಂದು ಕಲ್ಕುಳಿ ಹೆಗ್ಡೆಯವರ 'ಮಂಗನ ಬ್ಯಾಟೆ' ಪುಸ್ತಕ ಬಿಡುಗಡೆಯ ವಿಷಯ ಕೇಳಿ ಸಂತೋಷವಾಯಿತು. ಪುಸ್ತಕವು ಸಚಿತ್ರವಾಗಿ ಬರುತ್ತಿರುವುದು ಕೂಡ ಒಳ್ಳೆಯದು. ಜಿಮ್ ಕಾರ್ಬೆಟ್ ಪುಸ್ತಕದಲ್ಲಿ ಈ ಕೊರತೆಯಿತ್ತು. ಅದೇರೀತಿ ಇಂದಿರಾ ಲಂಕೇಶರ ಪುಸ್ತಕವೂ ಆದಷ್ಟು ಬೇಗ ಹೊರಬರಲಿ.

- ಶಶಿ ಪುತ್ತೂರು, ದಕ್ಷಿಣ ಕನ್ನಡ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 24-10-2012 RNI No. KARKAN2005/1

ಲಾಂಗ್‌ಗಳಿಗೆ ಬ್ರೇಕ್, ಹಾಸ್ಯಕ್ಕೆ ಗ್ರೀನ್ ಸಿಗ್ನಲ್



ಇತ್ತೀಚೆಗೆ ಗಾಂಧಿನಗರದಲ್ಲಿ ಲಾಂಗು-ಮಚ್ಚುಗಳ ಆರ್ಭಟ ಕಡಿಮೆಯಾದಂತೆ ಕಾಣಿಸುತ್ತಿದೆ. ಆದರ ಬದಲಿಗೆ ಬಹುತೇಕ ಎಲ್ಲರೂ ಹಾಸ್ಯಚಿತ್ರಗಳತ್ತ ಗಮನಹರಿಸುತ್ತಿರುವುದು ಒಂದು ದೊಡ್ಡ ಬೆಳವಣಿಗೆಯಾಗಿದೆ. ಈಗಂತೂ ದಸರಾ ಹಬ್ಬದ ರಜಾ ಸಂದರ್ಭದಲ್ಲಿ ಪ್ರೇಕ್ಷಕರನ್ನು ನಕ್ಕುನಲಿಸುವ ಉದ್ದೇಶದಿಂದ ಕನಿಷ್ಠ ಆರೇಳು ಚಿತ್ರಗಳು ತಯಾರಾಗಿ ಬಿಡುಗಡೆಗೆ ಕ್ಯೂನಲ್ಲಿ ನಿಂತಿವೆ. ಆದರೆ ಈ ಚಿತ್ರಗಳು ಒಟ್ಟೊಟ್ಟಿಗೆ ಬಿಡುಗಡೆಯಾದರೆ ಹಾಸ್ಯ ಚಿತ್ರ ನಿರ್ಮಾಣ ಮಾಡಿದ ಕೆಲವು ನಿರ್ಮಾಪಕರ ಕಣ್ಣಲ್ಲಿ ಕಣ್ಣೀರು ಬರುವ ಸಾಧ್ಯತೆಯಿದೆ. ಏಕೆಂದರೆ ತೀವ್ರವಾದ ಸ್ಪರ್ಧೆ ಮತ್ತು ಪೈಪೋಟಿಯಿಂದಾಗಿ ಒಂದೆರಡು ಚಿತ್ರಗಳು ಮುಗ್ಗರಿಸಿದರೂ ಆಶ್ಚರ್ಯಪಡಬೇಕಾಗಿಲ್ಲ.

ಕಳೆದ ವಾರ ಬಿಡುಗಡೆಯಾದ 'ಸ್ನೇಹಿತರು' ಚಿತ್ರ ಇಡೀ ಕುಟುಂಬ ನೋಡಿ ನಕ್ಕು ನಲಿಯುವಂತಿದೆ. ನಿರ್ಮಾಪಕ ಸೌಂದರ್ಯ ಜಗದೀಶ್‌ರವರ ಮಗ ಮಾಸ್ಟರ್ ಸ್ನೇಹಿತ್ ಈ ಚಿತ್ರದಲ್ಲಿ ಅದ್ಭುತವಾಗಿ ನಟಿಸಿದ್ದಾರೆ. ದರ್ಶನ್ ಅತಿಥಿನಟರಾಗಿ ಕಾಣಿಸಿಕೊಂಡಿದ್ದಾರೆ. ಜೊತೆಗೆ ವಿಜಯ್ ರಾಘವೇಂದ್ರ, ಸೃಜನ್ ಲೋಕೇಶ್, ರವಿಶಂಕರ್ ಗೌಡ ಮತ್ತು ತರುಣ್ ಈ ನಾಲ್ಕು ಜನ ಹಾಸ್ಯ ಪಾತ್ರದಲ್ಲಿ ನಕ್ಕು ನಲಿಸುತ್ತಾರೆ. ಎರಡೂ ಗಂಟೆಗಳ ಕಾಲ ನಿರ್ದೇಶಕ ರಾಮ್ ನಾರಾಯಣ್ ನೋಡುಗರನ್ನು ನಗೆಯ ಕಡಲಿನಲ್ಲಿ ತೇಲಿಸುತ್ತಾನೆ. ಚಿತ್ರ ಹಿಟ್ ಆಗುವ ಸೂಚನೆಯ ಬೆನ್ನಲ್ಲೇ ಇದರ ನಿರ್ಮಾಪಕರಿಗೆ ಕಹಿ ಸುದ್ದಿ ಇದೆ. ಅದೇನೆಂದರೆ ಮುಂದಿನ ಮೂರ್ನಾಲ್ಕು ವಾರಗಳಲ್ಲಿ ಹಾಸ್ಯ ಚಿತ್ರಗಳ ಬಿಡುಗಡೆ ಮೆರವಣಿಗೆಯೇ ನಡೆಯಲಿದೆ.

ಗಣೇಶ್ ನಟಿಸಿರುವ 'ಮಿಸ್ಟರ್ 420' ಚಿತ್ರ 18ರಂದು ಬಿಡುಗಡೆಯಾಗುವುದು ಬಹುತೇಕ ಖಾತ್ರಿಯಾಗಿದೆ. ಒಂದೆಡೆ, ವಿಜಯರಾಘವೇಂದ್ರ ನಟಿಸಿರುವ 'ಗೋಲ್‌ಮಾಲ್' ಎಂಬ ಕಾಮಿಡಿ ಚಿತ್ರವೂ ಬಿಡುಗಡೆಗೆ ತಯಾರಾಗಿದೆ. ಇನ್ನೊಂದೆಡೆ, ಸಾಯಿಪ್ರಕಾಶ್ ನಿರ್ದೇಶನದ 'ಸಂಸಾರದಲ್ಲಿ ಗೋಲ್‌ಮಾಲ್' ಎಂಬ ಚಿತ್ರವನ್ನು ಕೂಡ ದಿಢೀರನೆ ಬಿಡುಗಡೆ ಮಾಡಲು ಅದರ ನಿರ್ಮಾಪಕ ಓಡಾಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ರಾಕ್‌ಲೈನ್ ವೆಂಕಟೇಶ್ ನಿರ್ಮಿಸಿ ನಟಿಸಿರುವ 'ಡಕೋಟ ಪಿಕ್ಚರ್ಸ್' ಎಂಬ ಹಾಸ್ಯಚಿತ್ರವೂ ಒಂದೆರಡು ವಾರದಲ್ಲಿ ಬಿಡುಗಡೆಯಾಗುತ್ತಿದೆ.

ಹೀಗೆ ನಾಲ್ಕು ಹಾಸ್ಯಪ್ರಧಾನ ಚಿತ್ರಗಳು ಒಟ್ಟೊಟ್ಟಿಗೆ ಬಿಡುಗಡೆಯಾಗಿ ಪ್ರೇಕ್ಷಕರಿಗೆ ವಾಕರಿಕೆ ತರಿಸುವ ಸಾಧ್ಯತೆಯೂ ಇದೆ. ಅಷ್ಟೇ ಅಲ್ಲ, ಈಗಾಗಲೇ ತುಂಬಿದ ಗೃಹಗಳಿಂದ ಪ್ರದರ್ಶನವಾಗುತ್ತಿರುವ ಶರಣ್ ನಾಯಕನಾಗಿ ನಟಿಸಿರುವ 'ರ‍್ಯಾಂಬೋ' ಚಿತ್ರದ ಗಳಿಕೆಗೂ ಇದರಿಂದ ತೊಂದರೆಯಾಗುವ ಸಾಧ್ಯತೆಯಿದೆ.

ಈ ವರ್ಷದ ಆರಂಭದಲ್ಲಿ ಕೋಮಲ್ ನಟಿಸಿದ 'ಗೋವಿಂದಾಯ ನಮಃ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆದ್ದು ನಿರ್ಮಾಪಕರಿಗೆ ಭಾರೀ ಲಾಭವನ್ನು ತಂದುಕೊಟ್ಟಿತ್ತು. ಅಲ್ಲಿಂದಾಚೆಗೆ ಬಹುತೇಕ ನಿರ್ಮಾಪಕರು ಹಾಸ್ಯಚಿತ್ರ ನಿರ್ಮಾಣ ಮಾಡುವತ್ತ ತಮ್ಮ ಗಮನ ಹರಿಸಲಾರಂಭಿಸಿದರು. ಗಾಂಧಿನಗರದವರು ಗೆದ್ದ ಎತ್ತಿನ ಬಾಲ ಹಿಡಿಯುವುದರಲ್ಲಿ ನಿಸ್ಸೀಮರು ಎಂಬುದು ನಿಮಗೆ ಗೊತ್ತು ತಾನೆ? ಒಂದು ಚಿತ್ರ ಗೆದ್ದಾಕ್ಷಣ ಅದೇ ಮಾದರಿಯ ಚಿತ್ರ ತೆಗೆದು ಪ್ರೇಕ್ಷಕರಿಗೆ ಬೋರು ಹೊಡೆಸುವುದರಲ್ಲಿ ನಮ್ಮವರು ಎತ್ತಿದ ಕೈ. ಅಂತಹ ಒಂದು ಬೋರ್ ಅನುಭವ ಮುಂದಿನ ದಿನಗಳಲ್ಲಿ ಕನ್ನಡದ ಪ್ರೇಕ್ಷಕರಿಗೆ ಆಗುವ ಸಾಧ್ಯತೆಯಿದೆ ಎಂದು ಈ ಮೂಲಕ ಎಚ್ಚರಿಸುತ್ತಿದ್ದೇವೆ.

'ಸಂಗೊಳ್ಳಿ' ವಿರುದ್ಧ 'ವರದನಾಯಕ'

ಈಗ ಆಪ್ತಮಿತ್ರರಾಗಿರುವ ಸುದೀಪ್ ಮತ್ತು ದರ್ಶನ್ ಪಾಲಿಗೆ ಒಂದು ದೊಡ್ಡ ಅಗ್ನಿಪರೀಕ್ಷೆ ಎದುರಾಗಿದೆ. 'ಸಂಗೊಳ್ಳಿ ರಾಯಣ್ಣ' ಮತ್ತು 'ವರದನಾಯಕ' ಚಿತ್ರಗಳೆರಡೂ ಒಟ್ಟೊಟ್ಟಿಗೆ ಬಿಡುಗಡೆಯಾಗುವ ಅಪಾಯಕಾರಿ ಮಾತು ಗಾಂಧಿನಗರದಿಂದ ಕೇಳಿಬರುತ್ತಿದೆ. ಇದರಿಂದಾಗಿ "ಚಿತ್ರರಂಗದ ಆಪ್ತಮಿತ್ರರಲ್ಲೇ ಒಂದು ರೀತಿಯ ಆತಂಕ ಮತ್ತು ಅಸಮಾಧಾನ ಉಂಟಾಗುತ್ತಿದೆ.



ಇವರಿಬ್ಬರ ಭಾರೀ ಬಜೆಟ್‌ನ ಚಿತ್ರಗಳು ಒಂದೆರಡು ವಾರಗಳ ಅಂತರದಲ್ಲಿ ಬಿಡುಗಡೆಯಾಗುತ್ತಿವೆ. ಸಹಜವಾಗಿಯೇ ಎರಡು ದೊಡ್ಡ ಚಿತ್ರಗಳು ಒಟ್ಟೊಟ್ಟಿಗೆ ಬಿಡುಗಡೆಯಾದರೆ ಥಿಯೇಟರ್ ಸಮಸ್ಯೆ, ಅಭಿಮಾನಿಗಳಲ್ಲಿ ವಿವಾದ, ಹಂಚಿಕೆದಾರರಿಗೆ ತೊಂದರೆ... ಎಲ್ಲವೂ ನಡೆಯುವುದು ಸಾಮಾನ್ಯ.

ದರ್ಶನ್ ನಟಿಸಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ದುಬಾರಿ ಚಿತ್ರವಾಗಿದೆ. ಈ ಚಿತ್ರದ ಬಜೆಟ್ ಏನಿಲ್ಲವೆಂದರೂ 20 ಕೋಟಿ ರೂ.ಗಳನ್ನು ಖಂಡಿತವಾಗಿಯೂ ದಾಟಿದೆ. ಇಂತಹ ಅದ್ದೂರಿ ವೆಚ್ಚದ ಚಿತ್ರ ಬಿಡುಗಡೆಯಾದಾಗ ಉಳಿದ ನಿರ್ಮಾಪಕರು ತಮ್ಮ ಚಿತ್ರವನ್ನು ಬಿಡುಗಡೆ ಮಾಡದೆ ಸಹಕರಿಸಬೇಕು. ಆದರೆ ಕನ್ನಡ ಚಿತ್ರರಂಗದಲ್ಲಿ ಇಂತಹ ಸಹಕರಿಸುವ ಸಂಪ್ರದಾಯವನ್ನು ಯಾರೂ ಪಾಲಿಸಿಲ್ಲದ ಕಾರಣ ಈ ಬಾರಿಯೂ 'ಸಂಗೊಳ್ಳಿ ರಾಯಣ್ಣ'ನಿಗೆ ಯಾರೂ ಸುಲಭವಾಗಿ ದಾರಿ ಮಾಡಿ ಕೊಡುತ್ತಿಲ್ಲ.



ದರ್ಶನ್‌ನ ಪರಮಾಪ್ತ ಮಿತ್ರನಾದ ಸುದೀಪ್ ನಟಿಸಿರುವ 'ವರದನಾಯಕ' ಚಿತ್ರವನ್ನು ನಿರ್ಮಾಪಕ ಶಂಕ್ರೇಗೌಡರು ಬಿಡುಗಡೆ ಮಾಡಲು ಹೊರಟಿರುವುದು ಗಾಂಧಿನಗರದ ಜನರಲ್ಲಿ ಅಚ್ಚರಿಯನ್ನು ಮೂಡಿಸಿದೆ.

ದಸರಾ ಹಬ್ಬದ ರಜಾದಿನಗಳು ಮತ್ತು ರಾಜ್ಯೋತ್ಸವದ ಸಂದರ್ಭದಲ್ಲಿ ಜನರನ್ನು ಖುಷಿಗೊಳಿಸಲು 'ರಾಯಣ್ಣ' ಮತ್ತು 'ವರದನಾಯಕ' ಬರುತ್ತಿದ್ದಾರೆ. ಆದರೆ, ಇವರಿಬ್ಬರು ಒಟ್ಟೊಟ್ಟಿಗೆ ಬರುವ ಮುಖಾಂತರ ಒಂದು ಅನಗತ್ಯವಾದ ಪೈಪೋಟಿ ಮತ್ತು ಅಹಿತಕರ ವಾತಾವರಣ ಸೃಷ್ಟಿಯಾಗುವುದು ಖಂಡಿತ. ಇಂತಹ ವಾತಾವರಣ ಸೃಷ್ಟಿಯಾಗದಂತೆ ದರ್ಶನ್ ಮತ್ತು ಸುದೀಪ್ ಎಂಬ ಆಪ್ತಮಿತ್ರರು ಈಗ ನೋಡಿಕೊಳ್ಳಬೇಕಾಗಿದೆ.



'ಮಿಸ್ಟರ್ 420' ನಾಯಕಿ ಪ್ರಣೀತ

'ಮಿಸ್ಟರ್ 420' ಗಣೇಶ್

'ಮಿಸ್ಟರ್ 420': ಈ ಹೆಸರನ್ನು ಓದಿದಾಕ್ಷಣ ನಿಮಗೆ ಹಿಂ... ರಾಜ್ ಕಪೂರ್ ನಟಿಸಿದ್ದ 'ಶ್ರೀ 420' ಚಿತ್ರ ನೆನಪಾದರೆ ಆಶ್ಚರ್ಯ... ಆದರೆ 'ಮಿಸ್ಟರ್ 420'ಗೂ, 'ಶ್ರೀ 420'ಗೂ ಯಾವುದೇ ಸಂಬಂಧ... ಅಂದಹಾಗೆ, 'ಮಿಸ್ಟರ್ 420' ಸಿನಿಮಾದ ನಾಯಕ ಗೋಲ್ಡನ್ ... ಗಣೇಶ್.

ಸಂದೇಶ್ ನಾಗರಾಜ್ ಸದ್ದುಗದ್ದಲವಿಲ್ಲದೆ ... ಹಾಸ್ಯಚಿತ್ರವನ್ನು ಮಾಡಿ ಮುಗಿಸಿದ್ದಾರೆ. ಈ ಚಿತ್ರದಲ್ಲಿ ಗಣೇಶ್ ... ನಾಯಕ ನಟನಾಗಿ ನಟಿಸಿದ್ದರೆ, ಪ್ರಣೀತ ಆತನಿಗೆ ನಾ... ಜೊತೆಗೆ ಸಾಧುಕೋಕಿಲ, ರಂಗಾಯಣ ರಘು ಸೇರಿ... ಅನೇಕ ಹಾಸ್ಯನಟರ ದೊಡ್ಡ ಬೆಟಾಲಿಯನ್ ಈ ಚಿತ್ರದ... ಯಶ್ ನಾಯಕನಾಗಿ ನಟಿಸಿದ್ದ 'ಕಿರಾತಕ' ಎಂಬ ಯ... ಚಿತ್ರವನ್ನು ನೀಡಿದ್ದ ಪ್ರದೀಪ್‌ರಾಜ್ ಈ ಚಿತ್ರವನ್ನು ನಿರ್ದೇಶಿಸಿ... ಇಂದ್ರಜಿತ್ ಲಂಕೇಶ್‌ರವರ 'ಹುಡುಗ-ಹುಡುಗಿ' ಚಿತ್ರ... ನಟಿಸಬೇಕಿದ್ದ ಗಣೇಶ್ ಆಗ ನಿರ್ಮಾಪಕ ಸಂದೇಶ್ ನಾಗರ... ಅವರಿಂದ ಅಡ್ವಾನ್ಸ್ ಪಡೆದಿದ್ದರು. ಆ ಚಿತ್ರದಲ್ಲಿ ಕಾರಣಾಂತರಗ... ನಟಿಸಲಾಗದಿದ್ದ ಗಣೇಶ್ ಈ ಚಿತ್ರಕ್ಕೆ ಕಾಲ್‌ಶೀಟ್ ... ಸಂದೇಶ್ ನಾಗರಾಜ್ ಅವರ ಋಣವನ್ನು ತೀ... ಕೊಂಡಿದ್ದಾರೆ.

"ದಸರಾ ಹಬ್ಬದ ರಜಾ ಸಂದರ್ಭ... ಮನೆಮಂದಿಯೆಲ್ಲ ಒಟ್ಟಿಗೆ ಕುಳಿತು ಈ ಚಿತ್ರ... ಎರಡುಕಾಲು ಗಂಟೆ ನೋಡಿ ಹೊಟ್ಟೆ ತು... ನಗಬಹುದು" ಎಂದು ಗಣೇಶ್ ಭರವಸೆ ನೀಡಿ... ಇತ್ತೀಚೆಗೆ ಗಾಂಧಿನಗರದಲ್ಲಿ ದೊಡ್ಡ ದೊಡ್ಡ ಸಿನಿಮಾಗ... ಖರೀದಿಸುವಲ್ಲಿ ಎತ್ತಿದ ಕೈ ಎನಿಸಿರುವ ಸಮ... ವೆಂಚರ್ಸ್‌ನ ಪ್ರಸಾದ್ ಮತ್ತು ಬಾಷಾ ಜೊತೆ... ಈ ಚಿತ್ರವನ್ನು ಬಿಡುಗಡೆ ಮಾಡುತ್ತಿ... ಅಂದಹಾಗೆ, ಆರಂಭದ ದಿನಗಳಲ್ಲಿ ಕಾ... ಪಾತ್ರಗಳಲ್ಲಿ ಮಿಂಚಿ ಅನಂತರ ಹೀ... ಪಟ್ಟಕ್ಕೇರಿದ್ದ ಗಣೇಶ್ ಮತ್ತೆ ಒಂದು ಚ... ಆರಂಭದಿಂದ ಅಂತ್ಯದತನಕ ಪ್ರೇಕ್ಷಕರನ್ನು ... ನಲಿಸುವ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿ...

ಶ್ರೀ

ಮಹಿಳಾ ಕತೆ: ಗೆಲುವು ಗಂಡಿಗೋ, ಹೆಣ್ಣಿಗೋ?





ಕನ್ನಡ ಚಿತ್ರರಂಗದಲ್ಲಿ ಬೆಳ್ಳಿತೆರೆಯವರು ಕಿರುತೆರೆಗೆ ಬರುವುದು, ಕಿರುತೆರೆಯವರು ಬೆಳ್ಳಿತೆರೆಗೆ ಹೋಗುವುದು ಮಾಮೂಲಿಯಾಗಿದೆ. ಈಗ ಬೆಳ್ಳಿತೆರೆಯಲ್ಲಿ ದೊಡ್ಡ ಹೆಸರು ಮಾಡಿರುವ ಕವಿತಾ ಲಂಕೇಶ್ ಮತ್ತು ಎಸ್.ನಾರಾಯಣ್ ಸ್ವಲ್ಪ ವಿರಾಮ ಮಾಡಿಕೊಂಡು ಟಿ.ವಿ. ಕ್ಷೇತ್ರದತ್ತ ಬಂದಿದ್ದಾರೆ. ಇವರಿಬ್ಬರ ನಿರ್ದೇಶನದ ಮೆಘಾ ಸೀರಿಯಲ್‌ಗಳು ಝೀ ಟಿ.ವಿ.ಯಲ್ಲಿ ಆರಂಭವಾಗಲಿವೆ. ಕವಿತಾ ಲಂಕೇಶ್ ನಿರ್ದೇಶನದ ಮೆಘಾ ಧಾರಾವಾಹಿಯ ಹೆಸರು 'ನಮ್ಮ ಪ್ರೀತಿಯ ಶ್ರೀಮತಿ'. ಈ ಶೀರ್ಷಿಕೆ ನೋಡಿ ಇದರ ಕಥಾವಸ್ತು ಹೆಣ್ಣಿನ ಜೀವನದ ಸುತ್ತಲೂ ಹೆಣೆದಿದೆ ಎಂದು ಸುಲಭವಾಗಿ ಅರ್ಥೈಸಬಹುದು. ಹೆಣ್ಣಿನ ಜೀವನದ ಅಂತರ್ಯವನ್ನು ಮತ್ತೊಬ್ಬ ಹೆಣ್ಣು ಕಿರುತೆರೆಯ ಮೇಲೆ ನಿರ್ದೇಶಿಸುತ್ತಿರುವುದು ಸಹಜವಾಗಿಯೇ ಕುತೂಹಲ ಸೃಷ್ಟಿಸಿದೆ.

ಅದೇ ರೀತಿ, ಎಸ್.ನಾರಾಯಣ್ ನಿರ್ದೇಶನದ 'ಲಕ್ಷ್ಮಿ ಸಂಸಾರ' ಮೆಘಾ ಧಾರಾವಾಹಿಯಲ್ಲಿ ಕೂಡ ಹೆಣ್ಣಿನ ಜೀವನಕ್ರಮ ಮತ್ತು ಸಂಸಾರದ ಆಗುಹೋಗುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆಯಂತೆ.

ಝೀ ಟಿ.ವಿ.ಯಲ್ಲಿ ಆರಂಭವಾಗಲಿರುವ ಈ ಎರಡು ಮಹಿಳಾ ಪ್ರಧಾನ ಮೆಘಾ ಧಾರಾವಾಹಿಗಳ ನಡುವೆ ಒಂದು ರೀತಿಯ ಸ್ಪರ್ಧೆಯನ್ನು ಪ್ರೇಕ್ಷಕರು ನಿರೀಕ್ಷಿಸುತ್ತಿದ್ದಾರೆ. ಅದೇನೆಂದರೆ, ಒಂದು ಹೆಣ್ಣಿನ ಮನಸ್ಸಿನ ತಳಮಳವನ್ನು ಇನ್ನೊಬ್ಬ ಹೆಣ್ಣು ಸಮರ್ಥವಾಗಿ ನಿರೂಪಿಸುತ್ತಾರೋ ಅಥವಾ ಗಂಡೋ? ಎಂಬ ಸಣ್ಣ ಕುತೂಹಲ ಎಲ್ಲರಲ್ಲಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com